₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಗುರುವಾರ 12.02.2026 ಸಂಪುಟ: 11 ಸಂಚಿಕೆ: 29 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ದ.ಆಫ್ರಿಕಾಗೆ 'ಸೂಪರ್' ಗೆಲುವು

ಅಹಮದಾಬಾದ್‌ನಲ್ಲಿ ಬುಧವಾರ ನಡೆದ ವಿಶ್ವಕಪ್ ಟಿ20 ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವು ಡೇವಿಡ್ ಮಿಲ್ಲರ್ ಅವರ ಅಬ್ಬರದ ಬ್ಯಾಟಿಂಗ್ ನೆರವಿನಿಂದ 2ನೇ ಸೂಪರ್ ಓವರ್ ಮೂಲಕ ಅಫಘಾನಿಸ್ತಾನದ ವಿರುದ್ಧ ಪಂದ್ಯ ಗೆದ್ದಿದೆ. ಮಿಲ್ಲರ್ 4 ಬಾಲ್‌ಗಳಲ್ಲಿ 16 ರನ್ ಗಳಿಸಿದರು. ಇವೆರಡೂ ತಂಡಗಳ ಮೊದಲನೇ ಸೂಪರ್ ಓವರ್ ಮತ್ತು 20 ಓವರ್‌ಗಳ ಪಂದ್ಯ ಟೈ ಆಗಿತ್ತು.

ಸೊಂಪಾದ ಪುಟಗಳು

ಪತ್ರಕರ್ತನ ಸಾವು ಆತ ಕೆಲಸ ಮಾಡಿದ ಪತ್ರಿಕೆಗೆ ಸುದ್ದಿಯಲ್ಲ

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್ 6



ಶಿವರಾತ್ರಿ: ರುದ್ರವಿಲಾಸ ಮತ್ತು ಶಿವಕರುಣೆ

ಕಾಡುದಾರಿ
ಹರೀಶ್ ಕೇರ 6

ದಾರಿದೀಪೋಕ್ತಿ

ನೀವು ಮಾಡುತ್ತಿರುವ ಕೆಲಸವನ್ನು ಇತರರು ಗಮನಿಸಲಿ ಅಥವಾ ಗಮನಿಸದಿರಲಿ, ಒಳ್ಳೆಯ ಕೆಲಸ ಮಾಡುವುದನ್ನು ನಿಲ್ಲಿಸಬಾರದು. ನಿಮಗೆ ಪ್ರೇಕ್ಷಕರು ಮುಖ್ಯವಲ್ಲ, ನಿಮ್ಮ ಕೆಲಸವಷ್ಟೇ ಮುಖ್ಯ.

ವಕ್ರತುಂಡೋಕ್ತಿ

ಪರೀಕ್ಷೆಯಲ್ಲಿ ಫೇಲ್ ಆದಾಗ ಅಪ್ಪ ಹೊಡೆಯುತ್ತಾರೆ ಎನ್ನುವ ಭಯಕ್ಕಿಂತ, ಪಕ್ಕದ ಮನೆಯವರು ಬಂದು 'ನಿಮ್ಮ ಮಗಂದು ಏನಾಯ್ತು?' ಎಂದು ಕೇಳುತ್ತಾರೆಂಬ ಭಯವೇ ಜಾಸ್ತಿ!

ಅಮೆರಿಕ ತಿಪ್ಪರಲಾಗ

ವಾಷಿಂಗ್ಟನ್: ಪಾಕಿಸ್ತಾನ ಆಕ್ರಮಿತ ಕಾಶ್ಮೀರ ಮತ್ತು ಚೀನಾ ಸ್ವಾಧೀನದ ಅಕ್ಸಾಯ್ ಚಿನ್ ಸೇರಿದಂತೆ ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್‌ನ ಸಂಪೂರ್ಣ ಪ್ರದೇಶವನ್ನು ಭಾರತದ ಪ್ರದೇಶ ವೆಂದು ತೋರಿಸುವ ನಕ್ಷೆಯನ್ನು ಸಾಮಾಜಿಕ ಜಾಲತಾಣದಲ್ಲಿ ಇತ್ತೀಚೆಗೆ ಬಿಡುಗಡೆ ಮಾಡಿದ್ದ ಅಮೆರಿಕ ಒಂದೇ ವಾರದಲ್ಲಿ ಯೂ ಟರ್ನ್ ಹೊಡೆದಿದ್ದು ಈ ಪೋಸ್ಟ್ ಅನ್ನು ಅಳಿಸಿ ಹಾಕಿದೆ. ಭಾರತದ ಜತೆ ವ್ಯಾಪಾರ ಒಪ್ಪಂದದ ಕರಡು ಪ್ರತಿ ಹಂಚಿಕೊಂಡಿದ್ದ ಅಮೆರಿಕ, ಮೊದಲ ಬಾರಿಗೆ ಭಾರತದ ಅಧಿಕೃತ ಭೂಪಟವನ್ನು ಪ್ರಕಟಿಸಿತ್ತು.

ಇಂದು ಭಾರತ ಬಂದ್

ದೆಹಲಿ: ದೇಶಾದ್ಯಂತ ಗುರುವಾರ (ಫೆಬ್ರವರಿ 12, 2026) ರಾಷ್ಟ್ರವ್ಯಾಪಿ ಮುಷ್ಕರ ನಡೆಸುವುದಾಗಿ ಕೇಂದ್ರ ಕಾರ್ಮಿಕ ಸಂಘಗಳು ಹಾಗೂ ರೈತ ಸಂಘಟನೆಗಳು ಘೋಷಿಸಿವೆ. ಕೇಂದ್ರ ಸರಕಾರದ ಹೊಸ ಕಾರ್ಮಿಕ ಸಂಹಿತೆಗಳು ಮತ್ತು ಭಾರತ-ಅಮೆರಿಕ ವ್ಯಾಪಾರ ಒಪ್ಪಂದವನ್ನು ಖಂಡಿಸಿ ಕಾಂಗ್ರೆಸ್ ಮತ್ತು ಎಡಪಕ್ಷ ಬೆಂಬಲಿತ ಸಂಘಟನೆಗಳು ಈ ಬಂದ್‌ಗೆ ಕರೆ ನೀಡಿವೆ.

ಒಪ್ಪಂದದಲ್ಲಿ ತಿದ್ದುಪಡಿ

ದೆಹಲಿ: ಭಾರತದೊಂದಿಗಿನ ವ್ಯಾಪಾರ ಒಪ್ಪಂದ ಸಂಬಂಧ ಅಮೆರಿಕ ಪರಿಷ್ಕೃತ ಕರಡು ಬಿಡುಗಡೆ ಮಾಡಿದ್ದು, ಇದರಲ್ಲಿ ಕೆಲವು ದ್ವಿದಳ ಧಾನ್ಯಗಳು ಎಂಬ ಉಲ್ಲೇಖವನ್ನು ಕೈಬಿಡಲಾಗಿದೆ. ಜತೆಗೆ ಭಾರತವು 5 ವರ್ಷಗಳಲ್ಲಿ ಇಂಧನ, ಕಲ್ಲಿದ್ದಲು, ಕೃಷಿ ಸೇರಿದಂತೆ 500 ಬಿಲಿಯನ್ ಯುಎಸ್ ಡಾಲರ್‌ಗಿಂತ ಹೆಚ್ಚಿನ ಅಮೆರಿಕಾದ ಉತ್ಪನ್ನಗಳನ್ನು ಖರೀದಿಸಲಿದೆ ಎಂಬ ವಾಕ್ಯವನ್ನು ಖರೀದಿಸಲು ಉದ್ದೇಶಿಸಿದೆ ಎಂದು ಪರಿಷ್ಕೃತ ಫ್ಯಾಕ್ಟ್ ಶೀಟ್‌ನಲ್ಲಿ ಬದಲಾಯಿಸಲಾಗಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಸಾಕು ನಾಯಿ ನಿಯಂತ್ರಿಸಲು ಹೊಸ ಕಾಯ್ದೆ



ಪ್ರವಾಸಿ ಋತುವಿನಲ್ಲಿಯೇ ಬಂದ್, ಆರೇಳು ತಿಂಗಳ ಬುಕ್ಕಿಂಗ್ ರದ್ದು ಮಾಡುತ್ತಿರುವ ವಿದೇಶಿ ಪ್ರವಾಸಿಗರು

ಸುಗ್ಗಿ ಕಾಲದಲ್ಲಿ ಸಫಾರಿ ನಿರ್ಬಂಧ; ರೆಸಾರ್ಟ್‌ಗಳೆಲ್ಲ ಖಾಲಿ ಖಾಲಿ

ರಂಜಿತ್ ಎಚ್. ಅಶ್ವತ್ಥ ಬೆಂಗಳೂರು

ಬಂಡೀಪುರ-ನಾಗರಹೊಳೆ ಭಾಗದ ರೆಸಾರ್ಟ್ ಮಾಲೀಕರು ಇಡೀ ವರ್ಷದ ಲಾಭದ ಶೇ.50ರಷ್ಟು ಲಾಭವನ್ನು ಕೇವಲ ಮೂರು ತಿಂಗಳಲ್ಲಿ ಮಾಡಿಕೊಳ್ಳುತ್ತಿದ್ದರು. ಆದರೆ ಅರಣ್ಯ ಇಲಾಖೆಯ ಅವೈಜ್ಞಾನಿಕ ಸಫಾರಿ ನಿರ್ಬಂಧದ ತೀರ್ಮಾನದಿಂದಾಗಿ, ನಷ್ಟ ಇರಲಿ, ಇಷ್ಟು ವರ್ಷದ ಲಾಭವನ್ನೂ ಕಳೆದುಕೊಳ್ಳುವ ಆತಂಕ ರೆಸಾರ್ಟ್ ಮಾಲೀಕರದ್ದಾಗಿದೆ.

ಸಾಮಾನ್ಯವಾಗಿ ನವೆಂಬರ್‌ನಿಂದ ಫೆಬ್ರವರಿ ಮೊದಲ ವಾರದವರೆಗೆ ಬಂಡೀಪುರ, ನಾಗರಹೊಳೆ ಭಾಗಕ್ಕೆ ಪ್ರವಾಸಕ್ಕೆಂದು ಪ್ರವಾಸಿಗರು ಆಗಮಿಸುತ್ತಾರೆ. ಇಡೀ ವರ್ಷ ಮಾಡಿಕೊಳ್ಳುವ ಲಾಭದ ಶೇ.50ರಷ್ಟು ಲಾಭ ಈ ಮೂರ್ನಾಲ್ಕು ತಿಂಗಳಲ್ಲಿ ರೆಸಾರ್ಟ್ ಮಾಡಿಕೊಳ್ಳುತ್ತಾರೆ. ಅದರರ್ಥ, ಈ ಮೂರ್ನಾಲ್ಕು ತಿಂಗಳು ವೈಲ್ಡ್ ಲೈಫ್ ಪ್ರವಾಸೋದ್ಯಮದ 'ಸುಗ್ಗಿ' ಕಾಲ. ಆದರೆ ಹೆಡಿಯಾಳದಲ್ಲಿ ನಡೆದ ಹುಲಿ ದಾಳಿಗೆ ಕಾರಣ ತಿಳಿದುಕೊಳ್ಳುವ ಗೋಜಿಗೆ ಹೋಗದೆ, ಸಫಾರಿಯನ್ನು ಏಕಾಏಕಿ ನಿಲ್ಲಿಸಿದ್ದರಿಂದ ಲಾಭದ ನಿರೀಕ್ಷೆಯಲ್ಲಿದ್ದ ರೆಸಾರ್ಟ್ ಮಾಲೀಕರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಸಾಮಾನ್ಯವಾಗಿ ಕಬಿನಿ, ಬಂಡೀಪುರ ಸುತ್ತಮುತ್ತಲಿನ ಐಷಾರಾಮಿ ರೆಸಾರ್ಟ್‌ಗಳು ಸೇರಿದಂತೆ ಎಲ್ಲ ರೆಸಾರ್ಟ್‌ಗಳು ವಾರಾಂತ್ಯದಲ್ಲಿ ಶೇ.85ರಿಂದ 90ರಷ್ಟು ಭರ್ತಿಯಾಗಿರುತ್ತಿತ್ತು. ಇನ್ನುಳಿದ ದಿನದಲ್ಲಿ ಶೇ.60ರಷ್ಟು ಭರ್ತಿಯಾಗಿರುತ್ತಿತ್ತು. ಆದರೀಗ ವಾರಾಂತ್ಯದಲ್ಲಿಯೇ ರೆಸಾರ್ಟ್‌ಗಳು ಶೇ.40ರಷ್ಟು ಭರ್ತಿಯಾದರೆ ಹೆಚ್ಚು ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ಇನ್ನು ಕೆಲ ರೆಸಾರ್ಟ್‌ಗಳಲ್ಲಿ ಪ್ರವಾಸಿಗರ ಸಂಖ್ಯೆ 'ಶೂನ್ಯ'ಕ್ಕೆ ಇಳಿದಿದೆ. ಆದರೆ ಒಂದೊಂದು ರೆಸಾರ್ಟ್‌ನಲ್ಲಿ 30ರಿಂದ 40 ಸಿಬ್ಬಂದಿಯಿರುವುದರಿಂದ, ಅವರನ್ನು ಕೆಲಸದಿಂದ ತೆಗೆಯಲು ಆಗದೇ, ವೇತನ ಕೊಟ್ಟು ಉಳಿಸಿಕೊಳ್ಳಲು ಆಗದಂತಹ ಸ್ಥಿತಿಗೆ ಮಾಲೀಕರು ಬಂದಿದ್ದಾರೆ. →10

> ಕೈಗಾರಿಕೆಗಳಿಗೆ ನೀಡುವಂತೆ ರೆಸಾರ್ಟ್‌ಗಳ ಆರಂಭಕ್ಕೆ ಸರಕಾರ ವಿಶೇಷ ರಿಯಾಯಿತಿ ಅಥವಾ ಜಾಗವನ್ನು ನೀಡುವುದಿಲ್ಲ. ಸಾಲದಲ್ಲಿಯೇ ರೆಸಾರ್ಟ್‌ಗಳನ್ನು ಕಟ್ಟಿರುತ್ತೇವೆ. ಆದರೆ ಯಾವುದೇ ಸಕಾರಣವಿಲ್ಲದೇ ಸಫಾರಿಯನ್ನು ನಿರ್ಬಂಧಿಸುವ ಮೂಲಕ ಪ್ರವಾಸೋದ್ಯಮಕ್ಕೆ ಬಹುದೊಡ್ಡ ಹೊಡೆತವನ್ನು ಸರಕಾರ ನೀಡಿದೆ. ಅರಣ್ಯ ಸಚಿವರ ಈ ಅವೈಜ್ಞಾನಿಕ ತೀರ್ಮಾನದಿಂದ ರೆಸಾರ್ಟ್‌ನಲ್ಲಿ ಕೆಲಸ ಮಾಡುವ ಕಾರ್ಮಿಕರು ಮಾತ್ರವಲ್ಲದೇ, ಮಾಲೀಕರು ಬೀದಿಗೆ ಬರುವ ಸ್ಥಿತಿಗೆ ಬಂದಿದ್ದೇವೆ.
>
> -ಹೆಸರು ಹೇಳಲು ಇಚ್ಛಿಸದ ರೆಸಾರ್ಟ್ ಮಾಲೀಕ

ಸಫಾರಿ ಚಾಲಕರು ಬೀದಿಗೆ

ಈ ಹಿಂದೆ ಸಫಾರಿ ವಾಹನಗಳನ್ನು ಚಲಾಯಿಸುತ್ತಿದ್ದ ಚಾಲಕರನ್ನು ಅರಣ್ಯ ಇಲಾಖೆ, ಜಂಗಲ್ ಲಾಡ್ಜ್ ನಿಗಮದವರು ಗುತ್ತಿಗೆಯ ಮೇಲೆ ತೆಗೆದುಕೊಂಡಿದ್ದರು. ಆದರೆ ಸಫಾರಿಯನ್ನು ನಾಲ್ಕು ತಿಂಗಳಿನಿಂದ ನಡೆಸದೇ ಇರುವುದರಿಂದ ಅವರನ್ನು ಕೆಲಸದಿಂದ ತೆಗೆದುಹಾಕಲಾಗಿದೆ. ಈ ರೀತಿ ಕೆಲಸ ಕಳೆದುಕೊಂಡಿರುವ ಬಹುಪಾಲು ಚಾಲಕರಿಗೆ, ಸಫಾರಿಯಲ್ಲಿ ವಾಹನ ಚಲಾಯಿ ಸುವುದರ ಹೊರತು ಬೇರೇನೂ ಕೆಲಸ ಗೊತ್ತಿಲ್ಲ. ಇದೀಗ ಈ ಚಾಲಕರು ಸಫಾರಿಯ ಹೊರತಾಗಿ ಮುಂದೇನು ಮಾಡ ಬೇಕು ಎನ್ನುವುದು ತಿಳಿಯದೆ, ಮಾನ ಸಿಕ ವಾಗಿ ಕುಗ್ಗಿ ಹೋಗಿದ್ದಾರೆ ಎನ್ನುವ ಮಾತುಗಳನ್ನು ಕೆಲ ರೆಸಾರ್ಟ್ ಮಾಲೀಕರು ಹೇಳುತ್ತಾರೆ.

ಕೇರಳ, ತ.ನಾಡಿಗೆ ಆದಾಯ

ಕೆಲ ರೆಸಾರ್ಟ್ ಮಾಲೀಕರು ಪ್ರವಾಸಿಗರನ್ನು ಉಳಿಸಿಕೊಳ್ಳಲು ಪ್ರವಾಸಿಗರನ್ನು ನೆರೆ ರಾಜ್ಯದ ವಯನಾಡು, ಮದುಮಲೈನಲ್ಲಿರುವ ಸಫಾರಿಗೆ ಕರೆದುಕೊಂಡು ಹೋಗುತ್ತಿದ್ದಾರೆ. ಈ ರೆಸಾರ್ಟ್‌ಗಳಿಂದ ನೆರೆ ರಾಜ್ಯದ ಸಫಾರಿಗಳು 15ರಿಂದ 20 ಕಿ.ಮೀ. ದೂರವಿದ್ದರೂ ಪ್ರವಾಸಿಗರನ್ನು ಸೆಳೆಯಲು ಈ ರೀತಿ ಮಾಡುತ್ತಿದ್ದಾರೆ. ಕರ್ನಾಟಕದ ರೆಸಾರ್ಟ್‌ನವರೂ ಅಲ್ಲಿನ ಸಫಾರಿಗೆ ಕರೆದುಕೊಂಡು ಹೋಗುತ್ತಿರುವುದರಿಂದ ಸಹಜವಾಗಿಯೇ ಅಲ್ಲಿ ಸಫಾರಿ ಸಂಖ್ಯೆ ಹೆಚ್ಚಾಗುತ್ತಿದೆ. ಇದರಿಂದ ಕಾಯುವಿಕೆಯ ಸಮಯ ಹಾಗೂ ಸಫಾರಿಗೆ ಕರೆದುಕೊಂಡು ಹೋಗುವ ಸಮಯದಲ್ಲಿಯೂ ತೀವ್ರ ಸಮಸ್ಯೆಯಾಗುತ್ತಿದೆ.

ಮೋದಿ ಮೇಲೆ ಅಮೆರಿಕದ ನೇರ ಒತ್ತಡವಿದೆ ಎಂದ ವಿಪಕ್ಷ ನಾಯಕ

ಭಾರತ ಮಾತೆ ಮಾರಾಟ ಲೋಕಸಭೆಯಲ್ಲಿ ರಾಗಾ ಕಿಡಿ

ದೆಹಲಿ: ಮಾಜಿ ಸೇನಾ ಮುಖ್ಯಸ್ಥ ಜನರಲ್ ಎಂ.ಎಂ. ನರವಣೆ ಅವರ ಅಪ್ರಕಟಿತ ಆತ್ಮಚರಿತ್ರೆಯ ಉಲ್ಲೇಖದ ವಿಚಾರವಾಗಿ ಸಂಸತ್ತಿನಲ್ಲಿ ವಾರಗಳ ಕಾಲ ಗದ್ದಲ ನಡೆದ ಬಳಿಕ, ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಬುಧವಾರ ಲೋಕಸಭೆಯಲ್ಲಿ ಮಾತನಾಡಿದ್ದು ಭಾರತ-ಅಮೆರಿಕ ವ್ಯಾಪಾರ ಒಪ್ಪಂದದ ಕುರಿತು ಕೇಂದ್ರ ಸರಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಬಜೆಟ್ ಮೇಲಿನ ಚರ್ಚೆಯ ವೇಳೆ ಮಾತನಾಡಿದ ಅವರು, ಭಾರತ ಯಾರಿಂದ ತೈಲ ಖರೀದಿಸಬಹುದು ಅಥವಾ ಖರೀದಿಸಬಾರದು ಎಂದು ಅಮೆರಿಕ ನಿರ್ಧರಿಸುತ್ತಿದೆ. ಅಮೆರಿಕದೊಂದಿಗಿನ ವ್ಯಾಪಾರ ಒಪ್ಪಂದದ ಮೂಲಕ ಭಾರತ ಮಾತೆಯನ್ನು ಮಾರಾಟ ಮಾಡಿದ್ದೀರಿ. ನಿಮಗೆ ನಾಚಿಕೆ ಇಲ್ಲ ಎಂದು ಕಿಡಿ ಕಾರಿದರು.

ಅಮೆರಿಕದೊಂದಿಗೆ ಸಮಾನ ಪ್ರಯೋಜನಗಳನ್ನು ಪಡೆಯದೇ ಒಪ್ಪಂದ ಮಾಡಿಕೊಳ್ಳುವ ಮೂಲಕ ಸರಕಾರ ಸಂಪೂರ್ಣ ಶರಣಾಗಿದೆ. ಈ ಮೊದಲು ಭಾರತದ ಉತ್ಪನ್ನಗಳಿಗೆ ಶೇ.3ರಷ್ಟು ಸುಂಕ ವಿಧಿಸಲಾಗುತ್ತಿತ್ತು. ಇದನ್ನು ಈಗ ಶೇ.18ಕ್ಕೆ ಏರಿಸಲಾಗಿದೆ. ಆದರೂ ಇದನ್ನು ಚಾರಿತ್ರಿಕ ಒಪ್ಪಂದ ಎಂದು ಸಂಭ್ರಮಿಸಲಾಗುತ್ತಿದೆ. ನಾವು ಜವಳಿ ಉತ್ಪನ್ನಗಳ ರಫ್ತಿಗೆ ಶೇ. 18 ಸುಂಕ ನೀಡಬೇಕಾಗಿದೆ. ಆದರೆ ನೆರೆಯ ಬಾಂಗ್ಲಾದೇಶದ ಟೆಕ್ಸ್‌ಟೈಲ್ ಉದ್ಯಮಕ್ಕೆ ಸಂಪೂರ್ಣ ವಿನಾಯಿತಿ ನೀಡಲಾಗಿದೆ. ಟ್ರಂಪ್ ಬಿಗಿಪಟ್ಟು ಹಾಕಿ ಮೋದಿ ಮೇಲೆ ಹಿಡಿತ ಸಾಧಿಸಿದ್ದಾರೆ ಎಂದು ರಾಹುಲ್ ದೂರಿದರು. ಮೋದಿ ಕಣ್ಣಲ್ಲಿ ಭಯ ಕಾಣು ತ್ತಿದೆ. ಈ ಒಪ್ಪಂದದ ಬಳಿಕ ಅಮೆರಿಕದ ಆಮದು 46 ಬಿಲಿಯನ್ ಡಾಲರ್‌ಗಳಿಂದ 146 ಬಿಲಿಯನ್ ಡಾಲರ್‌ಗಳಿಗೆ ಏರಿಕೆಯಾಗ ಲಿದೆ. ಆದರೆ, ಅಮೆರಿಕಕ್ಕೆ ಭಾರತದ ಬಗ್ಗೆ ಯಾವುದೇ ಬದ್ಧತೆ ಇಲ್ಲ. ಆದರೆ ಭಾರತಕ್ಕೆ ಅಮೆರಿಕದ ಬದ್ಧತೆ ಇದೆ. ನಾವು ಮೂರ್ಖರಂತೆ ನಿಂತಿದ್ದೇವೆ ಎಂದು ಆರೋಪಿಸಿದ ರಾಹುಲ್, ನಮ್ಮೊಂದಿಗೆ ಸೇವಕರಂತೆ ಅಲ್ಲ, ಸಮಾನರಂತೆ ಮಾತನಾಡಿ ಎಂದು ಅಮೆರಿಕಕ್ಕೆ ಸಂದೇಶ ನೀಡಿದರು.

ಇಂಧನ ಅಸ್ತ್ರ ಮತ್ತು ಯುದ್ಧದ ಯುಗ: ನಾವು ತೀವ್ರಗೊಳ್ಳುತ್ತಿರುವ ಭೌಗೋಳಿಕ ರಾಜ ಕೀಯ ಸಂಘರ್ಷದ ಜಗತ್ತಿನಲ್ಲಿ ಬದುಕುತ್ತಿದ್ದೇವೆ... ಚೀನಾ, ರಷ್ಯಾ ಮತ್ತು ಇತರ ಶಕ್ತಿಗಳು ಅಮೆರಿಕದ ಪ್ರಾಬಲ್ಯಕ್ಕೆ ಸವಾಲು ಒಡ್ಡುತ್ತಿವೆ ಎಂದು ಆರ್ಥಿಕ ಸಮೀಕ್ಷೆಯಲ್ಲಿ ಉಲ್ಲೇಖಿಸಿರುವ ಅಂಶವನ್ನು ಅನುಮೋದಿಸಿದ ರಾಹುಲ್, ಈ ಹಿಂದೆ ಪ್ರಧಾನಿ ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರರು 'ಯುದ್ಧದ ಯುಗ ಮುಗಿದಿದೆ' ಎಂದು ಹೇಳಿದ್ದರು. ಆದರೆ, ಈಗಿನ ಜಾಗತಿಕ ಬೆಳವಣಿಗೆಗಳು ಇದಕ್ಕೆ ವಿರುದ್ಧವಾಗಿವೆ ಎಂದು ವಿಶ್ಲೇಷಿಸಿದರು.

ಜಗತ್ತಿನಲ್ಲಿ ಇಂಧನ ಮತ್ತು ಹಣಕಾಸು ವ್ಯವಸ್ಥೆಯನ್ನು ಅಸ್ತ್ರಗಳಾಗಿ ಬಳಸಲಾಗುತ್ತಿದೆ. ಜಾಗತಿಕ ಅಧಿಕಾರಕ್ಕಾಗಿ ಇವೆರಡನ್ನೂ ವ್ಯೂಹಾತ್ಮಕ ಸಾಧನಗಳಾಗಿ ಹೆಚ್ಚಾಗಿ ಬಳಸಲಾಗುತ್ತಿದೆ. ಜಗತ್ತು ಸ್ಥಿರತೆಯ ಯುಗದಿಂದ ಅಸ್ಥಿರತೆಯತ್ತ ಸಾಗುತ್ತಿದೆ ಎಂದ ರಾಹುಲ್, ಉಕ್ರೇನ್‌ನಲ್ಲಿ ಯುದ್ಧವಿದೆ, ಗಾಜಾದಲ್ಲಿ ಯುದ್ಧವಿತ್ತು, ಮಧ್ಯಪ್ರಾಚ್ಯದಲ್ಲಿ ಯುದ್ಧವಿದೆ, ಇರಾನ್‌ನಲ್ಲಿ ಯುದ್ಧದ ಭೀತಿ ಇದೆ. ನಾವು 'ಆಪರೇಷನ್ ಸಿಂದೂರ್' ನಡೆಸಿದ್ದೇವೆ. ಹೀಗಾಗಿ ನಾವು ಅಸ್ಥಿರತೆಯ ಜಗತ್ತಿನತ್ತ ಸಾಗುತ್ತಿದ್ದೇವೆ. ಡಾಲರ್‌ಗೆ ಸವಾಲು ಹಾಕಲಾಗುತ್ತಿದೆ. →10

ಎಪ್‌ಸ್ಟೀನ್ ಫೈಲ್ಸ್ ಉಲ್ಲೇಖ

ಆಡಳಿತ ಪಕ್ಷ ಸದಸ್ಯರ ತೀವ್ರ ವಿರೋಧದ ನಡುವೆ ಎಪ್‌ಸ್ಟೀನ್‌ಗೆ ಸಂಬಂಧಿಸಿದ ಫೈಲ್ ಬಗ್ಗೆ ಪ್ರಸ್ತಾಪಿಸಿದ ರಾಹುಲ್, 'ಅನಿಲ್ ಅಂಬಾನಿ ಅನ್ನೋ ಉದ್ಯಮಿ ಇದ್ದಾರೆ, ಅವರು ಯಾಕೆ ಜೈಲಲ್ಲಿಲ್ಲ ಅಂತ ನಾನು ಕೇಳುತ್ತೇನೆ. ಅವರ ಹೆಸರು ಎಪ್‌ಸ್ಟೀನ್ ಫೈಲ್ಸ್‌ನಲ್ಲಿದೆ. ಹರ್ದೀಪ್ ಪುರಿ (ಕೇಂದ್ರ ಸಚಿವ) ಅವರನ್ನೂ ನಾನು ಕೇಳಬಯಸುತ್ತೇನೆ, ಅಂಬಾನಿಯನ್ನು ಎಪ್‌ಸ್ಟೀನ್‌ಗೆ ಪರಿಚಯಿಸಿದ್ದು ಹರ್ದೀಪ್ ಪುರಿ ಎನ್ನುವುದು ಅವರಿಗೂ ಗೊತ್ತು' ಎಂದು ರಾಹುಲ್ ಗಾಂಧಿ ಹೇಳಿದರು.

ರಾಹುಲ್ ವಿರುದ್ಧ ಹಕ್ಕುಚ್ಯುತಿ: ಬಿಜೆಪಿ

ದೆಹಲಿ: ಸದನಕ್ಕೆ ತಪ್ಪು ಮಾಹಿತಿ ನೀಡಿದ್ದಕ್ಕಾಗಿ ಹಾಗೂ ಆಧಾರರಹಿತ ಆರೋಪಗಳನ್ನು ಮಾಡಿದ್ದಕ್ಕಾಗಿ ರಾಹುಲ್ ಗಾಂಧಿ ವಿರುದ್ಧ ಹಕ್ಕುಚ್ಯುತಿ ಮಂಡಿಸಲಾಗುವುದು ಎಂದು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಕಿರಣ್ ರಿಜಿಜು ಹೇಳಿದ್ದಾರೆ. ರಾಹುಲ್ ಗಾಂಧಿ ಸರಕಾರ ಮತ್ತು ಪ್ರಧಾನಿ ವಿರುದ್ಧ ಆಧಾರ ರಹಿತ ಹಾಗೂ ಸುಳ್ಳು ಆರೋಪಗಳನ್ನು ಮಾಡಿದ್ದಾರೆ. ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ವಿರುದ್ಧವೂ ನೋಟಿಸ್ ಇಲ್ಲದೆ ಗಂಭೀರ ಆರೋಪ ಮಾಡಲಾಗಿದೆ. ಭಾರತವನ್ನು ಯಾರೂ ಮಾರಲಾರರು, ಖರೀದಿಸಲಾರರು ಎಂದು ನಾನು ಅವರಿಗೆ ನೆನಪಿಸಿದೆ. ಯಾವುದೇ ಸದಸ್ಯ ಗಂಭೀರ ಆರೋಪ ಮಾಡಬೇಕಾದರೆ ಮುಂಚಿತವಾಗಿ ನೋಟಿಸ್ ನೀಡಬೇಕು ಎಂದು ನಿಯಮಗಳಿವೆ. ಆರೋಪಗಳನ್ನು ಸಾಬೀತುಪಡಿಸಬೇಕು. ರಾಹುಲ್ ಗಾಂಧಿ ಯಾವುದೇ ಪುರಾವೆ, ಚರ್ಚೆ ಅಥವಾ ನಿಯಮಾವಳಿ ನೋಟಿಸ್ ಇಲ್ಲದೆ ಆರೋಪ ಮಾಡಿದ್ದಾರೆ ಎಂದು ರಿಜಿಜು ಆರೋಪಿಸಿದರು. ರಾಹುಲ್ ಭಾಷಣದ ಎಲ್ಲಾ ತಪ್ಪು ಹೇಳಿಕೆಗಳು, ಸುಳ್ಳು ಆರೋಪಗಳು ಮತ್ತು ಅಸಭ್ಯ ಪದಗಳನ್ನು ದಾಖಲೆಗಳಿಂದ ತೆಗೆದುಹಾಕಬೇಕು ಎಂದು ಕಿರಣ್ ರಿಜಿಜು ಒತ್ತಾಯಿಸಿದರು.

ನಾಯಕತ್ವದ ಚರ್ಚೆ ಬೆನ್ನಲ್ಲೇ ವಿದೇಶ ಪ್ರವಾಸಕ್ಕೆ ಹೊರಟ ಶಾಸಕರ ತಂಡ

ಶಾಸಕರ ವಿದೇಶ ಪ್ರವಾಸ; ತಾಳ್ಮೆ ಇರಲಿ ಎಂದ ಡಿಕೆಶಿ

ಬೆಂಗಳೂರು: ಕರ್ನಾಟಕ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ತೀವ್ರ ಚರ್ಚೆಗಳು ನಡೆಯುತ್ತಿರುವ ಹೊತ್ತಿನಲ್ಲಿಯೇ, ಕಾಂಗ್ರೆಸಿನ 20ಕ್ಕೂ ಹೆಚ್ಚು ಶಾಸಕರ 'ವಿದೇಶಿ' ಪ್ರವಾಸ ಹತ್ತು ಹಲವು ವ್ಯಾಖ್ಯಾನಗಳಿಗೆ ನಾಂದಿ ಹಾಡಿದೆ.

ಅಸ್ಸಾಂ ಚುನಾವಣೆಯ ನೆಪದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿಯಲ್ಲಿ ಬೀಡುಬಿಟ್ಟಿದ್ದರೆ, ಇತ್ತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್ ತಯಾರಿಯಲ್ಲಿ ಮಗ್ನರಾಗಿದ್ದಾರೆ. ಈ ನಡುವೆ ಡಿ.ಕೆ.ಶಿವಕುಮಾರ್ ಸಹೋದರ ಡಿ.ಕೆ. ಸುರೇಶ್, 'ನಿಧಾನವಾಗಿಯಾದರೂ ಸಿದ್ದರಾಮಯ್ಯ ತಮ್ಮ ಮಾತನ್ನು ಉಳಿಸಿ ಕೊಳ್ಳಲಿದ್ದಾರೆ' ಎನ್ನುವ ಮೂಲಕ ಹೊಸ ಚರ್ಚೆಗೆ ನಾಂದಿ ಹಾಡಿದ್ದಾರೆ. ಇದಕ್ಕೆ ಪ್ರತಿ ಕ್ರಿಯೆ ಎನ್ನುವಂತೆ ಸಿಎಂ ಸಿದ್ದರಾಮಯ್ಯ, 'ವರಿಷ್ಠರ ಸೂಚನೆ ಬದ್ಧ' ಎಂದಿದ್ದರೆ, ಡಿ.ಕೆ.ಶಿವಕುಮಾರ್ ತಾಳ್ಮೆಯ ಪಾಠವನ್ನು ಮಾಡಿದ್ದಾರೆ.

ಈ ಎಲ್ಲ ಮಾತುಗಳ ನಡುವೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತ ವಲಯದಲ್ಲಿರುವ ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ನೇತೃತ್ವದಲ್ಲಿ 20ಕ್ಕೂ ಹೆಚ್ಚು ಕಾಂಗ್ರೆಸ್ ಶಾಸಕರ ತಂಡ ಆಸ್ಟ್ರೇಲಿಯಾ-ನ್ಯೂಜಿಲ್ಯಾಂಡ್‌ಗೆ 'ಅಧ್ಯಯನ' ಪ್ರವಾಸ ಕೈಗೊಂಡಿರುವುದು ಇದೀಗ ತೀವ್ರ ಚರ್ಚೆಗೆ ಗ್ರಾಸವಾಗಿದೆ. ನಿಯೋಗದಲ್ಲಿರುವ ಶಾಸಕರು ಅಧ್ಯಯನ ಪ್ರವಾಸವೆಂದು ಹೇಳುತ್ತಿದ್ದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಶಾಸಕರು ತಮ್ಮ ಖರ್ಚಿನಲ್ಲಿ ತೆರಳುತ್ತಿದ್ದಾರೆ ಎಂದಿರುವುದು ಇದೀಗ ಕಾಂಗ್ರೆಸ್ ವಲಯದಲ್ಲಿ ವಿವಿಧ ರೀತಿಯ ವ್ಯಾಖ್ಯಾನಗಳಿಗೆ ಕಾರಣವಾಗಿದೆ. →10

ಬಣದ ಟೂರ್ ಅಲ್ಲ, ಅಧ್ಯಯನ ಪ್ರವಾಸ !

ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ನೇತೃತ್ವದಲ್ಲಿ ತೆರಳುತ್ತಿರುವ ಈ ಪ್ರವಾಸಕ್ಕೆ ಸಂಬಂಧಿಸಿದಂತೆ ಶಾಸಕ ಪುಟ್ಟರಂಗಶೆಟ್ಟಿ ಮಾತನಾಡಿದ್ದು, ಕಾಂಗ್ರೆಸ್‌ನ 25 ಶಾಸಕರು ವಿದೇಶ ಪ್ರವಾಸ ಮಾಡುತ್ತಿದ್ದೇವೆ. ಅದು ಪಶುಸಂಗೋಪನಾ ಇಲಾಖೆಯಿಂದ ಆಯೋಜಿಸಿರುವ ಪ್ರವಾಸ. ಆಸ್ಟ್ರೇಲಿಯಾ ಹಾಗೂ ನ್ಯೂಜಿಲ್ಯಾಂಡ್‌ಗಳಲ್ಲಿ ಪಶುಸಂಗೋಪನೆ ಹಾಗೂ ಕೃಷಿಗೆ ಸಂಬಂಧಿಸಿದಂತೆ ಸಾಕಷ್ಟು ಅಭಿವೃದ್ಧಿಗಳು ನಡೆದಿವೆ. ಅವುಗಳ ಬಗ್ಗೆ ಅಧ್ಯಯನ ಮಾಡಲು ಹಾಗೂ ಅಲ್ಲಿನ ಅಭಿವೃದ್ಧಿ ತಂತ್ರಜ್ಞಾನಗಳನ್ನು ನಮ್ಮಲ್ಲಿ ಹೇಗೆ ಬಳಸಿಕೊಳ್ಳಬಹುದು ಎಂಬುದನ್ನು ಚರ್ಚಿಸುವ ನಿಟ್ಟಿನಲ್ಲಿ ಇದೊಂದು ಅಧ್ಯಯನ ಪ್ರವಾಸ. ನಾವು ಯಾವುದೇ ಬಣದಿಂದ ವಿದೇಶ ಪ್ರವಾಸಕ್ಕೆ ಹೋಗುತ್ತಿಲ್ಲ. ನಾವೆಲ್ಲರೂ ಕಾಂಗ್ರೆಸ್ ಬಣ ಅಷ್ಟೇ. ಮೊದಲು 35 ಜನರು ಹೋಗುವುದು ಎಂದಾಗಿತ್ತು. ಈಗ 25 ಶಾಸಕರು ಹೋಗುತ್ತಿದ್ದೇವೆ. ಈ ಪ್ರವಾಸಕ್ಕೆ ರಾಜಕೀಯ ಬಣ್ಣ ಬಳಿಯುವುದು ಬೇಡ. ರಾಜಕೀಯ ಚರ್ಚೆಗಾಗಿ ನಾವು ವಿದೇಶಕ್ಕೆ ಹೋಗುತ್ತಿಲ್ಲ ಎಂದು ಸ್ಪಷ್ಟಪಡಿಸಿದರು.

> ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಪದೇಪದೆ ಕೇಳುವುದು ಬೇಡ. ನಾಯಕತ್ವ ಬದಲಾವಣೆ ಬಗ್ಗೆ ಪಕ್ಷದ ವರಿಷ್ಠರು ತೀರ್ಮಾನಿಸಿದರೆ ಅದರಂತೆ ನಾನು ಮತ್ತು ಉಪಮುಖ್ಯಮಂತ್ರಿಗಳಿಬ್ಬರೂ ನಡೆದುಕೊಳ್ಳುತ್ತೇವೆ. ಇನ್ನು ಶಾಸಕರು, ವಿಧಾನಪರಿಷತ್ ಸದಸ್ಯರು ತಮ್ಮ ಸ್ವಂತ ಖರ್ಚಿನಲ್ಲಿ ವಿದೇಶ ಪ್ರವಾಸ ಕೈಗೊಳ್ಳುತ್ತಿದ್ದಾರೆ.
>
> -ಸಿದ್ದರಾಮಯ್ಯ, ಮುಖ್ಯಮಂತ್ರಿ

> ಅಧಿಕಾರ ಹಂಚಿಕೆ ಕುರಿತಂತೆ ಕಾಲವೇ ಉತ್ತರ ನೀಡುತ್ತದೆ. ವಿಭಿನ್ನ ರೀತಿಯಲ್ಲಿ ವ್ಯಾಖ್ಯಾನಗಳು ಬೇಡ. ಸ್ವಲ್ಪ ತಾಳ್ಮೆಯಿಂದ ಇರಿ, ನಾನೇ ಮಾತನಾಡುತ್ತೇನೆ. ನಾನಿನ್ನೂ ಯಾವ ನಾಯಕರನ್ನು ದೆಹಲಿಯಲ್ಲಿ ಭೇಟಿಯಾಗಿಲ್ಲ. ಇನ್ನೂ ಅಸ್ಸಾಂ ವಿಧಾನಸಭೆ ಚುನಾವಣೆ ತಯಾರಿಯ ಜಂಜಾಟದಲ್ಲಿ ಇದ್ದೇನೆ.
>
> -ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

> ಸಿದ್ದರಾಮಯ್ಯ ಅವರು ಕೊಟ್ಟ ಮಾತಿನಂತೆ ನಡೆಯುತ್ತಾರೆ ಎನ್ನುವ ಭರವಸೆ ಈಗಲೂ ಇದೆ. ಕಾಂಗ್ರೆಸ್ ಪಕ್ಷ ಸರ್ವ ಧರ್ಮ, ಸರ್ವ ಪಕ್ಷಗಳ ನಾಯಕರನ್ನು ಒಳಗೊಂಡಿದೆ. ಇಲ್ಲಿ ಹೊರಗಿನಿಂದ ಬಂದವರಿಗೆ ಮೊದಲ ಆದ್ಯತೆ, ಆಮೇಲೆ ಕಾಂಗ್ರೆಸಿಗರಿಗೆ ಆದ್ಯತೆ. ಅತಿಥಿಗಳನ್ನು ಗೌರವಿಸುವುದೇ ಕಾಂಗ್ರೆಸ್ ಪಕ್ಷದ ಗುರಿ.
>
> -ಡಿ.ಕೆ.ಸುರೇಶ್, ಮಾಜಿ ಸಂಸದ

ಇನ್ಮುಂದೆ ಜನಗಣಮನಕ್ಕೂ ಮುನ್ನ ವಂದೇ ಮಾತರಂ ಹಾಡುವುದು ಕಡ್ಡಾಯ: ಕೇಂದ್ರ ಸುತ್ತೋಲೆ ಜಾರಿ

ವಂದೇ ಮಾತರಂ ಕಡ್ಡಾಯ

ದೆಹಲಿ: ದೇಶದ ಸಾಂಸ್ಕೃತಿಕ ಮತ್ತು ದೇಶಭಕ್ತಿಯ ಸಂಕೇತವಾದ 'ವಂದೇ ಮಾತರಂ' ಗೀತೆಗೆ ಸಂಬಂಧಿಸಿ ಕೇಂದ್ರ ಗೃಹ ಸಚಿವಾಲಯವು ಮಹತ್ವದ ನಿರ್ಧಾರ ತೆಗೆದುಕೊಂಡಿದೆ. ರಾಷ್ಟ್ರಗೀತೆಗೂ ಮುನ್ನ 'ವಂದೇ ಮಾತರಂ' ಗೀತೆಯನ್ನು ಕಡ್ಡಾಯವಾಗಿ ಹಾಡಬೇಕು ಅಥವಾ ನುಡಿಸಬೇಕು ಎಂದು ಕೇಂದ್ರ ಗೃಹ ಸಚಿವಾಲಯ ಹೊರಡಿಸಿದ ಹೊಸ ಮಾರ್ಗಸೂಚಿ ತಿಳಿಸಿದೆ.

ಪದ್ಮ ಪ್ರಶಸ್ತಿಗಳಂತಹ ನಾಗರಿಕ ಪ್ರಶಸ್ತಿ ಪ್ರದಾನ ಸಮಾರಂಭಗಳಲ್ಲಿ, ರಾಷ್ಟ್ರಪತಿ ಗಳು ಭಾಗವಹಿಸುವ ಇತರ ಎಲ್ಲಾ ಕಾರ್ಯಕ್ರಮಗಳು, ಅಧಿಕೃತ ಸರಕಾರಿ ಕಾರ್ಯಕ್ರಮಗಳು, ಚಿತ್ರಮಂದಿರಗಳಲ್ಲಿ ವಂದೇ ಮಾತರಂ ಗೀತೆ ನುಡಿಸಬೇಕು ಅಥವಾ ಹಾಡಬೇಕು. 3 ನಿಮಿಷ 10 ಸೆಕೆಂಡುಗಳ ಅವಧಿಯ ವಂದೇ ಮಾತರಂ ಗೀತೆಯ 6 ಚರಣಗಳ ಗೀತೆ ನುಡಿಸುವಾಗ ಅಥವಾ ಹಾಡುವಾಗ ಎಲ್ಲರೂ ಕಡ್ಡಾಯವಾಗಿ ಎದ್ದು ನಿಲ್ಲಬೇಕು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಇದಲ್ಲದೇ, 'ರಾಷ್ಟ್ರದ ಗೌರವಕ್ಕೆ ಅಪಮಾನ ತಡೆ' ಕಾಯ್ದೆ ಅಡಿಯಲ್ಲಿ ವಂದೇ ಮಾತರಂ ಗೀತೆಯನ್ನೂ ಸೇರಿಸಲಾಗಿದ್ದು, ಈ ಗೀತೆಯ ಹಾಡಿಗೆ ಅಡ್ಡಿಪಡಿಸುವ ಅಥವಾ ಇತರರು ಗೌರವಿಸುವುದನ್ನು ತಡೆಯುವ ಯಾವುದೇ ವ್ಯಕ್ತಿಗೆ ಗರಿಷ್ಠ 3 ವರ್ಷಗಳ ಜೈಲು ಶಿಕ್ಷೆ ವಿಧಿಸಬಹುದಾಗಿದೆ. 6 ಚರಣಗಳಿರುವ ವಂದೇ ಮಾತರಂ' ಗೀತೆಯನ್ನು ಹಾಡುವುದು ಕಡ್ಡಾಯಗೊಳಿಸಿ ಹೊರಡಿಸಿರುವ ನಿರ್ದೇಶನವನ್ನು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು, ಸಚಿವಾಲಯಗಳು ಮತ್ತು ಸಾಂವಿಧಾನಿಕ ಸಂಸ್ಥೆಗಳಿಗೆ ಕಳುಹಿಸಲಾಗಿದೆ.



6 ಚರಣಗಳ ಹಾಡು

ಇಲ್ಲಿಯವರೆಗೆ, ರಾಷ್ಟ್ರಗೀತೆ ಜನಗಣಮನ ಹೊರತುಪಡಿಸಿ ವಂದೇ ಮಾತರಂ ಹಾಡಲು ಯಾವುದೇ ಅಧಿಕೃತ ಶಿಷ್ಟಾಚಾರ, ನಿಯಮಗಳಿರಲಿಲ್ಲ. ಈಗ ಇದನ್ನು ಕಡ್ಡಾಯಗೊಳಿಸಲಾಗಿದ್ದು 1937 ರಲ್ಲಿ ಕಾಂಗ್ರೆಸ್ ಪಕ್ಷ ತೆಗೆದುಹಾಕಿದ್ದ 4 ಚರಣಗಳನ್ನು ಒಳಗೊಂಡಂತೆ ಎಲ್ಲಾ 6 ಚರಣಗಳನ್ನೂ ನುಡಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಬಂಕಿಮ್ ಚಂದ್ರ ಚಟರ್ಜಿ ಅವರು ವಂದೇ ಮಾತರಂ ಗೀತೆಯನ್ನು ರಚಿಸಿ 150 ವರ್ಷ ತುಂಬಿರುವ ಸಂದರ್ಭದಲ್ಲಿ ಕೇಂದ್ರ ಸರಕಾರ ಈ ನಿರ್ಧಾರ ತೆಗೆದುಕೊಂಡಿದೆ.

ಅನ್ಯ ಪ್ರಸಾಧನ ಸಂಸ್ಥೆಗಳ ಜತೆ ಒಪ್ಪಂದ ಮಾಡಿಕೊಂಡಿರುವ ಕನ್ನಡದ ಸ್ಟಾರ್ ನಟಿಯರು

ನಮ್ಮವ್ರನ್ನಾ ಬಿಟ್ಟು ತಮನ್ನಾ ಆಯ್ಕೆ ಮಾಡಿದ್ದೇಕೆ?

ವಿಶ್ವವಾಣಿ ವಿಶೇಷ ಬೆಂಗಳೂರು

'ಮಿಲ್ಕಿ ಬ್ಯೂಟಿ' ತಮನ್ನಾ ಭಾಟಿಯಾ ನೇಮಕಕ್ಕೆ ಸಂಬಂಧಿಸಿದಂತೆ ಪರ-ವಿರೋಧ ಚರ್ಚೆ ಸಾಮಾಜಿಕ ಜಾಲತಾಣದಲ್ಲಿ ಜೋರಾಗಿದೆ. ಆರೂವರೆ ಕೋಟಿ ಕೊಟ್ಟು ತಮನ್ನಾರನ್ನು ಎರಡು ವರ್ಷದ ಮಟ್ಟಿಗೆ ರಾಯಭಾರಿಯನ್ನಾಗಿ ನೇಮಿಸಿಕೊಳ್ಳಲು ಜನಪ್ರಿಯತೆ ಮಾತ್ರವಲ್ಲದೇ, ತಾಂತ್ರಿಕ ಕಾರಣವೂ ಇದೆ ಎನ್ನಲಾಗುತ್ತಿದೆ.

ಬಾಲಿವುಡ್ ಮಟ್ಟದಲ್ಲಿ ತಮನ್ನಾ ರೀತಿಯಲ್ಲಿಯೇ ಕನ್ನಡಿಗರಾದ ರಶ್ಮಿಕಾ ಮಂದಣ್ಣ, ದೀಪಿಕಾ ಪಡುಕೋಣೆ, ಶ್ರೀಲೀಲಾ ಮುಂತಾದ ಜನಪ್ರಿಯ ನಟಿಯರು ಇರುವಾಗ ಅವರನ್ನು ಬಿಟ್ಟು ತಮನ್ನಾ ಆಯ್ಕೆಯ ಅಗತ್ಯವೇನಿತ್ತು ಎನ್ನುವ ಮಾತುಗಳು ಕೇಳಿಬರುತ್ತಿವೆ. ಆದರೆ ಈ ಮೂವರು ನಟಿಯರು ಸ್ಕಿನ್ ಕೇರ್, ಸಾಬೂನು ಉತ್ಪನ್ನಗಳ ಇತರೆ ಬ್ರ್ಯಾಂಡ್‌ಗಳ ರಾಯಭಾರಿ ಯಾಗಿ ಕಾರ್ಯನಿರ್ವ ಹಿಸುತ್ತಿರುವುದರಿಂದ, ಅವರನ್ನು ಪುನಃ ಮೈಸೂರು ಸ್ಯಾಂಡಲ್‌ಗೆ ನೇಮಿಸಿಕೊಳ್ಳಲು ಸಾಧ್ಯವಿಲ್ಲ. ತಮನ್ನಾ ಭಾಟಿಯಾ ಅವರನ್ನು ಆಯ್ಕೆ ಮಾಡಲಾಗಿದೆ.

ಜನಪ್ರಿಯತೆ, ಸಾಮಾಜಿಕ ಮಾಧ್ಯಮಗಳಲ್ಲಿ ಹೊಂದಿರುವ ಅಭಿಮಾನಿಗಳ ಸಂಖ್ಯೆ, ನಂಬಿಕೆ, ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವುದರೊಂದಿಗೆ ಬ್ರ್ಯಾಂಡ್‌ನ ಜತೆ ಸಹಜವಾಗಿ ಹೊಂದಾಣಿಕೆಯಾಗುವ ಗುಣಗಳನ್ನು ಆಧರಿಸಿ ತಮನ್ನಾ ಅವರನ್ನು ಆಯ್ಕೆ ಮಾಡಲಾಗಿದೆ ಎನ್ನುವುದು ಕೆಎಸ್‌ಡಿಎಲ್ ನಿಲುವಾಗಿದೆ.

ಒಬ್ಬರು ಒಂದು ಬ್ರ್ಯಾಂಡ್ ಮಾತ್ರ ಸೀಮಿತ

ಯಾವುದೇ ವ್ಯಕ್ತಿ ಒಂದೇ ಉದ್ಯಮದ ಎರಡೆರಡು ಬ್ರ್ಯಾಂಡ್‌ನ ರಾಯಭಾರಿಯಾಗುವಂತಿಲ್ಲ ಎನ್ನುವ ಷರತ್ತನ್ನು ಒಪ್ಪಂದ ಮಾಡಿಕೊಳ್ಳುವ ಸಮಯದಲ್ಲಿಯೇ ಮಾಡಲಾಗಿರುತ್ತದೆ. ಆದ್ದರಿಂದ ಕೆಎಸ್‌ಡಿಎಲ್ ಉತ್ತರ ಭಾರತ ಹಾಗೂ ವಿಶ್ವಾದ್ಯಂತ ತನ್ನ ಉತ್ಪನ್ನಗಳಿಗೆ ರಾಯಭಾರಿಯನ್ನು ನೇಮಿಸಿಕೊಳ್ಳುವಾಗ ಕೆಲವರನ್ನು ಆಯ್ಕೆ ಮಾಡಿಕೊಳ್ಳಬೇಕೆಂಬ ಪ್ರಯತ್ನವಿದ್ದರೂ ಸಾಧ್ಯವಾಗಲಿಲ್ಲ. ಕನ್ನಡತಿಯರಾದ ದೀಪಿಕಾ ಪಡುಕೋಣೆ, ರಶ್ಮಿಕಾ ಮಂದಣ್ಣ ಸೇರಿದಂತೆ ಹಲವು ಕನ್ನಡಿಗರು ಈಗಾಗಲೇ ಬೇರೆ ಬೇರೆ ಬ್ರ್ಯಾಂಡ್‌ನೊಂದಿಗೆ ಒಪ್ಪಂದ ಮಾಡಿಕೊಂಡಿದ್ದಾರೆ. ಸ್ಕಿನ್ ಕೇರ್ ಹಾಗೂ ಸಾಬೂನು ಉತ್ಪನ್ನಕ್ಕೆ ಸಂಬಂಧಿಸಿದ ಯಾವ ಬ್ರ್ಯಾಂಡ್‌ನೊಂದಿಗೂ ತಮನ್ನಾ ಭಾಟಿಯಾ ಒಪ್ಪಂದ ಮಾಡಿಕೊಳ್ಳದೇ ಇದ್ದ ಕಾರಣ ಅವರನ್ನು ಆಯ್ಕೆ ಮಾಡಲಾಗಿದೆ. →10

ತಮನ್ನಾಗೆ ನೀಡಿದ್ದ ಪೈಸಾ ವಸೂಲಿ

ರಾಜ್ಯ ಸರಕಾರ ಕಳೆದ ವರ್ಷ ತಮನ್ನಾ ಭಾಟಿಯಾ ಅವರನ್ನು ಆರು ಕೋಟಿ ರು. ಕೊಟ್ಟು ಮೈಸೂರು ಸ್ಯಾಂಡಲ್‌ಗೆ ರಾಯಭಾರಿಯನ್ನಾಗಿ ನೇಮಿಸಿದಾಗಲೂ ದುಂದುವೆಚ್ಚ ಎಂದು ಅನೇಕರು ಮೂಗು ಮುರಿದಿದ್ದರು. ಆದರೆ ಕೆಎಸ್‌ಡಿಎಲ್ ಅಂಕಿ-ಅಂಶದ ಪ್ರಕಾರ, 2025-26ನೇ ಸಾಲಿನಲ್ಲಿ ಒಟ್ಟು 1913.90 ಕೋಟಿ ರು. ವ್ಯವಹಾರವಾಗಿದೆ. ಇದರಲ್ಲಿ ಉತ್ತರ ಭಾರತದಲ್ಲಿರುವ ಕೆಎಸ್‌ಡಿಎಲ್ ಶಾಖೆಗಳಾಗಿರುವ ಮುಂಬೈನಲ್ಲಿ 122 ಕೋಟಿ ರು, ಕೋಲ್ಕತ್ತ ವಲಯದಲ್ಲಿ 175.20 ಕೋಟಿ ರು., ದೆಹಲಿ ಭಾಗದಲ್ಲಿ 47 ಕೋಟಿ ರು ವ್ಯವಹಾರವಾಗಿದೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ ಶೇ.6ರಿಂದ 9ರಷ್ಟು ವ್ಯವಹಾರ ಹೆಚ್ಚಾಗಿದೆ. ಇನ್ನು ಹೈದರಾಬಾದ್‌ನಲ್ಲಿ ಶೇ.45ರಷ್ಟು, ಚೆನ್ನೈನಲ್ಲಿ ಶೇ.19.75ರಷ್ಟು ವ್ಯಾಪಾರ ಹೆಚ್ಚಾಗಿದೆ. ಈ ಮೂಲಕ ತಮನ್ನಾಗೆ ನೀಡಿರುವ ಪೈಸಾ ವಸೂಲಾಗಿದೆ ಎಂದು ಕಾರ್ಖಾನೆ ಮೂಲಗಳು ತಿಳಿಸಿವೆ.

ಬ್ರ್ಯಾಂಡ್ ರಾಯಭಾರಿಗಳು

ರಾಯಭಾರಿ	ಬ್ರ್ಯಾಂಡ್
ದೀಪಿಕಾ ಪಡುಕೋಣೆ	ಸ್ವಂತ ಬ್ರ್ಯಾಂಡ್
ರಶ್ಮಿಕಾ ಮಂದಣ್ಣ	ಐಟಿಸಿ ಫಿಯಾಮಾ
ಶ್ರೀಲೀಲಾ	ನೆಯಡ್ (ಸ್ಕಿನ್ ಕೇರ್)
ಪೂಜಾ ಹೆಗಡೆ	ಗಾರ್ನಿಯರ್
ಕೈರಾ ಅಡ್ವಾಣಿ	ಪಾಂಡ್ಸ್

ಈ ಹಿಂದೆ ಯಾರಿಗೆ ಎಷ್ಟು ಹಣ?

ರಾಯಭಾರಿ	ವರ್ಷ	ರಾಜ್ಯ	ಪಡೆದ ಮೊತ್ತ
ದೊಡ್ಡ ಗಣೇಶ್	2003-04	ಕರ್ನಾಟಕ	25 ಲಕ್ಷ ರು.
ದೀಪಿಕಾ ಚಿಖ್ಲಿಯಾ	1992-93	ಗುಜರಾತ್	25 ಲಕ್ಷ ರು.
ಧೋನಿ	2005-2006	ಜಾರ್ಖಂಡ್	84 ಲಕ್ಷ ರು.
ಮುಗ್ಧಾ ವೀರಾ ಗೋದ್ಸೆ	2013-14	ಮಹಾರಾಷ್ಟ್ರ	25 ಲಕ್ಷ ರು.
ಐಶಾನಿ ಶೆಟ್ಟಿ	2025-28	ಕರ್ನಾಟಕ	15 ಲಕ್ಷ ರು.
ತಮನ್ನಾ ಭಾಟಿಯಾ	2025-27	ಮಹಾರಾಷ್ಟ್ರ	6.20 ಕೋಟಿ ರು.

SUBEX

ಸುಬೆಕ್ಸ್ ಲಿಮಿಟೆಡ್

(ಸಿಐಎನ್: L85110KA1994PLC016663)

ನೋಂದಾಯಿತ ಕಚೇರಿ: ಪ್ರೈಟೆಕ್ ಪಾರ್ಕ್ – ಎಸ್‌ಇಝೆಡ್, ಬ್ಲಾಕ್–09, 4ನೇ ಮಹಡಿ, ಬಿ ವಿಂಗ್, ಸರ್ವೆ ನಂ. 51 ರಿಂದ 64/4, ಹೊರವರ್ತುಲ ರಸ್ತೆ, ಬೆಳ್ಳಂದೂರು ವಿಲೇಜ್, ವರ್ತೂರು ಹೋಬಳಿ, ಬೆಂಗಳೂರು–560103 ದೂರವಾಣಿ: 080 3745 1377
ಇಮೇಲ್: info@subex.com ವೆಬ್‌ಸೈಟ್: www.subex.com

ಡಿಸೆಂಬರ್ 31, 2025ಕ್ಕೆ ಅಂತ್ಯಗೊಂಡ ತ್ರೈಮಾಸಿಕದ ಅಪರಿಶೋಧಿತ ಕ್ರೋಢೀಕೃತ ಆರ್ಥಿಕ ಫಲಿತಾಂಶಗಳ ಸಾರಾಂಶ

(ಪ್ರತಿ ಷೇರಿನ ದತ್ತಾಂಶ ಹೊರತುಪಡಿಸಿ ರೂ. ಲಕ್ಷಗಳಲ್ಲಿ)

ಕ್ರ. ಸಂ.	ವಿವರಗಳು	ಡಿಸೆಂಬರ್ 31, 2025ಕ್ಕೆ ಅಂತ್ಯಗೊಂಡ ತ್ರೈಮಾಸಿಕ	ಮಾರ್ಚ್ 31, 2025ಕ್ಕೆ ಅಂತ್ಯಗೊಂಡ ವರ್ಷ	ಡಿಸೆಂಬರ್ 31, 2024ಕ್ಕೆ ಅಂತ್ಯಗೊಂಡ ತ್ರೈಮಾಸಿಕ
1	ಕಾರ್ಯಾಚರಣೆಗಳಿಂದ ಬಂದ ಆದಾಯ	7,079	28,561	7,269
2	ಅವಧಿಯ ನಿವ್ವಳ ಲಾಭ/(ನಷ್ಟ) (ತೆರಿಗೆ, ಅಸಾಧಾರಣ ಮತ್ತು / ಅಥವಾ ಅಸಾಮಾನ್ಯ ಐಟಂಗಳ ಮುನ್ನ#)	1,026	(2,404)	(32)
3	ತೆರಿಗೆಯ ಮುನ್ನ ಅವಧಿಯ ನಿವ್ವಳ ಲಾಭ/(ನಷ್ಟ) (ಅಸಾಧಾರಣ ಮತ್ತು / ಅಥವಾ ಅಸಾಮಾನ್ಯ ಐಟಂಗಳ ನಂತರ#)	576	(1,982)	(32)
4	ತೆರಿಗೆಯ ನಂತರ ಅವಧಿಯ ನಿವ್ವಳ ಲಾಭ/(ನಷ್ಟ) (ಅಸಾಧಾರಣ ಮತ್ತು / ಅಥವಾ ಅಸಾಮಾನ್ಯ ಐಟಂಗಳ ನಂತರ#)	293	(3,144)	(325)
5	ಅವಧಿಯ ಒಟ್ಟು ಸಮಗ್ರ ಆದಾಯ [ಅವಧಿಯು ಒಳಗೊಂಡ ಲಾಭ / (ನಷ್ಟ) (ತೆರಿಗೆಯ ನಂತರ) ಮತ್ತು ಇತರೆ ಸಮಗ್ರ ಆದಾಯ (ತೆರಿಗೆಯ ನಂತರ)]	413	(2,992)	(294)
6	ಪಾವತಿಸಿದ ಈಕ್ವಿಟಿ ಶೇರು ಬಂಡವಾಳ (ಮುಖಬೆಲೆ ರೂ. 5 ಪ್ರತಿಯೊಂದಕ್ಕೆ)	28,100	28,100	28,100
7	ವರ್ಷದ ಆಡಿಟೆಡ್ ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸಿರುವ ಮೀಸಲುಗಳು (ಮರುಮೌಲೀಕೃತ ಮೀಸಲುಗಳನ್ನು ಹೊರತುಪಡಿಸಿ)	-	2,348	-
8	ಪ್ರತಿ ಶೇರಿನ ಗಳಿಕೆ (ರೂ. 5/– ಪ್ರತಿಯೊಂದಕ್ಕೆ) (ಕಾರ್ಯಾಚರಣೆಗಳನ್ನು ಮುಂದುವರೆಸಲು ಮತ್ತು ನಿಲ್ಲಿಸಿದೆ)			
	1. ಮೂಲ:	0.05	(0.57)	(0.06)
	2. ವಿಭಜಿತ:	0.05	(0.57)	(0.06)

ಪ್ರತ್ಯೇಕ ಆರ್ಥಿಕ ಫಲಿತಾಂಶಗಳ ಕುರಿತು ಹೆಚ್ಚುವರಿ ಮಾಹಿತಿ ಈ ಕೆಳಗಿನಂತಿದೆ:–

ಕ್ರ. ಸಂ.	ವಿವರಗಳು	ಡಿಸೆಂಬರ್ 31, 2025ಕ್ಕೆ ಅಂತ್ಯಗೊಂಡ ತ್ರೈಮಾಸಿಕ	ಮಾರ್ಚ್ 31, 2025ಕ್ಕೆ ಅಂತ್ಯಗೊಂಡ ವರ್ಷ	ಡಿಸೆಂಬರ್ 31, 2024ಕ್ಕೆ ಅಂತ್ಯಗೊಂಡ ತ್ರೈಮಾಸಿಕ
1	ಕಾರ್ಯಾಚರಣೆಗಳಿಂದ ಬಂದ ಆದಾಯ (ಅಸಾಧಾರಣ ವಸ್ತುಗಳು ಮತ್ತು ಇತರ ಆದಾಯದ ಮೊದಲು ಎಲ್‌ಎಲ್‌ಪಿಯಿಂದ ಬಂದ ಲಾಭದ ಪಾಲನ್ನು ಹೊರತುಪಡಿಸಿ)	6,544	26,881	6,908
2	ಅವಧಿಯ ನಿವ್ವಳ ಲಾಭ/(ನಷ್ಟ) (ತೆರಿಗೆಯ, ಅಸಾಧಾರಣ ಮತ್ತು / ಅಥವಾ ಅಸಾಮಾನ್ಯ ಐಟಂಗಳ ಮುನ್ನ#)	157	(5,001)	(690)
3	ತೆರಿಗೆಯ ಮುನ್ನ ಅವಧಿಯ ನಿವ್ವಳ ಲಾಭ/(ನಷ್ಟ) (ಅಸಾಧಾರಣ ಮತ್ತು / ಅಥವಾ ಅಸಾಮಾನ್ಯ ಐಟಂಗಳ ನಂತರ#)	(271)	(4,579)	(690)
4	ತೆರಿಗೆಯ ನಂತರ ಅವಧಿಯ ನಿವ್ವಳ ಲಾಭ/(ನಷ್ಟ) (ಅಸಾಧಾರಣ ಮತ್ತು / ಅಥವಾ ಅಸಾಮಾನ್ಯ ಐಟಂಗಳ ನಂತರ#)	(338)	(4,978)	(734)
5	ಅವಧಿಯ ಒಟ್ಟು ಸಮಗ್ರ ಆದಾಯ [ಅವಧಿಯು ಒಳಗೊಂಡ ಲಾಭ / (ನಷ್ಟ) (ತೆರಿಗೆಯ ನಂತರ) ಮತ್ತು ಇತರೆ ಸಮಗ್ರ ಆದಾಯ (ತೆರಿಗೆಯ ನಂತರ)]	(338)	(4,990)	(747)

ಟಿಪ್ಪಣಿ: ಎ) ಮೇಲಿನ ಸಾರಸತ್ವವು 2015ರ ಸೆಬಿಯ (ಲಿಸ್ಟಿಂಗ್ ಬಾಧ್ಯತೆ ಮತ್ತು ಘೋಷಣೆಗಳ ಅವಶ್ಯಕತೆಗಳು) 33ನೇ ನಿಯಂತ್ರಣದಡಿ ಸ್ಟಾಕ್ ಎಕ್ಸ್‌ಚೇಂಜ್‌ಗಳಲ್ಲಿ ಸಲ್ಲಿಸಲಾಗಿರುವ ತ್ರೈಮಾಸಿಕ / ವಾರ್ಷಿಕ ಆರ್ಥಿಕ ಫಲಿತಾಂಶಗಳ ವಿಸ್ತೃತ ನಮೂನೆಯ ಸಾರಾಂಶವಾಗಿದೆ. ತ್ರೈಮಾಸಿಕ / ವಾರ್ಷಿಕ ಆರ್ಥಿಕ ಫಲಿತಾಂಶಗಳ ಪೂರ್ಣ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ ಮತ್ತು ಕಂಪನಿಯ ವೆಬ್‌ಸೈಟ್ www.subex.com ನಲ್ಲಿ ಸಹ ಲಭ್ಯವಿದೆ.

ಬಿ) # – ಅಸಾಧಾರಣ ಮತ್ತು / ಅಥವಾ ಅಸಾಮಾನ್ಯ ಐಟಂಗಳನ್ನು Ind AS ನಿಯಮಗಳು/ AS ನಿಯಮಗಳ ಅನ್ವಯ ಲಾಭ ಮತ್ತು ನಷ್ಟದ ವಿವರಣೆಯಲ್ಲಿ ಯಾವುದು ಅನ್ವಯಿಸುವುದೋ ಅದಕ್ಕೆ ಸರಿಹೊಂದಿಸಲಾಗಿದೆ.

ಮಂಡಳಿಯ ಆದೇಶದ ಮೇರೆಗೆ
ಸಹಿ/–
ನಿಶಾ ದತ್
ವ್ಯವಸ್ಥಾಪಕ ನಿರ್ದೇಶಕಿ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
DIN: 06465957

ಸ್ಥಳ : ಬೆಂಗಳೂರು
ದಿನಾಂಕ : ಫೆಬ್ರವರಿ 10, 2026

Size: 12cm x 27cm

standard chartered

ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್

ರೀಟೈಲ್ ಕಲೆಕ್ಷನ್ಸ್, 2ನೇ ಮಹಡಿ, ಈಸ್ಟ್ ವಿಂಗ್ ರಹೇಜ ಟವರ್ಸ್, ಎಂ ಜಿ ರಸ್ತೆ, ಬೆಂಗಳೂರು –560001. ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ : ಶ್ರೀ ರಾಜೇಶ್ ಕುಮಾರ್ ಬತಿನ, ದೂ: 9985799277, ಇ–ಮೇಲ್: rajeshKumar.bathina@sc.com
ಅಥವಾ ಶ್ರೀ ಶಶಿ ಗಾಂಧಿ, ಮೊ. ಸಂ. 9831898211, ಇ–ಮೇಲ್: shashi.gandhi@sc.com ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ / ಪೂರಕ ಭದ್ರತಾದಾರರ ವೆಬ್‌ಸೈಟ್‌ನಲ್ಲಿ ನೀಡಲಾದ ಲಿಂಕ್ https://www.sc.com/in/important-information/public-sale-notice-of-properties-under-the-possession-of-bank/ ನ್ನು ಆಧಾರ ಮಾಡಿಕೊಳ್ಳಿ.

ಇ–ಹರಾಜು ಸೂಚನೆ

ಸರ್ಫೇಸಿ ಕಾಯಿದೆ 2002 ಪ್ರೊವಿಜನ್ ನಿಯಮ 6(2) ಮತ್ತು 8(6) ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ಅಡಿ ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಸಾರ್ವಜನಿಕ ಮಾರಾಟ ಸೂಚನೆ.

ಕೆಳಸಹಿದಾರರು ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್‌ನ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆ್ಯಕ್ಟ್, 2002 (ಕಾಯಿದೆ) ಮತ್ತು ಸೆಕ್ಷನ್ 13(12)ರ ನಿಯಮ 3ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಜಾರಿ) ಕಾಯಿದೆ, 2002 (ನಿಯಮಗಳು)ರ ಅಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 16.01.2023ರಂದು ತಗಾದೆ ಸೂಚನೆಯನ್ನು ನೀಡಿದ್ದು, ಈ ಕೆಳಗಿನ ಸಾಲಗಾರರಾದ ಮೆ॥ ಸೇಮ್‌ಸ್ಕೈ ಕನ್‌ಫೆಕ್ಷನರೀಸ್ (ಇಂಡಿಯ) ಪ್ರೈವೇಟ್ ಲಿಮಿಟೆಡ್ ಇದರ ನಿರ್ದೇಶಕರು ಮತ್ತು ಜಾಮೀನುದಾರರಾದ ಶ್ರೀ ರೂಪೇಶ್ ಕೆಡಿಯ ಮತ್ತು ಶ್ರೀಮತಿ ಕಾನುಪ್ರಿಯ ಕೆಡಿಯ ಮತ್ತು ಪುರುಷೋತ್ತಮ ಲಾಲ್ ಕೆಡಿಯ ಇವರುಗಳ ಓವರ್‌ಡ್ರಾಫ್ಟ್ ಮತ್ತು ಎನರ್ಜೆನ್ಸಿ ಕ್ರೆಡಿಟ್ ಲೈನ್ ಫೆಸಿಲಿಟಿ ಸಂ. 45505400694/004522681 ರಲ್ಲಿ ನೋಟೀಸಿನಲ್ಲಿ ತಿಳಿಸಿರುವ ಮೊತ್ತ 31.12.2022ರವರೆಗೆ ರೂ.5,85,47,102.24 (ಐದು ಕೋಟಿ ಎಂಭತ್ತೈದು ಲಕ್ಷ ನಲವತ್ತೇಳು ಸಾವಿರದ ನೂರ ಎರಡು ರೂಪಾಯಿಗಳು ಹಾಗು ಪೈಸೆ ಇಪ್ಪತ್ತನಾಲ್ಕು ಮಾತ್ರ) ವನ್ನು ಹಾಗೂ ಸೇರಿರುವ ಬಡ್ಡಿ/ವಸೂಲಾಗದ ಬಡ್ಡಿಯನ್ನು ಒಪ್ಪಂದದ ದರದಲ್ಲಿ ಒಟ್ಟಾಗಿ ಹಣ ಸಂಪೂರ್ಣ ಮರುಪಾವತಿಯಾಗುವವರೆಗೆ ಮೂಲವೆಚ್ಚಗಳು, ಖರ್ಚುಗಳು, ದರಗಳು ಇತ್ಯಾದಿಯನ್ನು ಈ ನೋಟೀಸ್ ನೀಡಿದ 60 ದಿನಗಳ ಒಳಗೆ ಮರುಪಾವತಿಸುವಂತೆ ಸೂಚನೆ ನೀಡಲಾಗಿತ್ತು.

ಸಾಲಗಾರ/ನಿರ್ದೇಶಕರು/ಜಾಮೀನುದಾರರು/ಅಡಮಾನದಾರರು ಹಣವನ್ನು ಮರುಪಾವತಿಸಲು ವಿಫಲರಾದುದರಿಂದ ಸಾಲಗಾರ/ ನಿರ್ದೇಶಕರು/ ಜಾಮೀನುದಾರರು/ಅಡಮಾನದಾರರು ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡುವುದೇನೆಂದರೆ, ಕೆಳಸಹಿದಾರರು ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್‌ನ ಅಧಿಕೃತ ಅಧಿಕಾರಿಯಾಗಿ ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ ರೀಟೈಲ್ ಕಲೆಕ್ಷನ್ಸ್, 2ನೇ ಮಹಡಿ, ಈಸ್ಟ್ ವಿಂಗ್ ರಹೇಜ ಟವರ್ಸ್, ಎಂ ಜಿ ರಸ್ತೆ, ಬೆಂಗಳೂರು –560001 ಬ್ಯಾಂಕ್‌ಗೆ ಅಡಮಾನ ಮಾಡಿರುವ ಈ ಕೆಳಗಿನ ಸ್ಥಿರಾಸ್ತಿಯನ್ನು ಸಾಲಗಾರ/ನಿರ್ದೇಶಕರು/ಜಾಮೀನುದಾರರು/ಅಡಮಾನದಾರರು ಇವರಿಂದ ಬರಬೇಕಾದ ಬಾಕಿ ಹಣಕ್ಕಾಗಿ ಭದ್ರತಾ ಸ್ವತ್ತುಗಳನ್ನು 16.04.2025 ರಂದು ಸೆಕ್ಷನ್ 13 ರ ಸಬ್ ಸೆಕ್ಷನ್ (4)ರ ಕಾಯಿದೆ ನಿಯಮ 8ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002 ರ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಭೌತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ.

ಇದೀಗ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ ಹೇಳಲಾಗುವ ಆಸ್ತಿಯ ಇ–ಹರಾಜು ಮೂಲಕ "ಎಲ್ಲಿ ಹೇಗಿದೆಯೋ ಹಾಗೆ", "ಎಲ್ಲಿ ಯಾವುದು ಇದೆಯೋ ಹಾಗಿನ ಆಧಾರದ ಮೇಲೆ", ಮಾರಾಟ ಮಾಡಲು ಇ–ಟೆಂಡರ್‌ಗಳನ್ನು ಆಹ್ವಾನಿಸಿದೆ.

ಸಾಲಗಾರರು, ಜಾಮೀನುದಾರರು ಮತ್ತು ಅಡಮಾನದಾರರಿಗೆ ಈ ಮೂಲಕ ಸೂಚನೆ ನೀಡುವುದೇನೆಂದರೆ ನಿಯಮ 8(6) ಮತ್ತು 9(1)ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002ರಂತೆ ಕೋಷ್ಟಕದಲ್ಲಿ ನಮೂದಿಸಿರುವ ಬಾಕಿ ಮೊತ್ತವನ್ನು ಈ ನೋಟೀಸ್ ನೀಡಿದ 15 ದಿನಗಳ ಒಳಗಾಗಿ ಪಾವತಿ ಮಾಡಬೇಕು, ತಪ್ಪಿದಲ್ಲಿ ಭದ್ರತಾ ಸ್ವತ್ತುಗಳ ಹರಾಜನ್ನು ನಡೆಸಲಾಗುವುದು.

ಸ್ಥಿರ ಆಸ್ತಿಯ ವಿವರ

ವಸ್ತು ಸಂಖ್ಯೆ 1:
ವಾಸಯೋಗ್ಯ ಆಸ್ತಿ : ಅಂದರೆ ಫ್ಲ್ಯಾಟ್ ನಂ. 501, 5ನೇ ಮಹಡಿ, ಬ್ರಿಗೇಡ್ ಮಿಲೇನಿಯಂ, ಸರ್ವೆ ನಂ. 44, 45 ಮತ್ತು 51/1, ಪುಟ್ಟೇನಹಳ್ಳಿ ಗ್ರಾಮ, ಉತ್ತರಹಳ್ಳಿ ಹೋಬಳಿ, ಜೆ ಪಿ ನಗರ 7ನೇ ಹಂತ, ಬೆಂಗಳೂರು–560078, ಆಸ್ತಿಯ ಶ್ರೀ ರೂಪೇಶ್ ಕೆಡಿಯ ಮತ್ತು ಶ್ರೀಮತಿ ಕಾನುಪ್ರಿಯ ಕೆಡಿಯ ರವರ ಮಾಲೀಕತ್ವದಲ್ಲಿದೆ.

ಮೀಸಲು ಬೆಲೆ	ಇಎಂಡಿ (ಮೀಸಲು ಬೆಲೆಯ 10%)	ಬಿಡ್ ಮೊತ್ತ ಹೆಚ್ಚಳ
₹. 3,35,00,000/-	₹. 33,50,000/-	₹. 1,00,000.00/-

ಸ್ವತ್ತುಗಳ ಪರಿವೀಕ್ಷಣೆ	25.02.2026 ರಂದು ಮಧ್ಯಾಹ್ನ 1.00 ರಿಂದ ಸಂಜೆ 4.00 ಗಂಟೆ
ಟೆಂಡರ್ ಮತ್ತು ಅರ್ಜಿ ನಮೂನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ : 02.03.2026 ಸಮಯ : ಸಂಜೆ 5.00 ಗಂಟೆ
ಇ–ಹರಾಜು ದಿನಾಂಕ ಮತ್ತು ಸಮಯ	ಇ–ಹರಾಜು (ಜಾಲತಾಣ) assets.matexauctions.com ರಲ್ಲಿ (ಇ–ಹರಾಜು ಪೂರೈಕೆದಾರರ ವೆಬ್ ವಿಳಾಸ) 03.03.2026 ರಂದು ಮಧ್ಯಾಹ್ನ 12.00 ಗಂಟೆಯಿಂದ 2.00 ಗಂಟೆಯವರೆಗೆ ಪ್ರತೀ ಮಾರಾಟ, ಮಾರಾಟ ಮುಕ್ತಾಯವಾಗುವವರೆಗೆ 10 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ ನಡೆಯಲಿದೆ.
ಸಂಪರ್ಕಿಸಬೇಕಾದ ವ್ಯಕ್ತಿ ಮತ್ತು ಸಂಪರ್ಕ ಸಂಖ್ಯೆ	ಶ್ರೀ ರಾಜೇಶ್ ಕುಮಾರ್ ಬತಿನ, ದೂ: 9985799277/ ಶ್ರೀ ಶಶಿ ಗಾಂಧಿ, ಮೊ. ಸಂ. 9831788211

ಇ–ಹರಾಜಿನ ನಿಯಮ ಮತ್ತು ನಿಬಂಧನೆಗಳು ಈ ಕೆಳಗಿನಂತಿವೆ

1. ಆಸ್ತಿಯನ್ನು 25.02.2026 ರಂಧು ಮಧ್ಯಾಹ್ನ 1.00 ರಿಂದ ಸಂಜೆ 4.00 ಗಂಟೆಯ ನಡುವೆ ಪರಿವೀಕ್ಷಿಸಬಹುದು.
2. ನಿಯಮ ಮತ್ತು ನಿಬಂಧನೆಗಳನ್ನು ಒಳಗೊಂಡಿರುವ ಟೆಂಡರ್/ಬಿಡ್ ಅರ್ಜಿಗಳನ್ನು ಆನ್‌ಲೈನ್ ಜಾಲತಾಣ http://www.matexauctions..com ನಿಂದ ಪಡೆದುಕೊಳ್ಳಬಹುದು. ಟೆಂಡರ್ ಅರ್ಜಿ ಹಾಗೂ ನಿಯಮ ಮತ್ತು ನಿಬಂಧನೆಗಳು ಜಾಲತಾಣದಲ್ಲಿ 11ನೇ ಫೆಬ್ರವರಿ 2026 ರಿಂದ 02 ಮಾರ್ಚ್ 2026 ರಂದು ಮಧ್ಯಾಹ್ನ 1.00 ಗಂಟೆಯವರೆಗೆ ಲಭ್ಯವಿರುತ್ತದೆ. ಟೆಂಡರ್/ ಬಿಡ್ ಗಳನ್ನು ಅಗತ್ಯವಿರುವ ಎಲ್ಲಾ ದಾಖಲೆ ಹಾಗೂ ಈ ಮೇಲೆ ನಂಉದಿಸಿದ ಇಎಂಡಿ ಮೊತ್ತವನ್ನು ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ ಪರವಾಗಿ ಪಡೆದು ಸಲ್ಲಿಸಬೇಕು. ಅರ್ನೆಸ್ಟ್ ಠೇವಣಿ ಹಣಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ. ಬಿಡ್ ಅರ್ಜಿಗಳನ್ನು ಭರ್ತಿ ಮಾಡಿ http://www.matexauctions.com ನಲ್ಲಿ ಅಪ್‌ಲೋಡ್ ಮಾಡಬೇಕು. ಇ–ಹ ರಾಜು ಪ್ರಕ್ರಿಯೆಗೆ ಸಹಕಾರಕ್ಕಾಗಿ ಸಂಪರ್ಕ ವಿವರಗಳು ಹೀಗಿದೆ : ಶ್ರೀ ವಿಜಯ್ ಕುಮಾರ್, ಮೊ : 7200538774, ಲ್ಯಾಂಡ್‌ಲೈನ್: 044 43437474, ಇ–ಮೇಲ್ : solutions@matexauctions.com
3. ಅರ್ನೆಸ್ಟ್ ಠೇವಣಿ ಹಣದೊಂದಿಗೆ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 02 ನೇ ಮಾರ್ಚ್ 2026 ಸಂಜೆ 5.00 ಗಂಟೆ
4. ಬಿಡ್ ಅರ್ಜಿಯ ಜೊತೆ ಆತ/ಅವಳು ತನ್ನ ಗುರುತಿನ ಚೀಟಿ, ವಾಸದ ಪುರಾವೆಗಳಾದಂತಹ ಪಾಸ್‌ಪೋರ್ಟ್, ಚುನಾವಣಾ ಗುರುತಿನ ಚೀಟಿ, ರೇಷನ್ ಕಾರ್ಡ್, ಚಾಲನಾ ಪರವಾನಿಗೆ ಇತ್ಯಾದಿಗಳ ಪ್ರತಿ ಹಾಗೂ ಭಾರತೀಯ ಆದಾಯ ತೆರಿಗೆ ಇಲಾಖೆಯಿಂದ ನೀಡಲಾದ ಪ್ಯಾನ್ ಕಾರ್ಡ್‌ನ ಪ್ರತಿಯನ್ನು ಸಲ್ಲಿಸಬೇಕು.
5. ಬಿಡ್ಡುದಾರರು ಸಂಬಂಧಿಸಿದ ಪ್ರಾಧಿಕಾರದಿಂದ ನೀಡಲ್ಪಟ್ಟ ಸೂಕ್ತವಾದ ಡಿಜಿಟಲ್ ಸಹಿ ಪ್ರಮಾಣಪತ್ರ ಹಾಗೂ ಇ–ಮೇಲ್ ವಿಳಾಸವನ್ನು ಹೊಂದಿರಬೇಕು (ಇ–ಮೇಲ್ ವಿಳಾಸವು ಆಸಕ್ತ ಬಿಡ್ಡುದಾರರಿಗೆ ಅತೀ ಅಗತ್ಯವಾಗಿದ್ದು ಎಲ್ಲಾ ಮಾಹಿತಿಗಳನ್ನು ಮತ್ತು ಐಡಿ ಹಾಗು ಪಾಸ್‌ವರ್ಡ್ ಹಂಚಿಕೆ ಮಾಹಿತಿಯನ್ನು ಮೆ॥ ಮೇಟೆಕ್ಸ್ ನೆಟ್ ಪ್ರೈ.ಲಿ. ಇ–ಮೇಲ್ ಮೂಲಕವೇ ನಡೆಸಲಿದೆ.
6. ಹರಾಜಿನ ದಿನಾಂಕದಂದು ಸ್ವೀಕೃತವಾದ ಎಲ್ಲಾ ಬಿಡ್‌ಗಳನ್ನು ತೆರೆದು, ಅದರಲ್ಲಿ ಮೀಸಲು ಬೆಲೆಗಿಂತ ಅತೀ ಹೆಚ್ಚು ಬಿಡ್ ಮಾಡಿರುವ ಬಿಡ್‌ದಾರರ ಬಿಡ್‌ನ್ನು ಬ್ಯಾಂಕ್ ಸ್ವೀಕರಿಸಲಿದೆ. ಯಾವುದೇ ಸಂದರ್ಭದಲ್ಲೂ ಆಸ್ತಿಯನ್ನು ಮೀಸಲು ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡಲಾಗುವುದಿಲ್ಲ. ಆದರೂ ಬಿಡ್‌ದಾರರು ಹರಾಜಿನ ಸಮಯದಲ್ಲಿ ಹಾಜರಿದ್ದು ತಮ್ಮ ಬಿಡ್ ಮೌಲ್ಯದ ಕನಿಷ್ಠ ಮೊತ್ತವನ್ನು ರೂ.1,00,000/– (ಒಂದು ಲಕ್ಷ ಮಾತ್ರ) ವರೆಗೆ ಹೆಚ್ಚಿಸಬಹುದು ಹಾಗೂ ಇದರಲ್ಲಿ ಅತೀ ಹೆಚ್ಚು ಮೊತ್ತವನ್ನು ಬ್ಯಾಂಕ್ ಸ್ವೀಕರಿಸುವ ಅಧಿಕಾರವನ್ನು ಹೊಂದಿದೆ. ಪ್ರತೀ ಬಿಡ್‌ನ ನಂತರ ಮತ್ತೊಂದು ಬಿಡ್ ನ ಮಧ್ಯೆ 5 ನಿಮಿಷಗಳ ಅಂತರವಿರುವುದು. ಹರಾಜು 120 ನಿಮಿಷಗಳ ಕಾಲ ಅಂದರೆ ಮಧ್ಯಾಹ್ನ 12.00 ರಿಂದ ಮಧ್ಯಾಹ್ನ 2.00 ಗಂಟೆಯವರೆಗೆ 5 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ ನಡೆಯಲಿದೆ. ಒಂದು ವೇಳೆ ಇ–ಹರಾಜು ಮುಕ್ತಾಯದ 5 ನಿಮಿಷಗಳ ಮೊದಲು ಬಿಡ್ ಸ್ವೀಕೃತವಾದರೆ ಹರಾಜಿನ ಮುಕ್ತಾಯವು ಸ್ವಯಂಚಾಲಿತವಾಗಿ 5 ನಿಮಿಷಗಳ ಕಾಲ ವಿಸ್ತರಣೆಯಾಗಲಿದೆ.
7. ತದನಂತರ ಬ್ಯಾಂಕ್ ಮಾರಾಟ ದೃಢೀಕರಿಸಿದ ಮೇಲೆ ಇಎಂಡಿಗೆ ಹೊಂದಿಕೆಯಾಗುವಂತೆ ಖರೀದಿದಾರರು 25% (ಶೇಕಡಾ ಇಪ್ಪತ್ತೈದು) ಮಾರಾಟ ಬೆಲೆಯನ್ನು ಕೂಡಲೇ ಕೆಳಸಹಿದಾರರಿಗೆ ಪಾವತಿಸಬೇಕು. ಬಾಕಿ ಉಳಿದ ಮೊತ್ತವನ್ನು ಖರೀದಿದಾರರು ಕೆಳಸಹಿದಾರರಿಗೆ ಮಾರಾಟ ದೃಢೀಕರಣಗೊಂಡ 15 ದಿನಗಳ ಒಳಗಾಗಿ ಪಾವತಿಸಬೇಕು ಅಥವಾ ಒಂದು ವೇಳೆ ಸಮಯಾವಕಾಶ ವಿಸ್ತರಿಸಬೇಕಾದಲ್ಲಿ ಅದನ್ನು ಲಿಖಿತ ರೂಪದಲ್ಲಿ ಇಬ್ಬರ ಮಧ್ಯೆ ಒಪ್ಪಂದ ಮಾಡಿಕೊಳ್ಳಬೇಕು. ಹೇಳಿದ ಸಮಯಾವಕಾಶದಲ್ಲಿ ಹಣ ಪಾವತಿಸಲು ವಿಫಲವಾದಲ್ಲಿ, ಬ್ಯಾಂಕ್ ಇಎಂಡಿ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಸ್ವತ್ತನ್ನು ಮರುಹರಾಜು ನಡೆಸುವ ಅಧಿಕಾರವನ್ನು ಹೊಂದಿದೆ. ಅಪೇಕ್ಷಿತ ಖರೀದಿದಾರರಿಗೆ ಆಸ್ತಿಯ ಮೇಲಿನ ಅಥವಾ ಮಾರಾಟ ನಡೆಸುವ ಆಸ್ತಿಯ ಮೊತ್ತದ ಮೇಲಿರುವ ಎಲ್ಲಾ ಕ್ಲೈಮುಗಳನ್ನು ಮುಟ್ಟುಗೋಲು ಹಾಕಲಾಗುವುದು.
8. ಖರೀದಿದಾರರು ಎಲ್ಲಾ ಪಾವತಿಗಳನ್ನು ಡಿಮ್ಯಾಂಡ್ ಡ್ರಾಫ್ಟ್ / ಪೇಆರ್ಡರ್ ನ್ನು "ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್" ಪರವಾಗಿ ಪಡೆದು ಠೇವಣಿಯಿಡಬೇಕು.
9. ಮಾರಾಟ ಬೆಲೆಯು ಸಂಪೂರ್ಣಗೊಂಡ ನಂತರ ಬ್ಯಾಂಕ್ ಖರೀದಿದಾರರ ಪರವಾಗಿ ಮಾರಾಟ ಪ್ರಮಾಣಪತ್ರವನ್ನು ನೀಡಿ ಆಸ್ತಿಯ ಸ್ವಾಧೀನತೆಯನ್ನು ಖರೀದಿದಾರರಿಗೆ ನೀಡುತ್ತದೆ.
10. ಹೇಳಲಾದ ಆಸ್ತಿಯ ಶೆಡ್ಯೂಲ್ ಈ ಕೆಳಗೆ ನೀಡಲಾಗಿದ್ದು, ಕೆಳಸಹಿದಾರರಾದ ಅಧಿಕೃತ ಅಧಿಕಾರಿಗಳು ಮರಾಟ ಪ್ರಮಾಣಪತ್ರ ನೀಡಿದ ನಂತರ ಬೆಂಕಿ, ಕಳ್ಳತನ ಇತ್ಯಾದಿ ಯಾವುದೇ ರೀತಿಯಲ್ಲಿ ಹಾನಿ ಸಂಭವಿಸಿದಲ್ಲಿ ಅದಕ್ಕೆ ಖರೀದಿದಾರರೇ ಹೊಣೆಯಾಗಿರುತ್ತಾರೆ. ಖರೀದಿದಾರ ಯಾವುದೇ ಆಧಾರದ ಮೇಲೆ ಮಾರಾಟವನ್ನು ರದ್ದುಗೊಳಿಸಲು ಅರ್ಹನಾಗಿರುವುದಿಲ್ಲ.
11. ಯಶಸ್ವಿಯಾಗದ ಬಿಡ್ಡುದಾರರ ಇಎಂಡಿ ಹಣವನ್ನು ಡಿಮ್ಯಾಂಡ್ ಡ್ರಾಫ್ಟ್/ಪೇ ಆರ್ಡರ್ ಮೂಲಕ ಅವರಿಗೆ ಹಿಂತಿರುಗಿಸಲಾಗುವುದು..
12. ಎಲ್ಲಾ ಉದ್ದೇಶಗಳಿಂದ ಆಸ್ತಿಯನ್ನು "ಎಲ್ಲಿ ಹೇಗಿದೆಯೋ ಹಾಗೆ" "ಯಾವುದು ಇದೆಯೋ ಹಾಗೆ", ಮತ್ತು " ಏನಿದೆಯೋ ಹಾಗೆ" ಆಧಾರದ ಮೇಲೆ ಮಾರಾಟ ಮಾಡಲಾಗುವುದು. ಬ್ಯಾಂಕಿಗೆ ತಿಳಿದಿರುವ ಮಟ್ಟಿಗೆ ಈ ಆಸ್ತಿಗೆ ಯಾವುದೇ ಪರಭಾರೆ ಇರುವುದಿಲ್ಲ.
13. ಮೇಲಿನ ಆಸ್ತಿಯ ಎಲ್ಲಾ ವೆಚ್ಚಗಳಾದ ನೊಂದಣಿ ಶುಲ್ಕ, ಮುದ್ರಾಂಕ ಶುಲ್ಕ, ವರ್ಗಾವಣೆ ದರ ಹಾಗೂ ಇನ್ನಿತರ ಯಾವುದೇ ಶಾಸನಬದ್ಧ ಶುಲ್ಕಗಳಾದ ಆಸ್ತಿ ತೆರಿಗೆ, ವಿದ್ಯುತ್ ದರ ಮತ್ತು ನೀರಿನ ಶುಲ್ಕಗಳನ್ನು ಖರೀದಿದಾರರೇ ಪಾವತಿಸಬೇಕು.
14. ಅಧಿಕೃತ ಅಧಿಕಾರಿಗಳು ಯಾವುದೇ ಕಾರಣ ನೀಡದೆ ಯಾವುದೇ ಅಥವಾ ಎಲ್ಲಾ ಆಫರ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.
15. ಟೆಂಡರ್ ದಾಖಲೆಯಲ್ಲಿ ನಮೂದಿಸಿದಂತಹ ಆಸ್ತಿಯ ವಿವರಗಳು ಅಧಿಕೃತ ಅಧಿಕಾರಿಯವರಿಗೆ ತಿಳಿದ ಅತ್ಯುತ್ತಮ ಮಾಹಿತಿಯಾಗಿರುತ್ತದೆ ಮತ್ತು ಈ ಮಾರಾಟ ಘೋಷಣೆಯಲ್ಲಿ ಯಾವುದೇ ತಪ್ಪು, ಬಿಟ್ಟು ಹೋಗಿರುವಿಕೆ, ತಪ್ಪು ಹೇಳಿಕೆಗಳಿಗೆ ಅವರು ಉತ್ತರಿಸಬೇಕಾಗಿರುವುದಿಲ್ಲ. ಸ್ಥಿರಾಸ್ತಿ ಬಗ್ಗೆ ಇತರೆ ಯಾವುದೇ ಪರಭಾರೆ ಇರುವುದಿಲ್ಲ.
16. ಬಿಡ್ಡುದಾರರು ಆಸ್ತಿಯನ್ನು ಈ ಮೇಲೆ ತಿಳಿಸಿದ ದಿನಾಂಕ ಮತ್ತು ಸಮಯದಂದು ಪರಿವೀಕ್ಷಣೆ ನಡೆಸಬಹುದು.

ಸರ್ಫೇಸಿ ಕಾಯಿದೆ, 2002 ನಿಯಮ 9 (1)ರ ಅಡಿ 15 ದಿನಗಳ ಶಾಸನಬದ್ಧ ಸೂಚನೆ

ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಮೇಲೆ ನಮೂದಿಸಲಾದ ಬಾಕಿ ಮೊತ್ತ ಜೊತೆಗೆ ಆಯಾ ದಿನಾಂಕದವರೆಗಿನ ಬಡ್ಡಿ ಮತ್ತು ಇತರೆ ವೆಚ್ಚಗಳನ್ನು ಇ–ಹರಾಜಿಗೆ ಮೊದಲು ಪಾವತಿಸಲು ವಿಫಲರಾದರೆ, ಷೆಡ್ಯೂಲ್ ಆಸ್ತಿಯ ಹರಾಜು ನಡೆಸಿ/ಮಾರಾಟ ಮಾಡಿ ಬಾಕಿ ಯಾವುದಾದರೂ ಇದ್ದಲ್ಲಿ ಅದನ್ನು ಸಹ ಬಡ್ಡಿ ಮತ್ತು ವೆಚ್ಚಗಳೊಂದಿಗೆ ವಸೂಲು ಮಾಡಿಕೊಳ್ಳಲಾಗುವುದು.

ದಿನಾಂಕ: 12.02.2026
ಸ್ಥಳ: ಬೆಂಗಳೂರು

ಸಹಿ/–
ಅಧಿಕೃತ ಅಧಿಕಾರಿ
ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್

ಕೆನರಾ ಬ್ಯಾಂಕ್ Canara Bank
SyndicateBank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ–1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು–560001
ದೂ: 080–25310066, ಇ–ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ–ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು** ರವರು ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 03.03.2026 (ಬೆಳಿಗ್ಗೆ 10.30 ರಿಂದ 11.00 ರವರೆಗೆ)** ರಂದು ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ","ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 76,42,401.89 (ರೂಪಾಯಿ ಎಪ್ಪತ್ತಾರು ಲಕ್ಷದ ನಲವತ್ತೆರಡು ಸಾವಿರದ ನಾಲ್ಕುನೂರ ಒಂದು ಮತ್ತು ಎಂಭತ್ತೊಂಭತ್ತು ಪೈಸೆ ಮಾತ್ರ) ಜೊತೆಗೆ ದಿನಾಂಕ: 09.02.2026** ರಂದು ಇದ್ದಂತೆ ಮತ್ತು ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು** ರವರಿಂದ ಸಾಲಗಾರರಾದ:(1) **ಶ್ರೀ. ಎನ್. ಆರ್. ಪ್ರಭಾಕರ್** ಬಿನ್ ರಂಗಸ್ವಾಮಿ ಎನ್ ಬಿ, ನಂ.4, ಆಂಜನೇಯ ದೇವಸ್ಥಾನ ರಸ್ತೆ, ವಡೇರಮಂಚನಹಳ್ಳಿ, ಕಲ್ಲು ಬಾಳು ಪೋಸ್ಟ್, ಆನೇಕಲ್, ಬೆಂಗಳೂರು–562106 **ಮತ್ತೊಂದು ವಿಳಾಸ : ಶ್ರೀ ಎನ್. ಆರ್. ಪ್ರಭಾಕರ್** ಬಿನ್ ರಂಗಸ್ವಾಮಿ ಎನ್ ಬಿ, ನಂ.00, ನಾಲ್ಕುದ್ರೆ, ಚನ್ನಗಿರಿ, ದಾವಣಗೆರೆ, ಕರ್ನಾಟಕ 577544, (2) **ಶ್ರೀಮತಿ.ಆಶಾ** ಕೋಂ ಎನ್.ಆರ್ ಪ್ರಭಾಕರ್, ನಂ.4, ಆಂಜನೇಯ ದೇವಸ್ಥಾನ ರಸ್ತೆ, ವಡೇರಮಂಚನಹಳ್ಳಿ, ಕಲ್ಲು ಬಾಳು ಪೋಸ್ಟ್, ಆನೇಕಲ್, ಬೆಂಗಳೂರು–562106 **ಮತ್ತೊಂದು ವಿಳಾಸ : ಶ್ರೀಮತಿ ಆಶಾ** ಕೋಂ ಎನ್.ಆರ್ ಪ್ರಭಾಕರ್, ನಂ.00, ನಾಲ್ಕುದ್ರೆ, ಚನ್ನಗಿರಿ, ದಾವಣಗೆರೆ, ಕರ್ನಾಟಕ–577544. ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 02.03.2026 ರ ಸಂಜೆ 5.00 ಗಂಟೆಯೊಳಗೆ** ಠೇವಣಿ ಮಾಡಬೇಕು. (₹. ಲಕ್ಷಗಳಲ್ಲಿ)

ಲಾಟ್ ನಂ	ಸ್ಥಿರಾಸ್ತಿಗಳ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ
1	**ಷೆಡ್ಯೂಲ್ 'ಎ' ಆಸ್ತಿ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಸ್ವತ್ತಿನ ಪೂರ್ವ ಭಾಗದ ನಿವೇಶನ ನಂ. 1, ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಯಲೇನಹಳ್ಳಿ ಗ್ರಾಮದ ಭೂಮಿಯ ಸರ್ವೆ ನಂ. 16/2 ರಲ್ಲಿ ರೂಪುಗೊಂಡಿದ್ದು, (ಬೆಂಗಳೂರು ಜಿಲ್ಲೆ ಆರ್ಡರ್ ನಂ. B Dis ALN.SR (S) 145/1999-2000 ರ ಪ್ರಕಾರ ಆಸ್ತಿಯನ್ನು ಕೃಷಿಯೇತರ ವಾಸಯೋಗ್ಯ ಉದ್ದೇಶಕ್ಕಾಗಿ ಕ್ರಮಬದ್ಧವಾಗಿ ಪರಿವರ್ತಿಸಲಾಗಿದೆ) ಆಸ್ತಿಯು ಪ್ರಸ್ತುತ ಬೆಂಗಳೂರು ಯಲೇನಹಳ್ಳಿ, ಬೇಗೂರು ಬಿಬಿಎಂಪಿ ವ್ಯಾಪ್ತಿಯಲ್ಲಿದ್ದು, ವಾರ್ಡ್ ನಂ. 192, ಮತ್ತು ಬಿಬಿಎಂಪಿ ಖಾತಾ ನಂ. 2259/226/1, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : ಉತ್ತರದ ಕಡೆ 75 ಅಡಿ, ದಕ್ಷಿಣದ ಕಡೆ 55 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : ಪೂರ್ವದ ಕಡೆ 116 ಅಡಿ, ಪಶ್ಚಿಮದ ಕಡೆ 146 ಅಡಿ, ಒಟ್ಟು ವಿಸ್ತೀರ್ಣ 8515 ಚದರ ಅಡಿ ಮತ್ತು ಚಕ್ಕುಬಂದಿ : ಪೂರ್ವಕ್ಕೆ : ಖಾಸಗಿ ಆಸ್ತಿ, ಪಶ್ಚಿಮಕ್ಕೆ : ಪಶ್ಚಿಮ ಭಾಗದ ನಿವೇಶನ ನಂ.1, ಉತ್ತರಕ್ಕೆ : ಖಾಸಗಿ ಆಸ್ತಿ, ದಕ್ಷಿಣಕ್ಕೆ : ರಸ್ತೆ. ಷೆಡ್ಯೂಲ್ 'ಬಿ' ಆಸ್ತಿ : ಷೆಡ್ಯೂಲ್ 'ಎ' ಆಸ್ತಿಯಲ್ಲಿ ವಿವರಿಸಿರುವಂತೆ 310 ಚದರ ಅಡಿ ಅವಿಭಾಜಿತ ಭಾಗ ಹಕ್ಕು ಶೀರ್ಷಿಕೆ ಹಿತಾಸಕ್ತಿ, ಮಾಲೀಕತ್ವವನ್ನೊಳಗೊಂಡಿರುವ ಆಸ್ತಿಯಾಗಿರುತ್ತದೆ. **ಷೆಡ್ಯೂಲ್ 'ಸಿ' ಆಸ್ತಿ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಅಪಾರ್ಟ್‌ಮೆಂಟ್‌ನ ನಂ. 101, ನೆಲಮಹಡಿಯನ್ನೊಳಗೊಂಡಂತೆ "ಕ್ರಾಂತಿ ಎನ್‌ಕ್ಲೇವ್" ಎಂದು ಕರೆಯಲ್ಪಡುವ ವಾಸಯೋಗ್ಯ ಕಾಂಪ್ಲೆಕ್ಸ್‌ನ ಸೂಪರ್ ಬಿಲ್ಟ್ ಅಪ್ ಪ್ರದೇಶ 1450 ಚದರ ಅಡಿ ಪ್ರದೇಶವು 2 ಬೆಡ್ ರೂಂಗಳು, ಒಂದು ಹಾಲ್, ಒಂದು ಅಡುಗೆಮನೆ, ಮೂರು ಬಾಲ್ಕನಿಗಳು, ಎರಡು ಬಾತ್‌ರೂಂಗಳನ್ನೊಳಗೊಂಡಿದ್ದು, ಜೊತೆಗೆ 290 ಚದರ ಅಡಿ ಅವಿಭಾಜಿತ ಭಾಗ, ಹಕ್ಕು, ಶೀರ್ಷಿಕೆ, ಹಿತಾಸಕ್ತಿ, ಮಾಲೀಕತ್ವವನ್ನು ಹೊಂದಿದ್ದು, ಮತ್ತು ಷೆಡ್ಯೂಲ್ ಆಸ್ತಿಯಲ್ಲಿ ವಿವರಿಸಿರುವಂತೆ ಭೂಮಿಯಲ್ಲಿ ಸಹ–ಮಾಲೀಕತ್ವದ ಹಕ್ಕುಗಳು ಮತ್ತು ಹಾದಿಗಳು, ಲಾಬಿಗಳು, ಲಿಫ್ಟ್‌ಗಳು, ಮೆಟ್ಟಿಲುಗಳು ಮತ್ತು ಸಾಮಾನ್ಯ ಬಳಕೆಯ ಇತರ ಪ್ರದೇಶಗಳಲ್ಲಿ ಅನುಪಾತದ ಪಾಲನ್ನೊಳಗೊಂಡಿರುವ ಆಸ್ತಿಯಾಗಿರುತ್ತದೆ.	ರೂ.51.65	ರೂ.5.17	ರೂ.3.00

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ–ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ **ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ–I ಶಾಖೆ, ಬೆಂಗಳೂರು (ಮೊಬೈಲ್ ಸಂಖ್ಯೆ: 080–25310066, 7022044933 ಮತ್ತು 9039609346)** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 10.02.2026
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

ಸಿ.ಜೆ.ರಾಯ್ ಆತ್ಮಹತ್ಯೆ ಪ್ರಕರಣಕ್ಕೆ ಸಾಕ್ಷ್ಯ ಕೊರತೆ

ಬೆಂಗಳೂರು: ಸಿ.ಜೆ.ರಾಯ್ ಆತ್ಮಹತ್ಯೆ ಪ್ರಕರಣ ಸಂಬಂಧ ಉದ್ಯಮಿ ಸಾವಿಗೆ ಐಟಿ ಅಧಿಕಾರಿಗಳ ಕಿರುಕುಳವೇ ಕಾರಣ ಎಂದು ಆರೋಪಿಸಲಾಗಿತ್ತಾದರೂ ಈ ಬಗ್ಗೆ ಪ್ರಕರಣ ದಾಖಲಿಸುವಷ್ಟು ಸಾಕ್ಷ್ಯಗಳು ತನಿಖೆ ವೇಳೆ ಪೊಲೀಸರಿಗೆ ಸಿಕ್ಕಿಲ್ಲ. ಪ್ರಕರಣ ಸಂಬಂಧ ತನಿಖೆಗೆ ಡಿಐಜಿ ಮತ್ತು ಎಸ್‌ಪಿ ಹಂತದ ಅಧಿಕಾರಿ ಗಳನ್ನೊಳಗೊಂಡ ಎಸ್‌ಐಟಿ ತಂಡ ರಚನೆ ಮಾಡಿ ಬೆಂಗಳೂರು ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಆದೇಶಿಸಿದ್ದರು. ಎಸ್‌ಐಟಿ ಇಷ್ಟು ದಿನಗಳ ಕಾಲ ನಡೆಸಿರುವ ತನಿಖೆ ವೇಳೆ ಎಫ್‌ಐಆರ್ ದಾಖಲಿಸು ಅಗತ್ಯವಿರುವ ಕನಿಷ್ಠ ಸಾಕ್ಷ್ಯವೂ ದೊರೆತಿಲ್ಲ.

ಅಸಲಿಗೆ ತನಿಖೆ ವೇಳೆ ಸಿ.ಜೆ. ರಾಯ್ ಆತ್ಮಹತ್ಯೆಗೆ ಇಂತಹ ವ್ಯಕ್ತಿ ಅಥವಾ ಸಂಸ್ಥೆ ಪ್ರಚೋದನೆ ನೀಡಿದೆ ಎಂದು ಸಾಭೀತು ಮಾಡಬಹುದಾದ ಯಾವುದೇ ಮಾಹಿತಿ ಸಿಕ್ಕಿಲ್ಲ. ರಾಯ್ ಡೈರಿಯಲ್ಲಿಯೂ ಈ ಬಗ್ಗೆ ಯಾವುದೇ ಉಲ್ಲೇಖ ಇಲ್ಲ. ಜತೆಗೆ ಉದ್ಯಮಿ ಆತ್ಮಹತ್ಯೆ ಮಾಡಿಕೊಂಡಿರುವ ದಿನದಂದು ಐ.ಟಿ ಅಧಿಕಾರಿಗಳು ಅವರ ವಿಚಾರಣೆ ನಡೆಸಿಯೇ ಇಲ್ಲ. ಹೀಗಾಗಿ ವಿಚಾರಣೆ ಹೆಸರಲ್ಲಿ ಮಾನಸಿಕ ಒತ್ತಡಕ್ಕೆ ಒಳಗಾಗಿ ರಾಹ್ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಹೇಳುವುದೂ ಕಷ್ಟ ಸಾಧ್ಯ. ಅಲ್ಲದೆ ಹಲವಾರು ಬಾರಿ ಅದಾಗಲೇ ರಾಯ್ ಐಟಿ ವಿಚಾರಣೆಯನ್ನೂ ಎದುರಿಸಿದ್ದು, ಹಿಂದೆ ಆ ಸಮಯದಲ್ಲಿ ಅವರು ಯಾವುದೇ ದುಡುಕಿನ ನಿರ್ಧಾರ ಮಾಡಿರಲಿಲ್ಲ. ಹೀಗಾಗಿ ಆತ್ಮಹತ್ಯೆಗೆ ಪ್ರಚೋದನೆಯಾಗಿಲ್ಲ ಎಂಬ ಲೆಕ್ಕಾಚಾರದಲ್ಲಿ ಎಸ್‌ಐಟಿ ಇದೆ.

ಉದ್ಯಮಿ ಜೀವ ಪಡೆದಿದ್ದು ವ್ಯವಹಾರ? ಆದರೆ ಉದ್ಯಮಿಯ ಆತ್ಮಹತ್ಯೆಗೆ ಅಸಲೀ ಕಾರಣ ಏನೆಂದು ಬಯಲು ಮಾಡಬೇಕಾದ ಅನಿವಾರ್ಯತೆ ತನಿಖಾ ತಂಡದ ಮುಂದಿದೆ. ಈ ಹಿನ್ನೆಲೆ ಎಲ್ಲಾ ಆಯಾಮಗಳಲ್ಲಿಯೂ ತನಿಖೆ ಮುಂದುವರಿದಿದೆ. ವ್ಯಾವಹಾರಿಕವಾಗಿ ರಾಯ್ ಕುಗ್ಗಿದ್ದ ರಾಯ್, ಅದೇ ಕಾರಣಕ್ಕೆ ಪ್ರಾಣ ಕಳೆದುಕೊಂಡಿದ್ದಾರೆ ಎಂಬ ಪ್ರಾಥಮಿಕ ಮಾಹಿತಿ ತನಿಖಾ ತಂಡಕ್ಕೆ ಸಿಕ್ಕಿದೆ ಎನ್ನಲಾಗಿದೆ. ಹೀಗಾಗಿ ರಾಯ್ ವ್ಯವಹಾರ, ಲಾಭ ಹಾಗೂ ನಷ್ಟದ ವಿಚಾರವಾಗಿ ಅಧಿಕಾರಿಗಳು ಪರಿಶೀಲನೆಗೆ ಮುಂದಾಗಿದ್ದಾರೆ. ಆದ್ರೆ ಇದುವರೆಗೆ ಜಪ್ತಿ ಮಾಡಿರುವ ದಾಖಲೆಗಳ ಬಗ್ಗೆ ಐಟಿ ಅಧಿಕಾರಿಗಳು ಪೊಲೀಸರಿಗೆ ಮಾಹಿತಿ ನೀಡುತ್ತಿಲ್ಲವಂತೆ. ಹೀಗಾಗಿ ಉದ್ಯಮಿ ಸಿ.ಜೆ. ರಾಯ್ ಆತ್ಮಹತ್ಯೆ ಪ್ರಕರಣವನ್ನು ಯುಡಿಆರ್ ಆಗಿಯೇ ಪರಿಗಣಿಸಿ ತನಿಖೆ ನಡೆಸಲಾಗುತ್ತಿದೆ.

ಬೈರತಿ ಬಸವರಾಜ್ ವಿರುದ್ಧ ಲುಕ್‌ಔಟ್ ನೋಟಿಸ್

ಬೆಂಗಳೂರು: ಬಿಕ್ಲು ಶಿವ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಶಾಸಕ ಬೈರತಿ ಬಸವರಾಜ್ ಅವರನ್ನು ಬಂಧಿಸಲು ಸಿಐಡಿ ಪೊಲೀಸರು ಸಿದ್ಧತೆ ನಡೆಸಿದ್ದಾರೆ. ಜಾಮೀನು ಅರ್ಜಿ ಎರಡು ಬಾರಿ ರದ್ದಾದ ಬೆನ್ನಲ್ಲೇ ಬೈರತಿ ಬಸವರಾಜ್ ವಿದೇಶಕ್ಕೆ ತೆರಳುವುದನ್ನು ತಡೆಯುವ ನಿಟ್ಟಿನಲ್ಲಿ ಲುಕ್ ಔಟ್ ನೋಟಿಸ್ ಕೂಡ ಜಾರಿ ಮಾಡಲಾಗಿದೆ.

ರೌಡಿಶೀಟರ್ ಬಿಕ್ಲು ಶಿವ ಕೊಲೆ ಪ್ರಕರಣದಲ್ಲಿ ಕೆ.ಆರ್.ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ್‌ಗೆ ಬಂಧನದ ಭೀತಿ ಎದುರಾಗಿದೆ. ಹೈಕೋರ್ಟ್ ಗೆ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಫೆ.10ರಂದು ಅರ್ಜಿ ವಜಾಗೊಂಡಿದ್ದು, ಇದರಿಂದಾಗಿ ಬಿಕ್ಲುಶಿವ ಕೊಲೆ ಪ್ರಕರಣ ತನಿಖೆ ನಡೆಸುತ್ತಿರುವ ಸಿಐಡಿ ಪೊಲೀಸರಿಗೆ ಬೈರತಿ ಬಸವರಾಜ್ ಬಂಧಿಸುವ ಹಾದಿ ಸುಗಮವಾಗಿದೆ.

ಸಿಐಡಿ ಪೊಲೀಸರಿಂದ ಬಂಧನ ಭೀತಿಯಲ್ಲಿರುವ ಶಾಸಕ ಬೈರತಿ ಬಸವರಾಜು ಮೊಬೈಲ್ ಸ್ವಿಚ್ಡ್ ಆಫ್ ಮಾಡಿಕೊಂಡು ನಾಪತ್ತೆಯಾಗಿದ್ದಾರೆ. ಈ ಹಿಂದೆ ಕೆಳ ನ್ಯಾಯಾಲಯದಲ್ಲಿ ಬೈರತಿ ಬಸವರಾಜು ನಿರೀಕ್ಷಣಾ ಜಾಮೀನು ಅರ್ಜಿ ವಜಾ ಆಗಿತ್ತು. ಈ ವೇಳೆಯೂ ಶಾಸಕರು ನಾಪತ್ತೆಯಾಗಿದ್ದರು. ಈಗ ಹೈಕೋರ್ಟ್‌ನಿಂದಲೂ ನಿರೀಕ್ಷಣಾ ಜಾಮೀನು ಅರ್ಜಿ ವಜಾಗೊಂಡಿದ್ದು, ಮೊಬೈಲ್ ಸ್ವಿಚ್ಡ್ ಆಫ್ ಮಾಡಿಕೊಂಡು ಮತ್ತೊಮ್ಮೆ ನಾಪತ್ತೆಯಾಗಿದ್ದಾರೆ.

ಕೊಲೆ ಪ್ರಕರಣದಲ್ಲಿ ಪೊಲೀಸರು ಭಾಗಿ: ಬಿಕ್ಲುಶಿವ ಕೊಲೆ ಪ್ರಕರಣದಲ್ಲಿ ಪೊಲೀಸ್ ಅಧಿಕಾರಿಗಳು ಕೂಡ ಭಾಗಿಯಾಗಿದ್ದಾರೆ ಎಂದು ರಾಜ್ಯ ಸರಕಾರ, ಸಿಐಡಿ ಪರ ವಕೀಲರು ಹೈಕೋರ್ಟ್‌ನಲ್ಲಿ ವಾದಿಸಿದ್ದಾರೆ. ಹೀಗಾಗಿ ಶಾಸಕ ಬೈರತಿ ಬಸವರಾಜುರನ್ನು ಬಂಧಿಸಿ ವಿಚಾರಣೆಗೊಳಪಡಿಸಬೇಕಾಗಿದ್ದು, ನಿರೀಕ್ಷಣಾ ಜಾಮೀನು ನೀಡಬಾರದೆಂದು ವಾದಿಸಿದ್ದರು. ಹತ್ಯೆಯಾದ ಬಿಕ್ಲುಶಿವ ತಾಯಿ ಕೂಡ ಕೇವಲ 24 ಗಂಟೆಯಲ್ಲಿ ತಮ್ಮ ಹೇಳಿಕೆಯನ್ನೇ ಮಾಧ್ಯಮಗಳ ಮುಂದೆ ಬದಲಾಯಿಸಿದ್ದರು ಎಂದು ವಕೀಲರು ತಿಳಿಸಿದ್ದಾರೆ.

ಏನಿದು ಪ್ರಕರಣ ?: 2025 ಜುಲೈ 15ರಂದು ಹಲಸೂರಿನಲ್ಲಿ ನಡೆದ ಬಿಕ್ಲು ಶಿವನ ಹತ್ಯೆ ಪ್ರಕರಣದ ಪ್ರಮುಖ ಆರೋಪಿ ಜಗದೀಶ್ ಅಲಿಯಾಸ್ ಜಗ್ಗನೊಂದಿಗೆ ಶಾಸಕರು ನೇರ ಸಂಪರ್ಕ ಹೊಂದಿರುವುದು ತನಿಖೆಯಿಂದ ತಿಳಿದುಬಂದಿತ್ತು. ಕೊಲೆಗೂ ಮುನ್ನ ಹಲವು ಬಾರಿ ಇಬ್ಬರು ಪರಸ್ಪರ ಭೇಟಿಯಾಗಿದ್ದರು. ಕೊಲೆ ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಸಾಕ್ಷ್ಯಾಧಾರಗಳು ದೊರೆತಿರುವುದರಿಂದ ಶಾಸಕರ ಬಂಧನ ಮತ್ತು ವಿಚಾರಣೆ ಅಗತ್ಯ ಎಂದು ಸಿಐಡಿ ಅಧಿಕಾರಿಗಳು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟಿದ್ದರಿಂದ ನಿರೀಕ್ಷಣಾ ಜಾಮೀನು ನಿರಾಕರಿಸಲಾಗಿತ್ತು.

ವೀಸಾ ಮುಗಿದ 8 ವಿದೇಶಿಗರು ವಶಕ್ಕೆ

ಬೆಂಗಳೂರು: ವೀಸಾ ಅವಧಿ ಮುಗಿದರೂ ಅಕ್ರಮವಾಗಿ ವಾಸವಾಗಿದ್ದ ಮಹಿಳೆ ಸೇರಿ 8 ಮಂದಿ ವಿದೇಶಿ ಪ್ರಜೆಗಳನ್ನು ಸಂಜಯನಗರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಕ್ಯಾಮರೂನ್‌ನ ಐವರು, ಸುಡಾನ್‌ನ ಮೂವರನ್ನು ವಶಕ್ಕೆ ಪಡೆಯಲಾಗಿದೆ.4 ವರ್ಷಗಳ ಹಿಂದೆ ವಿದ್ಯಾರ್ಥಿ ವೀಸಾದಡಿ ಬೆಂಗಳೂರಿಗೆ ಬಂದಿದ್ದ ವಿದೇಶಿ ಗರು ವೀಸಾ ಅವಧಿ ಮುಗಿದರೂ ನಗರ ದಲ್ಲಿ ಅಕ್ರಮವಾಗಿ ವಾಸವಾ ಗಿದ್ದರು. ಈ ಹಿಂದೆ ನಗರದ ಗಡಿಭಾಗದಲ್ಲಿ ವಾಸವಾವಿದ್ದು, ಭೂಪಸಂದ್ರಕ್ಕೆ ಬಂದು ನೆಲೆಸಿದ್ದರು.

amagi

AMAGI MEDIA LABS LIMITED

(formerly known as Amagi Media Labs Private Limited)

CIN: U73100KA2008PLC045144
Registered Office: Raj Alkaa Park, Sy. No. 29/3 & 32/2, 4th floor, Kalena Agrahara Village, Begur Hobli, Bengaluru - 560076

STATEMENT OF UNAUDITED FINANCIAL RESULTS (STANDALONE AND CONSOLIDATED) OF THE COMPANY FOR THE QUARTER AND NINE MONTHS ENDED DECEMBER 31, 2025

The Board of Directors of Amagi Media Labs Limited, at its meeting held on February 11, 2026, approved the Unaudited Financial Results (standalone & consolidated) of Amagi Media Labs Limited for the Quarter and Nine months ended December 31, 2025 ("**Financial Results**").

The Financial Results along with Limited Review Report, have been hosted on the Company's website at https://www.amagi.com/investors/quarterly-financials and can be accessed by scanning the Quick Response Code.

For and on behalf of the Board of Directors
Amagi Media Labs Limited
(formerly known as Amagi Media Labs Private Limited)
Sd/-
Baskar Subramanian
Managing Director & CEO

Date: February 11, 2026
Place: Bengaluru

***Note:** The above information is in accordance with Regulation 33 read with Regulation 47(1) of the SEBI (Listing Obligations and Disclosure Requirements) Regulations 2015.*

Orkla INDIA
MTR Eastern Rasoi magic MAGIC MEAL MIXES

ORKLA INDIA LIMITED

(Formerly known as Orkla India Private Limited and MTR Foods Private Limited)

EXTRACT OF UNAUDITED FINANCIAL RESULTS FOR THE QUARTER AND NINE MONTHS ENDED DECEMBER 31, 2025

(Rs. in millions except EPS)

Sr. No	Particulars	Standalone			Consolidated		
		Quarter ended 31.12.2025 (Unaudited)	Nine months ended 31.12.2025 (Unaudited)	Quarter ended 31.12.2024 (Unaudited)	Quarter ended 31.12.2025 (Unaudited)	Nine months ended 31.12.2025 (Unaudited)	Quarter ended 31.12.2024 (Unaudited)
1	Total Income from Operations	6,317.4	18,752.4	6,243.1	6,437.1	19,098.2	6,353.8
2	Net Profit / (Loss) for the period (before Tax, Exceptional and/ or Extraordinary items)	906.4	2,963.1	866.6	922.2	3,005.1	875.3
3	Net Profit / (Loss) for the period before tax (after Exceptional and/or Extraordinary items)	748.0	2,804.7	866.6	763.8	2,846.7	875.3
4	Net Profit / (Loss) for the period after tax (after Exceptional and/or Extraordinary items)	551.7	2,083.7	650.4	566.4	2,122.4	658.5
5	Total Comprehensive Income for the period [comprising Profit / (Loss) for the period (after tax) and Other Comprehensive Income (after tax)]	525.4	2,064.3	633.5	540.9	2,110.7	645.4
6	Equity Share Capital (Face Value Re. 1/- per share)	137.0	137.0	137.0	137.0	137.0	137.0
7	Reserves (excluding Revaluation Reserve) as shown in the audited Balance Sheet of the previous year*	-	-	-	-	-	-
8	Earnings Per Share (Face Value of Re. 1/- per share) (not annualised)						
	- Basic	4.0	15.2	4.7	4.1	15.5	4.8
	- Diluted	4.0	15.2	4.7	4.1	15.5	4.8

** Reserves (excluding Revaluation Reserve) as shown in the audited Balance Sheet of the previous financial year ended March 31, 2025 were Rs. 24,434 millions (standalone) and Rs. 24,458 millions (consolidated)*

Notes:

1. The financial results of the quarter and nine months ended December 31, 2025 were reviewed by the Audit Committee on February 11, 2026 and approved by the Board of Directors at the meeting held on February 11, 2026.
2. The above is an extract of the detailed format of financial results for the quarter and nine months ended December 31, 2025 filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015. The full format of the aforesaid financial results are available on the websites of BSE at www.bseindia.com, NSE at www.nseindia.com and the Company's website at https://www.orklaindia.com/wp-content/uploads/sites/3/2026/02/Q3-Financial-Results.pdf. The same can also be accessed by scanning the Quick Response Code (QRC) provided below.
3. The results have been prepared in accordance with the Indian Accounting Standards (Ind AS) specified under section 133 of the Companies Act, 2013 , as amended, read with Companies (Indian Accounting Standards) Rules, 2015 and other accounting principles generally accepted in India.
4. The statutory auditors have issued an unmodified report on the aforesaid financial results.

for and on behalf of the Board
Sanjay Sharma
Managing Director & Chief Executive Officer
DIN: 02581107

Place: Bengaluru
Date: February 11, 2026

Regd. Office : No.1, 2nd and 3rd Floor, 100 Feet Inner Ring Road, Ejipura, Ashwini Layout, Vivek Nagar, Bengaluru - 560047, Karnataka, India,
CIN : L15136KA1996PLC021007; Website : www.orklaindia.com; E-mail id: investors@orklaindia.com; Telephone No: +91 80 4081 2100/7

ಸಮಾಚಾರ ಸಣ್ಣದಲ್ಲ

ನಾಳೆ ನಗರದಲ್ಲಿ ವಿದ್ಯುತ್ ವ್ಯತ್ಯಯ

ಬೆಂಗಳೂರು: ಕೆಪಿಟಿಸಿಎಲ್ ವತಿಯಿಂದ ತುರ್ತು ನಿರ್ವಹಣಾ ಕಾಮಗಾರಿ ಹಿನ್ನೆಲೆ ಶುಕ್ರವಾರದಂದು ಬೆಳಗ್ಗೆ 11 ರಿಂದ 4 ವರೆಗೆ ನಗರದ ವಿವಿಧ ಭಾಗಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. 66/11 ಕೆವಿಎ ಮಾನ್ಯತಾ ಟೆಕ್ ಪಾರ್ಕ್ ಉಪಕೇಂದ್ರ ವ್ಯಾಪ್ತಿಯಲ್ಲಿ ಶುಕ್ರವಾರ ಬೆಳಗ್ಗೆ 11:00 ರಿಂದ 4:00 ಗಂಟೆವರೆಗೆ ಫಿಡೆಲಿಟಿ, ಫಿಲಿಪ್ಸ್, ಇಂಕ್ಯುಬೇಟರ್,ಮಾನ್ಯತಾ ರೆಸಿಡೆನ್ಸಿ, ಬಿ.ಟಿ.ಎಸ್. ಲೇಔಟ್, ಗೋದ್ರೆಜ್ ಅಪಾರ್ಟ್‌ಮೆಂಟ್ಸ್, ಹೆಬ್ಬಾಳ ಕೆಂಪಾಪುರ, ವಿನಾಯಕ ಲೇಔಟ್, ಚಿರಂಜೀವಿ ಲೇಔಟ್, ವೆಂಕಟೇಗೌಡ ಲೇಔಟ್, ಜೆವಿನ್ಸಿ, ರಾಚೇನಹಳ್ಳಿ,ಶ್ರೀರಾಮಪುರ, ಚಾಮುಂಡೇಶ್ವರಿ ಲೇಔಟ್, ರಾಯಲ್ ಎನ್‌ಕ್ಲೇವ್, ಮೇಸ್ತ್ರಿ ಪಾಳ್ಯ, ತನಿಸಂದ್ರ, ಎಸ್‌ಎನ್‌ಎನ್ ಕ್ಲರ್ಮಾಂಟ್ ಅಪಾರ್ಟ್‌ಮೆಂಟ್ಸ್, ಕಾರ್ಲೆ ಟೌನ್ ಸೆಂಟರ್‌ಸುತ್ತಮುತ್ತಲಿನ ಪ್ರದೇಶಗಳು. 66/11 ಕೆವಿಎ ಆರ್.ಬಿ.ಐ, ಮತ್ತು ಬಿ.ಎಂ.ಟಿ.ಸಿ ಉಪ ಕೇಂದ್ರ ವ್ಯಾಪ್ತಿಯ ಶುಕ್ರವಾರ ಬೆಳಗ್ಗೆ 10ರಿಂದ 4 ಗಂಟೆವರೆಗೆ ಆರ್. ಬಿ.ಐ ಲೇಔಟ್, ಕೊತ್ತನೂರು, ಜೆ.ಪಿ.ನಗರ, 5ನೇ ಹಂತ, ಶ್ರೇಯಸ್ ಕಾಲೋನಿ, ಗೌರವ್ ನಗರ, ನಟರಾಜ ಲೇಔಟ್, ನೃಪತುಂಗ ನಗರ, ಜಂಬುಸವಾರಿ ದಿಣ್ಣೆ, ಚುಂಚಗಟ್ಟ, ಬ್ರಿಗೇಡ್ ಮಿಲೇನಿಯಮ್, ಬ್ರಿಗೇಡ್ ಗರ್ಡೇನಿಯ ಅಪಾರ್ಟ್‌ಮೆಂಟ್,ರಿಚ್ ಮಂಡ್ ಸರ್ಕಲ್, ಜಾನ್ಸನ್ ಮಾರ್ಕೆಟ್, ನಾರೀಸ್ ರಸ್ತೆ, ಹೊಂಬೆಗೌಡ ನಗರ, ಸುಮುತ್ತಲ ಪ್ರದೇಶಗಳಲ್ಲಿ ವ್ಯತ್ಯಯವಾಗಲಿದೆ.

ವಿಚಾರಾಧಾರಿತ ಶಿಕ್ಷಣ ಪುಸ್ತಕ ಲೋಕಾರ್ಪಣೆ

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) 2020 ತತ್ವಗಳಿಗೆ ಅನುಗುಣವಾಗಿ 15 ವರ್ಷಗಳ ಸೃಜನಾತ್ಮಕ ಕಲಿಕಾ ಶಿಕ್ಷಣದ ಪಯಣ ದಾಖಲಿಸುವ 'ವಿಚಾರಾಧಾರಿತ ಶಿಕ್ಷಣ' ಪುಸ್ತಕವನ್ನು ಆಧ್ಯಾತ್ಮಿಕ ನಾಯಕ ದಲೈಲಾಮ ಅವರು ಲೋಕಾರ್ಪಣೆಗೊಳಿಸಿದರು. ವಿದ್ಯಾರ್ಥಿಗಳಲ್ಲಿ ಹೆಚ್ಚುತ್ತಿರುವ ಒತ್ತಡ, ಮಾನಸಿಕ ಆರೋಗ್ಯದ ಸಮಸ್ಯೆಗಳು ಮತ್ತು ಕೇವಲ ಪರೀಕ್ಷೆ ಕೇಂದ್ರಿತ ಶಿಕ್ಷಣ ಪದ್ಧತಿಯ ಬಗ್ಗೆ ವ್ಯಾಪಕ ಚರ್ಚೆ ನಡೆಯುತ್ತಿರುವ ಈ ಸಂದರ್ಭದಲ್ಲಿ ಏಕ್ಯಾ ಶಾಲೆಗಳು ಹೊರತಂದಿರುವ 15 ವರ್ಷಗಳ ಶೈಕ್ಷಣಿಕ ಪಯಣದ ಸ್ಮರಣಿಕೆಯಾದ 15 ಲರ್ನಿಂಗ್ಸ್ ಇನ್ 15 ಇಯರ್ಸ್ ಆಫ್ ಏಕ್ಯಾ: ಹೌ ವಿ ಬಿಲ್ಟ್ ಸ್ಕೂಲ್ಸ್' ಪುಸ್ತಕವನ್ನು ಪೂಜ್ಯ ದಲೈ ಲಾಮಾ ಅವರು ಲೋಕಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಡಾ. ಕೆ.ಸಿ. ರಾಮಮೂರ್ತಿ ಐಪಿಎಸ್(ನಿವೃತ್ತಿ), ಮಾಜಿ ರಾಜ್ಯಸಭಾ ಸದಸ್ಯರು, ಅಧ್ಯಕ್ಷರು ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳು ಮತ್ತು ಸಿಎಂಆರ್‌ವಿಶ್ವವಿದ್ಯಾಲಯ ಹಾಗೂ ಡಾ.ತ್ರಿಸ್ತಾ ರಾಮಮೂರ್ತಿ, ಸಂಸ್ಥಾಪಕರು ಏಕ್ಯಾ ಶಾಲೆಗಳು ಮತ್ತು ಸಿಎಂಆರ್ ವಿಶ್ವವಿದ್ಯಾಲಯ ಇವರು ಉಪಸ್ಥಿತರಿದ್ದು ಸ್ಮರಣಿಕೆ ಪುಸ್ತಕ ಲೋಕಾರ್ಪಣೆಗೆ ಸಾಕ್ಷಿಯಾದರು.

ನಾಯಿಗಳ ಹಾವಳಿ ನಿಯಂತ್ರಿಸಲು ಜಿಬಿಎ ಸಜ್ಜು | ಜರ್ಮನ್ ಶೆಫರ್ಡ್, ರಾಟ್‌ವೀಲರ್‌ಗೆ ನಿಷೇಧ

ನಾಯಿ ಸಾಕಲು ಪರವಾನಗಿ ಕಡ್ಡಾಯಗೊಳಿಸಲು ಚಿಂತನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಾಯಿ ಸಾಕಲು ಪರವಾನಗಿ ಕಡ್ಡಾಯ ಸೇರಿದಂತೆ ಜಿಬಿಎ ಹಲವು ಹೊಸ ನಿಯಮಗಳನ್ನು ಜಾರಿಗೆ ತರಲು ಮುಂದಾಗಿದ್ದು, ಈ ಮೂಲಕ ನಾಯಿಗಳ ಹಾವಳಿ ನಿಯಂತ್ರಿಸಲು ಮುಂದಾಗಿದೆ.

ಬೀದಿ ನಾಯಿಗಳ ಹಾವಳಿಯನ್ನು ನಿಯಂತ್ರಿಸಲು ಸುಪ್ರೀಂ ಕೋರ್ಟ್ ಕೆಲ ಮಾನದಂಡಗಳನ್ನು ಅನುಸರಿಸಲು ಸ್ಥಳೀಯ ಸಂಸ್ಥೆಗಳಿಗೆ ಸೂಚನೆ ನೀಡಿದ ಬೆನ್ನಲ್ಲೇ ಸಾಕು ನಾಯಿಗಳಿಂದಲೂ ಸಾರ್ವಜನಿಕರಿಗೆ ಹೆಚ್ಚಿನ ತೊಂದರೆ ಇದೆ ಎಂಬ ದೂರಿನ ಆಧಾರದಲ್ಲಿ ನಾಯಿ ಸಾಕಲು ಹೊಸ ನಿಯಮಗಳನ್ನು ಜಾರಿಗೆ ತರಲಾಗುತ್ತಿದೆ.

ಜಿಬಿಎ ಮುಖ್ಯ ಅಯುಕ್ತ ಮಹೇಶ್ವರ್ ರಾವ್ ಐದು ನಗರಪಾಲಿಕೆ ಅಯುಕ್ತರುಗಳಿಗೆ ಸೂಚನೆ ನೀಡಿ ನಾಯಿಗಳ ಸಾಕುವುದಕ್ಕೆ ಮಾನದಂಡಗಳನ್ನು ಅನುಸರಿಸಿ ಸಾಧು ಸ್ವಭಾವದ ಹಾಗೂ ಕ್ರೂರ ಸ್ವಭಾವದ ನಾಯಿಗಳ ಸಾಕುವುದಕ್ಕೆ ಹಾಗೆಯೇ ವಸತಿ ಸಮುಚ್ಚಯದಲ್ಲಿ ಹಾಗೂ ಮನೆಗಳಲ್ಲಿ ಸಾಕುವುದಕ್ಕೆ ಹೊಸ ನಿಯಮ ಜಾರಿಗೆ ತರುವಂತೆ ಸೂಚನೆ ನೀಡಿದ್ದಾರೆ. ಕಳೆದ ವರ್ಷ ಜಿಬಿಎಯ ಪಶುಪಾಲನೆ ಇಲಾಖೆ ಸಾಕು ನಾಯಿಗಳ ಸರ್ವೆ ನಡೆಸಿದಾಗ 1.15 ಲಕ್ಷ ಸಾಕು ನಾಯಿಗಳಿವೆ ಎಂಬ ಮಾಹಿತಿ ಸಂಗ್ರಹಿಸಲಾಗಿತ್ತು. ಇದೀಗ ಪ್ರಾಣಿ ಹಿಂಸೆ 1960 ರ ಕಾಯಿದೆ ಪ್ರಕಾರ ಕೆಲ ಷರತ್ತು ಗಳನ್ನು ವಿಧಿಸಿ ಸಾರ್ವಜನಿಕರು ಮನೆಯಲ್ಲಿ ನಾಯಿ ಸಾಕುವುದಕ್ಕೆ ನಿಯಮ ಜಾರಿಗೆ ತರಲು ಜಿಬಿಎ ಮುಂದಾಗಿದೆ.

ಹೊಸ ಕಾಯಿದೆಯಲ್ಲಿ ಸಾಕು ನಾಯಿಗಳ ಸಾಕುವುದಕ್ಕೆ ಜಿಬಿಎ ಪಶುಪಾಲನೆ ಇಲಾಖೆಯಿಂದ ಪರವಾನಗಿ ಪಡೆಯಬೇಕು. ಹಾಗೂ ವಾರ್ಷಿಕವಾಗಿ ಜಿಬಿಎಗೆ ಇಂತಿಷ್ಟು ಅಂತ ಹಣ ಪಾವತಿ ಮಾಡಿ ಪ್ರತಿ ವರ್ಷ ಪರವಾನಗಿ ನವೀಕರಣ ಮಾಡಿಸಿಕೊಳ್ಳಬೇಕಾಗಿದೆ. ಕ್ರೂರ ಸ್ವಭಾವದ ನಾಯಿಗಳ ಸಾಕುವಿಕೆಗೆ ನಿಷೇಧ ಮಾಡಬೇಕು ಎಂದು ಕಾಯಿದೆಯಲ್ಲಿ ನಮೂದಿಸಲು ತೀರ್ಮಾನಿ ಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕಳೆದು ಹೋದ ನಾಯಿಗೆ 1 ಸಾವಿರ ದಂಡ: ಸಾಕು ನಾಯಿ ತಪ್ಪಿಸಿಕೊಂಡು ನಗರಪಾಲಿಕೆ ಅಧಿಕಾರಿಗಳು ವಶಕ್ಕೆ ಪಡೆದರೆ ಅದಕ್ಕೆ ಇಂತಿಷ್ಟು ಅಂತ ದಂಡ ಪಾವತಿ ಮಾಡಿ ನಾಯಿ ಬಿಡಿಸಿಕೊಳ್ಳಬೇಕು. 72 ಗಂಟೆಯೊಳಗೆ ಬಿಡಿಸಿಕೊಂಡರೆ ಒಂದು ಸಾವಿರ ದಂಡ ಪಾವತಿ ಮಾಡಬೇಕು. 72 ಗಂಟೆಯ ನಂತರ ಬಿಡಿಸಿಕೊಳ್ಳದಿದ್ದರೆ ಪ್ರತಿ ದಿನ 200 ರು ದಂಡ ಪಾವತಿಸಬೇಕು. ಒಂದು ವೇಳೆ ಬಿಡಿಸಿಕೊಳ್ಳದೆ ಹೋದರೆ ನಾಯಿಯನ್ನು ಪ್ರಾಣಿ ದಯಾ ಸಂಘಕ್ಕೆ ನೀಡಲಾಗುತ್ತದೆ.

ಯಾವ ತಳಿಗಳು ಸಾಕಂಗಿಲ್ಲ?

ಅಪಾರ್ಟ್‌ಮೆಂಟ್‌ಗಳಲ್ಲಿ ಉಗ್ರ ಸ್ವರೂಪದ ನಾಯಿಗಳ ಸಾಕುವಿಕೆಗೆ ನಿಷೇಧ ಹೇರಲಾಗಿದ್ದು, ವಿದೇಶಿ ತಳಿಗಳಾದ ಜರ್ಮನ್ ಶೆಫರ್ಡ್, ರಾಟ್ ವೀಲರ್, ಡಾಬರ್‌ಮನ್, ಹೌಂಡ ನಾಯಿಗಳನ್ನು ಸಾಕುವುದನ್ನು ನಿಷೇಧಿಸಲಾಗಿದೆ. ಒಂದು ವೇಳೆ ನಿಷೇಧಿತ ನಾಯಿಗಳನ್ನು ಸಾಕಿದರೆ ಅವುಗಳನ್ನು ಸಾರ್ವಜನಿಕರ ಓಡಾಡುವ ಪ್ರದೇಶದಲ್ಲಿ ಓಡಾಡಿಸುವಂತಿಲ್ಲ ಎಂದು ಹೇಳಲಾಗುತ್ತಿದೆ.

3ಕ್ಕಿಂತ ಹೆಚ್ಚು ಸಾಕಲು ಅವಕಾಶವಿಲ್ಲ

ಮನೆಗಳಲ್ಲಿ ಮೂರು ನಾಯಿಗಳಿಗಿಂತ ಹೆಚ್ಚಿನ ನಾಯಿ ಸಾಕುವುದಕ್ಕೆ ಅವಕಾಶ ಇಲ್ಲ. ಮೂರು ನಾಯಿಗಳಿಗಿಂತ ಹೆಚ್ಚಾಗಿ ಸಾಕಿದರೆ ಅಂತಹ ನಾಯಿಗಳನ್ನು ಅಧಿಕಾರಿಗಳು ವಶಕ್ಕೆ ಪಡೆದು ಪ್ರಾಣಿ ದಯಾ ಕೇಂದ್ರಕ್ಕೆ ಕಳುಹಿಸುತ್ತಾರೆ. ನಗರ ಪಾಲಿಕೆ ಬೈಲಾ ಪ್ರಕಾರವೇ ನಾಯಿಗಳನ್ನು ಸಾಕಬೇಕು. ಒಂದು ವೇಳೆ ಬೈಲಾ ನಿಯಮ ಉಲ್ಲಂಘನೆ ಮಾಡಿದರೆ, ಕಾನೂನು ರೀತಿಯ ಕ್ರಮ ಜರುಗಿಸುವ ಎಚ್ಚರಿಕೆ ನೀಡಲಾಗಿದೆ. ಇನ್ನೂ ಸಾಕು ನಾಯಿಗಳನ್ನು ವಾಕಿಂಗ್ ಕರೆದು ಕೊಂಡು ಹೋದಾಗ ನಾಯಿಯ ಕತ್ತಿಗೆ ಹಗ್ಗ ಅಥವಾ ಚೈನ್ ಅಳವಡಿಕೆ ಮಾಡಿರಬೇಕು. ವಾಕಿಂಗ್ ವೇಳೆಯಲ್ಲಿ ನಾಯಿ ರಸ್ತೆಯಲ್ಲಿ ಗಲೀ ಜು ಮಾಡಿದರೆ ಅದನ್ನು ನೀವೇ ತೆಗೆಯಬೇಕು.

ಪರವಾನಗಿ ನವೀಕರಣಕ್ಕೆ ಶುಲ್ಕ ಕಟ್ಟಬೇಕು

ನಾಯಿಗಳನ್ನು ಸಾಕುವುದಕ್ಕೆ ಜಿಬಿಎಯಿಂದ ಪರವಾನಗಿ ಪಡೆಯಬೇಕು. ಪ್ರತಿ ವರ್ಷ ಪರವಾನಗಿ ನವೀಕರಣಕ್ಕೆ ಜಿಬಿಎಗೆ ಇಂತಿಷ್ಟು ಹಣ ಪಾವತಿ ಮಾಡಬೇಕು. ನಾಯಿಗಳ ವರ್ಗದ (ತಳಿ) ಅಧಾರದ ಮೇಲೆ ಪರವಾನಗೆ ಶುಲ್ಕ ನಿಗದಿ ಮಾಡಲಾಗುವುದು. ಜಿಬಿಎ ನಿಯೋಜಿತ ಪಶುವೈದ್ಯಾಧಿಕಾರಿಯಿಂದ ದೃಢೀಕರಣ ಪಡೆಯಬೇಕು. ಪ್ರತಿ ಸಾಕು ನಾಯಿ ಮಾಲೀಕರು ತಮ್ಮ ಸ್ವಂತ ಖರ್ಚಿನಲ್ಲಿ ಮೈಕ್ರೋ ಚಿಪ್ ಅಳವಡಿಸಬೇಕು. ಸಾಕು ನಾಯಿ ಮಾಲೀಕರು ನಾಯಿಗೆ ರೇಬಿಸ್ ಲಸಿಕೆ ಹಾಕಿಸಬೇಕು. ಲಸಿಕೆ ಹಾಕಿಸಿರುವ ಬಗ್ಗೆ ನೋಂದಾಯಿತ ಪಶು ವೈದ್ಯರಿಂದ ದೃಢೀಕರಣ ಪಡೆಯ ಬೇಕಿದೆ. ಮಾಲೀಕರು 12 ತಿಂಗಳಿಗಿಂತ ಹೆಚ್ಚಿನ ವಯಸ್ಸಿನ ನಾಯಿಗೆ ಕಡ್ಡಾಯವಾಗಿ ಸಂತಾನಹರಣ ಚಿಕಿತ್ಸೆ ಮಾಡಿಸಬೇಕು. ಇನ್ನೂ ಸಾಕು ನಾಯಿಗಳ ಅವರಣದಲ್ಲಿ ಸ್ವಚ್ಛತೆ ಕಾಪಾಡಬೇಕು. ನೆರೆಹೊರೆಯವರಿಗೆ ತೊಂದರೆ ಅಗದಂತೆ ನಾಯಿ ಸಾಕಬೇಕು.

ಖಾಲಿ ಇರುವ ಹುದ್ದೆಗಳ ಭರ್ತಿಗೆ ಕ್ರಮವಹಿಸಿ: ಅಧ್ಯಕ್ಷ ಕಾಂತಕುಮಾರ್

ವಿದ್ಯಾರ್ಥಿಗಳ ಪರ ಸರಕಾರ ಕೆಲಸ ಮಾಡುತ್ತಿಲ್ಲ

ಬೆಂಗಳೂರು: ರಾಜ್ಯ ಸರಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನ ಭರ್ತಿ ಮಾಡಬೇಕು ಎನ್ನುವುದು ಹಲವು ದಿನಗಳ ಬೇಡಿಕೆಯಾಗಿದೆ. ಉದ್ಯೋಗಾಕಾಂಕ್ಷಿಗಳು ಹಲವು ಸಲ ಪ್ರತಿಭಟನೆ ಮಾಡಿದರು ಕೂಡ ಸರಕಾರ ಎಚ್ಚೆತ್ತುಕೊಳ್ಳುತ್ತಿಲ್ಲ ಎಂದು ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿ ಸಂಘ ಅಧ್ಯಕ್ಷ ಕಾಂತಕುಮಾರ್ ತಿಳಿಸಿದರು.

ನಗರದ ಫ್ರೀಡಂ ಪಾರ್ಕ್‌ನಲ್ಲಿ ಗುರುವಾರ ಆಯೋಜಿಸಿದ್ದ ಪ್ರತಿಭಟನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ್ಯದ ಗ್ರಾಮೀಣ ಭಾಗದ ಬಡ ಮತ್ತು ನಿರುದ್ಯೋಗಿ ಯುವಕರು ಹಾಗೂ ಯುವತಿಯರು ಸರಕಾರಿ ಉದ್ಯೋಗಗಳಿಗಾಗಿ ವರ್ಷಗಳ ಕಾಲ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ತಯಾರಿ ನಡೆಸುತ್ತಿದ್ದು, ಕಳೆದ ಹಲವು ವರ್ಷಗಳಿಂದ ಸಮರ್ಪಕ ನೇಮಕಾತಿಗಳು ನಡೆಯದೇ ಇರುವುದರಿಂದ ಯುವಜನತೆ ಗಂಭೀರ ಸಂಕಷ್ಟಗಳನ್ನು ಎದುರಿಸುತ್ತಿದೆ ಎಂದರು.

ನಮ್ಮ ಹುದ್ದೆ, ನಮ್ಮ ಹೋರಾಟ, ನಮ್ಮ ಹಕ್ಕು ಎಂಬ ಘೋಷವಾಕ್ಯದೊಂದಿಗೆ ಈ ಪ್ರತಿಭಟನೆ ಆಯೋಜಿಸಿದ್ದು, ಪ್ರತಿಭಟನೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಮೂರು ಸಾವಿರ ಉದ್ಯೋಗಾಕಾಂಕ್ಷಿಗಳು ಭಾಗಿಯಾಗಿದ್ದಾರೆ.

ಫ್ರೀಡಂ ಪಾರ್ಕ್‌ನಲ್ಲಿ ವಿದ್ಯಾರ್ಥಿಗಳು ಸರಕಾರ ವಿರುದ್ಧ ಘೋಷಣೆ ಕೂಗಿ ಪ್ರತಿಭಟನೆ ಮಾಡಿದರು. ಈ ವೇಳೆ ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿ ಸಂಘ ಅಧ್ಯಕ್ಷ ಕಾಂತಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪಿಎಸ್‌ಐ, ಪೊಲೀಸ್ ಪೇದೆ, ಶಿಕ್ಷಕ, ಸ್ಟಾಫ್ ನರ್ಸ್, ಅರಣ್ಯ ಇಲಾಖೆ, ಆರೋಗ್ಯ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳಲ್ಲಿ 2.50 ಲಕ್ಷಕ್ಕೂ ಅಧಿಕ ಹುದ್ದೆಗಳು ಖಾಲಿ ಇವೆ. ಯಾವ ಸರಕಾರವು ವಿದ್ಯಾರ್ಥಿಗಳ ಪರ ಕೆಲಸ ಮಾಡುತ್ತಿಲ್ಲ. ಖಾಲಿ ಹುದ್ದೆಗಳ ನೇಮಕಾತಿಯನ್ನು ತಕ್ಷಣ ಆರಂಭಿಸಬೇಕು. ಭ್ರಷ್ಟಾಚಾರರಹಿತ ಮತ್ತು ಪಾರದರ್ಶಕ ನೇಮಕಾತಿ ಪ್ರಕ್ರಿಯೆ ಜಾರಿಯಾಗಬೇಕು ಹಾಗೂ ಪ್ರತಿ ವರ್ಷ ಎಲ್ಲಾ ಇಲಾಖೆಗಳಲ್ಲಿಯೂ ನೇಮಕಾತಿ ಕಡ್ಡಾಯಗೊಳಿಸಬೇಕು ಎಂದರು.

ನಿತ್ಯ 8 ಲಕ್ಷ ಮಂದಿ ಮೆಟ್ರೋ ಸಂಚಾರ

ಬೆಂಗಳೂರು: ನಮ್ಮ ಮೆಟ್ರೋದಲ್ಲಿ ಪ್ರತಿದಿನ ಎಂಟು ಲಕ್ಷಕ್ಕೂ ಅಧಿಕ ಜನ ಸಂಚಾರ ನಡೆಸುತ್ತಿದ್ದು, ನೇರಳೆ, ಹಸಿರು, ಹಳದಿ ಮಾರ್ಗದಲ್ಲಿ ಸಂಚಾರ ನಡೆಸುತ್ತಿರುವ ರೈಲುಗಳಿಗೆ ಜನರಿಂದ ಉತ್ತಮ ಪ್ರತಿಕ್ರಿಯೆಯು ಲಭ್ಯವಾಗುತ್ತಿದೆ.

ನಗರದ ಸಂಚಾರ ದಟ್ಟಣೆಯಿಂದಾಗಿ ಹೆಚ್ಚಿನ ಜನರು ಮೆಟ್ರೋದಲ್ಲೇ ಸಂಚಾರ ನಡೆಸುತ್ತಿದ್ದು, ಪೀಕ್ ಅವರ್‌ಗಳಾದ ಬೆಳಗ್ಗೆ 8.30 ರಿಂದ 10 ಮತ್ತು ಸಂಜೆ 5.30 ರಿಂದ 8 ಗಂಟೆ ತನಕ ಮೆಟ್ರೋವನ್ನೇ ಜನರು ಬಳಕೆ ಮಾಡುತ್ತಿದ್ದಾರೆ. ನವೆಂಬರ್ 2025ರಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ, ಬೆಳಗ್ಗೆ 9 ರಿಂದ 10 ಗಂಟೆಯ ತನಕ ನಮ್ಮ ಮೆಟ್ರೋದಲ್ಲಿ 84,786 ಜನರು ಸಂಚಾರವನ್ನು ನಡೆಸುತ್ತಾರೆ. ಪ್ರತಿದಿನದ 7,57,963 ಪ್ರಯಾಣಿಕರಲ್ಲಿ ಶೇ11.2ರಷ್ಟು ಜನರು ಈ ಅವಧಿಯಲ್ಲಿ ಸಂಚಾರ ನಡೆಸುತ್ತಾರೆ. ಮುಂಜಾನೆ 5 ರಿಂದ 6 ಗಂಟೆಯ ತನಕ ಮೆಟ್ರೋದಲ್ಲಿ 4,823 ಜನರು ಸಂಚಾರವನ್ನು ನಡೆಸುತ್ತಾರೆ. 2025ರಲ್ಲಿ ಬೆಳಗ್ಗೆ ಸಂಚಾರ ನಡೆಸುವ ಜನರ ಸಂಖ್ಯೆ ಹೆಚ್ಚಾಗುತ್ತಿದೆ. ಬೆಳಗ್ಗೆ 7 ರಿಂದ 8 ಗಂಟೆ ತನಕ ಸಂಚಾರ ನಡೆಸುವವರ ಸಂಖ್ಯೆ 24,037 ರಿಂದ ಈಗ 57,682ಕ್ಕೆ ಏರಿಕೆಯಾಗಿದೆ ಎಂದು ಸಮೀಕ್ಷೆಯಲ್ಲಿ ತಿಳಿದುಬಂದಿದೆ ಎನ್ನಲಾಗುತ್ತಿದೆ.

9–10ರ ತನಕ ಸಾಮಾನ್ಯವಾಗಿ ಎಲ್ಲಾ ರೈಲುಗಳು ಸಂಪೂರ್ಣ ಭರ್ತಿಯಾಗಿ ಸಂಚರಿಸುತ್ತಿದ್ದು, ಸಂಜೆ 4 ಗಂಟೆಗೆ ಮೆಟ್ರೋದಲ್ಲಿ ಸಂಚಾರ ನಡೆಸುವ ಜನರ ಸಂಖ್ಯೆ 41,203 –ಆಗಿದೆ. ಸಂಜೆ 6–7 ಗಂಟೆಯ ನಡುವೆ 74,272 ಮತ್ತು 7–8 ಗಂಟೆಯ ತನಕ 71,504 ಜನರು ಸಂಚಾರವನ್ನು ನಡೆಸುತ್ತಾರೆ ಎಂದು ಸಮೀಕ್ಷೆ ಹೇಳಿದೆ. ನಮ್ಮ ಮೆಟ್ರೋದಲ್ಲಿ 10–12 ಗಂಟೆಯ ತನಕ 72,096 ಪ್ರಯಾಣಿಕರು ಸಂಚಾರವನ್ನು ನಡೆಸುತ್ತಾರೆ. 10–11 ಗಂಟೆಯ ತನಕ 40,980 ಸಂಚಾರ ನಡೆಸುತ್ತಾರೆ. ಸಮೀಕ್ಷೆಯ ಮಾಹಿತಿಯಂತೆ 12–4 ಗಂಟೆಯ ತನಕ ಸುಮಾರು 31,062 ರಿಂದ 33,017 ಪ್ರಯಾಣಿಕರು ಸಂಚಾರ ಮಾಡುತ್ತಾರೆ. ರಾತ್ರಿ 12 ಗಂಟೆಯ ತನಕ ಬೆಂಗಳೂರು ನಗರದಲ್ಲಿ ನಮ್ಮ ಮೆಟ್ರೋ ಸಂಚಾರವನ್ನು ನಡೆಸುತ್ತದೆ. 11 ಗಂಟೆಯ ಕೊನೆಯ ರೈಲಿನಲ್ಲಿ ಸಂಚಾರ ನಡೆಸುವ ಜನರ ಸಂಖ್ಯೆ 5,354 ಎಂದು ಅಂದಾಜಿಸಲಾಗಿದ್ದು, ನವೆಂಬರ್ 2025ರಲ್ಲಿ ಪ್ರತಿದಿನದ ನಮ್ಮ ಮೆಟ್ರೋ ಪ್ರಯಾಣಿಕರ ಸಂಖ್ಯೆ 7,57,963 ಆಗಿದೆ.

ಕರ್ನಾಟಕ ಸರ್ಕಾರ
ಸಾರಿಗೆ ಇಲಾಖೆ ಪ್ರಕಟಣೆ

ಸಾರಿಗೆ ಇಲಾಖೆ TRANSPORT DEPARTMENT

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ರಾಮಲಿಂಗಾ ರೆಡ್ಡಿ
ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು, ಕರ್ನಾಟಕ ಸರ್ಕಾರ

ರಾಜ್ಯದಲ್ಲಿ ನೋಂದಣಿಯಾಗಿರುವ ಎಲ್ಲಾ ಸಾಮಾನ್ಯ ಬಸ್ಸು ಹಾಗೂ ಸ್ಲೀಪರ್ ಬಸ್ಸುಗಳಲ್ಲಿ ಕೇಂದ್ರ ಮೋಟಾರು ವಾಹನ ನಿಯಮಗಳು 1989 ರ ನಿಯಮ 125-C ರಲ್ಲಿ ತಿಳಿಸಿರುವಂತೆ, ಈ ಕೆಳಕಂಡ ಸುರಕ್ಷತಾ ಕ್ರಮಗಳನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳಬೇಕು:

- AUTOMOTIVE INDUSTRY STANDARD
- CODE OF PRACTICE FOR BUS BODY DESIGN AND APPROVAL AIS-052/AIS-153
- REQUIREMENTS FOR SLEEPER COACH BUSES AIS-119
- PUBLIC ADDRESS SYSTEM

01 ರಾಜ್ಯದಲ್ಲಿ ನೋಂದಾಯಿಸಲಾಗಿರುವ ಎಲ್ಲಾ ಸ್ಲೀಪರ್ ಕೋಚ್ ಬಸ್ಸುಗಳಲ್ಲಿ ಚಾಲಕರ ಹಿಂಬದಿ ಅಳವಡಿಸಿರುವ ವಿಭಜಕದ ಬಾಗಿಲನ್ನು ತೆಗೆದುಹಾಕುವುದು

02 ರಾಜ್ಯದಲ್ಲಿ ನೋಂದಾಯಿಸಲಾಗಿರುವ ಎಲ್ಲಾ ಸ್ಲೀಪರ್ ಕೋಚ್ ಬಸ್ಸುಗಳಲ್ಲಿ ಸ್ಲೀಪರ್ ಬರ್ತ್‌ಗಳಿಗೆ ಅಳವಡಿಸಿರುವ ಸ್ಲೈಡರ್‌ಗಳನ್ನು ತೆಗೆದುಹಾಕುವುದು

03 ದಿನಾಂಕ: 01-04-2019ರ ನಂತರ ನೋಂದಣಿಯಾಗಿರುವ ಎಲ್ಲಾ ಸ್ಲೀಪರ್ ಕೋಚ್ ಬಸ್ಸುಗಳಲ್ಲಿ FIRE DETECTION AND SUPPRESSION SYSTEM (FDSS) ಗಳನ್ನು ಕಡ್ಡಾಯವಾಗಿ ಅಳವಡಿಸುವುದು

04 ಮೋಟಾರು ವಾಹನ ಕಾಯ್ದೆ ಮತ್ತು ನಿಯಮಗಳ ನಿಬಂಧನೆಗಳನ್ನು ಉಲ್ಲಂಘಿಸಿ, ಸ್ಲೀಪರ್ ಕೋಚ್ ಬಸ್‌ಗಳು ಸೇರಿದಂತೆ ಎಲ್ಲಾ ಪ್ರಯಾಣಿಕ ಬಸ್‌ಗಳಲ್ಲಿ ವಾಣಿಜ್ಯ ಸರಕುಗಳನ್ನು ಸಾಗಿಸುವಂತಿಲ್ಲ

05 ಚಾಸಿಸ್ ಅನ್ನು ಅನಧಿಕೃತವಾಗಿ ವಿಸ್ತರಣೆ ಮಾಡಿ ನಿರ್ಮಿಸಿರುವ ಬಸ್ಸುಗಳ ಕಾರ್ಯಾಚರಣೆಯನ್ನು ನಿಲ್ಲಿಸುವುದು

06 ಪ್ರತಿಯೊಂದು ಬಸ್ಸಿನಲ್ಲಿ ಕಡ್ಡಾಯವಾಗಿ ತುರ್ತು ನಿರ್ಗಮನ ದ್ವಾರ, ಅಗ್ನಿಶಾಮಕ ಸಾಧನ ಅಳವಡಿಕೆ, ಬಸ್ಸಿನ ಛಾವಣಿಯ ಹ್ಯಾಚ್‌ಗಳೊಂದಿಗೆ ವಿನ್ಯಾಸ ರೇಖಾ ಚಿತ್ರವನ್ನು ಪ್ರಯಾಣಿಕರಿಗೆ ಸುಲಭವಾಗಿ ಓದಲು ಅನುಕೂಲವಾಗುವ ಸ್ಥಳದಲ್ಲಿ ವಾಹನದ ಒಳಗಡೆ ಪ್ರದರ್ಶಿಸಿರಬೇಕು

07 ಬಸ್ ಬಾಡಿ ಕೋಡ್ AIS:119 ರಲ್ಲಿ ನಿಗದಿಪಡಿಸಿರುವ ಮಾನದಂಡಗಳ ಪ್ರಕಾರ, 12 ಮೀಟರ್ ಉದ್ದಳತೆಯ ಬಸ್ಸುಗಳಲ್ಲಿ ಕನಿಷ್ಠ 4 ತುರ್ತು ನಿರ್ಗಮನ ದ್ವಾರಗಳು ಮತ್ತು 12 ಮೀಟರ್‌ಗಿಂತ ಹೆಚ್ಚಿನ ಉದ್ದಳತೆಯ ಬಸ್ಸುಗಳಲ್ಲಿ ಕನಿಷ್ಠ 5 ತುರ್ತು ನಿರ್ಗಮನ ದ್ವಾರಗಳು ಇರತಕ್ಕದ್ದು

08 AIS: 052 ಹಾಗೂ AIS: 119ಕ್ಕೆ ಅನುಗುಣವಾಗಿ ಬಸ್ಸುಗಳ ಮೇಲ್ಛಾವಣಿಗಳಲ್ಲಿ ಲಗೇಜ್ ಕ್ಯಾರಿಯರ್‌ಗಳನ್ನು ಹಾಗೂ ಏಣಿಗಳನ್ನು ತೆಗೆದುಹಾಕುವುದು

09 ಎಲ್ಲಾ ಸ್ಲೀಪರ್ ಕೋಚ್ ಬಸ್ಸುಗಳಲ್ಲಿ ಕನಿಷ್ಠ 10 ಕೆ.ಜಿ. ಸಾಮರ್ಥ್ಯದ ಅಗ್ನಿಶಾಮಕ ಸಾಧನಗಳನ್ನು ಅಳವಡಿಸುವುದು

10 ಬಸ್ ಕವಚ ನಿರ್ಮಾಣ ಸಂಸ್ಥೆಗಳು ಕೇಂದ್ರ ಮೋಟಾರು ವಾಹನ ನಿಯಮಾವಳಿ 1989 ರ ನಿಯಮ 126 ರಂತೆ ಹೊಂದಿರುವ ಪ್ರಮಾಣಪತ್ರ ಸಿಂಧುತ್ವವಿದ್ದು, ಸದರಿ ಕಂಪನಿಗಳು ನಿರ್ಮಿಸುವ ವಾಹನಗಳನ್ನು ಮಾತ್ರ ನೋಂದಾಯಿಸಲಾಗುವುದು

11 ಅನುಮೋದಿತ ಟೆಸ್ಟಿಂಗ್ ಏಜೆನ್ಸಿಗಳು ನೀಡುವ ಪ್ರಮಾಣಪತ್ರ ನಮೂನೆ 22 ಮತ್ತು 22A ಗಳನ್ನು ಪರಿಶೀಲಿಸಿದ ನಂತರವೇ ವಾಹನಗಳನ್ನು ನೋಂದಾಯಿಸ-ಲಾಗುವುದು

ಈ ಮೇಲಿನ ಸೂಚನೆಗಳನ್ನು ವಾಹನದ ಮಾಲೀಕರು ದಿನಾಂಕ: 28-02-2026ರ ಒಳಗೆ ಕಡ್ಡಾಯವಾಗಿ ಪಾಲಿಸುವುದು, ತಪ್ಪಿದಲ್ಲಿ ಅಂತಹ ವಾಹನಗಳ ವಿರುದ್ಧ ಮೋಟಾರು ವಾಹನ ಕಾಯ್ದೆ 1988 ಹಾಗೂ ಅದರಡಿ ರಚಿಸಲಾದ ನಿಯಮಗಳಡಿಯಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಿದೆ.

ಸಹಿ/-
ಆಯುಕ್ತರು
ಸಾರಿಗೆ ಮತ್ತು ರಸ್ತೆ ಸುರಕ್ಷತೆ

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮಂಡ್ಯ– 571401

(Autonomous Medical Institution, Government of Karnataka)
Fax & Phone No: 08232-231003, 222086, E-mail: mimsmandya@gmail.com),
Website: www.mimsmandya.org

No:MIMS/EST-1/10GEN/09/contract/2024-25 Date:02.02.2026

ರದ್ದುಪಡಿಸಿರುವ ಅಧಿಸೂಚನೆ

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಿವಿಧ ವಿಭಾಗಗಳಲ್ಲಿ ಖಾಲಿ ಇರುವ 19 ಸಹಾಯಕ ಪ್ರಾಧ್ಯಾಪಕರು ಮತ್ತು 36 ಸೀನಿಯರ್ ರೆಸಿಡೆಂಟ್ ಹುದ್ದೆಗಳನ್ನು ತಾತ್ಕಾಲಿಕವಾಗಿ 11 ತಿಂಗಳ ಅವಧಿಗೆ ಗುತ್ತಿಗೆ ಆಧಾರದ ಮೇರೆಗೆ **Walk-in-Interview** ಮೂಲಕ ನೇಮಕಾತಿ ಮಾಡಿಕೊಳ್ಳುವ ಸಂಬಂಧ **ದಿ–02.02.2026** ರಂದು ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಸಂಸ್ಥೆಯಲ್ಲಿ ಕೆಲವು ತಿದ್ದುಪಡಿ ಕ್ರಮ ಕೈಗೊಳ್ಳಬೇಕಾಗಿರುವುದರಿಂದ **ದಿನಾಂಕ: 16.02.2026** ರಂದು ಆಯೋಜಿಸಿದ್ದ **Walk-in-Interview** ನ್ನು ತಾತ್ಕಾಲಿಕವಾಗಿ ರದ್ದುಪಡಿಸಿದೆ. ರದ್ದುಪಡಿಸಿರುವ ಮಾಹಿತಿಯನ್ನು ಮಿಮ್ಸ್ ಸಂಸ್ಥೆಯ **https://mims.karnataka.gov.in** ನಲ್ಲಿ ಪ್ರಕಟಿಸಿದೆ.

ಸಹಿ/– ಮುಖ್ಯ ಆಡಳಿತಾಧಿಕಾರಿಗಳು,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ

ವಾಸಾಸಂಇ/ಮಂಡ್ಯ/ಶಿರಡಿಸಾಯಿ/751/2025-26

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಜಯನಗರ ವಾಣಿಜ್ಯ ಸಂಕೀರ್ಣ ಮಳಿಗೆ, ಜಯನಗರ, ಬೆಂಗಳೂರು–560011.

ಸಂಖ್ಯೆ: ಕಾಇಂ/ಸನೀ/ಸ.ಇಂ–5/ಟೆಂಡರ್ ಪ್ರಕಟಣೆ ಸಂ.31/2025–26/466 ದಿನಾಂಕ: 11.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಅರ್ಹ ಗುತ್ತಿಗೆದಾರರರು ಲೆಕ್ಕ ಶೀರ್ಷಿಕೆ ಗಿರಿಜನ ಉಪಯೋಜನೆ ಮತ್ತು ವಿಶೇಷ ಘಟಕ ಕಾಮಗಾರಿಗಳು ಯೋಜನೆಯಡಿ ಅನುಮೋದನೆಗೊಂಡ ಈ ಕೆಳಕಂಡಂತೆ ಕಾಮಗಾರಿಗಳ ಕೆಟಿಪಿಪಿ ಸ್ಟಾಂಡರ್ಡ್ ಬಿಡ್ ಡಾಕ್ಯೂಮೆಂಟ್ KW-1 ಮತ್ತು 2 ರ ಮುಖಾಂತರ ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ, ಪರಿಶಿಷ್ಟ ಪಂಗಡ ಗುತ್ತಿಗೆದಾರರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಈ ಕಾಮಗಾರಿಗಳಿಗೆ ಕೆಪಿಪಿಪಿ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಹಾಗೂ ಮೇಲಿನ ವೆಬ್ ಸೈಟ್‌ನಲ್ಲಿ ಮಾಹಿತಿ ಪಡೆಯಬಹುದು.

ಕಾಮಗಾರಿಯ ಹೆಸರು :– ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ, ಮಾಗಡಿ ತಾಲ್ಲೂಕು, ಹಾರೋಹಳ್ಳಿ ತಾಲ್ಲೂಕು, ರಾಮನಗರ ತಾಲ್ಲೂಕು, ಕನಕಪುರ ತಾಲ್ಲೂಕುಗಳಲ್ಲಿ ಕೊಳವೆ ಬಾವಿ ಕೊರೆದು ನೀರಾವರಿ ಸೌಲಭ್ಯ ಕಲ್ಪಿಸುವ ಕಾಮಗಾರಿಗಳು ಒಳಗೊಂಡಂತೆ **ಒಟ್ಟು 14 ಕಾಮಗಾರಿಗಳನ್ನು ಆಹ್ವಾನಿಸಲಾಗಿದೆ.**

ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : **ರೂ.4.84 (ಕನಿಷ್ಠ) & ರೂ.14.60 (ಗರಿಷ್ಠ)**
ಇಎಂಡಿ (ರೂಗಳಲ್ಲಿ): **ರೂ.6,100/– (ಕನಿಷ್ಠ) & ರೂ.36,500/– (ಗರಿಷ್ಠ).**
ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ: 02 ತಿಂಗಳು ಮಳೆಗಾಲ ಸೇರಿದಂತೆ.
(ಟೆಂಡರ್‌ಗಿಟ್ಟ ಮೊತ್ತ, ಇಎಂಡಿ, ಕಾಮಗಾರಿಯ ಅವದಿ ಆಯಾ ಕಾಮಗಾರಿಗಳಿಗೆ ಅನುಗುಣವಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಇದ್ದಂತೆ)

(1) ಟೆಂಡರ್ ದಾಸ್ತಾ ವೇಜುಗಳನ್ನು ವೆಬ್‌ಸೈಟ್ ಪ್ರಕಟಿಸುವ ದಿನಾಂಕ: **11.02.2026 ಸಂಜೆ 16.30** ಗಂಟೆಯ ನಂತರ, (2) ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾದ ದಿನಾಂಕ ಮತ್ತು ವೇಳೆ: **18.02.2026 ಸಂಜೆ 15.00** ಗಂಟೆಯವರೆಗೆ. (3) ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **18.02.2026 ಸಂಜೆ 16.30** ಗಂಟೆಯವರೆಗೆ. (4) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: **20.02.2026 ಬೆಳಿಗ್ಗೆ 11.30** ಗಂಟೆಗೆ. (5) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ**

ಷರತ್ತುಗಳು: 1) ಹೆಚ್ಚಿನ ವಿವರಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ವೆಬ್‌ಸೈಟ್ ವಿಳಾಸ: **https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ. ಬದಲಾವಣೆ ಇದ್ದಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು. 2) ಗುತ್ತಿಗೆ ಪಡೆಯಲು ಕನಿಷ್ಠ ಅರ್ಹತೆಗಳಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಐ ಟಿ ಟಿ ನಿಬಂಧನೆ– 1 ಮತ್ತು 2 ರಲ್ಲಿ ನಮೂದಿಸಿದ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. 3) ಗುತ್ತಿಗೆದಾರರು ಜಿಎಸ್‌ಟಿ ಹೊರತುಪಡಿಸಿ ದರಗಳನ್ನು ನಮೂದಿಸಬೇಕು. 4) ಎಲ್ಲಾ ಟೆಂಡರ್‌ನ್ನು ಅಥವಾ ಯಾವುದಾದರೂ ಟೆಂಡರ್‌ನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ

ವಾಸಾಸಂಇ/ವಾ.ಪ್ರ/5585/ಎಸ್‌ಎಸ್‌ಸಿ/2025–26

ಕರ್ನಾಟಕ ಸರ್ಕಾರ

ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ

KMCRI/SUP(5)/ENT/Tender-01/493/2025-26 Dated 10.02.2026
KMCRI/SUP(5)/ENT/Tender-01/494/2025-26 Dated 10.02.2026

ಇ–ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ನಿರ್ದೇಶಕರು, ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಹುಬ್ಬಳ್ಳಿ ಇವರು **ಅರ್ಹ ಟೆಂಡರದಾರರು, ಉತ್ಪಾದಕರು, ಅಧಿಕೃತ ಏಜೆಂಟ್ಸ್ ಮತ್ತು ಅಧಿಕೃತ ವಿತರಕರಿಂದ** ಕೆ.ಎಂ.ಸಿ.&ಆರ್.ಐ. ಆಸ್ಪತ್ರೆಗೆ ಅವಶ್ಯವಿರುವ **ENT** ವಿಭಾಗಕ್ಕೆ **Blue Laser** ಮತ್ತು **OT Table (02 No.s)** ವೈದ್ಯಕೀಯ ಉಪಕರಣಗಳನ್ನು **ಪೂರೈಸುವುದಕ್ಕಾಗಿ** ಕರ್ನಾಟಕ ಪಾರದರ್ಶಕ ಸಾರ್ವಜನಿಕ ಪೂರೈಕೆ ಕಾಯ್ದೆ 1999 ಶಾಸನ 2000 ಅನ್ವಯ ಇ–ಟೆಂಡರ್ ಮೂಲಕ ಟೆಂಡರ್ ಪ್ರಕಟಣೆ ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳನ್ನು, ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **htpps://ww.kppp.karnataka.gov.in** ನಲ್ಲಿ ಪಡೆಯಬಹುದು. ಟೆಂಡರ್‌ನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಟೆಂಡರನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– (ನಿರ್ದೇಶಕರು)
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ

ಅನುವಾದಿತ ಪುಸ್ತಕಗಳಿಗೆ ಆಹ್ವಾನ

ಬೆಂಗಳೂರು: ಅನುವಾದಿತ ಪುಸ್ತಕಗಳಿಗೆ ಬಹುಮಾನ ವಿತರಿಸಲು ಪುಸ್ತಕಗಳನ್ನು ಆಹ್ವಾನಿಸಲಾಗಿದೆ. 2025ನೇ ಸಾಲಿನ ಅವಧಿಯಲ್ಲಿ ಪ್ರಥಮ ಆವೃತ್ತಿಯಲ್ಲಿ ಪ್ರಕಟವಾಗಿರುವ ಅನುವಾದಿತ ಪುಸ್ತಕಗಳನ್ನು ಹಾಗೂ ಅನುವಾದ ಅಧ್ಯಯನ ಕುರಿತ ಪುಸ್ತಕಗಳಿಗೆ ಅರ್ಹ ಅನುವಾದಕರು ಹಾಗೂ ಪ್ರಕಾಶಕರಿಂದ ಪುಸ್ತಕ ಆಹ್ವಾನಿಸಲಾಗಿದೆ. ಅನುವಾದಿತ ಪುಸ್ತಕಗಳ ಬಗ್ಗೆ ಮಾಹಿತಿ ಇರುವವರು ಸಹ ಪುಸ್ತಕಗಳನ್ನು ಕಚೇರಿಗೆ ಕಳುಹಿಸಿಕೊಡಬಹುದಾಗಿದೆ. ಪ್ರತಿ ಪುಸ್ತಕದ ತಲಾ ನಾಲ್ಕು ಪ್ರತಿಗಳನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಜ್ಞಾನಭಾರತಿ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು–560056 ವಿಳಾಸಕ್ಕೆ ನೇರ ಅಥವಾ ಅಂಚೆಯ ಮೂಲಕ ಮಾ.31 ರೊಳಗಾಗಿ ತಲುಪಿಸಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರ ರವರ ಕಚೇರಿ
ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ ಜಿಲ್ಲೆ–591302

ಸಂಖ್ಯೆ. ಕನೀನಿನಿ/ಕಯೋವಿ/ಖಾ/ಪಿಬಿ/ಅ.ಟೆಂ.ಪ್ರ/2025–26/2003 ದಿನಾಂಕ: 10.02.2026

"ಅಲ್ಪಾವಧಿ ಶೇಕಡಾವಾರು ಟೆಂಡರ್ ಪ್ರಕಟಣೆ"
(ಕೆಪಿಪಿ–ಪೋರ್ಟಲ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ ಕಚೇರಿ ಅಡಿಯಲ್ಲಿ ಬರುವ ಈ ಕೆಳಗಿನ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರರಿಂದ (ದರ್ಜೆ 3 ಮತ್ತು ಮೇಲ್ಪಟ್ಟು) ಶೇಕಡಾವಾರು ಟೆಂಡರ್‌ಗಳನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಕೆಪಿಪಿ–ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ.

ಕ್ರ. ಸಂ	ಕಾಮಗಾರಿಯ ಹೆಸರು	ಟೆಂಡರ್‌ಗೆ ಇಟ್ಟ ಮೊತ್ತ ಜಿ.ಎಸ್.ಟಿ. ಹೊರತುಪಡಿಸಿ (ರೂ. ಲಕ್ಷಗಳಲ್ಲಿ)
1.	Operation and maintenance of Siddanabhavi Tank Filling Scheme in Belagavi Taluk Belagavi District **(W.I. No. KNNL/2025-26/LI/WORK_INDENT4026)**	50.15

https://kppp.karnataka.gov.inನಲ್ಲಿ ಅರ್ಜಿ ಡೌನಲೋಡ್ ಮಾಡಿಕೊಳ್ಳಬಹುದು/ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 21.02.2026ರಂದು ಸಂಜೆ 4.00 ಗಂಟೆ** ವರೆಗೆ ಸಲ್ಲಿಸಬಹುದು. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 23.02.2026 ಬೆಳಿಗ್ಗೆ 11.30 ಗಂಟೆಗೆ.** ಪೂರ್ವಾರ್ಹತೆ ಕುರಿತಂತೆ ಇ.ಎಂ.ಡಿ. ವಿವರ, ಟೆಂಡರ್ ಷರತ್ತುಗಳು ಹಾಗೂ ಇತರೆ ವಿವರಗಳನ್ನು ಕೆಪಿಪಿ–ಪೋರ್ಟಲ್ ಮುಖಾಂತರ **https://kppp.karnataka.gov.in** ಪಡೆಯಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ **ದೂರವಾಣಿ ಸಂಖ್ಯೆ: 08336–222163** ಸಂಪರ್ಕಿಸುವದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರ
ಕನೀನಿನಿ, ಕಳಸಾ ಯೋಜನೆ ವಿಭಾಗ,
ಖಾನಾಪೂರ, ಬೆಳಗಾವಿ

ವಾ.ಸಾ.ಇ/ಬೆಳಗಾವಿ/1824/ದೇಶಪಾಂಡೆಪಬ್ಲಿಸಿಟಿ/2025–26

ಬೆಂಗಳೂರು ದಕ್ಷಿಣ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಟ್ರಾಫಿಕ್ ಇಂಜಿನಿಯರಿಂಗ್ ಅಂಡ್ ಮೊಬಿಲಿಟಿ ಸೆಲ್, 2ನೇ ಮಹಡಿ, 9ನೇ ಮುಖ್ಯರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು–560011

ನಂ.: ಕಾಪಾಅ/ಟಿಇ&ಎಂ ಸೆಲ್/ಬೆಂದನಪಾ/ಟೆಂಡ್/03/2025–26 ದಿನಾಂಕ: 11.02.2026

ಟೆಂಡರ್ ಆಹ್ವಾನ (ಐಎಫ್‌ಟಿ)

(ದ್ವಿ ಲಕೋಟೆ ಪದ್ಧತಿ) (ಜಿಒಕೆ ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)
(ಅಲ್ಪಾವಧಿ ಟೆಂಡರ್ ಪ್ರಕಟಣೆ)

ಕಾರ್ಯಪಾಲಕ ಅಭಿಯಂತರರು, ಟ್ರಾಫಿಕ್ ಇಂಜಿಯರಿಂಗ್ ಮತ್ತು ಮೊಬಿಲಿಟಿ ಸೆಲ್ (ಬೆಂದನಪಾ) ಇವರು ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಸೇವೆಗಾಗಿ ವಿವರವಾದ ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಲು ಸಲಹೆಗಾರರನ್ನು ನೇಮಿಸಲು ಪ್ರಸ್ತಾವನೆಗಳನ್ನು (ತಾಂತ್ರಿಕ ಮತ್ತು ಆರ್ಥಿಕ) ಆಹ್ವಾನಿಸಿದ್ದಾರೆ.

ಕ್ರ. ಸಂ.	ಸೇವೆಯ ವಿವರಣೆ
1	ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ 18 ಸ್ಥಳಗಳಲ್ಲಿ ಪಿಪಿಪಿ ಮಾದರಿಯಲ್ಲಿ ಡಿಬಿಎಫ್‌ಒಟಿ ಆಧಾರದ ಮೇಲೆ ಪಾದಚಾರಿ ಮೇಲ್ಸೇತುವೆ ನಿರ್ಮಾಣ ಕಾರ್ಯಕ್ಕಾಗಿ ವಿವರವಾದ ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಲು ಸಲಹಾ ಸೇವೆಗಳು. **ಇಎಂಡಿ (ರೂ.ಗಳಲ್ಲಿ): 50,000.00**

ವೇಳಾಪಟ್ಟಿ: (1) ಕೆಪಿಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜುಗಳ ಲಭ್ಯತೆ: **13.02.2026** ರಿಂದ. (2) ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸಮಯ: **18.02.2026ರ ಮಧ್ಯಾಹ್ನ 3:00 ಗಂಟೆಗೆ.** (3) ಪ್ರಶ್ನೆಗಳಿಗೆ (ಆನ್‌ಲೈನ್ ಮೂಲಕ ಮಾತ್ರ) ಕೊನೆಯ ದಿನಾಂಕ ಮತ್ತು ಸಮಯ: **18.02.2026ರ ಸಂಜೆ 4:00 ಗಂಟೆಗೆ.** (4) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **23.02.2026ರ ಸಂಜೆ 4:30 ಗಂಟೆವರೆಗೆ.** (5) ತಾಂತ್ರಿಕ ಬಿಡ್ ತೆರೆಯುವುದು: **24.02.2026ರ ಸಂಜೆ 4:40 ಗಂಟೆಗೆ** (6) ಆರ್ಥಿಕ ಬಿಡ್ ತೆರೆಯುವುದು (ಸಾಧ್ಯವಾದಲ್ಲಿ): ತಾಂತ್ರಿಕ ಅನುಮೋದೆಯ ನಂತರ. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ **https://kppp.karnataka.gov.in** ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು ಟ್ರಾಫಿಕ್ ಇಂಜಿನಿಯರಿಂಗ್
ಅಂಡ್ ಮೊಬಿಲಿಟಿ ಸೆಲ್, ಬೆಂಗಳೂರು ದಕ್ಷಿಣ ನಗರ ಪಾಲಿಕೆ

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 31/2025–26 ದಿನಾಂಕ: 07.02.2026

ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ ಚಿಕ್ಕಮಗಳೂರು ಜಿಲ್ಲೆ ಲೋಕೋಪಯೋಗಿ ಇಲಾಖೆ ಉಪವಿಭಾಗಗಳಿಗೆ ಒಳಪಡುವ ಲೆಕ್ಕ ಶೀರ್ಷಿಕೆ: 2059–80–053–4–00–200 ವಿವಿಧ ಇಲಾಖಾ ಕಟ್ಟಡಗಳ ದುರಸ್ಥಿ/ನಿರ್ವಹಣೆ, 5054–04–337–0–01–154 ಜಿಲ್ಲಾ ಮತ್ತು ಇತರೆ ರಸ್ತೆ ಸುಧಾರಣೆ, 4059–80–051–0–60–132 ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಇತರೆ ಬಂಡವಾಳ ವೆಚ್ಚಗಳು, 8443–00–117–0–16–542 ಠೇವಣಿ ವಂತಿಕೆ, 3054–03–337–0–05–200 ರಾಜ್ಯ ಹೆದ್ದಾರಿ ನಿರ್ವಹಣೆ, 3054–4–337–1–10–200 ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ ಅಡಿಯಲ್ಲಿನ ಒಟ್ಟು 21 ಕಾಮಗಾರಿಗಳಿಗೆ ಕೆಪಿಪಿ ಪೋರ್ಟಲ್ ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ, ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ (Standard Tender Document KW -1,3 & 4 ರಂತೆ) ವಿವರಗಳನ್ನು ಲಗತ್ತಿಸತಕ್ಕದ್ದು, ಗುತ್ತಿಗೆದಾರರಿಗೆ ಅಧಿನಿಯಮ 3ರಲ್ಲಿ ನಮೂದಿಸಿರುವ ಕನಿಷ್ಠ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕನಿಷ್ಟ ಅಂದಾಜು ಮೊತ್ತ ರೂ.1.12ಲಕ್ಷಗಳು ಹಾಗೂ ಗರಿಷ್ಟ ಅಂದಾಜು ಮೊತ್ತ ರೂ.400.00 ಲಕ್ಷಗಳು ಆಗಿರುತ್ತವೆ. ಕೆಪಿಪಿ ಪೋರ್ಟಲ್ ಟೆಂಡರ್ ಸಲ್ಲಿಸಬೇಕಾಗಿರುವ 21 ಕಾಮಗಾರಿಗಳಿಗೆ (ಇ,ಸಂಖ್ಯೆ:ಇ,ಸಂಖ್ಯೆ:29383, 31079 ದಿ: 16.02.2026, ಇ,ಸಂಖ್ಯೆ:33299, 29916, 33234, 24722, 33269, 33294,30726, 33235, 30276,33271 ದಿ: 17.02.2026, ಇ,ಸಂಖ್ಯೆ:32860 ದಿ: 18.02.2026, ಇ,ಸಂಖ್ಯೆ:31265, 32333, 32332, 32547, 31082, 32553, 32408, 28683 ದಿ: 23.02.2026, ರಂದು) ಸಂಜೆ 4.300 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು, ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ,
ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಚಿ/25–26/157/1815

ಕರ್ನಾಟಕ ಸರ್ಕಾರ

ಕಾರ್ಯಾಲಯ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೀದರ.

ಸಂ: ಕಾನಿಅ/ಪಂರಾಇಂವಿ/ಬೀದರ/ತಾಶಾ–2/2025–26/2296 ದಿನಾಂಕ:10.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ, (ಇ–ಪ್ರೊಕ್ಯೂರಮೆಂಟ್)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ ರಾಜ್ ಇಂಜಿನಿಯರಿಂಗ ವಿಭಾಗ, ಬೀದರ ಇವರಿಂದ ವಿವಿಧ ಯೋಜನೆಯಡಿ ಮಂಜೂರಾದ 28 ಕಾಮಗಾರಿಗಳಿಗೆ (ಕನಿಷ್ಟ **ರೂ. 2,53,397.04** (Rupees Two Lakhs Fifty Three Thousand Three Hundred Ninety Seven and paise four only) ಮತ್ತು ಗರಿಷ್ಟ **150,59,921.77 ಮೊತ್ತದ** (Rupees One Crore Fifty Lakhs Fifty Nine Thousand Nine Hundred Twenty One and paise seventy seven only) ಗುತ್ತಿಗೆದಾರರನ್ನು ನೇಮಿಸಲು, ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಕೆ.ಟಿ.ಪಿ.ಪಿ. ಕಾಯ್ದೆ ಹಾಗೂ ಕೆ.ಡಬ್ಲ್ಯೂ–01, 02,03 ಹಾಗೂ 04ರ ನಿಬಂಧನೆಗೊಳಪಟ್ಟು ಕೆ.ಪಿ.ಪಿ.ಪಿ.ನಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಂತರಜಾಲ ತಾಣ https://kppp . karnataka . gov.inನ್ನು ಸಂಪರ್ಕಿಸಬಹುದು. (Work Indent No:- 20804/Call-2, 23755/Call-2, 23759/Call-2, 22346, 21597/Call-3, 21596/Call-3,21595/Call-3, 21594/Call-3, 21592/Call-3,21105/Call-3, 21104/Call-3, 23317/Call-2, 23310/Call-2, 24166, 18498/Call-2, 24169, 24168, 24172, 24174, 24475, 20179, 20178, 20177, 20176, 20184, 20183, 20182 & 20181).

ಟೆಂಡರ್ ಪ್ರಕ್ರಿಯೆ ದಿನಾಂಕಗಳು: 1. ಇ–ಪ್ರಾಕ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:**11.02.2026 ರಿಂದ 19.02.2026 16:00 ಗಂಟೆವರೆಗೆ,** 2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:**20.02.2026 ರಂದು 16:00 ಗಂಟೆ ನಂತರ,** 3. ಅರ್ಥಿಕ ಬಿಡ್ ತೆರೆಯುವ ದಿನಾಂಕ:**23.02.2026 ರಂದು 11:00 ಗಂಟೆ ನಂತರ**

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಪಂ.ರಾ.ಇಂ. ವಿಭಾಗ, ಬೀದರ.

ವಾ.ಸಾ.ಸಂ.ಇ/ಬೀದರ/329/ಕೆ.ಎಸ್.ಎಂ.ಸಿ.&ಎ/2025–26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020.

ಸಂ: ಬೆಂಅಪ್ರಾ/ನಯೋಸ/CLU-53/4038/2025-26(E-137495) ದಿನಾಂಕ: 11.02.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–Aರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಒಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ–2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ. ಎ. ವೆಂಕಟೇಶ್ ಮತ್ತು ಇತರರು	ಬೆಂಗಳೂರು ಪೂರ್ವ	ಬಿದರಹಳ್ಳಿ	ನಿಂಬೇಕಾಯಿಪುರ	10/1	0-11	ವ್ಯವಸಾಯ	ವಸತಿ
2					10/2	0-12		

ಷರಾ: ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ, ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಮತ್ತು ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು, ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಡಗಿರುತ್ತದೆ ಎಂದು ಅರ್ಜಿದಾರು ತಿಳಿಸುತ್ತಾ, 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114,
ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ / ಫ್ಯಾಕ್ಸ್: 080–27934470/ 27935412
E-mail: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/77/2025–26 ದಿನಾಂಕ: 11–02–2026

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30.01.2018 ರಂದು ಅನುಮೋದನೆಯಾದ ಮಹಾಯೋಜನೆಯಂತೆ **ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ** ಮಾಡಲು ಕೋರಿ ಈ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಮಾಲೀಕರ ಹೆಸರು	ಸ.ನಂ.	ವಿಸ್ತೀರ್ಣ ಎ–ಗುಂ
	ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಗಣಗಲು ಗ್ರಾಮದ		
1	ಶ್ರೀ ಮಂಜುನಾಥ ಬಿನ್ ಚೌಡಪ್ಪ ಇವರ ಪರವಾಗಿ ಜಿಪಿಎ ದಾರರಾದ ಶ್ರೀ ಡಿ. ಅಶೋಕ್ ಕುಮಾರ್ ಬಿನ್ ನರಸಿಂಮುಲು ರೆಡ್ಡಿ ದುವ್ವುರು ಮೆ॥ STRENUOUS BUILDERS	84/1	00-20
2	ಶ್ರೀ ನಾರಾಯಣಪ್ಪ ಬಿನ್ ವೆಂಕಟರಮಣಪ್ಪ ಇವರ ಪರವಾಗಿ ಜಿಪಿಎದಾರರಾದ ಶ್ರೀ ಡಿ. ಅಶೋಕ್ ಕುಮಾರ್ ಬಿನ್ ನರಸಿಂಮುಲು ರೆಡ್ಡಿ ದುವ್ವುರು, ಮೆ॥ STRENUOUS BUILDERS	84/3	00-20 1/2

ಷರಾ:– ಪ್ರಶ್ನಿತ ಜಮೀನುಗಳ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, ಸದರಿ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಯಾಗುವುದು ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/5599/ಅಡ್ವರ್ಟೋ/2025–26

ಮಸ್ಕತ್ ಪ್ರವಾಸದಲ್ಲಿರುವ ಆರ್ಟ್ ಆಫ್ ಲೀವಿಂಗ್‌ನ ಶ್ರೀ ರವಿಶಂಕರ್ ಗುರೂಜಿ ಅವರಿಗೆ ಅಂತಾರಾಷ್ಟ್ರೀಯ ಯೋಗಪಟು, ಕಲಾವಿದೆ ಕವಿತಾ ರಾಮಕೃಷ್ಣ ರಚಿಸಿರುವ ವರ್ಣಚಿತ್ರವನ್ನು ಹಸ್ತಾಂತರಿಸಿದರು. ಈ ವೇಳೆ ಜಿ.ವಿ.ರಾಮಕೃಷ್ಣ ಅವರು ಇದ್ದರು.

ರಾಜ್ಯದಲ್ಲಿ ಅಭಿವೃದ್ಧಿ ಮರೀಚಿಕೆ

ಬೆಂಗಳೂರು: ವಿಧಾನಸೌಧದಲ್ಲಿ 300 ಗ್ರಾಂ ಚಿನ್ನ ಸಿಕ್ಕಿದೆ. ಇಷ್ಟೊಂದು ದೊಡ್ಡ ಪ್ರಮಾಣದ ಬಂಗಾರ ವಿಧಾನಸೌಧದಲ್ಲಿ ಹೇಗೆ ಸಿಕ್ಕಿತು. ಯಾರಿಗೆ ಕೊಡಲು ತಂದಿದ್ದರು ಎಂದು ವಿಧಾನಪರಿಷತ್ ವಿಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಪ್ರಶ್ನಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಹಣ ಕೊಡುವುದರ ಬದಲು ಬಂಗಾರ ಕೊಡಲೆಂದು ತಂದಿದ್ದರೇ? 1.5 ಲಕ್ಷ ಹಣ ಮತ್ತು ಚಿನ್ನವನ್ನು ಎಲ್ಲಿಗೆ ತೆಗೆದುಕೊಂಡು ಹೋಗು ತ್ತಿದ್ದರು ಎಂದು ಪ್ರಶ್ನಿಸಿದರು. ಇದು ಲಂಚಾವತಾರ– ಭ್ರಷ್ಟಾಚಾ ರದ ಮತ್ತೊಂದು ಉದಾಹರಣೆ.

ಇದರಲ್ಲಿ ರುವ ಬೈರತಿ ಸುರೇಶ್ ಅಥವಾ ಇನ್ಯಾರೇ ಇದ್ದರೂ ತನಿಖೆ ಮಾಡಿ. ಪ್ರಕರಣದಲ್ಲಿ ಭಾಗಿಯಾದ ಅಧಿಕಾರಿ, ಸಚಿವರು ರಾಜೀನಾಮೆ ಕೊಡಬೇಕೆಂದು ಆಗ್ರಹಿಸಿದರು.

ಶಾಸಕರ ವಿದೇಶ ಪ್ರವಾಸ ಕುರಿತು ಪ್ರಶ್ನೆಗೆ ಉತ್ತರಿಸಿದ ಅವರು, ಯಾವ್ಯಾವ ಶಾಸಕರು ಯಾರ್ಯಾರ ತಂಡದಲ್ಲಿ ಹೋಗುತ್ತಿದ್ದಾರೆ ಎಂಬುದು ಕುತೂಹಲದ ವಿಷಯ. ಡಿ.ಕೆ. ಶಿವಕುಮಾರ್ ಕಡೆಯವರು ಯಾರ ಜೊತೆ ಯಾವ ದೇಶಕ್ಕೆ ಹೋಗುತ್ತಿದ್ದಾರೆ? ಸಿದ್ದರಾಮ ಯ್ಯನವರ ಕಡೆಯ ವರು ಯಾರ ಜೊತೆ ಯಾವ ದೇಶಕ್ಕೆ ಹೋಗುತ್ತಿದ್ದಾರೆ? ಅಲ್ಲಿ ಹೋಗಿ ಏನು ಮಾಡುತ್ತಾರೆ? ಇದೇನು ಶಾಸಕರ ಸಂಖ್ಯೆ ಮಾಡಿಕೊಳ್ಳುವ ತಂತ್ರವೇ? ಏನೆಂದು ತಿಳಿಯು ತ್ತಿಲ್ಲ. ಬಜೆಟ್ ಅಧಿವೇ ಶನದ ನಂತರ ಯಾರು ಸಿಎಂ ಎಂಬುದು ಕುತೂಹಲದ ವಿಷಯವಾಗಿದೆ. ಇದರ ನಡುವೆ ರಾಜ್ಯದ ಅಭಿವೃದ್ಧಿ ಎಂಬುದು ಮರೀಚಿಕೆಯಾಗಿದೆ ಎಂದು ಆಕ್ಷೇಪಿಸಿದರು.

ಕನ್ನಡ ಶಾಲೆ ಮುಚ್ಚುತ್ತಿರುವುದು ಖಂಡನೀಯ

ಬೆಂಗಳೂರು: ಕರ್ನಾಟಕ ಸರಕಾರ ಈಗಾಗಲೇ 638 ಕನ್ನಡ ಶಾಲೆಗಳನ್ನು ಮುಚ್ಚಿದೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದ್ದು, ರಾಜ್ಯ ಸರಕಾರ ದಿವಾಳಿಯಾಗಿದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ. ಸುದ್ದಿಗಾರ ರೊಂದಿಗೆ ಮಾತನಾಡಿ, ಸರಕಾರಕ್ಕೆ ಸಂಬಳ ಕೊಡಲು ಆಗುತ್ತಿಲ್ಲ. ಹೀಗಾಗಿ ಕನ್ನಡ ಶಾಲೆ ಗಳನ್ನು ಮುಚ್ಚು ತ್ತಿದ್ದಾರೆ. ಇದು ಕನ್ನಡ ವಿರೋಧಿ ಮತ್ತು ಕನ್ನಡ ಶಾಲೆಗಳ ವಿರೋಧಿಯಾಗಿದೆ. ಕನ್ನಡ ಶಾಲೆಗಳನ್ನು ಪುನಾರಾರಂಭಿಸು ವಂತೆ ಆಗ್ರಹಿಸುತ್ತೇನೆ ಎಂದರು. ಲೋಕಸಭೆ ಸ್ಪೀಕರ್ ವಿರುದ್ಧ ಕಾಂಗ್ರೆಸ್ ಅವಿಶ್ವಾಸ ನಿರ್ಣಯ ಮಂಡಿಸಿರುವ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಕಾಂಗ್ರೆಸ್ ಮೇಲಿಂದ ಮೇಲೆ ಚುನಾವಣೆಯಲ್ಲಿ ಸೋಲುತ್ತಿ ರುವುದರಿಂದ ಹತಾಶರಾಗಿ ದ್ದಾರೆ. ಅವರ ನಾಯಕ ಹತಾಶರಾಗಿದ್ದಾರೆ. ಹೀಗಾಗಿ ಸಂಸತ್ತಿನಲ್ಲಿ ಅವರು ನಗರ ನಕ್ಸಲರಂತೆ ವರ್ತಿಸುತ್ತಿದ್ದಾರೆ. ಬೆಂಚ್ ಗಳ ಮೇಲೆ ನಿಲ್ಲುವುದು, ಸ್ಪೀಕರ್ ಮೇಲೆ ದಾಳಿ ಮಾಡುವುದು ಇದು ಮಿತಿ ಮೀರಿದೆ. ಕಾಂಗ್ರೆಸ್ ಮಹಿಳಾ ಸಂಸದರು ಪ್ರಧಾನ ಮಂತ್ರಿಯ ಆಸನದವರೆಗೆ ಬಂದು ಅವರು ಬರುವುದನ್ನು ತಡೆಯುವ ಪ್ರಯತ್ನ ಮಾಡುತ್ತಿದ್ದಾರೆ. ಈ ರೀತಿ ಸಂಸತ್ತಿನ ಇತಿಹಾಸದಲ್ಲಿ ಯಾವತ್ತೂ ಆಗಿರಲಿಲ್ಲ ಎಂದು ಹೇಳಿದರು.

ಎಕ್ಸಿಸ್ ಬ್ಯಾಂಕ್ ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು–560009.

ತಗಾದೆ ಸೂಚನೆ

ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ, ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಯಿತಾದರೂ, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

ಕ್ರ ಸಂ	ಸಾಲಗಾರರ ಹೆಸರು ಮತ್ತು ವಿಳಾಸ	ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ	ನೋಟೀಸ್ ದಿನಾಂಕ	ಬರಬೇಕಾದ ಬಾಕಿ (ರೂ.ಗಳಲ್ಲಿ)
1.	**1) ಶ್ರೀ ಗೋವಿಂದನ್ ಕುಟ್ಟಿ ಟಿ ಕೆ (ಸಾಲಗಾರರು/ಅಡಮಾನದಾರರು), (2) ಶ್ರೀಮತಿ ಅನಿತಾ ಕೆ, (ಸಹ–ಅರ್ಜಿದಾರರು), ಇವರಿಬ್ಬರ ವಿಳಾಸ:** ಬಿ 104, ಕೀರ್ತಿ ರೆಂಡೆಜ್ವಸ್, 16 ಇ ಕ್ರಾಸ್ ಫೈ ಲೇಔಟ್, ಬೆನ್ನಿಂಗನಹಳ್ಳಿ, ಬೆಂಗಳೂರು ಉತ್ತರ, ಮಿನಿ ಬಜಾರ್ ಹಿಂಭಾಗ, ಬೆಂಗಳೂರು–560016. **ಮತ್ತೊಂದು ವಿಳಾಸ:** 649, 1ನೇ ಮಹಡಿ, ವಿಶ್ವಶ್ರೀ ನಿಲಯ, 1ನೇ ಮುಖ್ಯ ರಸ್ತೆ, ಇಂದಿರಾನಗರ ಬೀದಿ, ಉದಯ ನಗರ, ಬೆಂಗಳೂರು–560016.	**ಷೆಡ್ಯೂಲ್ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಅಪಾರ್ಟ್‌ಮೆಂಟ್ ನಂ.303, ಬ್ಲಾಕ್ "ಎ", ಮೂರನೇ ಮಹಡಿಯನ್ನೊಳಗೊಂಡಿದ್ದು, ವಿಸ್ತೀರ್ಣ 910.32 ಚದರ ಅಡಿ ಸೂಪರ್ ಬಿಲ್ಟ್‌ಅಪ್ ಪ್ರದೇಶ 2 (ಎರಡು) ಬೆಡ್‌ರೂಮ್‌ಗಳು ಜೊತೆಗೆ ಆರ್‌ಸಿಸಿ ರೂಫಿಂಗ್, ಲೀವಿಂಗ್ ರೂಮ್‌ನಲ್ಲಿ ಫ್ಲೋರಿಂಗ್, ಮುಖ್ಯ ದ್ವಾರಕ್ಕೆ ಮರದ ಬಾಗಿಲು ಮತ್ತು ಅಲ್ಯೂಮಿನಿಯಂ ಕಿಟಕಿಗಳು, ಹಾಗೂ ಸಾಮಾನ್ಯ ಪ್ರದೇಶದಲ್ಲಿ ಅವಿಭಾಜಿತ ಭಾಗ, ಪ್ಯಾಸೇಜ್‌ಗಳು, ಲಾಬಿಗಳು ಮತ್ತು ಸ್ಟೇರ್‌ಕೇಸ್‌ಗಳನ್ನು "VAKIL MARIGOLD APARTMENT" ಎಂದು ಕರೆಯಲ್ಪಡುವ ವಾಸಯೋಗ್ಯ ಅಪಾರ್ಟ್‌ಮೆಂಟ್ ಕಾಂಪ್ಲೆಕ್ಸ್‌ನಲ್ಲಿ ಒಳಗೊಂಡಿದ್ದು, ಸ್ಟಿಲ್ಟ್, ನೆಲ ಮತ್ತು ಮೂರು ಮೇಲಿನ ಮಹಡಿಗಳನ್ನು ಒಳಗೊಂಡಿದ್ದು, ಷೆಡ್ಯೂಲ್–ಎ ಆಸ್ತಿಯಲ್ಲಿ ನಿರ್ಮಿಸಲಾಗಿದೆ, ಜೊತೆಗೆ ಒಬ್ಬರ ಬಳಕೆಗೆ 1 (ಒಂದು) ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿದೆ. ಚಕ್ಕುಬಂದಿ: ಪೂರ್ವಕ್ಕೆ: ತೆರೆದ ಜಾಗ, ಪಶ್ಚಿಮಕ್ಕೆ: ಕಾರಿಡಾರ್, ಉತ್ತರಕ್ಕೆ: ತೆರೆದ ಜಾಗ ಮತ್ತು ಸ್ಟೇರ್‌ಕೇಸ್‌ನ ಭಾಗ, ದಕ್ಷಿಣಕ್ಕೆ: ತೆರೆದ ಜಾಗ ಮತ್ತು ಫ್ಲಾಟ್ ನಂ.ಎ–302ರ ಭಾಗ. **ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, 8880041234 ನ್ನು ಸಂಪರ್ಕಿಸಿ.**	28.01.2026 ಎನ್‌ಪಿಎ ದಿನಾಂಕ : 05.01.2026	Power Home Loan A/c No. PHR056101726160 Amount : Rs. 23,88,755 /- ಒಟ್ಟು ಬಾಕಿ ಮೊತ್ತ : ರೂ. 14,78,992/– ದಿನಾಂಕ : 14.01.2026 ರಂದು ಇದ್ದಂತೆ.
2.	**(1) ಶ್ರೀಮತಿ ನಿಶ್ಚಿತಾ ಕೋಂ ಶ್ರೀ ಡಿಂಪಲ್ ಪಿಎ (2) ಶ್ರೀಮತಿ ಪಿ ಡಿ ಗೌರಮ್ಮ** ಕೋಂ ಶ್ರೀ ರಾಮಚಂದ್ರೇಗೌಡ, **ಇವರಿಬ್ಬರ ವಿಳಾಸ:** ಚೇಬಂಗಲ, ಚೇರಂಗಾಲ ಗ್ರಾಮ, ಭಾಗಮಂಡಲ ಅಂಚೆ, ಮಡಿಕೇರಿ, ಕೊಡಗು–571247. **ಮತ್ತೊಂದು ವಿಳಾಸ: ಶ್ರೀಮತಿ ಪಿ ಡಿ ಗೌರಮ್ಮ** ಕೋಂ ಶ್ರೀ ರಾಮಚಂದ್ರೇಗೌಡ 176, ಗಾಣದಗೆರೆ, ಹುಣಸೂರು ತಾಲ್ಲೂಕು, ಮೈಸೂರು–571610.	**ಶ್ರೀಮತಿ ನಿಶ್ಚಿತಾ ಮತ್ತು ಶ್ರೀಮತಿ ಪಿ ಡಿ ಗೌರಮ್ಮ ಅವರ ಹೆಸರಿನಲ್ಲಿರುವ ಆಸ್ತಿಯ ವಿವರ** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ನಂ.53.501–2, ಆಸ್ತಿಯ ಹಳೆ ಮತ್ತು ಅಸೆಸ್‌ಮೆಂಟ್ ನಂ.3845/178, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 9.00 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ: 7.50 ಮೀಟರ್‌ಗಳು, ಈ ಆಸ್ತಿಯು ವಾರ್ಡ್ ನಂ.22, ಮಾರುತಿ ಲೇಔಟ್, ಹುಣಸೂರಿನಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ನಿವೇಶನ ನಂ.209, ಉತ್ತರಕ್ಕೆ: ಸಿದ್ದಮಲ್ಲು ಅವರ ಹೆಸರಿನಲ್ಲಿರುವ ಮನೆ, ದಕ್ಷಿಣಕ್ಕೆ: ಪ್ರಸನ್ನ ಅವರ ಹೆಸರಿನಲ್ಲಿರುವ ಮನೆ. **ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, 8880041234 ನ್ನು ಸಂಪರ್ಕಿಸಿ.**	05.01.2026 ಎನ್‌ಪಿಎ ದಿನಾಂಕ : 29.12.2025	POWER HOME BRE Loan A/c No. PHR015111172231 Amount : Rs. 10,74,915/- ಒಟ್ಟು ಬಾಕಿ ಮೊತ್ತ : ರೂ. 10,41,136/– ದಿನಾಂಕ : 05.01.2026 ರಂದು ಇದ್ದಂತೆ.
3.	**(1) ಶ್ರೀ ಗುರು ರಾಘವೇಂದ್ರ ಇಂಡಸ್ಟ್ರೀಸ್,** ಸರ್ವೆ ನಂ.410/ಎ, ಪಂಚಾಯುತ್ ನಂ.145. ರಾಯಚೂರು ರಸ್ತೆ, ಮಾನವಿ, ರಾಯಚೂರು ಜಿಲ್ಲೆ–584123. **ಇದನ್ನು ಪ್ರತಿನಿಧಿಸುವವರು (2) ಶ್ರೀ ಬಿ ಟಿ ರಾಘವೇಂದ್ರ ಶೆಟ್ಟಿ ಮಾಲೀಕರು** ಬಿನ್ ಬಲ್ಲಟಗಿ ತಲಪಲ್ಲಿ, ನಂ.26, ಮಾನವಿ, ರಾಯಚೂರು ಜಿಲ್ಲೆ–584123. **ಮತ್ತೊಂದು ವಿಳಾಸ:** ನಂ.410/ಇಇ, ಪಂಚಾಯತ್ ನಂ.145, ಗುಡಗಣಿ ಕ್ಯಾಂಪ್, ಮಾನವಿ ತಾಲ್ಲೂಕು, ರಾಯಚೂರು ಜಿಲ್ಲೆ–584123. **(ಸಾಲಗಾರರು/ಅರ್ಜಿದಾರರು)**	**ಷೆಡ್ಯೂಲ್ ಆಸ್ತಿ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಕೃಷಿಯೇತರ ಆಸ್ತಿಯ ಸರ್ವೆ ನಂ.410/ಇಇ, ಪಂಚಾಯತ್ ನಂ.145, ಈ ಆಸ್ತಿಯು ಮಾನವಿ ಕಸಬಾ, ರಾಯಚೂರು ರಸ್ತೆ, ಮಾನವಿ ತಾಲ್ಲೂಕು, ಮಾನವಿ ಸಿಟಿ, ರಾಯಚೂರು ಜಿಲ್ಲೆ, ಕರ್ನಾಟಕದಲ್ಲಿದೆ. ವಿಸ್ತೀರ್ಣ 02 ಎಕರೆಗಳು ಜೊತೆಗೆ ಎರಡು ಗೋಡೋನ್‌ಗಳ ವಿಸ್ತೀರ್ಣ 50 x 140 ಚದರ ಅಡಿ ಮತ್ತು 40 x65 ಚದರ ಅಡಿ, ಒಟ್ಟು ನಿರ್ಮಿತ ಪ್ರದೇಶ 9600 ಚದರ ಅಡಿ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಶ್ರೀ ಬಿ.ಟಿ. ರಾಘವೇಂದ್ರ ಶೆಟ್ಟಿ ಅವರ ಭೂಮಿ, ಪಶ್ಚಿಮಕ್ಕೆ: ಸಿಂಧನೂರು ರಾಯಚೂರು ರಸ್ತೆ, ಉತ್ತರಕ್ಕೆ: ಲಕ್ಷ್ಮಿ ನಾರಾಯಣ ಯಾದವ್ ಅವರ ಭೂಮಿ, ದಕ್ಷಿಣಕ್ಕೆ: ಶ್ರೀ ಬಿ. ಟಿ. ರಾಘವೇಂದ್ರ ಶೆಟ್ಟಿ ಅವರ ಭೂಮಿ. **ಯಾವುದೇ ಮಾಹಿತಿಗಾಗಿ ಶ್ರೀ ಸತ್ಯಾನಂದಂ, 8884564318 ನ್ನು ಸಂಪರ್ಕಿಸಿ.**	09.01.2026 ಎನ್‌ಪಿಎ ದಿನಾಂಕ : 29.07.2019	Cash Credit Loan A/c No. 916030002519141 Amount : Rs. 3,00,00,000/- ಒಟ್ಟು ಬಾಕಿ ಮೊತ್ತ : ರೂ. 3,11,90,202/– ದಿನಾಂಕ: 09.01.2026 ರಂದು ಇದ್ದಂತೆ.
4.	**(1) ಶ್ರೀ ಶೌಕತ್ ಅಲಿ** ಬಿನ್ ಶ್ರೀ ಅಬ್ದುಲ್ಲಾ, **(2) ಶ್ರೀಮತಿ ನಬಿಸಾ** ಬಿನ್ ಶ್ರೀ ಶೌಕತ್ ಅಲಿ, **ಇವರಿಬ್ಬರ ವಿಳಾಸ:** 24–17–1450/4, 2ನೇ ಮಹಡಿ ಟರ್ನಿಂಗ್ ಪಾಯಿಂಟ್ ಕಾಂಪ್ಲೆಕ್ಸ್, ಕುಡ್ಪಾಡಿ ರಸ್ತೆ, ಮಾರ್ನಮಿಕಟ್ಟೆ, ಮಂಗಳೂರು–575001. **ಮತ್ತೊಂದು ವಿಳಾಸ:** ಎಸ್.ಜಿ.ಎಲ್ ಟ್ರೇಡ್ಸ್, ನೂರ್ ಮಹಲ್ ಕಟ್ಟಡದ ನೆಲ ಮಹಡಿ ಕೋಟೆಕರ್ ಬೀರಿ, ಬೀರಿ ದ್ವಾರ ಬಳಿ, ಮಂಗಳೂರು–575022. **ಮತ್ತೊಂದು ವಿಳಾಸ:** ಡೋರ್.ನಂ.7–140ಎ, ನೆಲ ಮಹಡಿ, ಸೋಮೇಶ್ವರ ಗ್ರಾಮ, ಮಂಗಳೂರು–575022.	**ಶ್ರೀ ಶೌಕತ್ ಅಲಿ ಅವರ ಹೆಸರಿನಲ್ಲಿರುವ ಆಸ್ತಿಯ ವಿವರ ಷೆಡ್ಯೂಲ್ (ಆಸ್ತಿಯ ವಿವರ) :** ಕೃಷಿಯೇತರ ಸ್ಥಿರಾಸ್ತಿಯು ಎನ್‌ಹೆಚ್ 66ರ ಪಕ್ಕದ ಸೋಮೇಶ್ವರ ಗ್ರಾಮ, ಉಳ್ಳಾಲ ತಾಲ್ಲೂಕು (ಮಂಗಳೂರು ತಾಲ್ಲೂಕು ಹಿಂಭಾಗ) ಮತ್ತು ಮಂಗಳೂರು ತಾಲ್ಲೂಕಿನ ನೋಂದಣಿ ಉಪ ಜಿಲ್ಲೆ, ದಕ್ಷಿಣ ಕನ್ನಡ ನೋಂದಣಿ ಜಿಲ್ಲೆಯಲ್ಲಿ ಒಳಗೊಂಡಿದೆ: Sy.No.: 98/30AP1 & 98/30B1; Kissam: Converted; Extent A-C: 0-06.89 (278.79 sq. meters); Portion: Out of 0.07.50 acre. **ಫಾರ್ಮ್ ನಂ.3ರ ಪ್ರಕಾರ ಆಸ್ತಿ ನಂ. (ನಿಯಮ 20) : 9433753513, ರೆಕಾರ್ಡ್ ನಂ.22956291 ಸೂಚನೆ :** ಖಾತಾ ಸರ್ವೆ ನಂ. ಪ್ರಕಾರ ಖಾತಾ 98/30ಎಪಿ1 & 98/30ಬಿಪಿ1, ಮೇಲೆ ತಿಳಿಸಿದ ಭೂಮಿ ಜೊತೆಗೆ ಕಟ್ಟಡದ ಡೋರ್ ನಂ.7–140ಎ, ವಿಸ್ತೀರ್ಣ 91.81 ಚದರ ಮೀಟರ್‌ಗಳು (ನೆಲ ಮಹಡಿ) 91.81 ಚದರ ಮೀಟರ್‌ಗಳು (ಮೊದಲನೇ ಮಹಡಿ), ಜೊತೆಗೆ ಎಲ್ಲಾ ಸೌಲಭ್ಯಗಳನ್ನೊಳಗೊಂಡಿದೆ, ಚಕ್ಕುಬಂದಿ: ಉತ್ತರಕ್ಕೆ: ಸರ್ವೆ ನಂ.98/30ಎ ರ ಭಾಗ, ದಕ್ಷಿಣಕ್ಕೆ: ಸರ್ವೆ ನಂ.98/29ಎ1 ರ ಭಾಗ, ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ರಸ್ತೆ. **ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, 8880041234 ನ್ನು ಸಂಪರ್ಕಿಸಿ.**	09.01.2026 ಎನ್‌ಪಿಎ ದಿನಾಂಕ : 03.06.2026	POWER HOME VANILLA BRE Loan A/c No. PHR007710006947 Amount : Rs. 65,00,000/- ಒಟ್ಟು ಬಾಕಿ ಮೊತ್ತ : ರೂ. 54,36,270/– ದಿನಾಂಕ : 09.01.2026 ರಂದು ಇದ್ದಂತೆ.

ದಯವಿಟ್ಟು ಗಮನಿಸಿ, ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್–13 ರ ಉಪ–ಸೆಕ್ಷನ್ 13 ರಲ್ಲಿ ಉಲ್ಲೇಖಿಸಿರುವಂತೆ, ಈ ಸೂಚನೆಯಲ್ಲಿ ಉಲ್ಲೇಖಿಸಲಾದ ಭದ್ರತೆಯ ಅಡಿಯಲ್ಲಿ ಹೇಳಲಾದ ಯಾವುದೇ ಸ್ವತ್ತುಗಳನ್ನು ನಮ್ಮ ಬ್ಯಾಂಕಿನ ಪೂರ್ವ ಲಿಖಿತ ಅನುಮತಿಯಿಲ್ಲದೆ ನೀವು ಮಾರಾಟ, ಗುತ್ತಿಗೆ ಅಥವಾ ಇತರ ರೀತಿಯಲ್ಲಿ ವರ್ಗಾಯಿಸಬಾರದು.

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೂಚನೆಯು ಆದೇಶಾನುಸಾರವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಮೇಲೆ ಉಲ್ಲೇಖಿಸಲಾದ ಸಾಲಗಾರರು ಮತ್ತು/ಅಥವಾ ಖಾತರಿದಾರರು (ಎಲ್ಲೆಲ್ಲಿ ಅನ್ವಯವಾಗುತ್ತದೆಯೋ) ಈ ಮೇಲೆ ತಿಳಿಸಲಾದ ಬಾಕಿ ಉಳಿದಿರುವ ಮೊತ್ತವನ್ನು ಭವಿಷ್ಯದ ಬಡ್ಡಿ ಮತ್ತು ಅನ್ವಯವಾಗುವ ಶುಲ್ಕಗಳೊಂದಿಗೆ, ಈ ಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿಸುವಂತೆ ಸಲಹೆ ನೀಡಲಾಗಿದ್ದು, ವಿಫಲವಾದಲ್ಲಿ ಸೂಚನಾ ತಾರೀಖಿನಿಂದ 60 ದಿನಗಳ ಅವಧಿ ಮುಕ್ತಾಯದ ನಂತರ, 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ನಿಬಂಧನೆಗನುಸಾರವಾಗಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಮೇಲೆ ತಿಳಿಸಲಾದ ಕಾಯ್ದೆಯ ವಿಭಾಗ 13(13), ಉಪ–ವಿಭಾಗ(2)ರ ಅಡಿಯಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಒಬ್ಬ ಸಾಲಗಾರ ಈ ಸೂಚನೆಯು ತಲುಪಿದ ನಂತರ, ಭದ್ರತಾ ಸಾಲ ನೀಡಿದವರ ಲಿಖಿತ ಪೂರ್ವಾನುಮತಿ ಪಡೆಯದೇ, ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಭದತಾ ಆಸ್ತಿಗಳನ್ನು ಮಾರಾಟದ ಮೂಲಕ ವರ್ಗಾಯಿಸುವುದಾಗಲಿ, ಭೋಗ್ಯಕ್ಕೆ ನೀಡುವುದಾಗಲಿ ಅಥವಾ ಬೇರೆ ರೀತಿಯಲ್ಲಿ ಬಳಸಿಕೊಳ್ಳುವುದಾಗಲಿ ಮಾಡುವಂತಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.

ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು. ಸಾರ್ವಜನಿಕ ಹರಾಜಿಗಾಗಿ ಅಥವಾ ಭೋಗ್ಯ, ಹಂಚಿಕೆ ಅಥವಾ ಮಾರಾಟದ ಮೂಲಕ ಭದ್ರತಾ ಸ್ವತ್ತುಗಳ ವರ್ಗಾವಣೆಗಾಗಿ ಸಾರ್ವಜನಿಕ ಅಥವಾ ಖಾಸಗಿ ಒಪ್ಪಂದಕ್ಕೆ ಉಲ್ಲೇಖಗಳನ್ನು ಅಥವಾ ಟೆಂಡರ್ ಆಹ್ವಾನಿಸುವ ಸೂಚನಾ ಪ್ರಕಟಣೆಯ ದಿನಾಂಕಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ಸಾಲಗಾರರು, ಸುರಕ್ಷಿತ ಸಾಲದಾತರ ಖರ್ಚು, ವೆಚ್ಚ ಮತ್ತು ಶುಲ್ಕಗಳನ್ನು ಒಳಗೊಂಡಂತೆ ಎಲ್ಲಾ ಬಾಕಿಯನ್ನು ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಬಹುದು.

ದಿನಾಂಕ : 11.02.2026
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಎಕ್ಸಿಸ್ ಬ್ಯಾಂಕ್ ಲಿಮಿಟೆಡ್

ಸಮಾಚಾರ ಸಣ್ಣದಲ್ಲ

ಮಾ.2, 3 ಕುಕ್ಕೆ ದೇವರ ದರ್ಶನ, ಸೇವೆ ವ್ಯತ್ಯಯ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಚಂದ್ರಗ್ರಹಣದ ಅಂಗವಾಗಿ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಮಾರ್ಚ್ 2 ಮತ್ತು 3ರಂದು ದೇವರ ದರ್ಶನ ಹಾಗೂ ಸೇವೆಗಳಲ್ಲಿ ವ್ಯತ್ಯಯವಾಗಲಿದೆ ಎಂದು ದೇವಳದ ಆಡಳಿತ ತಿಳಿಸಿದೆ. ಮಾರ್ಚ್ 2 ಮತ್ತು 3ರಂದು ಸರ್ಪಸಂಸ್ಕಾರ ಪೂಜೆ ನಡೆಯುವುದಿಲ್ಲ. 3ರಂದು ಯಾವುದೇ ಸೇವೆಗಳು ಇರುವುದಿಲ್ಲ. ಅಂದು ಮಧ್ಯಾಹ್ನದ ಮಹಾಪೂಜೆ ಬೆಳಗ್ಗೆ 8ಕ್ಕೆ ನಡೆಯಲಿದೆ. 9 ಗಂಟೆಯ ಬಳಿಕ ದೇವರ ದರ್ಶನಕ್ಕೆ ಅವಕಾಶ ಇರುವುದಿಲ್ಲ. ಬೆಳಗ್ಗೆಯ ಉಪಾಹಾರ 9 ಗಂಟೆವರೆಗೆ ಸಿಗಲಿದೆ. ಮಧ್ಯಾಹ್ನ ಭೋಜನ ವ್ಯವಸ್ಥೆ ಇರುವುದಿಲ್ಲ. ಸಂಜೆ 7ರ ನಂತರ ದೇವರ ಮಹಾ ಪೂಜೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮಾ.5ಕ್ಕೆ ಗುತ್ತಿಗೆದಾರರ ಸಂಘದಿಂದ ಹೋರಾಟ

ಮಂಡ್ಯ: ರಾಜ್ಯ ಸರಕಾರ ಗುತ್ತಿಗೆದಾರರ ಬಿಲ್ ಬಾಕಿ ಉಳಿಸಿ ಕೊಂಡಿರುವ ಹಿನ್ನೆಲೆಯಲ್ಲಿ ರಾಜ್ಯ ಗುತ್ತಿಗೆದಾರರ ಸಂಘದಿಂದ ಮಾರ್ಚ್ 5 ರಂದು ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಬೃಹತ್ ಹೋರಾಟಕ್ಕೆ ಕರೆ ನೀಡಲಾಗಿದೆ. ರಾಜ್ಯ ಸರಕಾರದ ವಿರುದ್ಧ ತಿರುಗಿ ಬಿದ್ದಿರುವ ಗುತ್ತಿಗೆದಾರರು, 37 ಸಾವಿರ ಕೋಟಿ ಬಾಕಿ ಉಳಿಸಿಕೊಂಡ ಹಣವನ್ನು ನೀಡಬೇಕು ಎಂದು ಆಗ್ರಹಿಸಿದ್ದಾರೆ. ಈ ಬಗ್ಗೆ ಮಾತನಾಡಿದ ಕರಾಜ್ಯ ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಆರ್.ಮಂಜುನಾಥ್, ಕಾಂಗ್ರೆಸ್ ಸರಕಾರ ಹಿಂದಿನ ಬಿಜೆಪಿ ಸರಕಾರಕ್ಕಿಂತಲೂ ಹೆಚ್ಚು ಭ್ರಷ್ಟವಾಗಿದೆ. ಹಿಂದೆ ನಮ್ಮ ಬೆನ್ನಿಗೆ ನಿಂತು ಈಗ ಅವರೇ ಭ್ರಷ್ಟರಾಗಿದ್ದಾರೆ. ನಮ್ಮಿಂದಲೇ ಅಧಿಕಾರಕ್ಕೆ ಬಂದು ನಮ್ಮನ್ನೇ ಕಡೆಗಣಿಸಿದ್ದಾರೆ. ಸರಕಾರ ಎಚ್ಚೆತ್ತು ತತ್‌ಕ್ಷಣವೇ ಬಾಕಿ ಹಣ ಬಿಡುಗಡೆ ಮಾಡಬೇಕು. ಇಲ್ಲದಿದ್ದರೆ ನಮ್ಮ ಶಕ್ತಿಯನ್ನು ತೋರಿಸುತ್ತೇವೆ ಎಂದು ಎಚ್ಚರಿಕೆ ನೀಡಿದ್ದಾರೆ. ಸಭೆಯಲ್ಲಿ ಗುತ್ತಿಗೆದಾ ರರ ನೂರೆಂಟು ಸಮಸ್ಯೆಗಳ ಬಗ್ಗೆ ಚರ್ಚೆ ಮಾಡ ಲಾಗಿದೆ. ಎಲ್‌ಒಸೊ ಕೊಡಿಸಿಕೊಡುವ ಬಗ್ಗೆ ಎಂಡಿಪಿ (ಮೆಟಿರಿಯಲ್ ಡಂಪಿಂಗ್ ಪ್ಲಾಂಟ್) ರದ್ದು ಪಡಿಸಬೇಕು, ಗುತ್ತಿಗೆದಾರರ ಮ್ಯಾನೇಜ್‌ಮೆಂಟ್ ರದ್ದು, ಪ್ಯಾಕೇಜ್ ಟೆಂಡರ್ ರದ್ದು, ಬಾಕಿ ಇರುವ ಪೆಂಡಿಂಗ್ ಬಿಲ್ ಕೊಡಿಸುವ ಬಗ್ಗೆ ಸೇರಿ ಹಲವು ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿ ಸಮಸ್ಯೆಗಳನ್ನು ಪರಿಹರಿಸಲು ಗುತ್ತಿಗೆದಾರರು ರಾಜ್ಯಾಧ್ಯಕ್ಷರಿಗೆ ಮನವಿ ಸಲ್ಲಿಸಿದರು.

ದಿನ ವಿಶೇಷ

12 ಫೆಬ್ರವರಿ 2026 ಬುಧವಾರ

» ಸೂರ್ಯೋದಯ	:	06-46
» ಸೂರ್ಯಾಸ್ತ	:	06-25
» ತಿಥಿ	:	ದಶಮಿ
» ನಕ್ಷತ್ರ	:	ಜ್ಯೇಷ್ಠಾ
» ಸಂವತ್ಸರ	:	ವಿಶ್ವಾವಸು
» ಆಯನ	:	ಉತ್ತರಾಯಣ
» ಋತು	:	ಶಿಶಿರ
» ಮಾಸ	:	ಮಾಘ
» ಪಕ್ಷ	:	ಕೃಷ್ಣಪಕ್ಷ

ವಿಶ್ವವಾಣಿ ಕ್ಲಬ್ ಹೌಸ್
12.02.2026
ಸಂಜೆ: 06.55 ರಿಂದ 08.05 ರವರೆಗೆ
ಗುರುವಾರದ ಅತಿಥಿ

ಶ್ರೀಮತಿ ನಾಗಶ್ರೀ ಅಜಯ್
ವಿಷಯ
ಬರಹ, ನಿರೂಪಣೆ,ಇತ್ಯಾದಿ
vishwavani.news

ನಾಡ ಸಮಸ್ಯೆಗೆ ಸಿಎಂ ಪರಿಹಾರ

● **ಸ್ಥಳ : ನೀರಮಾನವಿ, ರಾಯಚೂರು**

ಸಮಸ್ಯೆಯೇನು..? : ನೀರಮಾನವಿ ಗ್ರಾಮದ ವಾರ್ಡ್ ನಂಬರ್ 4ರಲ್ಲಿ ಸಾರ್ವಜನಿಕರು ಸಂಚರಿಸಲು ರಸ್ತೆ ಅನುಕೂಲ ಮಾಡಿಸುವ ಬಗ್ಗೆ.

● **ಪರಿಹಾರ:** ಮಾನವಿ ತಾಲೂಕಿನ ನೀರಮಾನವಿ ಗ್ರಾಮದಲ್ಲಿ ಯಲ್ಲಮ್ಮ ದೇವಿ ಜಾತ್ರೆ ನಡೆಯುತ್ತಿರುವುದರಿಂದ ಖಾಸಗಿ ವ್ಯಕ್ತಿಗಳ ಜಾಗದಲ್ಲಿ ಸಂಚರಿಸಲು ಅನುವು ಮಾಡಿಕೊಡುವಂತೆ ಸ್ಥಳೀಯರೊಬ್ಬರು ಮನವಿ ಮಾಡಿದ್ದರು. ಈ ಹಿನ್ನೆಲೆ ಸ್ಥಳ ಪರಿಶೀಲನೆ ನಡೆಸಿದ ಗ್ರಾ.ಪಂ ಅಧಿಕಾರಿಗಳು, ಖಾಸಗಿ ವ್ಯಕ್ತಿಗಳ ಮನವೊಲಿಸಿ ತಾತ್ಕಾಲಿಕವಾಗಿ ಜನ ಸಂಚರಿಸಲು ರಸ್ತೆ ಅನುಕೂಲ ಮಾಡಿಸಿಕೊಟ್ಟಿದ್ದಾರೆ.

ಹೊರಗಿನಿಂದ ಬಂದವರಿಗೆ ಪಕ್ಷದಲ್ಲಿ ಆದ್ಯತೆ | ಯತೀಂದ್ರ ಮಾತೇ ನಮಗೆ ವೇದವಾಕ್ಯ: ಡಿ.ಕೆ.ಸುರೇಶ್ ವ್ಯಂಗ್ಯ

ತಡವಾದ್ರೂ ಸಿಎಂ ಮಾತು ಉಳಿಸಿಕೊಳ್ಳುತ್ತಾರೆ: ಡಿಕೆಸು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿಧಾನವಾದರೂ ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಾರೆ ಎನ್ನುವ ಮೂಲಕ ನಾಯಕತ್ವ ಬದಲಾವಣೆ ವಿಷಯವನ್ನು ಜೀವಂತವಾಗಿಡುವ ಪ್ರಯತ್ನವನ್ನು ಮಾಜಿ ಸಂಸದ ಡಿ.ಕೆ.ಸುರೇಶ್ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ಕೊಟ್ಟ ಮಾತಿನಂತೆ ನಡೆಯುತ್ತಾರೆ ಎಂದು ಇವತ್ತಿಗೂ ನನಗೆ ಭರವಸೆ ಇದೆ. ಮುಂದೆ ಎಲ್ಲವನ್ನೂ ಕಾಲವೇ ಉತ್ತರಿಸುತ್ತದೆ, ಒಳ್ಳೆಯದಾಗಲಿದೆ ಎಂದು ಭಾವಿಸಿದ್ದೇನೆ. ಕಾಂಗ್ರೆಸ್ ಪಕ್ಷ ಸರ್ವ ಧರ್ಮ, ಸರ್ವ ಪಕ್ಷಗಳ ನಾಯಕರನ್ನು ಒಳಗೊಂಡಿದೆ. ಇಲ್ಲಿ ಬಿಜೆಪಿ, ಜನತಾ ದಳ, ಬಿಎಸ್‌ಪಿ ಸೇರಿದಂತೆ ಎಲ್ಲರೂ ಇದ್ದಾರೆ. ನಮ್ಮಲ್ಲಿ ಮೊದಲ ಆದ್ಯತೆ ಅವರಿಗೆ. ಹೊರಗಿನಿಂದ ಬಂದವರಿಗೆ ಮೊದಲ ಆದ್ಯತೆ, ಆಮೇಲೆ ಕಾಂಗ್ರಸಿಗರಿಗೆ ಆದ್ಯತೆ. ಅತಿಥಿಗಳನ್ನು ಗೌರವಿಸುವುದೇ ಕಾಂಗ್ರೆಸ್ ಪಕ್ಷದ ಗುರಿ ಎಂದು ವ್ಯಂಗ್ಯವಾಡಿದರು.

ಯತೀಂದ್ರ ಸಿದ್ದಾಮಯ್ಯ ಅವರ ಹೇಳಿಕೆಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು, ಈಗಾಗಲೇ ಈ ವಿಷಯಕ್ಕೆ ಸಂಬಂಧಿಸಿದಂತೆ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಅವರಷ್ಟು ತಿಳುವಳಿಕೆ ಇಲ್ಲ. ಅವರಷ್ಟು ದೊಡ್ಡವರು ನಾವಲ್ಲ. ಅವರು ಏನು ಹೇಳುತ್ತಾರೋ ಅದೇ ವೇದವಾಕ್ಯ. ನಮಗೆ ಸಿಗುವ ನೋಟಿಸ್ ಯತೀಂದ್ರ ಅವರಿಗೆ ಏಕಿಲ್ಲ ಎಂಬ ಶಾಸಕ ಇಕ್ಬಾಲ್ ಹುಸೇನ್ ಅವರ ಹೇಳಿಕೆ ಬಗ್ಗೆ ಕೇಳಿದಾಗ, ಅವರು ಹೇಳಿರುವುದರಲ್ಲಿ ತಪ್ಪೇನಿಲ್ಲ. ಎಲ್ಲರಿಗೂ ಒಂದೇ ನೀತಿ ಇರಬೇಕು. ಅವರೇ ಹೈಕಮಾಂಡ್ ಆಗಿರುವುದರಿಂದ ಏನೂ ಸಮಸ್ಯೆ ಇಲ್ಲ ಎಂದರು.

ಅವಿಶ್ವಾಸ ನಿರ್ಣಯದಲ್ಲಿ ಏನೂ ಆಗುವುದಿಲ್ಲ. ಅವರಿಗೆ (ಸ್ಪೀಕರ್) ಬಹುಮತವಿದೆ. ಹೀಗಾಗಿ ಅವಿಶ್ವಾಸ ನಿರ್ಣಯ ಸೋಲಲಿದೆ. ಹಾಗೆಂದ ಮಾತ್ರಕ್ಕೆ ಅವರ ಆರೋಪ ವಸ್ತುಸ್ಥಿತಿಯೇ ಅಲ್ಲವೇ ಎಂಬುದು ಮುಖ್ಯ. ಅದು ವಸ್ತುಸ್ಥಿತಿಯಲ್ಲವಾದರೆ ಅವರು ಸುಳ್ಳು ಆರೋಪ ಮಾಡಿರುವ ಹಿನ್ನೆಲೆಯಲ್ಲಿ ಕ್ಷಮೆ ಕೋರಬೇಕು. ಲೋಕಸಭೆ ಘನತೆ ಎತ್ತಿ ಹಿಡಿಯಬೇಕಾಗಿರುವುದು ಸ್ಪೀಕರ್ ಅವರ ಕರ್ತವ್ಯ.

– ಡಿ.ಕೆ.ಸುರೇಶ್, ಮಾಜಿ ಸಂಸದ

ಡಿ.ಕೆ.ಶಿವಕುಮಾರ್ ದೆಹಲಿ ಪ್ರವಾಸಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ, ಅವರು ದೆಹಲಿ ಪ್ರವಾಸಕ್ಕೆ ಹೋಗುವಾಗ ಚುನಾವಣೆ ವಿಚಾರವಾಗಿ ಸಭೆ ಮಾಡಲು ಕರೆದಿದ್ದಾರೆ ಎಂದು ನಿಮಗೆ ಮಾಹಿತಿ ನೀಡಿದ್ದಾರೆ. ಡಿ.ಕೆ. ಶಿವಕುಮಾರ್ ಅವರು ಉಪಮುಖ್ಯಮಂತ್ರಿ ಆದಾಗ ಮಾತ್ರ ದೆಹಲಿಗೆ ಹೋಗುತ್ತಿಲ್ಲ. ಕಳೆದ 40 ವರ್ಷಗಳಿಂದ ನಿರಂತರವಾಗಿ ದೆಹಲಿಗೆ ಹೋಗುತ್ತಿದ್ದಾರೆ. ತಿಂಗಳಿಗೆ ಒಂದು ಅಥವಾ ಎರಡು ಬಾರಿ ಹೋಗುತ್ತಾರೆ. ಈಗ ಅವರು ಪಕ್ಷದ ಅಧ್ಯಕ್ಷರು ಹಾಗೂ ಉಪಮುಖ್ಯಮಂತ್ರಿಗಳು ಸರಕಾರದ ಕೆಲಸಗಳು ಇರುತ್ತವೆ. ಇನ್ನು ದೆಹಲಿಗೆ ಹೋದಾಗ, ರಾಜಕೀಯವಾಗಿ ಅಲ್ಲದಿದ್ದರೂ ಕುಶಲೋಪರಿ ಚರ್ಚೆಗೆ ಭೇಟಿ ಮಾಡುತ್ತಾರೆ. ಸಂಸತ್ ಅಧಿವೇಶನ ನಡೆಯುತ್ತಿರುವಾಗ ಇಲಾಖೆಗಳಿಗೆ ಸಂಬಂಧಿಸಿದ ಚರ್ಚೆ ಮಾಡಲು ಮಂತ್ರಿಗಳನ್ನು ಭೇಟಿ ಮಾಡಲಾಗುವುದು. ಭದ್ರಾ ಮೇಲ್ದಂಡೆ ಯೋಜನೆ, ಬೆಂಗಳೂರಿನ ವಿಚಾರವಾಗಿ ಚರ್ಚೆ ಮಾಡುತ್ತಾರೆ. ಆದ್ದರಿಂದ ದೆಹಲಿ ಪ್ರವಾಸ ಹೊಸತಲ್ಲ ಎಂದು ಸ್ಪಷ್ಟಪಡಿಸಿದರು.

ಪ್ರವಾಸಕ್ಕೂ ಡಿಕೆಗೂ ಸಂಬಂಧವಿಲ್ಲ: ನಾಯಕತ್ವ ಬದಲಾವಣೆ ಚರ್ಚೆ ವೇಳೆ ಕೆಲವು ಶಾಸಕರು ವಿದೇಶ ಪ್ರವಾಸಕ್ಕೆ ಮುಂದಾಗಿದ್ದಾರೆ ಎಂಬ ಪ್ರಶ್ನೆಗೆ, ವಿದೇಶ ಪ್ರವಾಸಕ್ಕೆ ಹೋಗುತ್ತಿರುವವರು ಯಾರು? ಕರೆದುಕೊಂಡು ಹೋಗುವವರು ಯಾರು? ಯಾರೋ ಹೇಳಿದ್ದನ್ನು ಶಿವಕುಮಾರ್ ಅವರ ಮೇಲೆ ಯಾಕೆ ಹೇಳುತ್ತೀರಿ. ಡಿ.ಕೆ. ಶಿವಕುಮಾರ್ ಅವರಿಗೂ ಶಾಸಕರ ಪ್ರವಾಸಕ್ಕೆ ಯಾವುದೇ ಸಂಬಂಧವಿಲ್ಲ. ಈ ವಿಚಾರ ವಾಗಿ ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಶಾಸಕರ ಪ್ರವಾಸ ವೈಯಕ್ತಿಕವಾಗಿಯೂ ಇರಬಹುದು, ಬೇರೆಯವರ ಪ್ರಯೋಜಕತ್ವವೂ ಇರಬಹುದು ಎಂದು ಸ್ಪಷ್ಟಪಡಿಸಿದರು.

ಕೆಎಂಎಫ್ ಆಕಾಂಕ್ಷಿಯಲ್ಲ

ಇನ್ನು ಕೆಎಂಎಫ್ ಅಧ್ಯಕ್ಷ ಚುನಾವಣೆಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ, ನಾನು ಕೆಎಂಎಫ್ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಲ್ಲ. ಪಕ್ಷ ಹಾಗೂ ಸರಕಾರದ ತೀರ್ಮಾನದಂತೆ ಆಗುತ್ತದೆ. ಇದರಲ್ಲಿ ಲಾಭ ಮಾಡಿ ಗಿಟ್ಟಿಸಿಕೊಳ್ಳುವಂತಹದ್ದು ಏನೂ ಇಲ್ಲ. ಇದು ರಾಜ್ಯದ ರೈತರ ಜವಾಬ್ದಾರಿಯುತ ಸಂಸ್ಥೆ. ರೈತರ ಹಿತ ಕಾಯುವುದು ಮುಖ್ಯ. ಅದನ್ನು ಗಮನದಲ್ಲಿಟ್ಟುಕೊಂಡು ಪಕ್ಷ ಹಾಗೂ ಸರಕಾರ ಕೈಗೊಳ್ಳುವ ತೀರ್ಮಾನಕ್ಕೆ ಎಲ್ಲರೂ ಬದ್ಧ. ನಾನು ಯಾರಿಗೂ ಈ ಜವಾಬ್ದಾರಿ ಬೇಕು ಎಂದು ಕೇಳುವುದಿಲ್ಲ, ಅದರ ಅಗತ್ಯವಿಲ್ಲ. ಸಂಸದನಾಗಿ ನಾನು ಕೆಲಸ ಮಾಡಿದ್ದೇನೆ, ನನಗೆ ನನ್ನದೇ ಆದ ಜವಾಬ್ದಾರಿ ಇತಿಮಿತಿಗಳಿವೆ. ನಾನು ಯಾವುದನ್ನು ಆಸೆಪಟ್ಟು ಕೇಳುವುದಿಲ್ಲ, ಅದರ ಹಿಂದೆ ಹೋಗುವವನೂ ಅಲ್ಲ ಎಂದರು.

ಬಾವಿಗಿಳಿದು ಪ್ರತಿಭಟನೆ ಮಾಡುವುದು ಸಂಸದರ ಹಕ್ಕು

ಸದನದ ಬಾವಿಗಿಳಿದು ಪ್ರತಿಭಟನೆ ಮಾಡುವುದು ಸದಸ್ಯರ ಹಕ್ಕು. ಸಂಸತ್ತಿನಲ್ಲೇ ಆಗಲಿ, ವಿಧಾನಮಂಡಲ ಅಧಿವೇಶನದಲ್ಲೇ ಆಗಲಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಾವಿಗಿಳಿದು ಹೋರಾಟ ಮಾಡಲು ಅವಕಾಶವಿದೆ. ಬಾವಿಗಿಳಿದು ಪ್ರಧಾನಿ ಮುಂದೆ ನಿಂತರು ಎಂದ ಮಾತ್ರಕ್ಕೆ ಪ್ರಧಾನ ಮಂತ್ರಿ ಮೇಲೆ ಹಲ್ಲೆ ಮಾಡುವ ಸಹೋದರಿ ಸಂಸದೆ ಯರು ಯಾರು ಇಲ್ಲ. ನಾನು ಲೋಕಸಭೆಯಲ್ಲಿ 11 ವರ್ಷ ಕೆಲಸ ಮಾಡಿದ್ದೇವೆ. ಪ್ರಧಾನಿ ಮುಂದೆ ನಿಂತಿದ್ದೇವೆ. ಅವರ ಮುಂದೆ ನಿಂತ ಮಾತ್ರಕ್ಕೆ ಹಲ್ಲೆ ಮಾಡಿದಂತೆ ಅಲ್ಲ. ವಿಧಾನಸಭೆಯಲ್ಲೂ ಮುಖ್ಯಮಂತ್ರಿಗಳ ಮುಂದೆ ಹೋಗಿ ಪ್ರತಿಭಟನೆ ಮಾಡುತ್ತಾರೆ. ಆಗ ಸ್ಪೀಕರ್ ಅವರು ಪಕ್ಕಕ್ಕೆ ಬರುವಂತೆ ಸೂಚನೆ ನೀಡುತ್ತಾರೆ. ಕೇಂದ್ರ ಸರಕಾರದ ಬಜೆಟ್ ನಲ್ಲಿ ಯಾವುದೇ ಯೋಜನೆಗಳು ಇಲ್ಲವಾದ ಕಾರಣ ಜನರ ಗಮನ ಬೇರೆಡೆ ಸೆಳೆಯಲು ಈ ರೀತಿ ಮಾಡುತ್ತಿದ್ದಾರೆ. ಮಹಿಳಾ ಸಂಸದರು ಪ್ರಧಾನಿಗಳ ಮೇಲೆ ಹಲ್ಲೆ ಮಾಡುವ ಪರಿಸ್ಥಿತಿ ಇದೆಯೇ? ಇಲ್ಲವೇ ಎಂದು ಆಲೋಚಿಸಬೇಕು. ಸ್ಪೀಕರ್ ಅವರು ನಿಷ್ಪಕ್ಷಪಾತವಾಗಿ ನ್ಯಾಯ ಸಮ್ಮತವಾಗಿ ತೀರ್ಪು ನೀಡಬೇಕು ಎಂದು ತಿಳಿಸಿದರು.

ರಾಜ್ಯ ಸರಕಾರಕ್ಕೆ ಸಂಸತ್ತಿನ ಬಗ್ಗೆ ಮಾತನಾಡುವ ಅರ್ಹತೆ ಇಲ್ಲ

ಬೆಂಗಳೂರು: ಸತ್ಯವನ್ನು ಎದುರಿಸಲಾಗದೆ ಬೆನ್ನು ತೋರಿಸುವುದು ಬಿಜೆಪಿಯ ಸಂಸ್ಕೃತಿಯಲ್ಲ, ಸಂಸ ತ್ತಿನ ಪಾವಿತ್ರ್ಯತೆ ಗಾಳಿಗೆ ತೂರಿ, ಸುಳ್ಳುಗಳನ್ನೇ ಸತ್ಯ ವೆಂದು ನಂಬಿಸಲು ಹೊರಟಿರುವುದು ಕಾಂಗ್ರೆಸ್ ಪಕ್ಷದ ಚಾಳಿ ಎಂದು ಪರಿಷತ್ ಸದಸ್ಯ ಡಿ.ಎಸ್.ಅರುಣ್ ಹೇಳಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಸಿಎಂ ಸಿದ್ದರಾಮಯ್ಯನರು ಪ್ರಧಾನಿಯವರನ್ನು ಟೀಕಿಸುವ ಭರದಲ್ಲಿ ಪ್ರಜಾಪ್ರಭುತ್ವದ ಪಾಠ ಮಾಡುತ್ತಿರುವುದು ಈ ಶತಮಾನದ ದೊಡ್ಡ ಹಾಸ್ಯ. ಸಂಸತ್ತಿನ ಮರ್ಯಾದೆಯ ಬಗ್ಗೆ ಭಾಷಣ ಮಾಡುವ ಕಾಂಗ್ರೆಸ್ ಪಕ್ಷಕ್ಕೆ ತುರ್ತು ಪರಿಸ್ಥಿತಿಯ ಕರಾಳ ಇತಿಹಾಸ ಮರೆತುಹೋಗಿದೆಯೇ? ಅಂದು ಅಧಿಕಾರಕ್ಕಾಗಿ ಇಡೀ ಸಂಸತ್ತನ್ನು ಮೌನಗೊಳಿಸಿ, ಪ್ರಜಾಪ್ರಭುತ್ವದ ಕಂಠ ಹತ್ತಿಕ್ಕಿದ ಇತಿಹಾಸ ನಿಮ್ಮದಾಗಿದೆ. ನಿಮ್ಮ ನಾಯಕ ರಾಹುಲ್ ಗಾಂಧಿ ಅವರು ಸಂಸತ್ತಿನಲ್ಲಿ ಮಾತ್ರವಲ್ಲದೆ, ವಿದೇಶಿ ನೆಲದಲ್ಲಿ ಭಾರತದ ನ್ಯಾಯಾಂಗ ಮತ್ತು ಸಾಂವಿಧಾನಿಕ ಸಂಸ್ಥೆಗಳ ವಿರುದ್ಧ ವಿಷಕಾರುತ್ತಾ ದೇಶದ ಘನತೆಯನ್ನು ಹರಾಜು ಹಾಕುತ್ತಿರುವುದು ನಿಮ್ಮ ಕಣ್ಣಿಗೆ ಕಾಣಿಸುತ್ತಿಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಭಾರತ-ಅಮೆರಿಕ ವ್ಯಾಪಾರ ಒಪ್ಪಂದದ ಸ್ಪಷ್ಟನೆ: ಭಾರತ-ಅಮೆರಿಕ ವ್ಯಾಪಾರ ಒಪ್ಪಂದವನ್ನು ಶರಣಾಗತಿ ಎಂದು ಕರೆದಿರುವ ಸಿದ್ದರಾಮಯ್ಯನವರ ಹೇಳಿಕೆ ಅವರ ಹತಾಶೆಯ ಪರಮಾವಧಿ. ಮೋದಿ ದೇಶದ ಹಿತಾಸಕ್ತಿ ಬಲಿಗೊಟ್ಟು ಯಾವುದೇ ಒಪ್ಪಂದ ಮಾಡಿಕೊಳ್ಳುವುದಿಲ್ಲ. ಬದಲಾಗಿ ಈ ಒಪ್ಪಂದವು ಭಾರತದ ಆರ್ಥಿಕತೆ ಜಾಗತಿಕ ಮಟ್ಟಕ್ಕೆ ಕೊಂ ಡೊಯ್ಯುವ ದೂರದೃಷ್ಟಿ ಹೊಂದಿದೆ. ಅಸಮತೋಲಿತ ಸುಂಕ ಮತ್ತು ರೈತರ ಸಂಕಷ್ಟದ ಬಗ್ಗೆ ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ ಎಂದು ಟೀಕಿಸಿದ್ದಾರೆ.

ರಾಹುಲ್ ಗಾಂಧಿ ಅವರ ಭಾಷಣಕ್ಕೆ ತಡೆ ನೀಡಲಾಗಿದೆ ಎನ್ನುವುದು ಹಸಿ ಸುಳ್ಳು. ವಾಸ್ತವವಾಗಿ ಇದು ಸ್ಪೀಕರ್ ಅವರ ಅಧಿಕಾರ ಮತ್ತು ಸಂಸತ್ತಿನ ನಿಯಮಗಳಿಗೆ ಸಂಬಂಧಿಸಿದ ವಿಷಯ. ಸಂಸದೀಯ ನಿಯಮಗಳನ್ನು ಗಾಳಿಗೆ ತೂರಿ ಸದನವನ್ನು ಹಾದಿ ತಪ್ಪಿಸಲು ಯತ್ನಿಸಿದಾಗ ಸಂವಿಧಾನಾತ್ಮಕ ಚೌಕಟ್ಟಿನಲ್ಲಿ ನೀಡಿದ ಎಚ್ಚರಿಕೆಯನ್ನು ಧ್ವನಿ ಹತ್ತಿಕ್ಕುವಿಕೆ ಎನ್ನುವುದು ನಿಮ್ಮ ಜಾಣ ಕುರುಡುತನವಾಗಿದೆ.

– ಡಿ.ಎಸ್.ಅರುಣ್, ವಿಧಾನ ಪರಿಷತ್ ಸದಸ್ಯ

ಹೈಕಮಾಂಡ್ ಭೇಟಿ ಬಳಿಕ ಪ್ರತಿಕ್ರಿಯೆ ನೀಡುತ್ತೇನೆ: ಡಿಕೆಶಿ

ಕಾಲವೇ ಎಲ್ಲದಕ್ಕೂ ಉತ್ತರಿಸುತ್ತದೆ

ಬೆಂಗಳೂರು: ತಾಳ್ಮೆಯಿಂದ ಇರಿ, ಎಲ್ಲದಕ್ಕೂ ಕಾಲವೇ ಉತ್ತರಿಸಲಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿ.ಕೆ. ಸುರೇಶ್ ಹೇಳಿಕೆಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದರು. ಕಾಲವೇ ಉತ್ತರ ನೀಡುತ್ತದೆ ಎಂದು ಹೇಳಿದ್ದೇನೆ. ನಾವುಗಳು ಏನು ಮಾತನಾಡಿದ್ದೇವೆ ಎಂಬುದು ನಮಗೆ ಮಾತ್ರ ಗೊತ್ತು ಎಂದು ಹೇಳಿದ್ದೇನೆ. ಕಾಲ ಯಾವಾಗ ಬರಲಿದೆ ಎಂದು ಕೇಳಿದಾಗ, ಇದಕ್ಕೂ ಸಮಯ ನೋಡಿ ಹೇಳುತ್ತೇನೆ ಎಂದು ಮಾರ್ಮಿಕವಾಗಿ ಉತ್ತರಿಸಿದರು.

ಪ್ರಿಯಾಂಕ ಗಾಂಧಿ ಅವರನ್ನು ಭೇಟಿ ಮಾಡಿದ್ದೀರಿ ಎಂದು ಕೇಳಿದಾಗ, ಕಾಂಗ್ರೆಸ್ ಕಚೇರಿಗೆ ಹೋಗಿ ಬಂದಿದ್ದೇನೆ ಅಷ್ಟೇ. ಇನ್ನು ಅಸ್ಸಾಂ ಚುನಾವಣೆ ಜಂಜಾಟದಲ್ಲಿ ಇದ್ದೇನೆ. ವಿಭಿನ್ನ ರೀತಿಯಲ್ಲಿ ಬೇರೆ, ಬೇರೆ ವಿಚಾರ ಚರ್ಚೆ ಯಾಕೆ. ಇದರ ಬಗ್ಗೆ ನಾನು ಮುಂದೆ ಮಾತನಾಡುತ್ತೇನೆ. ಇದಕ್ಕೆ ಸಮಯ ಉತ್ತರ ನೀಡಲಿದೆ ಎಂದರು.

ಇನ್ನು ವಂದೇ ಮಾತರಂ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ, ವಂದೇ ಮಾತರಂಗೆ ಬುನಾದಿ ಹಾಕಿದ ಪಕ್ಷ ನಮ್ಮದು. ಈ ದೇಶಕ್ಕೆ ರಾಷ್ಟ್ರಧ್ವಜ, ರಾಷ್ಟ್ರಗೀತೆ, ಸಂವಿಧಾನ, ಸ್ವಾತಂತ್ರ್ಯ ತಂದುಕೊಟ್ಟ ಪಕ್ಷ ನಮ್ಮದು. ಈ ದೇಶದ ಸೇವೆ ಮಾಡಿದ ಪಕ್ಷ ನಮ್ಮದು. ಈಗ ಬಿಜೆಪಿ, ಬೇರೆಯವರು ನಮ್ಮನ್ನು ಅನುಸರಿಸುತ್ತಿದ್ದಾರೆ. ಅದೇ ಸಂತೋಷ ನಮಗೆ. ನಮ್ಮ ಕಾರ್ಯಕ್ರಮಗಳನ್ನು ಪ್ರಾರಂಭ ಮಾಡುವಾಗ ಪ್ರತಿಹಂತದಲ್ಲೂ ವಂದೇ ಮಾತರಂ ಗೀತೆ ಹಾಡುತ್ತೇವೆ. ನಾವು ವಂದೇ ಮಾತರಂ ಗೀತೆಗೆ ಗೌರವ ನೀಡುತ್ತೇವೆ. ಅದನ್ನು ಅನುಸರಿಸುತ್ತೇವೆ ಎಂದು ಹೇಳಿದರು.

ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಗಳಾಗಿದ್ದಾಗ ಕುವೆಂಪು ವಿರಚಿತ ಜಯ ಭಾರತ ಜನನಿಯ ತನುಜಾತೆ ಹಾಡನ್ನು ರಾಜ್ಯಗೀತೆಯಾಗಿ ಕಡ್ಡಾಯ ಮಾಡಿದ್ದೇವೆ. ಅದರಲ್ಲಿ ಸರ್ವಜನಾಂಗದ ಶಾಂತಿಯ ತೋಟ ಎಂದು ಇದೆಯಲ್ಲ. ನಮ್ಮದು ಸರ್ವಜನಾಂಗದ ಶಾಂತಿಯ ತೋಟ. ಏನೇನು ಹೇಳಬೇಕು, ಯಾವ ಧರ್ಮ ಹೇಳಬೇಕು ಎಂಬುದೆಲ್ಲ ಹೇಳಿದ್ದೇವಲ್ಲ. ಹಿಂದೂ, ಕ್ರೈಸ್ತ, ಮುಸಲ್ಮಾನ ಎಂದು ಹಾಡಿನಲ್ಲಿಯೇ ಇದೆ. ಅಂತಹ ರಾಜ್ಯ, ಭೂಮಿಯಲ್ಲಿ ಬೆಳೆದವರು ನಾವು ಎಂದರು.

ನಗರ ನಕ್ಸಲರ ಜತೆ ಕಾಂಗ್ರೆಸ್

ಕೋಲಾರ: ರಾಜ್ಯ ಕಾಂಗ್ರೆಸ್ ಸರಕಾರ ತನ್ನ ಹಳಿ ಬದಲಿಸಿಕೊಂಡಿದೆ. ಪ್ರಜಾಪ್ರಭುತ್ವ-ಒಕ್ಕೂಟ ವ್ಯವಸ್ಥೆ, ಡಾ.ಬಾಬಾಸಾಹೇಬ ಅಂಬೇಡ್ಕರ್ ಕೊಟ್ಟ ಸಂವಿಧಾನದ ಒಳಗೆ ಕೆಲಸ ಮಾಡುವುದನ್ನು ಬಿಟ್ಟು ಈಗಾಗಲೇ ನಗರ ನಕ್ಸಲರ ಜತೆ ಸೇರಿದೆ ಎಂದು ಛಲವಾದಿ ನಾರಾಯಣಸ್ವಾಮಿ ಆರೋಪಿಸಿದ್ದಾರೆ. ಈ ದೇಶದಲ್ಲಿ ನಕ್ಸಲಿಸಂ ಪ್ರಾರಂಭವಾಗಿದ್ದೇ ಕಮ್ಯುನಿಸ್ಟರಿಂದ. ಅದಕ್ಕೆ ಅವರನ್ನು ತಿರಸ್ಕರಿಸಿದರು. ಬಳಿಕ ಕಾಂಗ್ರೆಸ್ಸನ್ನೂ ತಿರಸ್ಕಾರ ಮಾಡಿದರು. ಕಾಂಗ್ರೆಸ್ ನಗರ ನಕ್ಸಲರ ಜತೆ ಸೇರಿ ಕಮ್ಯುನಿಸ್ಟ್ ಕಾಂಗ್ರೆಸ್ ನಗರ ನಕ್ಸಲೈಟ್ ಆಗಿದೆ.ಒಕ್ಕೂಟ ವ್ಯವಸ್ಥೆಯಲ್ಲಿ ಗ್ರಾ.ಪಂ ಆರಂಭಿಸಿ ದೇಶದ ಪ್ರಧಾನಮಂತ್ರಿಯವರೆಗೆ ಒಬ್ಬರನ್ನು ಒಬ್ಬರು ಗೌರವಿಸುವ ವ್ಯವಸ್ಥೆ ಇದೆ. ಇಂಥ ವ್ಯವಸ್ಥೆಯನ್ನು ಮೇಲಿನ ವರ್ಗದಲ್ಲಿರುವ ಪ್ರಧಾನಿಯನ್ನು ಕೂಡ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಸಾಂವಿಧಾನಿಕವಾಗಿ ನಿಂದಿಸುತ್ತಿದ್ದಾರೆ. ಹೇಡಿ ಎಂಬ ಪದ ಬಳಸುತ್ತಿದ್ದಾರೆ. ಇದು ಖಂಡನೀಯ ನಡೆ ಎಂದರು.

ಅರ್ಜಿದಾರರಿಗೆ ಪೂಜೆಗೆ ಅಸ್ತು

ಕಲಬುರಗಿ: ಆಳಂದದ ಲಾಡ್ಲೆ ಮಶಾಕ್ ದರ್ಗಾದಲ್ಲಿರುವ ಶಿವಲಿಂಗಕ್ಕೆ ಮಹಾಶಿವರಾತ್ರಿಯಂದು ಪೂಜೆ ಸಲ್ಲಿಸಲು ಕೋರಿದ್ದ ಅರ್ಜಿಯನ್ನು ಆಲಿಸಿದ ಹೈಕೋರ್ಟ್ ಕಲಬುರಗಿ ಪೀಠವು ಅರ್ಜಿದಾರರಿಗೆ ಮಾತ್ರ ಅವಕಾಶ ನೀಡಿ ಬುಧವಾರ ಮಹತ್ವದ ಆದೇಶ ಹೊರಡಿಸಿದೆ. 15 ಜನರಿಗೆ ಪೂಜೆಗೆ ಅವಕಾಶ ನೀಡಬೇಕೆಂದು ಸಿದ್ರಾಮಯ್ಯ ಹಿರೇಮಠ ಸಲ್ಲಿಸಿದ್ದ ರಿಟ್ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಪೀಠ, ಕೇವಲ ಅರ್ಜಿದಾರರಿಗೆ ಮಾತ್ರ ಪೂಜೆ ಸಲ್ಲಿಸಲು 'ಗ್ರೀನ್ ಸಿಗ್ನಲ್' ನೀಡಿದೆ. ಮಧ್ಯಾಹ್ನ 2 ರಿಂದ ಸಂಜೆ 6 ಗಂಟೆಯೊಳಗೆ ಪೂಜೆ ನೆರವೇರಿಸಲು ಕಾಲಾವಕಾಶ ನೀಡಲಾಗಿದ್ದು, ಪೂಜೆಗೆ ತೆರಳುವವರಿಗೆ ಸೂಕ್ತ ಭದ್ರತೆ ಕಲ್ಪಿಸಲು ಜಿಲ್ಲಾಡಳಿತಕ್ಕೆ ಸೂಚಿಸಿದೆ. ?ಒಂದು ವೇಳೆ ಇತರ ಯಾರಾದರೂ ಪೂಜೆಗೆ ಅನುಮತಿ ಕೋರಿದರೆ, ಸ್ಥಳೀಯ ಪರಿಸ್ಥಿತಿಯನ್ನು ಅವಲೋಕಿಸಿ ಜಿಲ್ಲಾಡಳಿ ತವೇ ಅಂತಿಮ ತೀರ್ಮಾನ ಕೈಗೊಳ್ಳಬೇಕು ಎಂದು ನ್ಯಾಯಾಲಯ ತಿಳಿಸಿದೆ.

ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಭೇಟಿ ಮಾಡಿದ ಸಂಸದ ಕಡಾಡಿ

ಕಬ್ಬು ಬೆಳೆಗೆ ಎಫ್‌ಆರ್‌ಪಿ ದರ ನಿಗದಿಗೆ ಆಗ್ರಹ

ಮೂಡಲಗಿ: ದೇಶದ ಕಬ್ಬು ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆ ಬಗ್ಗೆ ಚರ್ಚಿಸುವ ಉದ್ದೇಶದಿಂದ ರಾಷ್ಟ್ರೀಯ ಬಿಜೆಪಿ ಕಿಸಾನ್ ಮೋರ್ಚಾ ಪದಾಧಿಕಾರಿಗಳೊಂದಿಗೆ ಸಂಸದ ಈರಣ್ಣ ಕಡಾಡಿ ಅವರು ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ದೆಹಲಿಯ ಕಾರ್ಯಾಲಯದಲ್ಲಿ ಭೇಟಿಯಾಗಿ ಚರ್ಚೆ ನಡೆಸಿದರು.

ಪ್ರತಿ ವರ್ಷ ಎಫ್‌ಆರ್‌ಪಿ ದರ ನಿಗದಿ ಮಾಡುವ ಸಂದರ್ಭದಲ್ಲಿ ಕಬ್ಬಿನ ರಿಕವರಿ ಪ್ರತಿಶತ ಹೆಚ್ಚಿಸುತ್ತಿರುವುದು ರೈತರಿಗೆ ಮಾರಕವಾಗಿದೆ. ಹೀಗಾಗಿ ಕಬ್ಬಿನ ರಿಕವರಿ ಪ್ರಮಾಣವನ್ನು ಶೇ.9.25 ರಿಂದ 10.25ಕ್ಕೆ ಹೆಚ್ಚಿಸಿರುವುದು ಕಬ್ಬು ಬೆಳೆಗಾರರಿಗೆ ಆರ್ಥಿಕ ನಷ್ಟ ಉಂಟುಮಾಡುತ್ತದೆ. ರೈತರ ಹಿತದೃಷ್ಟಿಯಿಂದ ಸರಕಾರವು ಈ ನಿರ್ಧಾರ ಹಿಂಪಡೆಯಬೇಕೆಂದು ಆಗ್ರಹಿಸಿದರು.

ದೇಶದಲ್ಲಿ ಅಡಕೆ, ತೆಂಗು ಮತ್ತು ಕಾಫಿ ಬೆಳೆಗಾರರಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿರುವ ಕಬ್ಬು ಬೆಳೆಗಾರರ ಸಮಸ್ಯೆಗಳು ಅತ್ಯಂತ ಗಂಭೀರವಾಗಿವೆ. ಕಬ್ಬು ಕೇವಲ ಸಕ್ಕರೆಗೆ ಸೀಮಿತವಾಗಿಲ್ಲ. ಕಬ್ಬಿನಿಂದ ಉತ್ಪತ್ತಿಯಾಗುವ ಎಥೆನಾಲ್, ಮೊಲ್ಯಾಸಿಸ್, ವಿದ್ಯುತ್ ಮತ್ತು ಸಾವಯವ ಗೊಬ್ಬರಗಳಂತಹ ಉಪ ಉತ್ಪನ್ನಗಳು ದೇಶದ ಇಂಧನ ಮತ್ತು ಕೃಷಿ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡುತ್ತಿವೆ. ಈ ಎಲ್ಲ ಉತ್ಪನಗಳ ಮೇಲೆ ಕೋಟ್ಯಂತರ ಜನರು ಅವಲಂಬಿತರಾಗಿರುವುದರಿಂದ ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ಗಂಭೀರವಾಗಿ ಅಧ್ಯಯನ ಮಾಡಿ ಪರಿಹರಿಸಲು ಸರಕಾರ ದೃಢ ಹೆಜ್ಜೆ ಇಡಬೇಕು ಎಂದು ನಿಯೋಗ ಮನವಿ ಮಾಡಿತ್ತು. ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ರಾಜ್ಯ ಸಚಿವ ಭಾಗೀರಥ್ ಚೌಧರಿ, ಬಿಜೆಪಿ ರಾಷ್ಟ್ರೀಯ ಕಿಸಾನ್ ಮೋರ್ಚಾ ಅಧ್ಯಕ್ಷ ರಾಜಕುಮಾರ್ ಚಹರ್ ಕಿಸಾನ್ ಮೋರ್ಚಾದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ಸಂಸದ ಡಾ.ಅನಿಲ್ ಬೊಂಡೆ, ರಾಷ್ಟ್ರೀಯ ಉಪಾಧ್ಯಕ್ಷ ಬನ್ಸಿಲಾಲ್ ಗುರ್ಜರ್, ಪ್ರದೀಪ್ ಪುರೋಹಿತ್, ಸುಕಾಂತ ಪಾಣಿಗ್ರಾಹಿ, ಡಾ. ಶಂಭುಕುಮಾರ ಇದ್ದರು.

ಬಿಜೆಪಿ ಕಿಸಾನ್ ಮೋರ್ಚಾ ನಿಯೋಗದ ಜತೆ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಸಂಸದ ಈರಣ್ಣ ಕಡಾಡಿ ಭೇಟಿ ಮಾಡಿದರು.

ರೈತರ ಹಿತರಕ್ಷಣೆಗೆ ಕೇಂದ್ರ ಸರಕಾರ ಬದ್ಧವಾಗಿದೆ. ಕಬ್ಬು ಬೆಳೆಗಾರರ ಸಮಸ್ಯೆಗಳ ಕುರಿತು ಶೀಘ್ರದಲ್ಲೇ ಮತ್ತೊಂದು ಸಭೆ ಕರೆದು ಸೂಕ್ತ ಪರಿಹಾರ ಕಂಡುಕೊಳ್ಳಲಾಗುವುದು.

–ನಿರ್ಮಲಾ ಸೀತಾರಾಮನ್, ವಿತ್ತ ಸಚಿವೆ

ಕಾರ್ಯಕರ್ತರಿಗೆ ಗೌರವ ಕೊಡಬೇಕು

ಚಿಕ್ಕಬಳ್ಳಾಪುರ: ಬಿಜೆಪಿ ವ್ಯಕ್ತಿನಿಷ್ಠೆಯ ಪಕ್ಷವಲ್ಲ. ಕಾರ್ಯಕರ್ತರ ನಿಷ್ಠೆಯ ಪಕ್ಷ. ಇದನ್ನರಿತು ಮೊದಲು ಪಕ್ಷಕ್ಕಾಗಿ ದುಡಿಯುತ್ತಿರುವ ಕಾರ್ಯಕರ್ತರಿಗೆ ಗೌರವಕೊಡಿ ಎಂದು ಸಂಸದ ಸುಧಾಕರ್, ಬೆಂಬಲಿಗರಿಗೆ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಸಂದೀಪ್‌ರೆಡ್ಡಿ ಟಾಂಗ್ ನೀಡಿದರು. ಚಿಕ್ಕಬಳ್ಳಾಪುರದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಜಿಲ್ಲೆಯಲ್ಲಿ ಬಿಜೆಪಿಯನ್ನು ಸಮರ್ಥವಾಗಿ ಕಟ್ಟುವ ಉದ್ದೇಶದಿಂದ ಎಷ್ಟೋ ಮಂದಿ ಕಷ್ಟ ಬಿದ್ದು ದುಡ್ಡು ತಂದು ಖರ್ಚು ಮಾಡಿ ಪಕ್ಷ ಕಟ್ಟಿಲ್ಲವಾ? ಪಕ್ಷಕ್ಕಾಗಿ ಅವರವರ ಯೋಗ್ಯತೆಗೆ ತಕ್ಕಂತೆ ಸಹಾಯ ಮಾಡಿದ್ದಾರೆ. ಒಬ್ಬ ಒಂದು ರುಪಾಯಿ ಕೊಟ್ಟಿರಬಹುದು, ಮತ್ತೊಬ್ಬ ಕೋಟಿ ರುಪಾಯಿ ಕೊಟ್ಟಿರಬಹುದು. ಮೊದಲು ಕಾರ್ಯಕರ್ತರಿಗೆ ಗೌರವ ಕೊಡುವುದು ಕಲಿಯಿರಿ ಎಂದು ತಾಕೀತು ಮಾಡಿದರು. ಮುಂದಿನ ದಿನಗಳಲ್ಲಿ ಚಿಕ್ಕಬಳ್ಳಾಪುರದಲ್ಲಿ ಸಂದೀಪ್ ಅಂತಹ ಯುವಕರು ವಿಧಾನಸಭೆಗೆ ಬರಬೇಕು. ಅದಕ್ಕೆ ಸುಧಾಕರ್ ಅವರು, ನರೇಂದ್ರ ಮೋದಿ ಅವರು, ವಿಜಯೇಂದ್ರ ಅವರು, ವಿಶ್ವನಾಥಣ್ಣ ಸೇರಿ ಎಲ್ಲರ ಮಾರ್ಗದರ್ಶನ ಇರಬೇಕು ಎಂಬ ಮಾತನ್ನು ಅವರು ಹೇಳಿದ್ದರು. ಇದರ ಬಗ್ಗೆ ಅಪಸ್ವರ ಬೇಕಿರಲಿಲ್ಲ ಎಂದರು.

ಸಂದೀಪ್ ರೆಡ್ಡಿ

ದೇವರಾಣೆ ಮತ ಹಾಕಿದ್ದೇನೆ

ನಿಮಗೆ ಯಾರಿಗೆ ಬೇಕೋ ಅವರಿಗೆ ಬಿಜೆಪಿ ಟಿಕೆಟ್ ಕೊಡಿಸುವುದು ವ್ಯಕ್ತಿಗತ ಮಾಡಿಕೊಂಡಿದ್ದೀರಾ ನೀವು? ಯಾರಪ್ಪನ ಸೊತ್ತಲ್ಲ ಬಿಜೆಪಿ ಕಾರ್ಯಕರ್ತರ ಸೊತ್ತು. ಮೊನ್ನೆ ಅವನ್ಯಾರೋ ಹೇಳ್ತಿದ್ದ ಸುಧಾಕರ್ ಬಂದ ಮೇಲೆ ಬಿಜೆಪಿ ಅಂತ. ಸುಧಾಕರ್ ಬಿಜೆಪಿಗೆ ಬಂದ ಮೇಲೆ ಪಕ್ಷಕ್ಕೆ ಶಕ್ತಿ ಬಂದಿರುವುದು ನಿಜ. ಖಂಡಿತ ನಾವೆಲ್ಲಾ ಒಪ್ತೀವಿ. ಸುಧಾಕರ್ ಒಂದು ಶಕ್ತಿ, ಅವರೊಬ್ಬ ದೂರ ದೃಷ್ಟಿಯ ನಾಯಕ. ಅವರ ಜತೆ ಭುಜಕ್ಕೆ ಭುಜಕೊಟ್ಟು ಕೆಲಸ ಮಾಡಿದ್ದೀವಿ. ಯಾರೋ ಏನೋ ಹೇಳಿಬಿಟ್ಟರಾ ಗಲ್ಲ .ಮೊನ್ನೆ ಎಂಪಿ ಎಲೆಕ್ಷನ್ ನಲ್ಲಿ ಎಷ್ಟು ನಾವು ಕೆಲಸ ಮಾಡಿದ್ದೀವಿ. ಇವತ್ತು ಹೇಳ್ತೀರ ನೀವು ಎಂಎಲ್‌ಎ ಎಲೆಕ್ಷನ್‌ನಲ್ಲಿ ವಿರುದ್ಧ ಕೆಲಸ ಮಾಡಿದೆ ಅಂತ. ನನ್ನ ಮನೆ ದೇವರು ಜೀಗಾನಹಳ್ಳಿ ಸೀತಿಬೈರವೇಶ್ವರನ ಮೇಲೆ ಪ್ರಮಾಣ ಮಾಡಿ ಹೇಳುತ್ತೇನೆ. ಸುಧಾಕರ್‌ಗೆ ನನ್ನ ಮತ ಹಾಕಿದ್ದೇನೆ ಎಂದು ಸಂದೀಪ್‌ರೆಡ್ಡಿ ಹೇಳಿದರು.

ಆಲಮಟ್ಟಿ ಡ್ಯಾಂ ಎತ್ತರಿಸುವುದಕ್ಕೆ ಆಂಧ್ರ ಸಿಎಂ ನಾಯ್ಡು ಆಕ್ಷೇಪ

ಹೈದರಾಬಾದ್: ಕೃಷ್ಣಾ ಮೇಲ್ದಂಡೆಯ ಆಲಮಟ್ಟಿ ಅಣೆಕಟ್ಟೆ ಎತ್ತರ ಹೆಚ್ಚಿಸುವ ಕರ್ನಾಟಕದ ಕ್ರಮಕ್ಕೆ ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.



ದೆಹಲಿಯಲ್ಲಿ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್ ಜತೆ ನಡೆದ ಸಭೆಯಲ್ಲಿ, ಕರ್ನಾಟಕವು ಆಲಮಟ್ಟಿ ಅಣೆಕಟ್ಟೆ ಎತ್ತರ ಹೆಚ್ಚಿಸಿದರೆ, ಆಂಧ್ರಪ್ರದೇಶದಲ್ಲಿ ನೀರಿನ ಲಭ್ಯತೆಯ ಮೇಲೆ ಗಂಭೀರ ಪರಿಣಾಮ ಉಂಟಾಗಲಿದೆ ಎಂದು ನಾಯ್ಡು ಕಳವಳ ವ್ಯಕ್ತಪಡಿಸಿದ್ದಾರೆ.

ಅಂತಾರಾಜ್ಯ ನೀರಿನ ಸಮಸ್ಯೆಗಳ ಕುರಿತು ಗಮನಸೆಳೆದ ಚಂದ್ರಬಾಬು ನಾಯ್ಡು, ಆಂಧ್ರಪ್ರದೇಶ-ಒಡಿಶಾ ವಂಶಧಾರ ನದಿ ನೀರಿನ ವಿವಾದವನ್ನು ಶೀಘ್ರವಾಗಿ ಪರಿಹರಿಸಬೇಕೆಂದು ಒತ್ತಾಯಿಸಿದರು. ವಂಶಧಾರ ಜಲ ವಿವಾದದ ಕುರಿತು ನ್ಯಾಯಮಂಡಳಿಯ ಅಂತಿಮ ವರದಿಯನ್ನು ವಿಳಂಬ ಮಾಡದೆ ಗೆಜೆಟ್‌ನಲ್ಲಿ ಪ್ರಕಟಿಸಬೇಕು ಎಂದು ಆಗ್ರಹಿಸಿದರು. ಗೋದಾವರಿ ನೀರಿನ ಹಂಚಿಕೆಗೆ ಸಂಬಂಧಿಸಿದಂತೆ, ಆಂಧ್ರಪ್ರದೇಶ ಮತ್ತು ತೆಲಂಗಾಣ ನಡುವೆ ನಡೆಯುತ್ತಿರುವ ವಿವಾ ದದ ಕುರಿತು ಸಭೆಯಲ್ಲಿ ಚರ್ಚೆ ನಡೆಸಿದ್ದಾರೆ. ಉಭಯ ರಾಜ್ಯಗಳ ನಡುವೆ ನದಿ ನೀರಿನ ಸಮಾನ ಹಂಚಿಕೆ ಮಾಡುವ ಕುರಿತು ಜಲ ವಿವಾದ ನ್ಯಾಯಮಂಡಳಿಯು ತಕ್ಷಣ ಸಂಧಾ ನಕ್ಕೆ ಮುಂದಾಗಬೇಕು ಎಂದು ಆಗ್ರಹಿಸಿದರು. ಕೇಂದ್ರ ನೀರಾವರಿ ಸಚಿವರ ಜತೆಗಿನ ಸಭೆಯಲ್ಲಿ ಆಂಧ್ರಪ್ರದೇಶಕ್ಕೆ ಸಂಬಂಧಿಸಿದಂತೆ ಅನೇಕ ನೀರಾವರಿ ಮತ್ತು ಜಲ ಭದ್ರತಾ ಯೋಜನೆಗಳಿಗೆ ಅನುಮೋದನೆ ಹಾಗೂ ಆರ್ಥಿಕ ಸಹಾಯ ನೀಡುವಂತೆ ಒತ್ತಾಯಿಸಿ ದ್ದಾರೆ. ರಾಜ್ಯದ ಹಿತಾಸಕ್ತಿಗಳನ್ನು ಕಾಪಾಡಲು, ರೈತರ ಭವಿಷ್ಯವನ್ನು ಭದ್ರಪಡಿಸಿಕೊಳ್ಳಲು ಮತ್ತು ಆಂಧ್ರಪ್ರದೇಶಕ್ಕೆ ಕುಡಿಯುವ ನೀರಿನ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಈ ಯೋಜನೆಗಳು ಅತ್ಯಗತ್ಯ ಎಂದು ನಾಯ್ಡು ಒತ್ತಿ ಹೇಳಿದರು.

www.pravasipracha.com

ಸಂಪಾದಕೀಯ

ನರವಣೆ ಪುಸ್ತಕ: ಎಚ್ಚರಿಕೆ ಬೇಕು

ಜ. ನರವಣೆಯವರು ಬರೆದಿರುವ ಫೋರ್ ಸ್ಟಾರ್ಸ್ ಆಫ್ ಡೆಸ್ಟಿನಿ ಪುಸ್ತಕ ಕೇಂದ್ರ ಸರಕಾರದ ದಾಖಲೆಗಳ ಪ್ರಕಾರ ಇನ್ನೂ ಬಿಡುಗಡೆಯಾಗಿಲ್ಲ. ಆದರೆ ರಾಹುಲ್ ಗಾಂಧಿ ಪುಸ್ತಕದ ಮುದ್ರಿತ ಪ್ರತಿಯನ್ನೇ ಅಧಿಕೃತವಾಗಿ ತೋರಿಸಿದ್ದಾರೆ. ನರವಣೆಯವರೇ ಈ ಪುಸ್ತಕ ಲಭ್ಯವಿದೆ ಎಂದು ಟ್ವೀಟ್ ಮಾಡಿದ್ದನ್ನು ತೋರಿಸಿದ್ದಾರೆ. ಇದಕ್ಕೆಲ್ಲ ಉತ್ತರ ನೀಡಿರುವ ಪೆಂಗ್ವಿನ್ ಇಂಡಿಯಾ ಪ್ರಕಾಶನ, ನನ್ನ ಬಳಿ ಪುಸ್ತಕ ಪ್ರಕಟಿಸುವ ಹಕ್ಕಿದೆ. ಆದರೆ ಪ್ರಸ್ತುತ ಲಭ್ಯವಿರುವ ಪುಸ್ತಕವನ್ನು ನಾನು ಪ್ರಕಟಿಸಿಲ್ಲ. ಡಿಜಿಟಲ್ ರೂಪದಲ್ಲೂ ಬಿಡುಗಡೆಯಾಗಿಲ್ಲ ಎಂದು ಹೇಳಿದೆ. ಹಾಗಾದರೆ ಪುಸ್ತಕ ಬಿಡುಗಡೆಯಾಗಿದ್ದು ಹೇಗೆ ಎಂದು ದೆಹಲಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಪೆಂಗ್ವಿನ್ ಪ್ರಕಾಶನಕ್ಕೂ ನೋಟಿಸ್ ನೀಡಿದ್ದಾರೆ. ಇಷ್ಟೆಲ್ಲದರ ನಡುವೆ ಫೋರ್ ಸ್ಟಾರ್ಸ್ ಆಫ್ ಡೆಸ್ಟಿನಿ ಪುಸ್ತಕದಲ್ಲಿ ಏನಿದೆ ಎಂಬುದು ಯಾರಿಗೂ ಗೊತ್ತಿಲ್ಲ. ರಾಹುಲ್ ಹೇಳುವ ಪ್ರಕಾರ, ಈ ಪುಸ್ತಕದಲ್ಲಿ ಬಹಳ ಸೂಕ್ಷ್ಮ ಸಂಗತಿಗಳಿವೆ. 2020ರಲ್ಲಿ ನಡೆದ ಗಾಲ್ವಾನ್ ಘರ್ಷಣೆಗೆ ಸಂಬಂಧಿಸಿದಂತೆ ಆಳುವ ಸರಕಾರದ ನಾಯಕರು ನಿರ್ಣಾಯಕ ನಿರ್ಧಾರ ತೆಗೆದುಕೊಂಡಿಲ್ಲ ಎಂದು ಬರೆದಿದ್ದಾರೆ ಎನ್ನಲಾಗಿದೆ. ಈ ಪುಸ್ತಕ ಪ್ರಕಟವೇ ಆಗದಿರುವುದರಿಂದ ಆ ಪುಸ್ತಕದ ಸಾಲುಗಳನ್ನು ಸಂಸತ್ತಿನಲ್ಲಿ ಉದ್ಧರಿಸುವುದು ತಪ್ಪು ಎನ್ನುವುದು ಕೇಂದ್ರ ಸರಕಾರದ ವಾದ. ಆದರೆ ರಾಹುಲ್ ಪದೇಪದೇ ಈ ಕುರಿತು ಯತ್ನ ಮಾಡಿ ಸುಮ್ಮನಾದರು. ಆದರೆ ಪುಸ್ತಕ ಪ್ರಕಟವೇ ಆಗಿಲ್ಲ ಎಂದು ವಾದಿಸುತ್ತಿದ್ದ ಕೇಂದ್ರಕ್ಕೆ ಮುಜುಗರವಾಗುವಂತೆ ಮಾಡಿದರು. ಈ ಎಲ್ಲ ಪ್ರಕರಣಗಳು ರಾಜಕೀಯಕ್ಕೆ ಸೇರಿದವು. ಆದರೆ ಜ.ನರವಣೆಯವರ ಪುಸ್ತಕದಲ್ಲಿ ಸೂಕ್ಷ್ಮ ಸಂಗತಿಗಳು ಇರುವುದೇ ಹೌದಾದರೆ ಅದು ಡಿಜಿಟಲ್ ರೂಪದಲ್ಲಿ, ಮುದ್ರಿತ ರೂಪದಲ್ಲಿ ಜನರಿಗೆ ಸಿಗುವುದು ಬಹಳ ಅಪಾಯಕಾರಿ. ಇಂತಹ ವಿಚಾರ ನ್ಯಾಯಾಲಯದ ಮಟ್ಟಕ್ಕೆ ಹೋಗಿಯಾದರೂ ಇತ್ಯರ್ಥವಾಗಬೇಕು. ಒಬ್ಬ ಸೇನಾಧಿಕಾರಿಗೆ ದೇಶದ ಪರಮೋಚ್ಚ ರಹಸ್ಯಗಳು ಗೊತ್ತಿರುತ್ತವೆ. ಆತ ತನಗೆ ಗೊತ್ತಾಗಿದ್ದನ್ನೆಲ್ಲ ಪುಸ್ತಕದಲ್ಲಿ ಹೇಳುವುದು ಸರಿಯಲ್ಲ. ಇಂತಹ ವಿಚಾರದಲ್ಲಿ ರಾಹುಲ್ ಗಾಂಧಿ ಸೇರಿ ಎಲ್ಲರೂ ತಿಳಿವು ಹೊಂದಿದ್ದಾರೆ ಎಂಬ ನಂಬಿಕೆಯನ್ನಷ್ಟೇ ನಾವೀಗ ಇಟ್ಟುಕೊಳ್ಳಬೇಕಾಗಿದೆ.

ಸೊಂಪಾದಕೀಯ

ಡಿಸಿಎಂನಲ್ಲಿ ಡಿಗೆ ಬೇಡಿಕೆ ಇಲ್ಲ

ತಮ್ಮ ಹೆಸರಿನ ಹಿಂದೆ ಅಂಟಿಕೊಂಡಿರುವ 'ಡಿಸಿಎಂ' ಎಂಬ ಗುಚ್ಛದಿಂದ 'ಡಿ' ಅನ್ನು ತೆಗೆದುಹಾಕಿ 'ಸಿಎಂ' ಆಗಬೇಕು ಅಂತ ಡಿ.ಕೆ. ಶಿವಕುಮಾರ್ ಅವರು ಶತಪ್ರಯತ್ನ ಮಾಡ್ತಾ ಇದ್ರೆ, ಅತ್ತ ಸಿದ್ದರಾಮಯ್ಯ ಕೂಡಾ, 'ಡಿ' ಅನ್ನೋದು 'ಡಿಕೆಶಿ' ಅನ್ನೋ ನಿಮ್ಮ ಹೆಸರಲ್ಲೇ ಇದೆ. ಅದು ಹಾಗೇ ಇರ್ಲಿ, ನಾನು ಸಿಎಂ ಆಗಿ ಹೀಗೇ ಇರ್ತೀನಿ ಅಂತ ಹಠ ಮಾಡುತ್ತಿದ್ದಾರೆ. ಒಟ್ಟಿನಲ್ಲಿ ರಾಜ್ಯದ ಪಟ್ಟದ ಗಲಾಟೆ ಮಾತ್ರ ತಾರಕಕ್ಕೇರಿದೆ. ಕೆಲ ದಿನಗಳ ಹಿಂದೆ ಹೈಕಮಾಂಡ್ ಇಬ್ಬರಿಗೂ ಸುಮ್ಮನಿರಲು ಹೇಳಿ, ಸದ್ಯಕ್ಕೆ ನಾಯಕತ್ವ ಬದಲಾವಣೆ, ಸಂಪುಟ ವಿಸ್ತರಣೆ ಎರಡೂ ಇಲ್ಲ ಅಂತ ಹೇಳಿ ಕಳಿಸಿದಾಗ ಎಲ್ಲವೂ ಪರಿಹಾರ ಆಯ್ತು ಅಂತ ನಿಟ್ಟುಸಿರು ಬಿಡುವಂತಾಗಿತ್ತು. ಆದರೆ ಸಮಸ್ಯೆ ಇನ್ನೂ ಮುಂದುವರಿದಿದೆ ಅನ್ನೋದು ಈಗ ಗೊತ್ತಾಗ್ತಾ ಇದೆ. ಇಬ್ಬರೂ ದೊಡ್ಡ ನಾಯಕರು ಪಟ್ಟದ ಪಟ್ಟು ಬಿಟ್ಟುಕೊಡುತ್ತಿಲ್ಲ ಅನ್ನೋ ವಿಷಯ ಈಗ ಗುಟ್ಟಾಗಿ ಉಳಿದಿಲ್ಲ. ಇಬ್ಬರ ಪರ ಇರೋ ಶಾಸಕರೂ ಆಗಾಗ ದಿಲ್ಲಿಗೆ ಪ್ರಯಾಣ ಬೆಳೆಸಿ ತಮ್ಮ ತಮ್ಮ ನಾಯಕರ ವರ್ಚಸ್ಸನ್ನು ತೋರಿಸುವ ಪ್ರಯತ್ನ ಮಾಡ್ತಾ ಇದ್ದಾರೆ. ಅತ್ತ ಹೈಕಮಾಂಡ್‌ಗೂ ಇದರ ಬಿಸಿ ತಾಗಿದೆ. ಹಾಗಾಗಿ ಇದು ಅಂದುಕೊಂಡಷ್ಟು ಸರಳವಾಗಿಲ್ಲ ಅಂತ ಅರಿತಿರುವ ರಾಹುಲ್ ಗಾಂಧಿ ತಮ್ಮದೇ ಶೈಲಿಯಲ್ಲಿ ತಮ್ಮ ಪವರ್‌ಫುಲ್ ಸರಕಾರವನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡ್ತಾ ಇದ್ದಾರೆ. ಆಗಾಗ ಸಿಎಂ, ಡಿಸಿಎಂ ಇಬ್ಬರಿಗೂ ದೆಹಲಿಯಿಂದ ಬುಲಾವ್ ಬರುವ ಸಾಧ್ಯತೆ ಇದೆ ಎಂದು ಸಂದೇಶವನ್ನು ಕಳಿಸುತ್ತಾ ಇಬ್ಬರಿಗೂ ನವರತ್ನ ತೈಲ ಹಚ್ಚಿ ತಂಪು ಮಾಡುತ್ತಿದ್ದಾರೆ ಎಂದು ಹೇಳಲಾಗುತ್ತಿದೆ. ಅಲ್ಲಿ ಏನಾಗುತ್ತೋ ಅನ್ನೋ ಕುತೂಹಲ ಎಲ್ಲರದ್ದೂ. ಆದರೆ ಈ ಸಿಎಂ ಬದಲಾವಣೆಯ ವಿಷಯದಲ್ಲಿ ಏನೇ ಭಿನ್ನಾಭಿಪ್ರಾಯ/ತೊಡಕುಗಳು ಇದ್ದರೂ, ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಇಬ್ಬರೂ ಒಟ್ಟಾಗಿ ಸಾರ್ವಜನಿಕ ವೇದಿಕೆಗಳಲ್ಲಿ ಕಾಣಿಸಿಕೊಂಡಾಗ ಮಾತ್ರ ಕೈ ಕೈ ಹಿಡಿದುಕೊಂಡು ಓಡಾಡುತ್ತಿದ್ದಾರೆ. ಅಪ್ಪಿತಪ್ಪಿಯೂ ಒಬ್ಬರು ಇನ್ನೊಬ್ಬರಿಗೆ ಘಾಸಿ ಆಗುವಂಥ ಹೇಳಿಕೆಗಳನ್ನು ಕೊಡ್ತಾ ಇಲ್ಲ ಅನ್ನೋದೇ ಹೈಕಮಾಂಡ್‌ಗೆ ಸದ್ಯಕ್ಕೆ ಇರೋ ಸಮಾಧಾನ. ಹಾಗಾಗಿ ಅದು ಮಿತಿಮೀರಿ ಮಾತಾಡುವ ಹಂತಕ್ಕೆ ಬರುವ ಮುನ್ನ ಏನಾರಾ ಒಂದು ಡಿಸೈಡ್ ಮಾಡಿಬಿಡುವ ಅನ್ನೋ ಇರಾದೆ ಕಾಂಗ್ರೆಸ್ ಹೈಕಮಾಂಡ್‌ನದ್ದು.

ಸಂಪಾದಕರ ಸದ್ಯಶೋಧನೆ

ವಿದೇಶಾಂಗ ಇಲಾಖೆಯಲ್ಲಿ ಹಿಂದಿ

ಹಿಂದಿ ಸಾಹಿತ್ಯ ಲೋಕದ ಧ್ರುವತಾರೆ, ಮಧುಶಾಲಾ; ಕೃತಿಯ ಕರ್ತೃ ಹಾಗೂ ಖ್ಯಾತ ಹಿಂದಿ ನಟ ಅಮಿತಾಬ್ ಬಚ್ಚನ್ ಅವರ ತಂದೆ ಡಾ.ಹರಿವಂಶ ರಾಯ್ ಬಚ್ಚನ್ ಅವರ ಹೆಸರು ಕೇಳಿದ ತಕ್ಷಣ ನಮಗೆ ನೆನಪಾಗುವುದು ಅವರ ಕಾವ್ಯ ಪ್ರೇಮ ಮತ್ತು ಗಂಭೀರ ಸಾಹಿತ್ಯ ಕೃಷಿ. ಆದರೆ, ಅವರ ಬದುಕಿನ ಮತ್ತೊಂದು ಪ್ರಮುಖ ಮತ್ತು ಗೌರವಾನ್ವಿತ ಅಧ್ಯಾಯವೆಂದರೆ ಅವರು ಭಾರತ ಸರಕಾರದ ವಿದೇಶಾಂಗ ವ್ಯವಹಾರಗಳ ಸಚಿವಾಲಯದಲ್ಲಿ ಸಲ್ಲಿಸಿದ ಸೇವೆ. ಹಿಂದಿಯ ಪ್ರಸಿದ್ಧ ಕವಿಗೆ, ರಾಜತಾಂತ್ರಿಕನಾಗಿಯೂ ಕೆಲಸ ಮಾಡುವ ಅವಕಾಶ ಸಿಕ್ಕಿತ್ತು ಎಂಬ ಸಂಗತಿ ಅನೇಕರಿಗೆ ಗೊತ್ತಿಲ್ಲ. ಹರಿವಂಶ ರಾಯ್ ಬಚ್ಚನ್ ಅವರು ಅಲಹಾಬಾದ್ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರು ಮತ್ತು ಇಂಗ್ಲೆಂಡ್‌ನ ಕೇಂಬ್ರಿಜ್ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪಡೆದ ಮೊದಲ ಭಾರತೀಯರಲ್ಲಿ ಒಬ್ಬರು. ಅವರ ಭಾಷಾ ಪ್ರೌಢಿಮೆ ಮತ್ತು ಪಾಂಡಿತ್ಯವನ್ನು ಗುರುತಿಸಿದ ಅಂದಿನ ಪ್ರಧಾನ ಮಂತ್ರಿ ಹಾಗೂ ವಿದೇಶಾಂಗ ಸಚಿವ ಜವಾಹರಲಾಲ್ ನೆಹರು ಅವರು, ಬಚ್ಚನ್ ಅವರನ್ನು ದೆಹಲಿಗೆ ಬರುವಂತೆ ಆಹ್ವಾನಿಸಿದರು. ಡಿಸೆಂಬರ್ 1955ರಲ್ಲಿ, ಬಚ್ಚನ್ ಅವರು ವಿದೇಶಾಂಗ ವ್ಯವಹಾರಗಳ ಸಚಿವಾಲಯದಲ್ಲಿ ವಿಶೇಷ ಅಧಿಕಾರಿಯಾಗಿ ಅಧಿಕೃತವಾಗಿ ಸೇರಿಕೊಂಡರು. ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ, ಆಡಳಿತದಲ್ಲಿ ಮತ್ತು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಹಿಂದಿ ಭಾಷೆಯನ್ನು ಸಶಕ್ತವಾಗಿ ಬಳಸುವ ಅವಶ್ಯಕತೆಯಿತ್ತು. ಅಲ್ಲಿಯವರೆಗೆ ವಿದೇಶಾಂಗ ಇಲಾಖೆಯ ಎಲ್ಲ ಕೆಲಸಗಳು ಕೇವಲ ಇಂಗ್ಲಿಷ್‌ನಲ್ಲಿ ನಡೆಯುತ್ತಿದ್ದವು. ಈ ಇಲಾಖೆಯಲ್ಲಿ ಹಿಂದಿ ಭಾಷೆಯನ್ನು ಪರಿಚಯಿಸುವ ಮತ್ತು ಅದನ್ನು ಜಾರಿಗೆ ತರುವ ಬೃಹತ್ ಜವಾಬ್ದಾರಿ ಬಚ್ಚನ್ ಅವರ ಹೆಗಲ ಮೇಲೆ ಬಿದ್ದಿತು. ಅವರು ಕೇವಲ ಒಬ್ಬ ಅಧಿಕಾರಿಯಾಗಿ ಕೆಲಸ ಮಾಡಲಿಲ್ಲ, ಬದಲಾಗಿ ಒಬ್ಬ ಭಾಷಾ ತಜ್ಞನಾಗಿ ರಾಜತಾಂತ್ರಿಕ ವ್ಯವಹಾರಗಳಿಗೆ ಅಗತ್ಯವಿರುವ ಹಿಂದಿ ಪಾರಿಭಾಷಿಕ ಶಬ್ದಕೋಶವನ್ನು ಸಿದ್ಧಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ನೆಹರು ಅವರಿಗೆ ಬಚ್ಚನ್ ಅವರ ಮೇಲೆ ಅಪಾರ ಗೌರವವಿತ್ತು. ವಿದೇಶಾಂಗ ಇಲಾಖೆಯಲ್ಲಿದ್ದಾಗ ಬಚ್ಚನ್ ಅವರು ಪ್ರಧಾನಿಯವರ ಅನೇಕ ಪ್ರಮುಖ ಭಾಷಣಗಳನ್ನು ಹಿಂದಿಗೆ ಅನುವಾದಿಸುವ ಜವಾಬ್ದಾರಿಯನ್ನು ಹೊತ್ತಿದ್ದರು. ನೆಹರು ಅವರ ಇಂಗ್ಲಿಷ್ ಭಾಷಣದ ಸತ್ವ ಮತ್ತು ಭಾವನೆ ಕೆಡದಂತೆ, ಅದನ್ನು ಸಾಮಾನ್ಯ ಜನರಿಗೆ ತಲುಪುವ ಓಘವತ್ತಾದ ಹಿಂದಿಗೆ ಬದಲಾಯಿಸುವಲ್ಲಿ ಬಚ್ಚನ್ ಸಿದ್ಧಹಸ್ತರು. ವಿದೇಶಿ ಪ್ರತಿನಿಧಿಗಳು ಬಂದಾಗ ಅಥವಾ ಅಂತಾರಾಷ್ಟ್ರೀಯ ಒಪ್ಪಂದಗಳು ನಡೆದಾಗ, ಅದರ ಹಿಂದಿ ರೂಪಾಂತರಗಳು ನಿಖರವಾಗಿರುವಂತೆ ನೋಡಿಕೊಳ್ಳುವುದು ಅವರ ದೈನಂದಿನ ಕೆಲಸದ ಭಾಗವಾಗಿತ್ತು. ವಿದೇಶಾಂಗ ಇಲಾಖೆಯಲ್ಲಿ ಹತ್ತು ವರ್ಷಗಳ ಸುದೀರ್ಘ ಸೇವೆಯ ನಂತರ, ಸಾಹಿತ್ಯ ಮತ್ತು ಭಾಷೆಗೆ ಅವರು ನೀಡಿದ ಕೊಡುಗೆಯನ್ನು ಪರಿಗಣಿಸಿ 1966ರಲ್ಲಿ ಅವರನ್ನು ರಾಜ್ಯಸಭೆಗೆ ನಾಮನಿರ್ದೇಶನ ಮಾಡಲಾಯಿತು. ವಿದೇಶಾಂಗ ಇಲಾಖೆಯಲ್ಲಿ ಕೆಲಸ ಮಾಡುವಾಗಲೇ ಅವರು ಇಸ್ರೇಲ್, ಅರಬ್ ರಾಷ್ಟ್ರಗಳು ಮತ್ತು ಯುರೋಪಿನ ಹಲವು ದೇಶಗಳಿಗೆ ಭೇಟಿ ನೀಡುವ ಅವಕಾಶ ಪಡೆದಿದ್ದರು. ಈ ಭೇಟಿಗಳು ಅವರ ರಾಜತಾಂತ್ರಿಕ ದೃಷ್ಟಿಕೋನವನ್ನು ವಿಸ್ತರಿಸಿದವು. ಬಹಳಷ್ಟು ಜನರಿಗೆ ಇರುವ ಕುತೂಹಲವೆಂದರೆ, ಒಬ್ಬ ಕವಿ ಕಡತಗಳ ನಡುವೆ ಹೇಗೆ ಬದುಕಲು ಸಾಧ್ಯ? ಎಂದು. ಆದರೆ ಬಚ್ಚನ್ ಅವರು ತಮ್ಮ ಆತ್ಮಕಥೆಯಲ್ಲಿ ಈ ಬಗ್ಗೆ ಬರೆದುಕೊಂಡಿದ್ದಾರೆ. ಕಚೇರಿಯ ಗಂಭೀರ ಕೆಲಸದ ನಡುವೆಯೂ ಅವರು ತಮ್ಮ ಕಾವ್ಯ ಪ್ರೇಮವನ್ನು ಜೀವಂತವಾಗಿರಿಸಿದ್ದರು. ವಿದೇಶಾಂಗ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಅವಧಿಯಲ್ಲೇ ಅವರು ಶೇಕ್ಸ್‌ಪಿಯರ್‌ನ ನಾಟಕಗಳನ್ನು (ಉದಾಹರಣೆಗೆ ಮ್ಯಾಕ್‌ಬೆತ್, ಹ್ಯಾಮ್ಲೆಟ್) ಮತ್ತು ಓಮರ್ ಖಯ್ಯಾಮ್‌ನ ರುಬಾಯಿಗಳನ್ನು ಹಿಂದಿಗೆ ಅನುವಾದಿಸಿದರು. ಅವರ ಈ ಕೆಲಸವು ವಿದೇಶಾಂಗ ಇಲಾಖೆಯಲ್ಲಿದ್ದ ಅಧಿಕಾರಿಗಳಿಗೆ ಸಾಹಿತ್ಯದ ಮೇಲೆ ಆಸಕ್ತಿ ಮೂಡಲು ಸಹ ಕಾರಣವಾಯಿತು. ಇಂಗ್ಲಿಷ್ ಪ್ರಧಾನವಾಗಿದ್ದ ವಿದೇಶಾಂಗ ಇಲಾಖೆಯಲ್ಲಿ ಹಿಂದಿಗೆ ಒಂದು ಗೌರವದ ಸ್ಥಾನ ತಂದುಕೊಡಲು ಬಚ್ಚನ್ ಅವರೇ ಕಾರಣ. ಅವರು ರಾಜತಾಂತ್ರಿಕ ಭಾಷೆಯಲ್ಲಿದ್ದ ಕ್ಲಿಷ್ಟಕರ ಪದಗಳಿಗೆ ಸಮಾನವಾದ ಅರ್ಥಗರ್ಭಿತ ಹಿಂದಿ ಪದಗಳನ್ನು ಸೃಷ್ಟಿಸಿದರು. ಭಾರತದ ಸಾಂಸ್ಕೃತಿಕ ಪರಂಪರೆಯನ್ನು ವಿದೇಶಿ ರಾಯಭಾರಿಗಳಿಗೆ ಪರಿಚಯಿಸುವಲ್ಲಿ ಅವರ ಪಾತ್ರ ದೊಡ್ಡದಾಗಿತ್ತು. ವಿದೇಶಾಂಗ ಇಲಾಖೆಯಲ್ಲಿ ಕಳೆದ ಕಾಲವು ಅವರ ಬದುಕಿಗೆ ಆರ್ಥಿಕ ಭದ್ರತೆ ನೀಡಿದ್ದಷ್ಟೇ ಅಲ್ಲದೆ, ಜಾಗತಿಕ ಮಟ್ಟದ ಚಿಂತಕರೊಂದಿಗೆ ಬೆರೆಯುವ ಅವಕಾಶವನ್ನೂ ನೀಡಿತು. ಇಂದು ನಾವು ವಿದೇಶಾಂಗ ಇಲಾಖೆಯಲ್ಲಿ ನೋಡುವ ಹಿಂದಿ ವಿಭಾಗದ ಬಲವಾದ ಅಡಿಪಾಯಕ್ಕೆ ಬಚ್ಚನ್ ಅವರ ಶ್ರಮವೇ ಕಾರಣ.

ಪತ್ರಕರ್ತನ ಸಾವು ಆತ ಕೆಲಸ ಮಾಡಿದ ಪತ್ರಿಕೆಗೆ ಸುದ್ದಿಯಲ್ಲ!

ಪತ್ರಿಕೆಯ ಸುದ್ದಿಮನೆಯಲ್ಲಿ ಒಂದು ಅಲಿಖಿತ ನಿಯಮವಿದೆ - 'ಪತ್ರಕರ್ತನ ಸಾವು ಆತ ಕೆಲಸ ಮಾಡಿದ ಪತ್ರಿಕೆಗೆ ಸುದ್ದಿಯಲ್ಲ' ಅಥವಾ ಹೆಚ್ಚೆಂದರೆ, 'ಪತ್ರಕರ್ತನ ಸಾವು ಸಿಂಗಲ್ ಕಾಲಂ ಸುದ್ದಿ'. ಈ ಮಾತು ನನಗೆ, ಪ್ರತಿ ಸಲ ಪತ್ರಕರ್ತರು ನಿಧನರಾದಾಗಲೆಲ್ಲ ಅವರು ಕೆಲಸ ಮಾಡಿದ ಪತ್ರಿಕೆಯಲ್ಲಿ ಪ್ರಕಟವಾದ ಅವರ ನಿಧನ ಸುದ್ದಿಯನ್ನು ನೋಡಿದಾಗಲೆಲ್ಲ ನಿಜ ಎಂದು ಅನಿಸುತ್ತಿದೆ.

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್

vbhat@me.com

Scooterist Killed!

2003 ಜನವರಿ 27ರ ಬೆಂಗಳೂರು ಆವೃತ್ತಿಯ 'ಟೈಮ್ಸ್ ಆಫ್ ಇಂಡಿಯಾ'ದ ಮೂರನೇ ಪುಟದಲ್ಲಿ ಸಿಂಗಲ್ ಕಾಲಂ ಪೇಜ್ ಫಿಲ್ಲರ್ ಸುದ್ದಿಯ ಶೀರ್ಷಿಕೆಯಿದು. ಯಾವುದೋ ಕ್ರೈಂ ಸುದ್ದಿಯ ಶೀರ್ಷಿಕೆಯ ಕೆಳಗಡೆ ಚಿಕ್ಕ ಸಬ್ ಹೆಡ್‌ಲೈನ್ ಆಗಿ ಈ ಸುದ್ದಿ ಪ್ರಕಟವಾಗಿತ್ತು. ಆ ಸ್ಕೂಟರಿಸ್ಟ್ ಮತ್ಯಾರೂ ಆಗಿರಲಿಲ್ಲ, ತನ್ನದೇ ಇಂಟರ್ನೆಟ್ ಆವೃತ್ತಿಯಲ್ಲಿ ಕೆಲಸ ಮಾಡುತ್ತಿದ್ದ ಶ್ರೀಧರ ದೀಕ್ಷಿತ್ ಎಂಬ ಒಬ್ಬ ಪ್ರತಿಭಾವಂತ ಯುವ ಪತ್ರಕರ್ತ ಸ್ಕೂಟರ್ ಅಪಘಾತದಲ್ಲಿ ದುರ್ಮರಣಕ್ಕೀಡಾಗಿದ್ದ. ಆತನ ಸಾವಿನ ಸುದ್ದಿ ಯಾವನೋ ಅಬ್ಬೇಪಾರಿಯ ಸಾವಿನ ಸುದ್ದಿಯಂತೆ ಪ್ರಕಟವಾಗಿತ್ತು. ತನ್ನದೇ ಸಂಸ್ಥೆಯ ಉದ್ಯೋಗಿಯೊಬ್ಬನ ಸುದ್ದಿಯನ್ನು ಅಷ್ಟು ನಿರ್ದಯವಾಗಿ, ನಿಷ್ಕರುಣೆಯಿಂದ ಆ ಪತ್ರಿಕೆ ಪ್ರಕಟಿಸಿತ್ತು. ಅಷ್ಟಕ್ಕೂ ಒಬ್ಬ ಪತ್ರಕರ್ತನ ಸಾವಿಗೆ ಬೆಲೆಯೇ ಇಲ್ಲವಾ?

ಪತ್ರಿಕೆಯ ಸುದ್ದಿಮನೆಯಲ್ಲಿ ಒಂದು ಅಲಿಖಿತ ನಿಯಮವಿದೆ – 'ಪತ್ರಕರ್ತನ ಸಾವು ಆತ ಕೆಲಸ ಮಾಡಿದ ಪತ್ರಿಕೆಗೆ ಸುದ್ದಿಯಲ್ಲ' ಅಥವಾ ಹೆಚ್ಚೆಂದರೆ, 'ಪತ್ರಕರ್ತನ ಸಾವು ಸಿಂಗಲ್ ಕಾಲಂ ಸುದ್ದಿ'. ಈ ಮಾತು ನನಗೆ, ಪ್ರತಿ ಸಲ ಪತ್ರಕರ್ತರು ನಿಧನರಾದಾಗಲೆಲ್ಲ ಅವರು ಕೆಲಸ ಮಾಡಿದ ಪತ್ರಿಕೆಯಲ್ಲಿ ಪ್ರಕಟವಾದ ಅವರ ನಿಧನ ಸುದ್ದಿಯನ್ನು ನೋಡಿದಾಗಲೆಲ್ಲ ನಿಜ ಎಂದು ಅನಿಸುತ್ತಿದೆ. ಇದಕ್ಕೆ ಕಾರಣಗಳೂ ಇಲ್ಲದಿಲ್ಲ. ನೀವು ಖ್ಯಾತ ಪತ್ರಕರ್ತ ಪೋತೆನ್ ಜೋಸೆಫ್ ಹೆಸರನ್ನು ಕೇಳಿರಬಹುದು. ದೇಶಕ್ಕೆ ಸ್ವಾತಂತ್ರ್ಯ ಬಂದ ತರುವಾಯ, ಬೆಂಗಳೂರಿನಲ್ಲಿ ಅಂದಿನ ಖ್ಯಾತ ಅಬಕಾರಿ ಗುತ್ತಿಗೆದಾರರಾದ ಕೆ.ಎನ್.ಗುರುಸ್ವಾಮಿ ಅವರು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯನ್ನು ಆರಂಭಿಸಬಯಸಿದಾಗ, ಮೊದಲ ಸಂಪಾದಕರನ್ನಾಗಿ ಪೋತೆನ್ ಜೋಸೆಫ್ ಅವರನ್ನೇ ನೇಮಿಸಬೇಕು ಎಂದು ನಿರ್ಧರಿಸಿದ್ದರು. ಆ ದಿನಗಳಲ್ಲಿ ಜೋಸೆಫ್ ಹೆಸರು ಜನಪ್ರಿಯತೆಯ ಉತ್ತುಂಗದಲ್ಲಿತ್ತು. ಅವರು ಆ ಹೊತ್ತಿಗೆ ದೇಶ ಮತ್ತು ವಿದೇಶಗಳ ಪ್ರಮುಖ ಪತ್ರಿಕೆಗಳಿಗೆ ಸಂಪಾದಕರಾಗಿದ್ದರು.

ಬಯಸಿದಾಗಲೆಲ್ಲ ಅವರು ಗಾಂಧೀಜಿ, ನೆಹರು, ಮಹಮದ್ ಅಲಿ ಜಿನ್ನಾ, ಟಿಳಕ್, ರಾಜಾಜಿ, ಸರೋಜಿನಿ ನಾಯ್ಡು, ಮೋತಿಲಾಲ್ ನೆಹರು, ಅನಿ ಬೆಸೆಂಟ್ ಮುಂತಾದವರ ಸಂದರ್ಶನವನ್ನು ಮಾಡುವಷ್ಟು ಸಲುಗೆ, ಘನತೆ ಮತ್ತು ವೃತ್ತಿ ಹಿರಿಮೆಯನ್ನು ಗಳಿಸಿದ್ದರು. ನೆಹರು ಅವರ 'ನ್ಯಾಷನಲ್ ಹೆರಾಲ್ಡ್' ಸಂಪಾದಕರಾಗಿದ್ದ ಜೋಸೆಫ್, ಅದರ ವ್ಯತಿರಿಕ್ತ ವಿಚಾರಧಾರೆಗೆ ಸೇರಿದ್ದ ಮಹಮದ್ ಅಲಿ ಜಿನ್ನಾ ಅವರ 'Dawn' ಪತ್ರಿಕೆಗೂ ಸಂಪಾದಕರಾಗಿದ್ದರು. ಅಷ್ಟೇ ಅಲ್ಲ, ಆ ದಿನಗಳಲ್ಲಿ ಅವರು 'ಬಾಂಬೇ ಕ್ರಾನಿಕಲ್', 'ಇಂಡಿಯನ್ ಎಕ್ಸ್‌ಪ್ರೆಸ್', 'ಇಂಡಿಯನ್ ಡೇಲಿ ಟೆಲಿಗ್ರಾಫ್', 'ಸ್ಟಾರ್ ಆಫ್ ಇಂಡಿಯಾ', 'ವಾಯ್ಸ್ ಆಫ್ ಇಂಡಿಯಾ', 'ಹೈದರಾಬಾದ್ ಬುಲೆಟಿನ್', 'ಸ್ವರಾಜ್ಯ' ಸೇರಿದಂತೆ ಸುಮಾರು ಇಪ್ಪತ್ತೆಂಟು ಪತ್ರಿಕೆಗಳ ಸಂಪಾದಕರಾಗಿದ್ದರು. ಅವರು ನಿತ್ಯ ಬರೆಯುತ್ತಿದ್ದ 'Over A Cup of Tea' ಅಂಕಣ ಬಹಳ ಪ್ರಸಿದ್ಧವಾಗಿತ್ತು. ಇಂಥವರೇ ತಮ್ಮ ನೂತನ ಪತ್ರಿಕೆ 'ಡೆಕ್ಕನ್ ಹೆರಾಲ್ಡ್'ಗೆ ಸಂಪಾದಕರಾಗಬೇಕು ಎಂದು ಗುರುಸ್ವಾಮಿ ಬಯಸಿದ್ದರು.

ತಮ್ಮ ಮನದ ಇಂಗಿತವನ್ನು ಜೋಸೆಫ್ ಮುಂದೆ ವ್ಯಕ್ತಪಡಿಸಿದಾಗ, ಅವರು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದರು. 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗೆ ತಮ್ಮ ಅಲ್ಲಿವರೆಗಿನ ವೃತ್ತಿ ಅನುಭವವನ್ನು ಧಾರೆಯೆರೆಯಲು ಜೋಸೆಫ್ ನಿರ್ಧರಿಸಿದರು. ನಾಳೆ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯ ಮೊದಲ ಸಂಚಿಕೆ ಮಾರುಕಟ್ಟೆಗೆ ಬರುವುದಿತ್ತು. ಇಂದು ಮಧ್ಯಾಹ್ನದ ಹೊತ್ತಿಗೆ ಜೋಸೆಫ್ ಅವರ ಪತ್ನಿ ತೀವ್ರ ಅನಾರೋಗ್ಯಕ್ಕೊಳಗಾಗಿದ್ದಾರೆ ಎಂಬ ಸುದ್ದಿ ಬಂದಿತು. ಆದರೆ ಜೋಸೆಫ್ ಪತ್ರಿಕೆಯ ಮೊದಲ ಸಂಚಿಕೆಯನ್ನು ರೂಪಿಸುವ, ಮುಖಪುಟದಲ್ಲಿ ಸಂಪಾದಕೀಯ ಬರೆಯುವ ಗಡಿಬಿಡಿಯಲ್ಲಿದ್ದರು. ಅದು ಪತ್ರಿಕೆಯ ಚೊಚ್ಚಲ ಹೆರಿಗೆ! ಈ ಸುದ್ದಿ ಬಂದ ಕೆಲ ಹೊತ್ತಿಗೆ ಪತ್ನಿ ನಿಧನಳಾಗಿದ್ದಾಳೆ ಎಂಬ ಸುದ್ದಿಯೂ ಬಂತು. ಒಂದೆಡೆ ಜೀವನವಿಡೀ ಸಂಗಾತಿಯಾಗಿದ್ದ ಪತ್ನಿಯ ಸಾವು, ಇನ್ನೊಂದೆಡೆ ನೂತನ ಪತ್ರಿಕೆಯ ಮೊದಲ ಸಂಚಿಕೆಯನ್ನು ಕಟ್ಟುವ ನಿರ್ಣಾಯಕ ಹೊಣೆಗಾರಿಕೆ! ಒಂದು ಸಾವಿಗೆ ಸ್ಪಂದನೆ, ಇನ್ನೊಂದು ಹೊಸ ಸಾಹಸಕ್ಕೆ ಜೀವ ನೀಡುವ ಕಾಯಕ.

ಜೋಸೆಫ್ ಎರಡನೆಯದನ್ನೇ ಆಯ್ಕೆ ಮಾಡಿಕೊಂಡರು. ಪತ್ನಿಯ ಸಾವಿನ ಸುದ್ದಿ ಬರುತ್ತಿದ್ದಂತೆ ಮನೆಗೆ ಹೋಗಲಿಲ್ಲ. ಆ ದಿನ ರಾತ್ರಿಯೆಲ್ಲ ಹೊಸ ಪತ್ರಿಕೆಗೆ ರೂಪ ಕೊಡುವುದರಲ್ಲಿಯೇ ತಲ್ಲೀನರಾಗಿ ಸುದ್ದಿಮನೆಯಲ್ಲಿಯೇ ಕಳೆದರು. ಮರುದಿನವೇ ಅವರ ಪತ್ನಿಯ ಪಾರ್ಥಿವ ಶರೀರವನ್ನು ನೋಡಿದ್ದು! ಭಾರತೀಯ



ಪತ್ರಿಕೋದ್ಯಮದ ಇತಿಹಾಸದಲ್ಲಿ ಒಬ್ಬ ದಂತಕಥೆಯಂತಿದ್ದ ಜೋಸೆಫ್ ಅವರು ನಂತರ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯ ಸ್ಥಾಪಕ ಸಂಪಾದಕರಾಗಿ ಆ ಪತ್ರಿಕೆಗೆ ಭದ್ರವಾದ ಅಡಿಪಾಯ ಹಾಕಿಕೊಟ್ಟರು. 1948ರಿಂದ ಮುಂದಿನ ಹತ್ತು ವರ್ಷಗಳ ಕಾಲ ಅವರು ಆ ಪತ್ರಿಕೆಗೆ ಸಂಪಾದಕರಾಗಿದ್ದರು. ಅವರ ವೃತ್ತಿ ಜೀವನದಲ್ಲಿ ಅಷ್ಟು ದೀರ್ಘ ಅವಧಿಗೆ ಸಂಪಾದಕರಾಗಿದ್ದುದು ಅದೇ ಮೊದಲು. ಆದರೆ, 1972ರಲ್ಲಿ ಅವರು ನಿಧನರಾದಾಗ, ಅವರು ಕಟ್ಟಿ ಬೆಳೆಸಿದ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯು ಅವರ ಸಾವಿನ ಸುದ್ದಿಯನ್ನು ಪ್ರಕಟಿಸಿದ ರೀತಿ ಇಂದಿಗೂ ಪತ್ರಿಕೋದ್ಯಮದ ವಲಯದಲ್ಲಿ ಒಂದು ಚರ್ಚಿತ ಮತ್ತು ವಿಷಾದನೀಯ ಉದಾಹರಣೆಯಾಗಿ ಉಳಿದು ಬಿಟ್ಟಿದೆ. ಜೋಸೆಫ್ ನಿಧನಕ್ಕೆ ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರು ಸಹ ಶೋಕ ಸಂದೇಶ ನೀಡಿದ್ದರು.

ಆದರೆ ತನ್ನ ಸಂಸ್ಥಾಪಕ ಸಂಪಾದಕನ ಸಾವಿನ ಸುದ್ದಿಯನ್ನು 'ಡೆಕ್ಕನ್ ಹೆರಾಲ್ಡ್' ಒಳಗಿನ ಪುಟದಲ್ಲಿ ಕೇವಲ ಒಂದು ಕಾಲಮ್ ಗಾತ್ರದಲ್ಲಿ ಪ್ರಕಟಿಸಿತ್ತು! ಇದು ಅವರ ಘನತೆಗೆ ತಕ್ಕುದಾದ ಗೌರವವಾಗಿರಲಿಲ್ಲ. ಪತ್ರಿಕೆಯ ಮುಖಪುಟದಲ್ಲಿ ಆ ಸುದ್ದಿಯ ಪ್ರಸ್ತಾಪವೂ ಇರಲಿಲ್ಲ. 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯನ್ನು ಕರ್ನಾಟಕದ ಪ್ರಭಾವಿ ಪತ್ರಿಕೆಯನ್ನಾಗಿ ರೂಪಿಸಿದ ಜೋಸೆಫ್, ಆ ಪತ್ರಿಕೆಯ 'ಆತ್ಮ'ದಂತಿದ್ದರು. ಆದರೆ ಅವರು ನಿವೃತ್ತರಾಗಿ ಹದಿನಾಲ್ಕು ವರ್ಷಗಳ ನಂತರ ನಿಧನರಾದಾಗ, ಪತ್ರಿಕೆಯ ಆಡಳಿತ ಮಂಡಳಿ ಅಥವಾ ಅಂದಿನ ಸಂಪಾದಕೀಯ ಮಂಡಳಿಯು ಅವರನ್ನು ಒಬ್ಬ ಸಾಮಾನ್ಯ 'ಮಾಜಿ ಉದ್ಯೋಗಿ' ಎಂಬಂತೆ ಪರಿಗಣಿಸಿತೇ ಹೊರತು, ಸಂಸ್ಥೆಯ ನಿರ್ಮಾತೃ ಎಂದು ಪರಿಗಣಿಸಲೇ ಇಲ್ಲ. ಅದೇ ಸಂಚಿಕೆಯಲ್ಲಿ ಬೆಂಗಳೂರಿನ ರೌಡಿಯೊಬ್ಬನ ಸಾವು, ಜೋಸೆಫ್ ಸಾವಿನ ಸುದ್ದಿಯ ಪಕ್ಕದಲ್ಲಿ, ನಾಲ್ಕು ಕಾಲಮ್ಮುಗಳಲ್ಲಿ ಜೋರಾಗಿ ಪ್ರಕಟವಾಗಿದ್ದು ವಿಪರ್ಯಾಸ! (ಮುಂದಿನ ವರ್ಷ ಅವರಿಗೆ ಮರಣೋತ್ತರ 'ಪದ್ಮಭೂಷಣ' ಪ್ರಶಸ್ತಿ ಬಂದಿತು.)

ಜೋಸೆಫ್ ಅವರು ಬದುಕಿದ್ದಾಗ ಒಮ್ಮೆ ಹೇಳಿದ್ದರಂತೆ – 'ಪತ್ರಕರ್ತನು ಬರೆಯುವ ಶಾಯಿ ಒಣಗುವ ಮೊದಲೇ ಮರೆಯಾಗುತ್ತಾನೆ'. ಅವರು ತಮ್ಮ ಸಾವಿನ ನಂತರ ತಾವು ಕಟ್ಟಿ ಬೆಳೆಸಿದ ಪತ್ರಿಕೆಯಲ್ಲಿ ಆಗಬಹುದಾದ ತಮ್ಮ ನಿರ್ಲಕ್ಷ್ಯವನ್ನು ಬಹುಶಃ ಮೊದಲೇ ಊಹಿಸಿದ್ದರೇನೋ! ತಾವು ಕಟ್ಟಿದ ಪತ್ರಿಕೆಯಲ್ಲೇ ಪೋತೆನ್ ಜೋಸೆಫ್ ನಿಧನ ಸಿಂಗಲ್ ಕಾಲಂ ಆಯ್ತು ಎಂದು ವ್ಯಥೆ ಪಡುವಾಗಲೆಲ್ಲ ನೆನಪಾಗುವ ಇನ್ನೊಂದು ಹೆಸರು ಫ್ರಾಂಕ್ ಮೊರೇಸ್. ಅವರು 'ಇಂಡಿಯನ್ ಎಕ್ಸ್‌ಪ್ರೆಸ್' ಅನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದವರು. ಭಾರತದಲ್ಲಿ ಇಂಗ್ಲಿಷ್ ಪತ್ರಿಕೆಯ ಅಗ್ರಗಣ್ಯ ಹತ್ತು ಸಂಪಾದಕರ ಪಟ್ಟಿಯಲ್ಲಿ ಮೊದಲ ಮೂರು ಹೆಸರಿನಲ್ಲಿ ಬರುವ ಹೆಸರು ಫ್ರಾಂಕ್ ಮೊರೇಸ್. ತಾವು ಕಟ್ಟಿದ ಪತ್ರಿಕೆಯನ್ನು ಅವರು ಬಿಡಬೇಕಾಗಿ ಬಂದಿತು. ಅದಾಗಿ ಎರಡು ವರ್ಷಗಳ ನಂತರ ನಿಧನರಾದಾಗ ಆ ಸುದ್ದಿ ಆರನೇ ಪುಟದ ಕೆಳಭಾಗದಲ್ಲಿ ಸಿಂಗಲ್ ಕಾಲಮ್ಮಿನಲ್ಲಿ ಚಿಕ್ಕದಾಗಿ ಪ್ರಕಟವಾಗಿತ್ತು.

ಸುಮಾರು ನಾಲ್ಕು ದಶಕಗಳ ಹಿಂದೆ,'ಡೆಕ್ಕನ್ ಹೆರಾಲ್ಡ್' ಪತ್ರಿಕೆಯ (ಬಹುಶಃ ಕ್ರೀಡಾ ವಿಭಾಗವಿದ್ದಿರಬೇಕು) ವರದಿಗಾರರೊಬ್ಬರು ಕಚೇರಿಯಲ್ಲಿ ಕೆಲಸ ಮಾಡುವಾಗಲೇ ಹೃದಯಾಘಾತದಿಂದ ನಿಧನರಾದರು. ಮರುದಿನ ಈ ಸುದ್ದಿ, ಆ ಪತ್ರಿಕೆಯ ಯಾವ ಪುಟಗಳಲ್ಲೂ ಪ್ರಕಟವಾಗಲಿಲ್ಲ. ಎರಡು ದಿನಗಳ ಬಳಿಕ ಅವರ ಫೋಟೋ ಅದೇ ಪತ್ರಿಕೆಯಲ್ಲಿ ಪ್ರಕಟವಾಯಿತು, ಆದರೆ ಜಾಹೀರಾತು ರೂಪದಲ್ಲಿ! ವರದಿಗಾರರ ನಿಧನವನ್ನು ಕುಟುಂಬದವರು ಹಣ ತೆತ್ತು ಜಾಹೀರಾತು ರೂಪದಲ್ಲಿ ಪ್ರಕಟಿಸಿದ್ದರು! ಆ ದಿನಗಳಲ್ಲಿ, 'ಡೆಕ್ಕನ್ ಹೆರಾಲ್ಡ್' ಮತ್ತು 'ದಿ ಹಿಂದು', ತಮ್ಮ ಸಂಸ್ಥೆಯ ಪತ್ರಕರ್ತರು ನಿಧನರಾದರೆ, ಆ ಸುದ್ದಿಯನ್ನು ಪ್ರಕಟಿಸುತ್ತಿರಲಿಲ್ಲ. ತಿಹಾರ ಜೈಲಿನಲ್ಲಿ ಕೈದಿ ಸತ್ತರೆ, ರೌಡಿಗಳು, ಬೀದಿಸೂಳೆಯರು ನಿಧನರಾದರೆ ಪ್ರಕಟಿಸುವ ಪತ್ರಿಕೆಗಳು, ತಮ್ಮದೇ ಸಂಸ್ಥೆಯ ಪತ್ರಕರ್ತ ಸತ್ತರೆ ಪ್ರಕಟಿಸುತ್ತಿರಲಿಲ್ಲ.

ಹದಿನೇಳು ವರ್ಷಗಳ ಕಾಲ 'ತರಂಗ' ಪತ್ರಿಕೆಯ ಸಂಪಾದಕರಾಗಿದ್ದ ಸಂತೋಷಕುಮಾರ ಗುಲ್ವಾಡಿಯವರು 2010ರ ಡಿಸೆಂಬರ್ 10ರಂದು ನಿಧನರಾದರು. ಅವರ ನಿಧನದ ಸುದ್ದಿ ಬಂದಾಗ ರಾತ್ರಿ ಹತ್ತೂವರೆ ಗಂಟೆ. ನಾನು 'ವಿಜಯ ಕರ್ನಾಟಕ'ದಲ್ಲಿ ಆ ದಿನದ ಕೆಲಸ ಮುಗಿಸಿ ಮನೆಗೆ ಹೊರಡಲು ಆಫೀಸಿನ ಹೊರಗೆ ನಿಂತಿದ್ದೆ. ಸುದ್ದಿ ಸಂಪಾದಕರು ಗುಲ್ವಾಡಿಯವರ ನಿಧನದ ಸುದ್ದಿಯ ವಿಷಯ ತಿಳಿಸಿದಾಗ, ನಾನು ವಾಪಸ್ ಹೋಗಿ ಅವರ ಕುರಿತು ಮುದ್ರಿತ ಅರ್ಧ ಪುಟ ಆಗುವಷ್ಟು ವಿಶೇಷ ಶ್ರದ್ಧಾಂಜಲಿ ಲೇಖನ ಬರೆದೆ. ಅಷ್ಟೇ ಅಲ್ಲ, ಗುಲ್ವಾಡಿ ಅವರ ನಿಧನಕ್ಕೆ ಅಂದು ನಾವು ಒಂದು ಇಡೀ ಪುಟವನ್ನು ಮೀಸಲಿಟ್ಟಿದ್ದೆವು. ಇದಕ್ಕಾಗಿ ಪುಟಗಳನ್ನು ಮುದ್ರಣಕ್ಕೆ ಅರ್ಧ ಗಂಟೆ ತಡ ಹಿಡಿದು ಆ ಪುಟವನ್ನು ಸಿದ್ಧಪಡಿಸಿದ್ದೆವು. ನಾನು ಬರೆದ ಲೇಖನ ಮುಖಪುಟದಿಂದ ಆರಂಭವಾಗಿ ವಿಶೇಷ ಪುಟದ ತನಕ ಸಾಗಿತ್ತು. ಮರುದಿನ ಗುಲ್ವಾಡಿಯವರು ಕೆಲಸ ಮಾಡಿದ 'ತರಂಗ' ಪತ್ರಿಕೆಯ 'ಉದಯವಾಣಿ' ದೈನಿಕ ಈ ಸುದ್ದಿಯನ್ನು ಹೇಗೆ ಕವರ್ ಮಾಡಿರಬಹುದು ಎಂಬ ಬಗ್ಗೆ ಅತೀವ ಕುತೂಹಲವಿತ್ತು. ಪಾಪ, ಗುಲ್ವಾಡಿಯವರು ತಣ್ಣಗೆ ಸಿಂಗಲ್ ಕಾಲಮ್ಮಿನಲ್ಲಿ ಮಲಗಿದ್ದರು!

ಮೂವತ್ತು–ನಲವತ್ತು ವರ್ಷ ಸುದ್ದಿಮನೆಯಲ್ಲಿ ಜೀವ ಸವೆಸಿದ ಒಬ್ಬೊಬ್ಬ ಪತ್ರಕರ್ತರು, ಆ ಅವಧಿಯಲ್ಲಿ ಏನಿಲ್ಲವೆಂದರೂ ಸಾವಿರಾರು ಜನರ ಸಾವನ್ನು ನೋಡಿರುತ್ತಾರೆ, ಅವರ ನಿಧನ ಸುದ್ದಿಯನ್ನು ಬರೆದಿರುತ್ತಾರೆ. ಅದರಲ್ಲೂ ಡೆಸ್ಕ್ ಪತ್ರಕರ್ತರು ಆ ಪ್ರತಿಯೊಂದು ಸಾವನ್ನೂ ನೆನಪಿನಲ್ಲಿ ಉಳಿಯುವಂತೆ ಕಟ್ಟಿಕೊಟ್ಟಿರುತ್ತಾರೆ. ಸತ್ತವರ ಬಗ್ಗೆ ಮಾಹಿತಿಯನ್ನು ಕಲೆ ಹಾಕುವುದು, ಅವರ ಹತ್ತಿರದವರಿಂದ ಬರೆಯಿಸುವುದು, ಅವರ ಇಡೀ ಜೀವನವನ್ನು ಅಕ್ಷರಗಳಲ್ಲಿ ಕೆತ್ತುವುದು, ಉತ್ತಮ, ಅಪರೂಪದ ಫೋಟೋಗಳನ್ನು ಹುಡುಕಿ ಪ್ರಕಟಿಸುವುದು, ಆ ಸುದ್ದಿಗೆ ಸದಾ ನೆನಪಿನಲ್ಲಿ ಉಳಿಯುವ ಶೀರ್ಷಿಕೆ ನೀಡುವುದು, ಆ ಪುಟವನ್ನು ವಿಶೇಷವಾಗಿ ವಿನ್ಯಾಸಗೊಳಿಸುವುದು, ಯಾವ ಸಣ್ಣ ತಪ್ಪೂ ನುಸುಳದಂತೆ ಕಣ್ಣಲ್ಲಿ ಕಣ್ಣಿಟ್ಟು ನೋಡುವುದು.. ಹೀಗೆ ಆ ಸಾವಿನ ಸುದ್ದಿಗೆ 'ಜೀವ ಕೊಡುವ' ಕಾಯಕದಲ್ಲಿ ನಿರತನಾಗಿರುತ್ತಾರೆ. ತಮ್ಮ ಪತ್ರಿಕೆಯಲ್ಲಿ ಆ ನಿಧನ ಸುದ್ದಿ ಚೆನ್ನಾಗಿ ಬರಬೇಕು ಎಂಬುದಷ್ಟೇ ಅವರ ಕಾಳಜಿ.

ಹೀಗಿರುವಾಗ, ಈ ಸುದ್ದಿಜೀವಿಗಳು ಸತ್ತರೆ ಅವರ ಸುದ್ದಿಗೂ ನ್ಯಾಯ ಸಿಗಬೇಕಲ್ಲವೇ? ಸತ್ತಾಗ ಒಮ್ಮೆ ಸುದ್ದಿ ಪ್ರಕಟಿಸಿದ ಮೇಲೆ ನಾವು ಅವರ ಬಗ್ಗೆ ನಂತರ ಏನು ಬರೆಯುತ್ತೇವೆ, ಹೇಳಿ? ಸುದ್ದಿಮನೆಯ ಕರ್ಮಯೋಗಿಗಳ ಸಾವು ಸಹ ಸುದ್ದಿಯಾಗಬೇಡವೇ? ಅಷ್ಟಕ್ಕೂ ಅವರೇನು ತಪ್ಪು ಮಾಡಿದ್ದಾರೆ?

ಈ ಕಾರಣದಿಂದಲೇ ಪತ್ರಕರ್ತರ ನಿಧನ ಸುದ್ದಿಯನ್ನು ನಾವು ಸಿಂಗಲ್ ಕಾಲಮ್ಮಿನ ಆಚೆ ನೋಡುವ ಪ್ರಯತ್ನವನ್ನು ಮಾಡಿದೆವು. ನನ್ನ ಜತೆ ಸುಮಾರು ಹದಿಮೂರು ವರ್ಷಗಳ ಕಾಲ, ಸುದ್ದಿ ಸಂಪಾದಕ ಮತ್ತು ಕಾರ್ಯನಿರ್ವಾಹಕ ಸಂಪಾದಕರಾಗಿ ಕೆಲಸ ಮಾಡಿದ ವಸಂತ ನಾಡಿಗೇರ ನಿಧನರಾದಾಗ, 'ವಿಶ್ವವಾಣಿ'ಯಲ್ಲಿ ಮುಖಪುಟದಲ್ಲಿ ಎರಡು ಕಾಲಮ್ಮುಗಳಲ್ಲಿ ಸುದ್ದಿ ಪ್ರಕಟಿಸಿ, ಒಳಗೆ ಒಂದಿಡೀ ಪುಟವನ್ನು ಮೀಸಲಿಟ್ಟಿದ್ದೆವು. ಡೆಸ್ಕ್ ಪತ್ರಕರ್ತರೊಬ್ಬರ ನಿಧನ ಸುದ್ದಿಯನ್ನು ಇಷ್ಟು ವ್ಯಾಪಕವಾಗಿ ಯಾರೂ ಕವರ್ ಮಾಡಿರಲಿಕ್ಕಿಲ್ಲ. ನಾಡಿಗೇರ ಆಗ ಕೆಲಸ ಮಾಡುತ್ತಿದ್ದ ಪತ್ರಿಕೆಯಲ್ಲಿ (ಸಂಯುಕ್ತ ಕರ್ನಾಟಕ) ಮೂರು ಕಾಲಮ್ಮು ಸುದ್ದಿ ಮಾತ್ರ ಪ್ರಕಟವಾಗಿತ್ತು.

ಪತ್ರಕರ್ತರು ಸಹ ಎಲ್ಲರಂತೆ ಸುದ್ದಿಗೆ ಅರ್ಹರು. ಅವರು ಹೇಗೆ ಸುದ್ದಿ ಬರೆಯುತ್ತಾರೋ, ಸುದ್ದಿಯಾಗಲೂ ಯೋಗ್ಯರು. ನಾನು 'ವಿಜಯ ಕರ್ನಾಟಕ'ದಲ್ಲಿದ್ದಾಗ, ನಮ್ಮ ಸಹೋದ್ಯೋಗಿ ಮಿತ್ರರಿಗೆ, ಅವರ ಕುಟುಂಬದವರಿಗೆ ಸಂಬಂಧಿಸಿದ ಸುದ್ದಿಯನ್ನೆಲ್ಲ ಪ್ರಕಟಿಸುತ್ತಿದ್ದೆವು. ನಮ್ಮ ಸಿಬ್ಬಂದಿಯ ವಿವಾಹ ಸುದ್ದಿಯನ್ನೂ ಪತ್ರಿಕೆಯಲ್ಲಿ ಸುದ್ದಿ ಮಾಡುತ್ತಿದ್ದೆವು. ನನ್ನ ನಂತರ ಆ ಸಂಪ್ರದಾಯ ನಿಂತುಹೋಯಿತು.

ಇವೆಲ್ಲ ಯಾಕೆ ನೆನಪಾಯಿತು ಅಂದ್ರೆ, ಬುಧವಾರ ಬೆಳಗ್ಗೆ 'ದಿ ಹಿಂದು' ಪತ್ರಿಕೆಯಲ್ಲಿ ಪಿ.ರಾಮಯ್ಯ ಅವರ ನಿಧನ ಸುದ್ದಿಯನ್ನು ಓದುತ್ತಿದ್ದೆ. ರಾಮಯ್ಯನವರು ಸುಮಾರು ನಲವತ್ತೆಂಟು ವರ್ಷಗಳ ಕಾಲ ಆ ಪತ್ರಿಕೆಯಲ್ಲಿ ಕೆಲಸ ಮಾಡಿದವರು. 'ಹಿಂದು ರಾಮಯ್ಯ' ಎಂದೇ ಎಲ್ಲರೂ ಅವರನ್ನು ಗುರುತಿಸುತ್ತಿದ್ದರು (ಅದೇ ಹೆಸರಿನಲ್ಲಿ ಅವರು ಆತ್ಮಕಥೆಯನ್ನೂ ಬರೆದಿದ್ದಾರೆ). ಅವರು ಆ ಪತ್ರಿಕೆಯ ಬೆಂಗಳೂರು ಆವೃತ್ತಿಯ ಮುಖ್ಯಸ್ಥರೂ ಆಗಿದ್ದರು. ಆ ಪತ್ರಿಕೆಯ ಕಚೇರಿ ನಿರ್ಮಾಣಕ್ಕೆ ಭೂಮಿ ಪಡೆಯಲು ರಾಮಯ್ಯನವರು ಹೆಣಗಿದ್ದರು. ಒಬ್ಬ ವ್ಯಕ್ತಿ ತನ್ನ ಜೀವಿತ ಅವಧಿಯ ಅರ್ಧ ಶತಮಾನವನ್ನು ಒಂದು ಸಂಸ್ಥೆಗೆ ಮೀಸಲಿಡುವುದು ಸಣ್ಣ ವಿಷಯವಲ್ಲ. ರಾಮಯ್ಯನವರ ನಿಧನ ಸುದ್ದಿ ಆ ಪತ್ರಿಕೆಯ ನಾಲ್ಕನೇ ಪುಟದಲ್ಲಿ ಡಬಲ್ ಕಾಲಮ್ಮಿನಲ್ಲಿ ಪ್ರಕಟವಾಗಿತ್ತು. 'ವಿಶ್ವವಾಣಿ' ಸೇರಿದಂತೆ ಕನ್ನಡ ಪತ್ರಿಕೆಗಳೇ ಅವರ ನಿಧನ ಸುದ್ದಿಗೆ ಇನ್ನೂ ಹೆಚ್ಚಿನ ಪ್ರಾಧಾನ್ಯ ನೀಡಿದ್ದವು! ರಾಮಯ್ಯನವರ ಬಗ್ಗೆ ಅವರ ಕಾಲಖಂಡದಲ್ಲಿ ಕೆಲಸ ಮಾಡಿದವರಿಂದ ನಾಲ್ಕು ಒಳ್ಳೆಯ ಮಾತುಗಳನ್ನು ಸಹ ಆ ಪತ್ರಿಕೆ ಬರೆಸಿ ಪ್ರಕಟಿಸಲಿಲ್ಲ!

ಛೇ!

ಭಾರತದಲ್ಲಿ ಹೊಸ ಮಾದರಿಯ ಆರ್ಥಿಕ ಕ್ರಾಂತಿ!

ಪ್ರಸ್ತುತ

ಡಾ.ಡಿ.ಸಿ.ನಂಜುಂಡ

vveditoped@gmail.com

ಇಂದಿನ ಜಾಗತಿಕ ಆರ್ಥಿಕ ವ್ಯವಸ್ಥೆಯಲ್ಲಿ 'ಆರೆಂಜ್ ಆರ್ಥಿಕತೆ' ಎಂಬ ಪರಿಕಲ್ಪನೆ ಮಹತ್ವ ಪಡೆದುಕೊಂಡಿದೆ. ಸೃಜನಶೀಲತೆ, ಸಂಸ್ಕೃತಿ, ಕಲಾ, ಮಾಧ್ಯಮ, ವಿನ್ಯಾಸ, ಬೌದ್ಧಿಕ ಸ್ವತ್ತು ಮತ್ತು ಡಿಜಿಟಲ್ ವಿಷಯ ನಿರ್ಮಾಣದ ಮೂಲಕ ಆದಾಯ ಸೃಷ್ಟಿಯಾಗುವ ಆರ್ಥಿಕ ವ್ಯವಸ್ಥೆಯೇ ಆರೆಂಜ್ ಆರ್ಥಿಕತೆ. ಸರಳವಾಗಿ ಹೇಳುವುದಾದರೆ, ಆಲೋಚನೆ ಮತ್ತು ಸೃಜನಶೀಲತೆ ಹಣಕ್ಕೆ ರೂಪಾಂತರಗೊಳ್ಳುವ ಆರ್ಥಿಕತೆಯೇ ಆರೆಂಜ್ ಆರ್ಥಿಕತೆ ಅಥವಾ ಸೃಜನಶೀಲ ಆರ್ಥಿಕತೆ. ವಿಶ್ವ ಬ್ಯಾಂಕ್ ಮತ್ತು ಇಂಟರ್-ಅಮೆರಿಕನ್ ಡೆವಲಪ್‌ಮೆಂಟ್ ಬ್ಯಾಂಕ್ ವರದಿಗಳ ಪ್ರಕಾರ, ಸೃಜನಾತ್ಮಕ ಕೈಗಾರಿಕೆಗಳು ಜಾಗತಿಕ ಜಿಡಿಪಿಯಲ್ಲಿ ಸುಮಾರು 3%ರಿಂದ 6%ವರೆಗೆ ಕೊಡುಗೆ ನೀಡುತ್ತವೆ. ಅಲ್ಲದೆ ವಿಶ್ವದಾದ್ಯಂತ 30 ಮಿಲಿಯನ್‌ಕ್ಕಿಂತ ಹೆಚ್ಚು ಜನರಿಗೆ ಉದ್ಯೋಗ ಒದಗಿಸುತ್ತವೆ.

ಭಾರತದಂತಹ ಸಂಸ್ಕೃತಿ ವೈವಿಧ್ಯತೆ ಮತ್ತು ಯುವಜನಸಂಖ್ಯೆ ಹೊಂದಿದ ದೇಶಕ್ಕೆ ಈ ಕ್ಷೇತ್ರವು ಭವಿಷ್ಯದ ಪ್ರಮುಖ ಆರ್ಥಿಕ ಚಾಲಕವಾಗಬಹುದು ಎನ್ನಲಾಗಿದೆ. ಭಾರತದಲ್ಲಿ ಸುಮಾರು 140 ಕೋಟಿ ಜನರಿದ್ದಾರೆ. ಇದರಲ್ಲಿಯೇ 65% ಜನರು 35 ವರ್ಷಕ್ಕಿಂತ ಕಡಿಮೆ ವಯಸ್ಸಿನವರು. ಇದು ವಿಶ್ವದಲ್ಲಿಯೇ ಅತಿ ದೊಡ್ಡ ಯುವಜನಸಂಖ್ಯೆ ಹೊಂದಿದ ದೇಶಗಳಲ್ಲಿ ಭಾರತವನ್ನು ಮುಂಚೂಣಿಯಲ್ಲಿ ತಂದು ನಿಲ್ಲಿಸುತ್ತದೆ.

ಭಾರತದ ಆರೆಂಜ್ ಆರ್ಥಿಕತೆ ದೇಶದ ಒಟ್ಟು ಜಿಡಿಪಿಗೆ ಸುಮಾರು 34% ಕೊಡುಗೆ ನೀಡುತ್ತದೆ ಎನ್ನುವ ಅಂದಾಜಿದೆ. ಇದರ ಒಟ್ಟು ಮೌಲ್ಯವು ಅಂದಾಜು 100120 ಬಿಲಿಯನ್ ಅಮೆರಿಕನ್ ಡಾಲರ್ (ಸುಮಾರು 810 ಲಕ್ಷ ಕೋಟಿ ರು.) ಆಗಿದೆ. ಭಾರತದ ಮೀಡಿಯಾ ಮತ್ತು ಮನರಂಜನೆ ಕ್ಷೇತ್ರ ಮಾತ್ರವೇ 2.3ರಿಂದ 2.5 ಲಕ್ಷ ಕೋಟಿ ರು. ಮೌಲ್ಯ ಹೊಂದಿದೆ. ಗೇಮಿಂಗ್ ಕ್ಷೇತ್ರ 3 ಬಿಲಿಯನ್ ಡಾಲರ್‌ಗಿಂತ ಹೆಚ್ಚು, ಕಂಟೆಂಟ್ ರಚನೆ ಕ್ಷೇತ್ರ ಸುಮಾರು 45 ಬಿಲಿಯನ್ ಡಾಲರ್ ಮತ್ತು ವಿವಿಧ ರೀತಿಯ ಬೌದ್ಧಿಕ ಸ್ವತ್ತಿನ ಉದ್ಯಮ 100 ಬಿಲಿಯನ್ ಡಾಲರ್ ಮೌಲ್ಯ ಹೊಂದಿದೆ. ಈ ಕ್ಷೇತ್ರಗಳು ಭಾರತದಲ್ಲಿ ಲಕ್ಷಾಂತರ ಉದ್ಯೋಗಗಳನ್ನು ಸೃಷ್ಟಿಸುತ್ತಿವೆ.

ಮುಖ್ಯವಾಗಿ ಭಾರತದಲ್ಲಿ ಸುಮಾರು 850 ಮಿಲಿಯನ್‌ಕ್ಕಿಂತ ಹೆಚ್ಚು ಇಂಟರ್ನೆಟ್ ಬಳಕೆದಾರರು ಇದ್ದಾರೆ. ಭಾರತವು ಜಗತ್ತಿನಲ್ಲಿ ಅತಿ ಕಡಿಮೆ ದರದ ಮೊಬೈಲ್ ಡೇಟಾ ಹೊಂದಿದ ದೇಶಗಳಲ್ಲಿ ಒಂದು. ಕಡಿಮೆ ದರದ ಡೇಟಾ ಸೌಲಭ್ಯದಿಂದ ಯೂಟ್ಯೂಬ್, ಇನ್‌ಸ್ಟಾಗ್ರಾಮ್, ಒಟಿಟಿ ವೇದಿಕೆಗಳು ಮತ್ತು ಗೇಮಿಂಗ್ ಅಪ್ಲಿಕೇಶನ್‌ಗಳ ಬಳಕೆ ಗಣನೀಯವಾಗಿ ಹೆಚ್ಚಾಗಿದೆ. ಭಾರತದ ಡಿಜಿಟಲ್ ಆರ್ಥಿಕತೆ 2025ರೊಳಗೆ 1 ಟ್ರಿಲಿಯನ್ ಡಾಲರ್ ಮೌಲ್ಯ ತಲುಪಬಹುದು ಎಂಬ ಅಂದಾಜುಗಳಿವೆ. ಈ ಡಿಜಿಟಲ್ ವಿಸ್ತರಣೆ ಆರೆಂಜ್ ಆರ್ಥಿಕತೆಗೆ ಬಲವಾದ ನೆಲೆಯನ್ನು ಒದಗಿಸುತ್ತದೆ.

ಭಾರತವು ಪ್ರತಿ ವರ್ಷ ಸುಮಾರು 1,800ರಿಂದ 2,000 ಚಲನಚಿತ್ರಗಳನ್ನು ವಿವಿಧ ಭಾಷೆಗಳಲ್ಲಿ ನಿರ್ಮಿಸುತ್ತದೆ. ಇದು ಜಗತ್ತಿನಲ್ಲಿ ಅತಿ ಹೆಚ್ಚು ಚಿತ್ರಗಳನ್ನು ಉತ್ಪಾದಿಸುವ ದೇಶಗಳಲ್ಲಿ ಭಾರತವನ್ನು ಪ್ರಮುಖ ಸ್ಥಾನದಲ್ಲಿ ನಿಲ್ಲಿಸುತ್ತದೆ. ಭಾರತದ ಮೀಡಿಯಾ ಮತ್ತು ಎಂಟರ್‌ಟೇನ್‌ಮೆಂಟ್ ಕ್ಷೇತ್ರದ ಮೌಲ್ಯ ಸುಮಾರು 2 ಲಕ್ಷ ಕೋಟಿ ರುಪಾಯಿಗಳಿಗಿಂತ ಹೆಚ್ಚು ಎಂದು ಅಂದಾಜಿಸಲಾಗಿದೆ. ಒಟಿಟಿ ವೇದಿಕೆಗಳ ಬಳಕೆ ಸಹ ವೇಗವಾಗಿ ಹೆಚ್ಚುತ್ತಿದ್ದು, ಭಾರತದಲ್ಲಿ 10 ಕೋಟಿಗಿಂತ ಹೆಚ್ಚು ಒಟಿಟಿ ಚಂದಾದಾರರು ಇದ್ದಾರೆ. ಪ್ರಾದೇಶಿಕ ಚಿತ್ರಗಳು ಮತ್ತು ವೆಬ್ ಸರಣಿಗಳು ಜಾಗತಿಕ ಮಟ್ಟದಲ್ಲಿ ಜನಪ್ರಿಯವಾಗುತ್ತಿವೆ. ಇದು ಭಾರತೀಯ ಸಂಸ್ಕೃತಿಯನ್ನು ವಿಶ್ವದಾದ್ಯಂತ ಪರಿಚಯಿಸುವುದರ ಜೊತೆಗೆ ವಿದೇಶಿ ವಿನಿಮಯ ಆದಾಯವನ್ನು ಹೆಚ್ಚಿಸುತ್ತದೆ.

ಭಾರತದ ಆನ್‌ಲೈನ್ ಗೇಮಿಂಗ್ ಮಾರುಕಟ್ಟೆ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಕ್ಷೇತ್ರವಾಗಿದೆ. 2023ರ ಅಂದಾಜುಗಳ ಪ್ರಕಾರ, ಭಾರತದಲ್ಲಿ 50 ಕೋಟಿಗಿಂತ ಹೆಚ್ಚು ಗೇಮಿಂಗ್ ಬಳಕೆದಾರರು ಇದ್ದಾರೆ. ಭಾರತೀಯ ಗೇಮಿಂಗ್

ಉದ್ಯಮದ ಮೌಲ್ಯ 3 ಬಿಲಿಯನ್ ಡಾಲರ್‌ಗಿಂತ ಹೆಚ್ಚು ಆಗಿದ್ದು, ಮುಂದಿನ ಕೆಲವು ವರ್ಷಗಳಲ್ಲಿ ಇದು ದ್ವಿಗುಣಗೊಳ್ಳುವ ಸಾಧ್ಯತೆಯಿದೆ. Animation, VFX, Gaming, Comics ಕ್ಷೇತ್ರದಲ್ಲಿ ಭಾರತ ಜಾಗತಿಕ ಔಟ್ ಸೋರ್ಸಿಂಗ್ ಕೇಂದ್ರವಾಗುತ್ತಿದೆ. ಈ ಕ್ಷೇತ್ರದಲ್ಲಿ ಲಕ್ಷಾಂತರ ಯುವಕರು ಉದ್ಯೋಗ ಪಡೆಯುತ್ತಿದ್ದಾರೆ. ಸರ್ಕಾರವೂ ಅನಿಮೇಷನ್ ಕ್ಷೇತ್ರಕ್ಕೆ ವಿಶೇಷ ಪ್ರೋತ್ಸಾಹ ನೀಡುತ್ತಿದೆ.

ಯೂಟ್ಯೂಬ್ ಮತ್ತು ಇನ್‌ಸ್ಟಾಗ್ರಾಮ್ ಮೂಲಕ ಸಾವಿರಾರು ಭಾರತೀಯ ಕ್ರಿಯೇಟರ್‌ಗಳು ತಿಂಗಳಿಗೆ ಲಕ್ಷಾಂತರ ರುಪಾಯಿ ಆದಾಯ ಗಳಿಸುತ್ತಿದ್ದಾರೆ. ಭಾರತದಲ್ಲಿ 40 ಕೋಟಿಗಿಂತ ಹೆಚ್ಚು ಯೂಟ್ಯೂಬ್ ಬಳಕೆದಾರರು ಇದ್ದಾರೆ. ಭಾರತದ ಸಂಗೀತ ಸ್ಟ್ರೀಮಿಂಗ್ ಮಾರುಕಟ್ಟೆ ವೇಗವಾಗಿ ಬೆಳೆಯುತ್ತಿದ್ದು, ಸ್ಪೋಟಿಫೈ, ಗಾನಾ, ಜಿಯೋಸಾವನ್ ಮುಂತಾದ ವೇದಿಕೆಗಳಲ್ಲಿ ಕೋಟ್ಯಂತರ ಜನರು ಸಂಗೀತವನ್ನು ಕೇಳುತ್ತಿದ್ದಾರೆ. ಇನ್‌ಫ್ಲುಯೆನ್ಸರ್ (ಸೆಲೆಬ್ರಿಟಿಗಳು) ಆರ್ಥಿಕತೆ ಭಾರತದಲ್ಲಿ ಸಾವಿರಾರು ಹೊಸ ಉದ್ಯೋಗಗಳನ್ನು ಸೃಷ್ಟಿಸಿದೆ.

ಭಾರತದ ಹಸ್ತಕಲೆ ಕ್ಷೇತ್ರದಲ್ಲಿ ಸುಮಾರು 70 ಲಕ್ಷಕ್ಕಿಂತ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಾರೆ. ಭಾರತೀಯ ಹಸ್ತಕಲೆಗಳ ರಫ್ತು ಮೌಲ್ಯ ವರ್ಷಕ್ಕೆ 4 ಬಿಲಿಯನ್ ಡಾಲರ್‌ಗಿಂತ ಹೆಚ್ಚು ಇದೆ. ಜಿಯೋ ಟ್ಯಾಗ್ ಪಡೆದ ಉತ್ಪನ್ನಗಳು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆ ಪಡೆಯುತ್ತಿವೆ. ಡಿಜಿಟಲ್ ಮಾರುಕಟ್ಟೆ ವೇದಿಕೆಗಳ ಮೂಲಕ ಗ್ರಾಮೀಣ ಕಲಾವಿದರು ತಮ್ಮ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದಾರೆ. ಇದರಿಂದ ಗ್ರಾಮೀಣ ಆರ್ಥಿಕತೆಗೆ ಉತ್ತೇಜನ ದೊರೆಯುತ್ತಿದೆ. ಭಾರತದ ಫ್ಯಾಷನ್ ಉದ್ಯಮದ ಮೌಲ್ಯ ಸುಮಾರು 100 ಬಿಲಿಯನ್ ಡಾಲರ್‌ಗಿಂತ ಹೆಚ್ಚು ಎಂದು ಅಂದಾಜಿಸಲಾಗಿದೆ. ಕ್ರಿಯಾತ್ಮಕ ಫ್ಯಾಷನ್ ಮತ್ತು ಹಸ್ತಕಲಾ ಆಧಾರಿತ ಉತ್ಪನ್ನಗಳಿಗೆ ಜಾಗತಿಕ ಬೇಡಿಕೆ ಹೆಚ್ಚುತ್ತಿದೆ. D2C (Direct-to-Consumer) ಬ್ರ್ಯಾಂಡ್‌ಗಳು ವೇಗವಾಗಿ ಬೆಳೆಯುತ್ತಿದ್ದು, ಸಾವಿರಾರು ಯುವ ಉದ್ಯಮಿಗಳು ತಮ್ಮ ಸ್ವಂತ ಬ್ರ್ಯಾಂಡ್‌ಗಳನ್ನು ಆರಂಭಿಸಿದ್ದಾರೆ.

ಭಾರತದಲ್ಲಿ ಆರೆಂಜ್ ಆರ್ಥಿಕತೆ ಬೆಳೆಯಲು ಹಲವಾರು ನಗರಗಳು ಉತ್ತಮ ಸಾಮರ್ಥ್ಯ ಹೊಂದಿವೆ. ಮುಂಬೈ ಚಿತ್ರರಂಗ ಮತ್ತು ಮನರಂಜನೆಯ ಮುಖ್ಯ ಕೇಂದ್ರವಾಗಿದ್ದು, ಬಾಲಿವುಡ್ ಮತ್ತು ಪ್ರಮುಖ ಮೀಡಿಯಾ ಸಂಸ್ಥೆಗಳ ಮೂಲಕ ಜಾಗತಿಕ ವಿಷಯ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಕರ್ನಾಟಕದ ಬೆಂಗಳೂರು ಗೇಮಿಂಗ್, ಅನಿಮೇಷನ್ ಮತ್ತು ಸ್ಟಾರ್ಟ್‌ಅಪ್ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದ್ದು, ತಂತ್ರಜ್ಞಾನ ಆಧಾರಿತ ಸೃಜನಾತ್ಮಕ ಉದ್ಯಮಗಳಿಗೆ ಅನುಕೂಲಕರವಾಗಿದೆ. ಹೈದರಾಬಾದ್ ಚಲನಚಿತ್ರ ನಿರ್ಮಾಣದ ಪ್ರಮುಖ ಕೇಂದ್ರವಾಗಿದೆ.

ಚೆನ್ನೈ ಪ್ರಾದೇಶಿಕ ಚಿತ್ರರಂಗ ಮತ್ತು ಸಂಗೀತ ಕ್ಷೇತ್ರದಲ್ಲಿ ಬಲವಾಗಿದ್ದು, ಡಿಜಿಟಲ್ ವಿಷಯ ನಿರ್ಮಾಣದಲ್ಲೂ ಬೆಳೆಯುತ್ತಿದೆ. ದೆಹಲಿ ಫ್ಯಾಷನ್, ವಿನ್ಯಾಸ ಮತ್ತು ಬೌದ್ಧಿಕ ಸ್ವತ್ತಿನ ಕ್ಷೇತ್ರಗಳಲ್ಲಿ ಪ್ರಮುಖ ಸ್ಥಾನ ಹೊಂದಿದೆ. ಕೋಲ್ಕತ್ತಾ ಸಾಹಿತ್ಯ, ರಂಗಭೂಮಿ ಮತ್ತು ಕಲಾ ಪರಂಪರೆಯ ಮೂಲಕ ಸಾಂಸ್ಕೃತಿಕ ಆರ್ಥಿಕತೆಯಲ್ಲಿ ವಿಶೇಷ ಸ್ಥಾನ ಪಡೆದಿದೆ. ಜಯಪುರ ಮತ್ತು ಅಹಮದಾಬಾದ್ ಹಸ್ತಕಲೆ, ವಿನ್ಯಾಸ ಮತ್ತು ಉಪಉತ್ಪನ್ನಗಳ ಮೂಲಕ ಜಾಗತಿಕ ಮಾರುಕಟ್ಟೆಗಳಲ್ಲಿ ಅವಕಾಶಗಳನ್ನು ಹೊಂದಿವೆ. ಕೊಚ್ಚಿ, ಪುಣೆ ಮತ್ತು ಇತರ ಎರಡನೇ ದರ್ಜೆಯ ನಗರಗಳು ಕೂಡ ಸಾಂಸ್ಕೃತಿಕ ಉತ್ಸವಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸ್ಟಾರ್ಟ್‌ಅಪ್ ಪರಿಸರದಿಂದ ಹೊಸ ಅವಕಾಶಗಳನ್ನು ನಿರ್ಮಿಸುತ್ತಿವೆ. ಸಂಸ್ಕೃತಿ, ಡಿಜಿಟಲ್ ಮೂಲಸೌಕರ್ಯ ಮತ್ತು ಉದ್ಯಮಶೀಲತೆ ಒಂದಾಗುವ ನಗರಗಳೇ ಭಾರತದಲ್ಲಿ ಆರೆಂಜ್ ಆರ್ಥಿಕತೆಯ ಪ್ರಮುಖ ಕೇಂದ್ರಗಳಾಗುವ ಸಾಧ್ಯತೆ ಹೊಂದಿವೆ.

ಭಾರತದಲ್ಲಿ ಆರೆಂಜ್ ಆರ್ಥಿಕತೆ ಬೆಳೆಸಲು ಕೇಂದ್ರ ಸರ್ಕಾರ ಹಲವು ಪ್ರಮುಖ ಯೋಜನೆಗಳನ್ನು ಜಾರಿಗೆ ತಂದಿದೆ. ಸ್ಟಾರ್ಟ್‌ಅಪ್ ಇಂಡಿಯಾ ಯೋಜನೆಯ ಮೂಲಕ ಸೃಜನಾತ್ಮಕ ಉದ್ಯಮಿಗಳಿಗೆ ತೆರಿಗೆ ಸವಲತ್ತು ಮತ್ತು ಹಣಕಾಸು ನೆರವು ನೀಡಲಾಗುತ್ತಿದೆ. ಡಿಜಿಟಲ್ ಇಂಡಿಯಾ ಅಭಿಯಾನವು ಇಂಟರ್ನೆಟ್ ಮೂಲಸೌಕರ್ಯವನ್ನು ವಿಸ್ತರಿಸಿ ಡಿಜಿಟಲ್ ವಿಷಯ ನಿರ್ಮಾಣಕ್ಕೆ ಉತ್ತೇಜನ ನೀಡುತ್ತದೆ. ಅನಿಮೇಷನ್, ಆನ್‌ಲೈನ್ ಗೇಮಿಂಗ್ ಮತ್ತು ಕಾಮಿಕ್ಸ್ ಕ್ಷೇತ್ರಗಳನ್ನು ಜಾಗತಿಕ ಮಟ್ಟಕ್ಕೆ ಏರಿಸಲು ಕಾರ್ಯನಿರ್ವಹಿಸುತ್ತದೆ. ರಾಷ್ಟ್ರೀಯ ಶಿಕ್ಷಣ ನೀತಿ 2020 ಸೃಜನಶೀಲತೆ ಮತ್ತು ಕೌಶಲ್ಯಾಭಿವೃದ್ಧಿಗೆ ಒತ್ತು ನೀಡುತ್ತದೆ. ಸ್ಕಿಲ್ ಇಂಡಿಯಾ ಮಿಷನ್ ಮಾಧ್ಯಮ, ವಿನ್ಯಾಸ ಮತ್ತು ಶಿಲ್ಪಕಲೆ ಕ್ಷೇತ್ರಗಳಲ್ಲಿ ತರಬೇತಿ ಒದಗಿಸುತ್ತಿದೆ. ರಾಷ್ಟ್ರೀಯ ಕ್ರಿಯಾತ್ಮಕ ಅಭಿವೃದ್ಧಿ ಕಾರ್ಯಕ್ರಮ ಕಾರ್ಮಿಕರಿಗೆ ತರಬೇತಿ, ಮಾರುಕಟ್ಟೆ ಮತ್ತು ಆರ್ಥಿಕ ಬೆಂಬಲ ನೀಡುತ್ತದೆ. ಜೊತೆಗೆ, ಚಲನಚಿತ್ರ ಅಭಿವೃದ್ಧಿ ಮಂಡಳಿ ಭಾರತವನ್ನು ಚಲನಚಿತ್ರ ನಿರ್ಮಾಣದ ಕೇಂದ್ರವಾಗಿ ರೂಪಿಸಲು ಸಹಾಯ ಮಾಡುತ್ತದೆ. ಇವುಗಳ ಸಮೂಹ ಪರಿಣಾಮದಿಂದ ಭಾರತದಲ್ಲಿ ಸೃಜನಶೀಲ ಆರ್ಥಿಕತೆಗೆ ಬಲ ದೊರೆಯುತ್ತಿದೆ.

ಭಾರತವು ತನ್ನ ಸಂಸ್ಕೃತಿ ವೈವಿಧ್ಯತೆ, ಯುವಜನಸಂಖ್ಯೆ ಮತ್ತು ವೇಗವಾಗಿ ಬೆಳೆಯುತ್ತಿರುವ ಡಿಜಿಟಲ್ ಮೂಲಸೌಕರ್ಯದಿಂದ ಆರೆಂಜ್ ಆರ್ಥಿಕತೆಯಲ್ಲಿ ಅಪಾರ ಅವಕಾಶಗಳನ್ನು ಹೊಂದಿದೆ. ಭಾರತದ ಜನಸಂಖ್ಯೆಯ ಬಹುಪಾಲು ಯುವಕರಾಗಿದ್ದು, ಸೃಜನಾತ್ಮಕ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಹೊಸ ಆವಿಷ್ಕಾರಗಳನ್ನು ಮಾಡುತ್ತಿದ್ದಾರೆ. 35 ವರ್ಷಕ್ಕಿಂತ ಕಡಿಮೆ ವಯಸ್ಸಿನ ಜನರು ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಹೊಸ ಆಲೋಚನೆಗಳು, ಸ್ಟಾರ್ಟ್‌ಅಪ್‌ಗಳು ಮತ್ತು ಡಿಜಿಟಲ್ ಉದ್ಯಮಗಳಿಗೆ ಭಾರೀ ಅವಕಾಶಗಳಿವೆ.

ಆರೆಂಜ್ ಆರ್ಥಿಕತೆ ಭಾರತದಲ್ಲಿ ಸುಮಾರು 5 ಲಕ್ಷಕ್ಕಿಂತ ಹೆಚ್ಚು ಹೊಸ ಉದ್ಯೋಗಗಳನ್ನು ಸೃಷ್ಟಿಸಬಹುದು ಎನ್ನಲಾಗಿದೆ. ವಿಶೇಷವಾಗಿ ಸ್ವಯಂ ಉದ್ಯೋಗ ಮತ್ತು ಸ್ಟಾರ್ಟ್ ಅಪ್‌ಗಳಿಗೆ ಈ ಕ್ಷೇತ್ರ ಉತ್ತಮ ಅವಕಾಶ ಒದಗಿಸುತ್ತದೆ. ಭಾರತದ ಸ್ಟಾರ್ಟ್‌ಅಪ್ ಪರಿಸರದಲ್ಲಿ ಈಗಾಗಲೇ 100ಕ್ಕೂ ಹೆಚ್ಚು ಯುನಿಕಾರ್ನ್ ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ. ಕ್ರಿಯೇಟಿವ್ ಟೆಕ್, ಗೇಮಿಂಗ್, ಮೀಡಿಯಾ ಮತ್ತು ಡಿಜಿಟಲ್ ವಿಷಯ ಕ್ಷೇತ್ರಗಳಲ್ಲಿ ಹೊಸ ಕಂಪನಿಗಳು ವೇಗವಾಗಿ ಬೆಂಗಳೂರಿನಲ್ಲಿ ಬೆಳೆಯುತ್ತಿವೆ. ಆದಾಗ್ಯೂ, ಇಲ್ಲಿ ಕೆಲವು ಸವಾಲುಗಳಿವೆ. ಪೈರಸಿ ಸಮಸ್ಯೆಯಿಂದ ಚಿತ್ರರಂಗ ಮತ್ತು ಸಂಗೀತ ಕ್ಷೇತ್ರಕ್ಕೆ ವರ್ಷಕ್ಕೆ ಸಾವಿರಾರು ಕೋಟಿ ರುಪಾಯಿ ನಷ್ಟವಾಗುತ್ತಿದೆ. ಬೌದ್ಧಿಕ ಸ್ವತ್ತು ರಕ್ಷಣೆ ಕಾಯ್ದೆಯನ್ನು ಮತ್ತಷ್ಟು ಬಲಪಡಿಸುವ ಅಗತ್ಯವಿದೆ. ಸಣ್ಣ ಸೃಜನಶೀಲರಿಗೆ ಹಣಕಾಸು ಮತ್ತು ತಾಂತ್ರಿಕ ತರಬೇತಿ ಒದಗಿಸುವುದು ಮುಖ್ಯವಾಗಿದೆ. ಕೃತಕ ಬುದ್ಧಿಮತ್ತೆ ಮತ್ತು ಡಿಜಿಟಲ್ ಸ್ವತ್ತುಗಳ ಬೆಳವಣಿಗೆ ಸೃಜನಾತ್ಮಕ ಕ್ಷೇತ್ರಗಳಿಗೆ ಹೆಚ್ಚಿನ ಪ್ರೋತ್ಸಾಹ ಬೇಕಿದೆ.

ಭಾರತದ ಯುವಜನರ ಸೃಜನಶೀಲತೆ ಮತ್ತು ಡಿಜಿಟಲ್ ಸಾಮರ್ಥ್ಯವನ್ನು ಸರಿಯಾಗಿ ಬಳಸಿಕೊಂಡರೆ, ಭಾರತ ಆರೆಂಜ್ ಆರ್ಥಿಕತೆಯಲ್ಲಿ ಜಾಗತಿಕ ನಾಯಕತ್ವ ಸಾಧಿಸಬಹುದು. ಆರೆಂಜ್ ಆರ್ಥಿಕತೆ ಭಾರತಕ್ಕೆ ಕೇವಲ ಆರ್ಥಿಕ ಬೆಳವಣಿಗೆಯ ಸಾಧನವಲ್ಲ; ಇದು ಸಂಸ್ಕೃತಿ, ಸೃಜನಶೀಲತೆ ಮತ್ತು ತಂತ್ರಜ್ಞಾನಗಳ ಸಂಯೋಜನೆಯ ಮೂಲಕ ದೇಶದ ಭವಿಷ್ಯವನ್ನು ರೂಪಿಸುವ ಶಕ್ತಿ ಹೊಂದಿದೆ. ಸರಿಯಾದ ನೀತಿಗಳು, ಬಲವಾದ ಡಿಜಿಟಲ್ ಮೂಲಸೌಕರ್ಯ ಮತ್ತು ಯುವಜನರ ಸಕ್ರಿಯ ಭಾಗವಹಿಸುವಿಕೆಯಿಂದ ಭಾರತವು ಈ ಕ್ಷೇತ್ರದಲ್ಲಿ ವಿಶ್ವದ ಪ್ರಮುಖ ರಾಷ್ಟ್ರವಾಗಿ ಹೊರಹೊಮ್ಮಬಹುದು. ಚೀನಾವನ್ನು ಹಿಂದಿಕ್ಕಬಹುದು.

ಭಟ್ಟರ್ ಸ್ಕಾಚ್

- **ಹೇಮಂತ ನಾಡಿಗ್, ಗಿರಿನಗರ**
  ಭಟ್ರೇ, ವೈಫೈಗೂ, ಪ್ರೀತಿಗೂ ಇರುವ ವ್ಯತ್ಯಾಸ?
- **ವೈಫೈ ಹತ್ತಿರ ಹೋದಷ್ಟೂ ಸಿಗ್ನಲ್ ಜಾಸ್ತಿ, ಪ್ರೀತಿಯಲ್ಲಿ ಹತ್ತಿರ ಹೋದಷ್ಟೂ 'ಕಿರಿಕಿರಿ' ಜಾಸ್ತಿ!**

- **ರಾಮನ್, ಬೆಂಗಳೂರು**
  ಭಟ್ರೇ, ಸ್ಮಾರ್ಟ್‌ಫೋನ್ ಬಂದ ಮೇಲೆ ಹೆಚ್ಚು ಕಷ್ಟಪಡುತ್ತಿರುವುದು ಯಾರು?
- **ಗೋಡೆ ಮೇಲೆ ಹಾಕಿರುವ ಗಡಿಯಾರಗಳು; ಕಾರಣ ಯಾರೂ ಅವುಗಳ ಮುಖ ನೋಡುವುದೇ ಇಲ್ಲ!**

- **ಪಿ.ಕೆ.ಕುಮಾರ, ಕುಣಿಗಲ್**
  ಭಟ್ರೇ, ಪರೀಕ್ಷೆ ಬರೆಯುವ ವಿದ್ಯಾರ್ಥಿ, ಬ್ಯಾಟರ್ ನಡುವಿನ ಸಾಮ್ಯತೆ ಏನು?
- **ಇಬ್ಬರೂ ನೂರಕ್ಕೆ ನೂರು ಹೊಡೆಯಬೇಕು ಅಂದುಕೊಂಡಿರುತ್ತಾರೆ, ಆದರೆ ಸೊನ್ನೆ ಸುತ್ತದಿದ್ದರೆ ಸಾಕು ಅಂತ ಪ್ರಾರ್ಥಿಸುತ್ತಿರುತ್ತಾರೆ!**

- **ವೆಂಕಟೇಶ ಹೆಗಡೆ, ಸಿದ್ದಾಪುರ**
  ಭಟ್ರೇ, ಮದುವೆಯಾದ ಮೇಲೆ ಗಂಡನಿಗೆ ಯಾಕೆ ಕಿವಿ ಸರಿಯಾಗಿ ಕೇಳಿಸುವುದಿಲ್ಲ?
- **ಅದು ಕಿವಿ ದೋಷವಲ್ಲ, ಅದು ದೇಹದ 'ಆಟೋಮ್ಯಾಟಿಕ್ ಡಿಫೆನ್ಸ್ ಸಿಸ್ಟಮ್'!**

- **ಸುಬ್ರಾಯ ಶರ್ಮ, ಶಿವಮೊಗ್ಗ**
  ಭಟ್ರೇ, ಡಯಟ್ ಶುರು ಮಾಡಿದ ಮೇಲೆ ಅತಿ ಹೆಚ್ಚು ನೆನಪಾಗುವ ವಸ್ತು ಯಾವುದು?
- **ನಾವು ಮರೆತಿದ್ದ ಎಲ್ಲ ಬೇಕರಿಗಳ ಅಡ್ರೆಸ್ ಮತ್ತು ಅಲ್ಲಿನ ಮಸಾಲಾ ಪುರಿ ರುಚಿ!**

- **ಶರಣ್ ಕುಮಾರ, ಮಲ್ಲೇಶ್ವರ**
  ಭಟ್ರೇ, ವಿಮಾನದ ಒಳಗಿರುವ ಪೈಲಟ್ ಮತ್ತು ಆಫೀಸಿನ ಬಾಸ್ ನಡುವಿನ ವ್ಯತ್ಯಾಸ?
- **ಪೈಲಟ್ ತಾನು ಎಲ್ಲಿದ್ದರೂ ವಿಮಾನವನ್ನು ಇಳಿಸುತ್ತಾನೆ, ಆದರೆ ಬಾಸ್ ನಾವು ಎಲ್ಲಿ ಹೋದರೂ ನಮಗೆ 'ಇಳಿಸುತ್ತಾನೆ'!**

- **ಚಂದ್ರು, ರಾಮನಗರ**
  ಭಟ್ರೇ, ಎಪ್‌ಸ್ಟೈನ್ ಫೈಲಿನಲ್ಲಿ ನಿಮ್ಮ ಹೆಸರು ಬಂದರೆ?
- **ನಿನಗೆ ಪಾರ್ಟಿ ಕೊಡ್ತೇನೆ!**

- **ಗೋವಿಂದರಾಜು, ಮೈಸೂರು**
  ಭಟ್ರೇ, ಜೀವನದ ಅತಿ ದೊಡ್ಡ ಸತ್ಯ ಯಾವುದು?
- **ಸಣ್ಣ ವಯಸ್ಸಿದ್ದಾಗ ಬೇಗ ದೊಡ್ಡವರಾಗಬೇಕು ಎನಿಸುತ್ತದೆ, ದೊಡ್ಡವರಾದ ಮೇಲೆ ಮತ್ತೆ ಎಲ್‌ಕೆಜಿಗೇ ಹೋಗಬೇಕು ಎನಿಸುತ್ತದೆ!**

- **ಹರಿ, ಬೆಂಗಳೂರು**
  ಭಟ್ರೇ, ದೇವೇಗೌಡರಿಗೆ ಈ ವಯಸ್ಸಿನಲ್ಲಿ ಸ್ವಪ್ನದಲ್ಲಿ ಯಾರು ಬರುತ್ತಾರಂತೆ ?
- **ಸಿದ್ದರಾಮಯ್ಯ ಬಂದ್ರೆ ದುಃಸ್ವಪ್ನ ಅಂತಾರಂತೆ!**

ಶಿವರಾತ್ರಿ: ರುದ್ರವಿಲಾಸ ಮತ್ತು ಶಿವಕರುಣೆ



ಕಾಡುದಾರಿ
ಹರೀಶ್ ಕೇರ
vveditoped@gmail.com

ಕಾಶಿಯ ಮಣಿಕರ್ಣಿಕಾ ಘಾಟ್‌ನಲ್ಲಿ ಸಂಜೆಯ ಒಂದು ಹೊತ್ತು. ಶವಗಳು ಸಾಲುಸಾಲಾಗಿ ಬರುತ್ತಲೇ ಇರುತ್ತವೆ. ಮಂಜುಳನಾದದೊಂದಿಗೆ ಹರಿಯುವ ಗಂಗೆಯ ದಡದಲ್ಲಿರುವ ಮಣಿಕರ್ಣಿಕೆಯ ಚಿತೆಗಳಿಗೆ ಕ್ಷಣವೂ ಬಿಡುವೇ ಇಲ್ಲ. ಚಿತೆಗಳು ಜೋರಾಗಿ ಉರಿಉರಿದಷ್ಟೂ ಅಲ್ಲೇ ಇರುವ ತಾರಕೇಶ್ವರ ದೇವಾಲಯದಲ್ಲಿ ಗಂಟೆ ಜಾಗಟೆಗಳ ನಿನಾದ ಜೋರಾಗುತ್ತದೆ. ತುಸುದೂರದ ಎತ್ತರದ ಕಾಶಿ ವಿಶ್ವನಾಥ ದೇವಾಲಯದಿಂದಲೂ ಸಹಸ್ರ ಭಕ್ತರ ಹರ ಹರ ಮಹಾದೇವ ಎಂಬ ಘೋಷ ಕೇಳಿಬಂದಂತಾಗುತ್ತದೆ. ಗಂಗೆಯ ಆಚೆಗೆ ಸೂರ್ಯ ಮುಳುಗುತ್ತಿದ್ದರೆ ಸನಿಹದ ದಶಾಶ್ವಮೇಧ ಘಾಟ್‌ನಲ್ಲಿ ಗಂಗಾರತಿ ತಯಾರಿ ನಡೆಯುತ್ತಿರುತ್ತದೆ. ಶವ ಸುಡಲು, ಬಂಧುಗಳ ಅಸ್ಥಿ ವಿಸರ್ಜನೆಗೆ, ಗಂಗಾರತಿ ನೋಡಲು, ವಿಶ್ವನಾಥನ ದರ್ಶನ ಮಾಡಲು, ಗಂಗೆಯಲ್ಲಿ ಮುಳುಗು ಹಾಕಿ ಪುನೀತರಾಗಲು ಬಂದವರೆಲ್ಲ ಒಂದೇ ಒಂದು ಭಾವದಲ್ಲಿ ತೊಯ್ದಂತಿದ್ದಾರೆ- ಶಿವಮಯಂ ಜಗತ್.

ಕವಿ ದ.ರಾ.ಬೇಂದ್ರೆಯವರು ಇದನ್ನೆಲ್ಲ ಕಂಡರೋ ಏನೋ. ಅದಕ್ಕೇ ಬರೆದರು- 'ರುದ್ರವಿಲಾಸದ ಪರಿಯೇ ಬೇರೆ/ ಶಿವ ಕರುಣೆಯು ಹಿರಿದು!' ಒಂದು ಕಡೆ ಮಣಿಕರ್ಣಿಕೆಯಲ್ಲಿ ಹೊತ್ತಿ ಉರಿಯುತ್ತಿರುವ ಚಿತೆಗಳ ಸರಣಿ ಮೆರವಣಿಗೆ. ಅಲ್ಲಿ ನಿಂತವರಿಗೆ ಕಾಲಾಗ್ನಿಯ ನಡುವೆ ನಿಂತಂಥ ಅನುಭವ ಖಚಿತ. ಅಲ್ಲಿಂದ ಎರಡೇ ಮೆಟ್ಟಲು ಈಚೆಗಿಳಿದರೆ ಶಿವ ಕರುಣೆಯಂತೆ ಗಂಗೆ ಪ್ರಾಂಜಲವಾಗಿ ಹರಿಯುತ್ತಿದ್ದಾಳೆ. ಅವಳು ಶಿವ ಜಟೆಯಿಂದಲೇ ಇಳಿದು ಬಂದವಳಲ್ಲವೇ? ಅಲ್ಲಿ ಮುಳುಗಿ ಏಳುತ್ತಿರುವವರ ಪಾಪರಾಶಿಗಳನ್ನೆಲ್ಲ ಆಕೆ ಕರುಣಾಪೂರ್ಣವಾಗಿ ಕೊಂಡೊಯ್ಯುತ್ತಿದ್ದಾಳೆ.

ಬೇಂದ್ರೆಯವರು ಶಿವತಾಂಡವವನ್ನೂ ಕಾಣಬಲ್ಲರು- ಶಿವನು ಬೆನ್ನ ಕೆಚ್ಚನ್ನು ತುಳಿದು ತಾಂಡವ ಪಾದಾಹತಿಯಲಿ ನೋಡುವವನು. ಭುಜದ ಭುಜಂಗನ ಕಚ್ಚಿಸಿ ರಸದ ವಿಷ ಹಿಳಿದು ನೋಡುವನು. 'ಚಿತಾಭಸ್ಮದಲಿ ಹೊರಳಿಸಿ ನೋಡುವ/ ಮೈಯ ಮಲವ ತೊಳೆದು/ ಕಣ್ಣ ಕಿಚ್ಚಿನಲಿ ಹೊತ್ತಿಸಿ ನೋಡುವ/ ಜ್ಯೋತಿಯ ಎಳೆಯೆಳೆದು' ಇದರ ಜೊತೆಗೇ 'ಗಂಗಾ ಜಲದಲಿ ಮುಳುಗಿಸಿ ನೋಡುವ ಎದೆಯಾಳವನಳೆದು' ಮತ್ತು 'ರುಂಡವ ಹೂವೊಲು ಉರದಲಿ ಧರಿಸುವ ಕೊರಳಿಗೆ ಬರಸೆಳೆದು' ಅವನಲ್ಲಿ ನವರಸವೂ ಇದೆ. ಕಣ್ಣ ಕಿಚ್ಚಿನಿಂದ ಲೋಕವನ್ನು ಧಗಧಗಿಸುವ ರೌದ್ರವೂ ಚಿತಾಭಸ್ಮದಲ್ಲಿ ಹೊರಳಿಸುವ ಬೀಭತ್ಸವೂ ರುಂಡಮಾಲೆ ಧರಿಸುವ ಭಯಾನಕವೂ ಇದೆ. ಗಂಗಾಜಲದಲ್ಲಿ ಮುಳುಗಿಸಿ ನೋಡುವ ಶಾಂತವೂ ಇದೆ.

ಇದೆಲ್ಲವನ್ನೂ ಸಹಿಸಿಕೊಂಡು, ಅರ್ಪಿಸಿಕೊಂಡು ನೋಡಿದಾಗಲೇ ಶಿವನು ತನ್ನ ಹೃದಯವನ್ನು ತೆರೆಯುವನು. ಮೊದಲು ನಿಮ್ಮ ಬಗೆಯನ್ನು ಬಗೆಬಗೆದು ಅಟ್ಟಹಾಸ ಕೆರಳಿಸಿ ನೋಡುವನು. ನಂತರ ಕೈಗೆ ಅಂಟಿಕೊಂಡ ಬ್ರಹ್ಮಕಪಾಲದಲ್ಲಿ ಅದ್ದಿ ಆಸೆಯನ್ನು ಪರೀಕ್ಷಿಸುವನು. ಇದಕ್ಕೂ ಮೀರಿ, ಇದೆಲ್ಲವೆನಗಲ್ಲ, ಎನಗೆ ನೀನೇ ಬೇಕು ಎಂದರೆ ಮಾತ್ರ 'ತೆರೆವನು ಹೃದಯವನು'. ಆಗ ಗೊತ್ತಾಗುತ್ತದೆ- 'ಶಿವಕಾರುಣ್ಯದ ಘನತೆಯೆ ಮಿಗಿಲು, ತಿಳಿದವರಾರದನು?' ರುದ್ರವಿಲಾಸವೇ ದೊಡ್ಡದು, ಶಿವಕಾರುಣ್ಯ ಅದಕ್ಕಿಂತಲೂ ಹಿರಿದು. ಹಾಗೆ ನೋಡಿದರೆ ಮಣಿಕರ್ಣಿಕೆ ಮಾತ್ರವಲ್ಲ, ಇಡೀ ಕಾಶಿಯೇ ಶಿವಕರುಣೆಯನ್ನು ಸದಾ ಬಾಯ್ತೆಗೆದು ಸಾರುತ್ತಿರುವಂತೆ ಕಾಣಿಸುವುದು. ಎಲ್ಲಿ ಹೋದರೂ ವಿಶ್ವನಾಥ, ಕೈಲಾಸನಾಥ, ಈಶ್ವರ, ಮಹಾದೇವ, ಕಾಲಭೈರವ, ಅನ್ನಪೂರ್ಣೆ, ದೇವಿಯರ ಮಂದಿರಗಳು. ಎಲ್ಲೆಲ್ಲಿಯೂ ಹರಹರ ಮಹಾದೇವ. ಪ್ರತಿ ಇರುಳೂ ಶಿವರಾತ್ರಿ.

ನಮ್ಮ ನಿಮ್ಮಂಥ ಮನುಷ್ಯನಂತೆ ಅನಿಸುವವನು ಮಹಾದೇವ. ಅವನು ನಮ್ಮಂತೆಯೇ ಅಪೂರ್ಣ. ಅವನ ಭಾವನೆಗಳು ತೀವ್ರ. ಅವನು ಲಯಕರ್ತ. ಕೋಪಗೊಂಡಾಗ ತಾಂಡವ ನೃತ್ಯ ಮಾಡುತ್ತಾನೆ. ಜಗತ್ತೇ ನಡುಗುತ್ತದೆ. ದಕ್ಷನ ಯಾಗದಲ್ಲಿ ಸತಿಯ ದಹನದ ನಂತರ ಅವನು ಉಗ್ರನಾಗಿದ್ದಾನೆ- ದುಃಖದಿಂದ, ಪ್ರೀತಿಯಿಂದ, ವಿರಹದಿಂದ. ಆ ಕ್ಷಣದಲ್ಲಿ ಅವನು ದೇವನಲ್ಲ. ಅವನು ಪ್ರೀತಿಸಿದವಳನ್ನು ಕಳೆದುಕೊಂಡ ಒಬ್ಬ ಮಾನವ. ಅವನ ಕೋಪದಲ್ಲಿ ನೋವಿದೆ. ಅವನ ಸಂಹಾರದಲ್ಲಿ ವ್ಯಥೆ ಇದೆ. ಆದರೆ ಕರುಣೆಯಿಂದ ಮುಚ್ಚಿದಾಗ ಜಗತ್ತು ಶಾಂತವಾಗುತ್ತದೆ.

ಶಿವನು ಮನುಷ್ಯರಿಗೆ ಹತ್ತಿರವಾಗುವುದೇ ಅವನ ಅಪೂರ್ಣತೆಯ ಮೂಲಕ. ಅವನು ಸಾಂಪ್ರದಾಯಿಕ ದೃಷ್ಟಿಯಲ್ಲಿ ಸುಂದರನಲ್ಲ. ಅವನು ರಾಜಗೌರವ ಬಯಸುವುದಿಲ್ಲ. ಅವನು ಶ್ಮಶಾನದಲ್ಲಿ ತಂಗಿ ಭೂತಗಣಗಳೊಂದಿಗೆ ಸುತ್ತಾಡುತ್ತಾನೆ. ಅವನು ಜೀವನದ ಕರಾಳ ಭಾಗವನ್ನೂ ತಳ್ಳಿಹಾಕುವುದಿಲ್ಲ. ನಮ್ಮೊಳಗಿನ ಭಯ, ಕೋಪ, ಆಸೆ, ವಿರಹ- ಇವೆಲ್ಲವನ್ನೂ ಒಪ್ಪಿಕೊಂಡ ದೇವರು ಶಿವ. ಬಹುಶಃ ಅದಕ್ಕೇ ಶಿವನ ಮುಂದೆ ನಿಂತಾಗ ನಾವು ನಮ್ಮ ಮುಖವಾಡಗಳನ್ನು ತೆಗೆದುಬಿಡುತ್ತೇವೆ. ಏಕೆಂದರೆ ನಮ್ಮೊಳಗಿನ ವಿಷವನ್ನೇ ಕಂಠದಲ್ಲಿ ಹಿಡಿಯಬಲ್ಲವನು. ಕೋಪವೂ ನಿನ್ನದು, ಪ್ರೀತಿಯೂ ನಿನ್ನದು. ವಿರಹವೂ ನಿನ್ನದು, ವೈರಾಗ್ಯವೂ ನಿನ್ನದು. ಇವೆಲ್ಲವನ್ನೂ ಒಪ್ಪಿಕೊಂಡಾಗ ಮಾತ್ರ ನೀನು ಸಂಪೂರ್ಣ ಎಂದವನು ಹೇಳುತ್ತಿರುವಂತಿದೆ. ಶಿವನು ದೇವರಾಗಿದ್ದರೂ, ಮನುಷ್ಯನಂತೆ ಅನಿಸುವುದೇ ಅವನ ಮಹಿಮೆ. ಅವನು ದೂರದ ದೈವವಲ್ಲ, ನಮ್ಮೊಳಗಿನ ತೀವ್ರ ಭಾವನೆಯ ಹೆಸರು.

ಕಳೆದ ಕೆಲವು ದಿನಗಳಿಂದ ಐಟಿ ಕ್ಷೇತ್ರದಲ್ಲಿ ಎಐ ಉಂಟುಮಾಡುತ್ತಿರುವ ತಾಂಡವನೃತ್ಯ ಎಲ್ಲರನ್ನು ನಡುಗಿಸಿದೆ. ಇದಕ್ಕೆ ಕೊನೆಯೇ ಇಲ್ಲವೇ, ಕಷ್ಟಪಟ್ಟು ಓದಿ ಉದ್ಯೋಗ ಹಿಡಿದು ಬದುಕುವೆವೆಂದು ಬಂದರೆ ಕಾಣದ ಕೈಯೊಂದು ಉದ್ಯೋಗ ಕಿತ್ತುಕೊಂಡೀತೇ ಎಂಬ ಕಳವಳ, ನಿರಾಶೆ ಹರಡಿದಂತಿದೆ. ಶಿವರಾತ್ರಿಯ ಕತ್ತಲು ಬಹಳ ದಟ್ಟ. ಆದರೆ ಮರುದಿನದ ಬೆಳಗೂ ಅಷ್ಟೇ ಪ್ರಖರ. ತ್ರಿಪುರ ಮಥನದ ಕಥೆ ನೆನಪಾಗುತ್ತಿದೆ.

ಇದೇ ಶಿವನು ಪಾರ್ವತಿಯನ್ನು ನೋಡಿದಾಗ ಪ್ರೇಮಿಯೂ ಆಗುತ್ತಾನೆ. ಅವಳಿಗಾಗಿ ತಪಸ್ಸು ಮಾಡುತ್ತಾನೆ. ಅವಳೊಂದಿಗೆ ಹಾಸ್ಯವಾಡುತ್ತಾನೆ. ಕುಟುಂಬ ಕಟ್ಟುತ್ತಾನೆ. ಗಣೇಶ-ಕಾರ್ತಿಕೇಯರ ತಂದೆಯಾಗುತ್ತಾನೆ. ಸ್ಮಶಾನವಾಸಿಯಾದವನು ಸಹ ಗೃಹಸ್ಥನಾಗುತ್ತಾನೆ. ಈ ವಿರೋಧಾಭಾಸವೇ ಅವನ ಸೌಂದರ್ಯ. ಏಕೆಂದರೆ ಮನುಷ್ಯ ಜೀವನವೂ ಇದೇ ವಿರೋಧಾಭಾಸಗಳ ಸಂಯೋಗ.

ಶಿವನು ವಿರಾಗಿ, ಧ್ಯಾನಿ. ಹಿಮಾಲಯದ ಮೌನದಲ್ಲಿ ಕಣ್ಣುಮುಚ್ಚಿ ಕುಳಿತುಕೊಳ್ಳುತ್ತಾನೆ. ಲೋಕದ ಗದ್ದಲ ಅವನನ್ನು ಕದಲಿಸುವುದಿಲ್ಲ. ಆದರೆ ಅದೇ ಶಿವನು ಭಕ್ತನ ಒಂದು 'ಓಂ ನಮಃ ಶಿವಾಯ' ಕರೆಗೆ ಸ್ಪಂದಿಸುತ್ತಾನೆ. ಧ್ಯಾನದಲ್ಲಿದ್ದವನು ಕೂಡ ಕರುಣೆಯಿಂದ ಕಣ್ಣೀರಿಡುತ್ತಾನೆ. ಅವನು ಲೋಕಲೋಕಗಳ ಸಂಹಾರಕ. ಆದರೆ ಅವನ ಸಂಹಾರದಲ್ಲಿ ಕ್ರೌರ್ಯ ಇಲ್ಲ. ಅದೊಂದು ಅವಶ್ಯಕತೆ. ಮರದ ಹಳೆಯ ಎಲೆಗಳು ಬಿದ್ದು ಹೊಸ ಚಿಗುರುಗಳಿಗೆ ದಾರಿ ಮಾಡಿಕೊಡುವಂತೆ, ಅವನ ಲಯವು ಹೊಸ ಸೃಷ್ಟಿಗೆ ನೆಲಹಾಸು. ಅವನು ಕೋಪದಿಂದ ಮೂರನೇ ಕಣ್ಣು ತೆರೆದಾಗ ಜಗತ್ತು ಉರಿಯಬಹುದು. ಆದರೆ ಅದೇ ಕಣ್ಣು ಕರುಣೆಯಿಂದ ಮುಚ್ಚಿದಾಗ ಜಗತ್ತು ಶಾಂತವಾಗುತ್ತದೆ.

ಷಣ್ಮುಖನಿಂದ ಹತನಾದ ತಾರಕಾಸುರನ ಮಕ್ಕಳಾದ ತಾರಕಾಕ್ಷ, ಕಮಲಾಕ್ಷ ಮತ್ತು ವಿದ್ಯುನ್ಮಾಲಿ ಬ್ರಹ್ಮದೇವನನ್ನು ಉದ್ದೇಶಿಸಿ ತಪಸ್ಸು ಮಾಡಿದರು. ಬ್ರಹ್ಮ ಪ್ರತ್ಯಕ್ಷನಾದಾಗ 'ನಾವು ಮೂರು ನಗರಗಳನ್ನು ನಿರ್ಮಿಸುತ್ತೇವೆ. ಅವು ಮೂರೂ ಒಂದೇ ಒಂದು ಬಾಣ ಪ್ರಯೋಗದ ಮುಖಾಂತರ ಮಾತ್ರವೇ ನಿರ್ನಾಮವಾಗುವಂತಿರಬೇಕು' ಎಂಬ ವರ ಕೇಳಿದರು. ಅಂಥ ವೀರನೊಬ್ಬ ಇರಲು ಸಾಧ್ಯವಿಲ್ಲ, ಹಾಗಾಗಿ ನಮಗೆ ಸಾವಿಲ್ಲ ಎಂಬುದು ಅವರ ಲೆಕ್ಕಾಚಾರ. ವರ ಸಿಕ್ಕಿತು. ಮಯಾಸುರ ಅವರಿಗಾಗಿ ಮೂರು ಅಭೇದ್ಯ ನಗರಗಳನ್ನು ನಿರ್ಮಿಸಿದ. ಮೊದಲನೆಯದು ಕಬ್ಬಿಣದ ನಗರ. ಮಧ್ಯದ್ದು ಬೆಳ್ಳಿಯ ಮತ್ತು ಮೂರನೆಯದು ಚಿನ್ನದ ನಗರಿ. ಮೊದಲನೆಯದ್ದು ಭೂಮಿಯ ಮೇಲಿದ್ದರೆ, ಎರಡನೆಯದು ಆಕಾಶದಲ್ಲಿ ಮತ್ತು ಮೂರನೆಯದ್ದು ಸ್ವರ್ಗಲೋಕಕ್ಕೆ ಚಾಚಿಕೊಂಡಿತ್ತು. ಮೂರು ನಗರಗಳೂ ಸದಾ ತೇಲುತ್ತಾ, ಚಲಿಸುತ್ತಾ ಇರುತ್ತವೆ. ಅಷ್ಟಲ್ಲದೇ ಅವು ಸಾವಿರ ವರ್ಷಕ್ಕೊಮ್ಮೆ ಮಾತ್ರ ಸರಳರೇಖೆಗೆ ಬರುತ್ತವೆ. ಹಾಗೆ ಬರುವುದು ಪುಷ್ಯ ನಕ್ಷತ್ರ, ಚಂದ್ರನನ್ನು ಸೇರಿದಾಗ ಮಾತ್ರ.

ತಾವು ಸಾವಿಲ್ಲದವರು ಎಂಬ ಅರಿವಿನಿಂದ ಅಸುರರ ಅಬ್ಬರ ಅತಿಯಾಯಿತು. ದೇವತೆಗಳ ಸಂಕಟ ನೋಡಲಾಗದೆ ಶಿವನೇ ತ್ರಿಪುರಾಸುರರ ನಾಶಕ್ಕೆ ಬಂದ. ಸಮರ ಆರಂಭವಾಯಿತು. ಶಿವನಿಗಾಗಿ ವಿನ್ಯಾಸಗೊಳಿಸಲಾದ ಯುದ್ಧ ರಥ ಅದ್ಭುತವಾಗಿತ್ತು. ಭೂಮಿಯೇ ರಥದ ದೇಹವಾಯಿತು. ಸೂರ್ಯ ಚಂದ್ರರು ಅದರ ಚಕ್ರಗಳು. ಬ್ರಹ್ಮ ಸ್ವತಃ ರಥದ ಸಾರಥಿ. ಮೇರು ಪರ್ವತವೇ ಬಿಲ್ಲು, ವಾಸುಕಿಯೇ ಬಿಲ್ಲಿನ ದಾರ, ಮಹಾವಿಷ್ಣುವೇ ಬಾಣ. ಸಾವಿರ ವರ್ಷಕ್ಕೊಮ್ಮೆ ಪುಷ್ಯ ನಕ್ಷತ್ರ ಚಂದ್ರನನ್ನು ಸೇರುವ ಕ್ಷಣ ಬಂತು. ನಗರಗಳು ಒಂದೇ ರೇಖೆಗೆ ಬಂದವು. ಕ್ಷಣಮಾತ್ರದಲ್ಲಿ ಬಾಣ ಬಿಟ್ಟು ಶಿವ ಅವುಗಳನ್ನು ಧ್ವಂಸ ಮಾಡಿದ. ಅಸುರರ ಅಹಂಕಾರ ಕುಸಿಯಿತು.

ಈ ಕಥೆಯನ್ನು ಇಂದು ನಾವು ಎಐ ಯುಗದಲ್ಲಿ ಮನುಷ್ಯತ್ವದ ಕಥೆಯಾಗಿ ಓದಬಹುದು. ತಂತ್ರಜ್ಞಾನ, ವೇಗ, ಅಹಂಕಾರದ ಪ್ರತೀಕವಾಗಿ ಮೂರು ಪುರಗಳಿವೆ- ಅಸಂಖ್ಯಾತ ಮಾಹಿತಿಯ ಬಂಗಾರದ ನಗರವಾದ ಡೇಟಾ ಪುರ. ಇಲ್ಲಿ ಎಲ್ಲವನ್ನೂ ಚಿನ್ನದಂತೆಯೇ ಅಳೆದು ಸಂಗ್ರಹಿಸಲಾಗುತ್ತದೆ. ಎರಡನೆಯದು ಅಲ್ಗೋರಿದಂಗಳ ಪುರ. ಅದು ಬೆಳ್ಳಿಯದು. ಅಲ್ಲಿ ಲಾಜಿಕ್ ಮತ್ತು ಗಣನೆ. ಮನುಷ್ಯರಿಗಿಂತ ವೇಗವಾಗಿ ಅಲ್ಲಿ ನಿರ್ಧಾರ ತೆಗೆದುಕೊಳ್ಳಲ್ಪಡುತ್ತದೆ. ಮೂರನೆಯದು ಅಹಂಕಾರದ ಪುರ- ನಾವು ದೇವರಾಗಿಬಿಟ್ಟೆವು, ಸೃಷ್ಟಿ ನಮ್ಮ ಕೈಯಲ್ಲಿದೆ- ಎಂಬ ನಿಯಂತ್ರಣದ ಮೋಹದ ಕಬ್ಬಿಣದ ನಗರ. ಈ ಮೂರು ಪುರಗಳು ಒಂದಾಗಿ ನಿಂತಾಗ, ಮನುಷ್ಯತ್ವದ ಮೇಲೆ ನೆರಳು ಬೀಳುತ್ತದೆ. ನಾವು ಸೃಷ್ಟಿಸಿದ ಯಂತ್ರಗಳು ನಮ್ಮ ಜೀವನದ ಬಗ್ಗೆಯೇ ನಿರ್ಧಾರ ತೆಗೆದುಕೊಳ್ಳುತ್ತವೆ. ವೇಗವು ವಿವೇಕವನ್ನು, ಮಾಹಿತಿ ಕರುಣೆಯನ್ನು ಮರೆಮಾಡುತ್ತದೆ.

ಈ ತ್ರಿಪುರಗಳನ್ನು ಧ್ವಂಸ ಮಾಡುವ ಶಿವ ಮನುಷ್ಯ ಚೇತನ. ಎಐ ಅಪಾರ ಬುದ್ಧಿಮತ್ತೆ ಹೊಂದಿರಬಹುದು. ಆದರೆ ಅದು ಅನುಭವಿಸುವುದಿಲ್ಲ, ಅದು ಲೆಕ್ಕಿಸುತ್ತದೆ, ಕಣ್ಣೀರು ಸುರಿಸುವುದಿಲ್ಲ, ಅದು ವಿಶ್ಲೇಷಿಸುತ್ತದೆ, ಪ್ರೀತಿಸುವುದಿಲ್ಲ. ಮನುಷ್ಯಕುಲದ ಮೇಲೆ ಅದಕ್ಕೆ ಯಾವ ಕರುಣೆಯೂ ಇಲ್ಲ. ನಮ್ಮ ಚೈತನ್ಯದ ಕರುಣೆ, ನಮ್ಮ ನೈತಿಕತೆ, ನಮ್ಮ ಜವಾಬ್ದಾರಿ- ಇವೆಲ್ಲ ಶಿವನ ಬಾಣದಂತೆ, ಒಟ್ಟಾಗಿ ಕೆಲಸ ಮಾಡಿದಾಗ, ತಂತ್ರಜ್ಞಾನದ ಅಹಂಕಾರಕ್ಕೆ ತಡೆ ಹಾಕಬಲ್ಲವು. ಹಾಗಂತ ತ್ರಿಪುರ ಮಥನ ಎಂದರೆ ಕೇವಲ ಸಂಹಾರವಲ್ಲ, ಅದು ಸೃಷ್ಟಿಯ ಸಮತೋಲನ. ಶಿವನು ತಂತ್ರಜ್ಞಾನವನ್ನು ವಿರೋಧಿಸುವುದಿಲ್ಲ. ಅವನು ಅದರ ಅಹಂಕಾರವನ್ನು ಮಾತ್ರ ಸಂಹರಿಸುತ್ತಾನೆ. ಯಂತ್ರಗಳನ್ನು ಉಪಯೋಗಿಸೋಣ, ಆದರೆ ಅವುಗಳಿಗೆ ನಮ್ಮ ಮನಸ್ಸನ್ನು ಒಪ್ಪಿಸುವುದು ಬೇಡ. ವೇಗವನ್ನು ಸ್ವೀಕರಿಸೋಣ, ಆದರೆ ಮೌಲ್ಯಗಳನ್ನು ಕಳೆದುಕೊಳ್ಳದಿರೋಣ. ಸೃಷ್ಟಿಸೋಣ, ಆದರೆ ದೇವರಾಗುವ ಮೋಹಕ್ಕೆ ಒಳಗಾಗುವುದು ಬೇಡ ಎನ್ನುತ್ತಾನೆ ನಮ್ಮ ಶಿವ. ಹಾಗೆ ನೋಡಿದರೆ ತ್ರಿಪುರ ಮಥನದ ನಿಜವಾದ ರಣಭೂಮಿ ನಮ್ಮೊಳಗೇ ಇದೆ. ನಾವು ತಂತ್ರಜ್ಞಾನವನ್ನು ನಿಯಂತ್ರಿಸುತ್ತೇವಾ ಅಥವಾ ಅದು ನಮ್ಮ ಗಮನ, ಸಮಯ, ಭಾವನೆಗಳನ್ನು ನಿಯಂತ್ರಿಸುತ್ತಿದೆಯಾ ಅಂತ ನೋಡಿಕೊಳ್ಳಬೇಕು. ಅಲ್ಲೇ ಶಿವನೂ ಇದ್ದಾನೆ. ಶಿವರಾತ್ರಿ ಎಂದರೆ ಮನುಷ್ಯತ್ವವನ್ನು ಉಳಿಸಿಕೊಳ್ಳುವ ಕಾಲ.

ಪ್ರಸ್ತುತ
ಕೆ.ಎಸ್.ನಾಗರಾಜ್

ತುಂಬಿರುವ ಟ್ರಂಕ್‌ನ ಬಿಜೆಪಿ ನಾಯಕರೇ ಕಾರಣ ಹೇಳಿ

ತುಂಬಿರುವ ಟ್ರಂಕ್ ಇಟ್ಟುಕೊಂಡಿರುವ ಬಿಜೆಪಿ ನಾಯಕರು ಮುಂಗಡಪತ್ರದ ಒಟ್ಟು ಗಾತ್ರದಲ್ಲಿ 70ರಷ್ಟು ವಿವಿಧ ತೆರಿಗೆಗಳ ಮೂಲಕವೇ ಸಂಗ್ರಹಿಸುತ್ತಿರುವುದಾದರೂ ಏಕೆ? ತುಂಬಿದ ಟ್ರಂಕ್ ಇಟ್ಟುಕೊಂಡಿರುವ ಬಿಜೆಪಿ ನಾಯಕರು ದೇಶದಲ್ಲಿ ಜಿಎಸ್‌ಟಿ ಮೂಲಕ ಮತ್ತು ವಿವಿಧ ರೂಪದ ತೆರಿಗೆಗಳ ಮೂಲಕ ಮುಂಗಡಪತ್ರದ ಶೇ.70ರಷ್ಟು ಮೊತ್ತವನ್ನು ತುಂಬಿಸಿಕೊಳ್ಳುತ್ತಿರುವುದಾದರೂ ಏಕೆ?

2014ರಲ್ಲಿ 52 ಲಕ್ಷ ಕೋಟಿ ರು. ಇದ್ದ ದೇಶದ ಸಾಲ ಇಂದು 200 ಲಕ್ಷ ಕೋಟಿ ರು.ಗಳನ್ನು 12 ವರ್ಷದಲ್ಲಿ ದಾಟುವಂತೆ ಮಾಡಿರುವ ಕಾರಣವಾದರೂ ಏನು ಎಂದು ತುಂಬಿರುವ ಟ್ರಂಕ್ ಇಟ್ಟುಕೊಂಡಿರುವ ಬಿಜೆಪಿ ನಾಯಕರು ಹೇಳಲಿ. 2026, 27ರ ಮುಂಗಡಪತ್ರದಲ್ಲಿ 16 ಲಕ್ಷ ಕೋಟಿ ರುಪಾಯಿಗಳ ವಿತ್ತೀಯ ಕೊರತೆಯನ್ನು ಹೊಂದಿರುವಂತಹ ಬಜೆಟ್ ಮಂಡಿಸಿರುವ ಕಾರಣವಾದರೂ ಏನು ಎಂದು ತುಂಬಿದ ಟ್ರಂಕ್ ಇಟ್ಟುಕೊಂಡಿರುವ ಬಿಜೆಪಿ ನಾಯಕರು ಹೇಳಲಿ.

ದಿನದಿಂದ ದಿನಕ್ಕೆ ಡಾಲರ್ ಎದುರು ರುಪಾಯಿ ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತಿರುವ ಕಾರಣವಾದರೂ ಏನೋ ಎಂದು ತುಂಬಿರುವ ಟ್ರಂಕ್ ಇಟ್ಟುಕೊಂಡಿರುವ ಬಿಜೆಪಿ ನಾಯಕರು ಹೇಳಲಿ. ಕರ್ನಾಟಕ ರಾಜ್ಯ, ಕೇಂದ್ರಕ್ಕೆ ನಾವು ನೀಡಿರುವ ವಿವಿಧ ತೆರಿಗೆಯ ಪ್ರತಿಯಾಗಿ ನ್ಯಾಯಸಮ್ಮತವಾಗಿ ನಮಗೆ ಕೊಡಬೇಕಾಗಿರುವ ಪಾಲನ್ನು ಕೊಡದೆ ಇರಲು ಕಾರಣವಾದರೂ ಏನು ಎಂದು ತುಂಬಿದ ಟ್ರಂಕ್ ಇಟ್ಟುಕೊಂಡಿರುವ ಬಿಜೆಪಿ ನಾಯಕರು ಹೇಳಲಿ.

ಕರ್ನಾಟಕ ರಾಜ್ಯದ ನೀರಾವರಿ ಯೋಜನೆಗಳಿಗೆ ಬಿಡಿಗಾಸು ನೀಡದೆ ಮುಂಗಡಪತ್ರದಲ್ಲಿ ಘೋಷಿಸಿರುವ ಭದ್ರಾ ಮೇಲ್ದಂಡೆ ಯೋಜನೆಗೆ 5000 ಕೋಟಿ ರೂಪಾಯಿಗಳ ಹಣವನ್ನು ಕೊಡದೆ ಇರುವ ಕಾರಣವಾದರೂ ಏನೆಂದು ತುಂಬಿದ ಟ್ರಂಕ್ ಇಟ್ಟುಕೊಂಡಿರುವ ಬಿಜೆಪಿ ನಾಯಕರು ಹೇಳಲಿ. ದಿನದಿಂದ ದಿನಕ್ಕೆ ಆಹಾರ ಪದಾರ್ಥಗಳ ಬೆಲೆ ಗಗನಕ್ಕೆ ಏರಿದೆ ನಿಮ್ಮ ಅವಧಿಯಲ್ಲಿ ಪೆಟ್ರೋಲ್ ಡೀಸೆಲ್ ಬೆಲೆಗಳು ಶತಕವನ್ನು ದಾಟಿದೆ ತುಂಬಿದ ಟ್ರಂಕ್ ಇಟ್ಟುಕೊಂಡಿರುವ ಬಿಜೆಪಿ ನಾಯಕರು ಇವುಗಳಿಗೆ ಕಾರಣವೇನೆಂದು ಹೇಳಲಿ.

ದಿನದಿಂದ ದಿನಕ್ಕೆ ದೇಶದಲ್ಲಿ ನಿರುದ್ಯೋಗದ ಸಮಸ್ಯೆ ಏರಿಕೆ ಆಗುತ್ತಿದ್ದು ಕೇಂದ್ರ ಸರ್ಕಾರದ ಸಾರ್ವಜನಿಕ ಉದ್ದಿಮೆಗಳು ಬಾಗಿಲು ಹಾಕಿಕೊಳ್ಳಲು ಕಾರಣವೇನೆಂದು ತುಂಬಿದ ಟ್ರಂಕ್ ಇಟ್ಟುಕೊಂಡಿರುವ ಬಿಜೆಪಿ ನಾಯಕರು ಹೇಳಲಿ. ಕೇಂದ್ರ ಸರ್ಕಾರದ ಘೋಷಿತ ಕಾರ್ಯಕ್ರಮಗಳಿಗೆ ರಾಜ್ಯಗಳಿಗೆ ಕೊಡಬೇಕಾದ ವೆಚ್ಚದ ಪಾಲುಗಳನ್ನು ಕೊಡದೆ ಯೋಜನೆಗಳೇ ದಿಕ್ಕು ತಪ್ಪುವಂತೆ ಮಾಡುತ್ತಿರುವ ಕಾರಣವಾದರೂ ಏನೆಂದು ತುಂಬಿದ ಟ್ರಂಕ್ ಹೊಂದಿರುವ ಬಿಜೆಪಿ ನಾಯಕರು ಹೇಳಲಿ.

ಡಾ.ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ ನರ್ಮದಾ ಯೋಜನೆ ಅಡಿಯಲ್ಲಿ ಬೆಂಗಳೂರಿಗೆ 22 ಸಾವಿರ ಕೋಟಿ ರುಪಾಯಿಗಳನ್ನು ಅಂದಿನ ಕೆಲವೇ ಕೆಲವು ಲಕ್ಷ ಕೋಟಿ ಮುಂಗಡಪತ್ರದಲ್ಲಿ ನೀಡಿದ್ದರು. ಆದರೆ ಇಂದು 50 ಲಕ್ಷ ಕೋಟಿ ರುಪಾಯಿಗಳ ಮುಂಗಡ ಪತ್ರವನ್ನು ಮಂಡಿಸುತ್ತಿರುವ ತುಂಬಿದ ಟ್ರಂಕ್ ಹೊಂದಿರುವ ಬಿಜೆಪಿ ನಾಯಕರು ಬೆಂಗಳೂರಿನ ಅಭಿವೃದ್ಧಿಗೆ ಎಷ್ಟು ಹಣವನ್ನು ನಿಮ್ಮ ಮುಂಗಡಪತ್ರಕ್ಕೆ ಅನುಗುಣವಾಗಿ ನೀಡಿದ್ದೀರಿ ಎಂದು ಉತ್ತರವನ್ನು ಹೇಳಲಿ.

ಟ್ರಂಕ್ ಖಾಲಿ ಇರುವುದು ರಾಜ್ಯ ಸರ್ಕಾರದಲ್ಲ, ಕೇಂದ್ರ ಸರ್ಕಾರದ್ದು ಎಂಬುದು ಕಳೆದ 12 ವರ್ಷದ ಅವಧಿಯಲ್ಲಿ ಜನಗಳ ಜೀವನ ಸಹಿಸಿಕೊಳ್ಳಲಾಗದಷ್ಟು ದುರ್ಬಲವಾಗುತ್ತಿರುವ ಹಿನ್ನೆಲೆಯಲ್ಲಿ ಚೆನ್ನಾಗಿ ಅರಿವಿದೆ. ನಿಮ್ಮ ಜಾಹೀರಾತುಗಳು ಯಾರ ಹೊಟ್ಟೆಯನ್ನೂ ತುಂಬಿಸುವುದಿಲ್ಲ, ನಿಮ್ಮ ಭಾವನಾತ್ಮಕವಾದ ಮಾತುಗಳು ಯಾರ ಬದುಕನ್ನು ಕಟ್ಟಿಕೊಡುವುದಿಲ್ಲ, ನಿಮ್ಮ ಪ್ರಾಸಬದ್ಧವಾದ ಘೋಷಣೆಗಳು ಬಡವರು ಮತ್ತು ಮಧ್ಯಮ ವರ್ಗದವರ ಜೀವಗಳಿಗೆ ಯಾವುದೇ ಆಸರೆಯೂ ಆಗಿರುವುದಿಲ್ಲ. ನೀವು ಸಾಕಿಕೊಂಡಿರುವ ಮಾಧ್ಯಮದವರ ಕೃಪೆಯಿಂದ ನಿಮ್ಮ ಜನಪ್ರಿಯತೆ ಹೆಚ್ಚಿಸಿಕೊಳ್ಳುವ ದಾರಿಯನ್ನು ಹಿಡಿದಿದ್ದೀರಿ. ನಿಮ್ಮ ಸುಳ್ಳುಗಳು ಬಯಲಾಗುವ ದಿನ ಬಂದೇ ಬರುತ್ತದೆ.

ಬಿಜೆಪಿ ಸರ್ಕಾರ ಕೇಂದ್ರದಲ್ಲಿ ಪಾರದರ್ಶಕವಾದ ಮತ್ತು ಪ್ರಾಮಾಣಿಕವಾದ ಆಡಳಿತ ನಡೆಸುತ್ತಿದ್ದರೆ ನಿಮ್ಮ ಪಕ್ಷದ ನಿಧಿಗೆ ಹತ್ತಾರು ಸಾವಿರ ಕೋಟಿ ರುಪಾಯಿಗಳು ಶ್ರೀಮಂತರಿಂದ ಹೇಗೆ ತಾನೇ ಬರಲು ಸಾಧ್ಯವಾಯಿತು? ಕಾಣುವ ನಿಧಿ ಇವುಗಳಾದರೆ ನಿಮ್ಮ ಪಕ್ಷದ ನಿಧಿಗೆ ಸೇರುತ್ತಿರುವ ಕಾಣದ ಮೊತ್ತ ಬಲ್ಲವರು ಯಾರು ಹೇಳಬಲ್ಲಿರಾ?

ಕರಾವಳಿ ಅಭಿವೃದ್ಧಿಯ ಹಲವು ಆಯಾಮ ತೆರೆದ ಬಜೆಟ್

ಪ್ರಸ್ತುತ ಅನ್ಯ ರಾಷ್ಟ್ರಗಳ ನಡುವೆ ನಡೆಯುತ್ತಿರುವ ಯುದ್ಧದ ಸನ್ನಿವೇಶಗಳು, ಎಡಬಿಡಂಗಿ ಆರ್ಥಿಕ ನೀತಿ ನಿಯಮಗಳು, ಆಯಾ ದೇಶಗಳನ್ನು ಅಯೋಮಯಗೊಳಿಸಿದೆಯಲ್ಲದೇ, ಕಂಪನಿಗಳನ್ನೂ ಧೃತಿಗೆಡಿಸಿವೆ. ಜಗತ್ತಿನ ದೊಡ್ಡಣ್ಣ ಎಂದೆಲ್ಲ ಕರೆಸಿಕೊಳ್ಳುವ ಅಮೆರಿಕವೂ ತನ್ನ ಆರ್ಥಿಕ ಇತಿಮಿತಿಗಳನ್ನು ಅರಿಯದೆ ನಿರ್ಧಾರ ತೆಗೆದುಕೊಳ್ಳುತ್ತಿದೆ ಎಂದು ಭಾಸವಾಗುತ್ತಿದೆ. ಇಂತಹ ಸ್ಥಿತಿಯಲ್ಲಿ ಕೇಂದ್ರ ವಿತ್ತಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿದ ಬಜೆಟ್ ಕರ್ನಾಟಕದ ಕರಾವಳಿ ಭಾಗದ ಅಭಿವೃದ್ಧಿಯ ಹಲವು ಆಯಾಮಗಳನ್ನು ತೆರೆದಿಟ್ಟಿದೆ.

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ಪ್ರಸ್ತುತ ವರ್ಷದ ಕೇಂದ್ರ ಬಜೆಟ್ ಮಂಡನೆಯನ್ನು ರಾಜ್ಯದ ಜನತೆ ಅಷ್ಟೇನು ಹೆಚ್ಚಾಗಿ ಚರ್ಚೆಗೆ ಪರಿಗಣಿಸಲಿಲ್ಲ ಎಂದು ಕಾಣುತ್ತದೆ. ರಾಜ್ಯಕ್ಕೆ ಹೆಚ್ಚೇನೂ ಕೊಡುಗೆ ಈ ಸಲದ ಬಜೆಟ್‌ನಲ್ಲಿ ಘೋಷಿಸಿಲ್ಲ ಎಂದೇ ಹೇಳಿ ಸುಮ್ಮನಾದ ವಿಚಾರವನ್ನು ನಾವೆಲ್ಲ ಗಮನಿಸಿದೆವು. ಸಾಮಾನ್ಯವಾಗಿ ತೆರಿಗೆ ಕಟ್ಟುವವರೂ ಅಷ್ಟೇನೂ ನಿರೀಕ್ಷೆ ಇಟ್ಟುಕೊಂಡಿರಲಿಲ್ಲ. ಕಾರಣ, ಮತ್ತಷ್ಟು ತೆರಿಗೆ ವಿನಾಯ್ತಿ ಬೇಕೆಂಬ ಬೇಡಿಕೆ ಮತ್ತು ಮಾಡುತ್ತಾರೆಂಬ ನಿರೀಕ್ಷಿಸುವ ಸಮಯವೂ ಇದಾಗಿರಲಿಲ್ಲ. ಬಹುತೇಕ ಹಣಕಾಸು ವಿಶ್ಲೇಷಕರು, ಅಂತಾರಾಷ್ಟ್ರೀಯ ರಾಜಕೀಯ ಗಮನಿಸುವವರು, ಆರ್ಥಿಕ ತಜ್ಞರು ಮಾತ್ರ ಭಾರೀ ಕುತೂಹಲದಿಂದ ಕಾಯುತ್ತ ಕೂರುವಂತೆ ಮಾಡಿದ್ದು ಮಾತ್ರ ಸುಳ್ಳಲ್ಲ!

ಕಾರಣ, ಪ್ರಸ್ತುತ ಅನ್ಯ ರಾಷ್ಟ್ರಗಳ ನಡುವೆ ನಡೆಯುತ್ತಿರುವ ಯುದ್ಧದ ಸನ್ನಿವೇಶಗಳು, ಆರ್ಥಿಕ ಏರುಪೇರುಗಳು, ಬಹುತೇಕ ನಾಯಕರ ಎಡಬಿಡಂಗಿ ಆರ್ಥಿಕ ನೀತಿ ನಿಯಮಗಳು, ಆಯಾ ದೇಶಗಳನ್ನು ಅಯೋಮಯಗೊಳಿಸಿದೆಯಲ್ಲದೇ, ಉದ್ಯೋಗ ಸೃಷ್ಟಿ, ಹೊಸ ಆರ್ಥಿಕ ಮೂಲಗಳನ್ನು ಸೃಷ್ಟಿಸುವ ಕಂಪನಿಗಳು ಬೆಳೆಯದೆ ಬಾಗಿಲು ಹಾಕುತ್ತಿರುವ ಮತ್ತು ಉದ್ಯೋಗದಾತರು ಮರಳಿ ತಮ್ಮ ದೇಶಕ್ಕೆ ಹಿಂದಿರುಗುವಂತೆ ಮಾಡುತ್ತಿರುವ ಕಠಿಣ ನಿರ್ಧಾರಗಳು ಸದ್ಯಕ್ಕಂತೂ, ಭೂಗೋಳವನ್ನು ಎತ್ತ ತಿರುಗಿಸಿದರೂ, ಬರೀ ಗೋಳು ಮಾತ್ರವೇ ತುಂಬಿದಂತೆ ಭಾಸವಾಗುತ್ತಿದೆ.

ಇಂತಹ ವಾಸ್ತವಿಕ ಸ್ಥಿತಿಯಲ್ಲಿ, ಅಮೆರಿಕದ ಆರ್ಥಿಕ ನೀತಿಗಳನ್ನು ಭಾರತವನ್ನು ಮುಳುಗಿಸಲೆಂದೇ ತೆರಿಗೆ ಹೆಚ್ಚಿಸುವ ಮೂಲಕ ಬದಲಾಯಿಸಲಾಯಿತು. ಸದ್ಯಕ್ಕೆ ಅವರ ನಿರ್ಧಾರಗಳು ಅಲ್ಲಿನ ಯುವಜನತೆಗೇ ವಿರುದ್ಧವಾಗಿ ನಿಲ್ಲುವಂತಾಗಿವೆ. ಆರ್ಥಿಕ ನೀತಿಗಳು ಹೇಳಹೆಸರಿಲ್ಲದಂತೆ ನೆಲಕಚ್ಚುತ್ತಿವೆ. ಜಗತ್ತಿನ ದೊಡ್ಡಣ್ಣ, ದೈತ್ಯಶಕ್ತಿ ಎಂದೆಲ್ಲ ಕರೆಸಿಕೊಳ್ಳುವ ದೇಶವೂ ತನ್ನ ಆರ್ಥಿಕ ಇತಿಮಿತಿಗಳನ್ನು ಅರಿಯದೆ, ಅಹಂಕಾರದಲ್ಲಿ ನಿರ್ಧಾರ ತೆಗೆದುಕೊಳ್ಳುತ್ತಿದೆ ಎಂದು ಇಡೀ ಜಗತ್ತಿಗೇ ಭಾಸವಾಗುತ್ತಿದೆ.

ಇಂತಹ ಸಮಯದಲ್ಲಿ, ಕೇಂದ್ರ ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ ಅವರು 2019ರಿಂದ 2026ರವರೆಗೆ ಸತತ ಒಂಬತ್ತನೆ ಬಜೆಟ್ ಮಂಡನೆಯ ಐತಿಹಾಸಿಕ ದಾಖಲೆ ಜೊತೆಗೆ ಇನ್ನೂ ಹಲವು ವಿಶೇಷತೆಗಳನ್ನು ಸಾಧಿಸಿದ್ದಾರೆ. ಭಾರತದ ಪೂರ್ಣಕಾಲಿಕ ಮೊದಲ ಹಣಕಾಸು ಸಚಿವೆ ಎಂಬ ಹೆಗ್ಗಳಿಕೆ ಅವರ ಹೆಸರಿಗೆ ಸೇರಿದೆ. 2019ರಲ್ಲಿ ಸೂಟ್‌ಕೇಸ್ ಬದಲಾಯಿಸಿ ಸಾಂಪ್ರದಾಯಿಕ ಲೆದರ್ ಚೀಲ ಬಳಸಿದ ದಾಖಲೆ.

2021ರಲ್ಲಿ ಕಾಗದರಹಿತ ಡಿಜಿಟಲ್ ಬಜೆಟ್ ಮಂಡಿಸಿದ ದಾಖಲೆ. ಒಬ್ಬರೇ ಪ್ರಧಾನಮಂತ್ರಿ ಅಡಿಯಲ್ಲಿ, ಅದೇ ವ್ಯಕ್ತಿ ಸತತ ಬಜೆಟ್ ಮಂಡಿಸಿದ ದಾಖಲೆ. ಕೋವಿಡ್ ಎಂಬ ಮಹಾಮಾರಿ ಪರಿಸ್ಥಿತಿಯಲ್ಲೂ, ಇಡೀ ಜಗತ್ತೇ ತಲ್ಲಣಿಸಿದರೂ ವಿಚಲಿತರಾಗದೆ ದೇಶದ ಆರ್ಥಿಕತೆಯನ್ನು ಸಮರ್ಥವಾಗಿ ಮುನ್ನಡೆಸಿದ ಜವಾಬ್ದಾರಿ. ಬೇರೆಬೇರೆ ಅವಧಿಯಲ್ಲಿ ಮಂಡಿಸಿದ್ದನ್ನು ಪರಿಗಣಿಸಿದರೆ, ಮೊರಾರ್ಜಿ ದೇಸಾಯಿ 10 ಬಾರಿ ಬಜೆಟ್ ಮಂಡಿಸಿದ್ದು, ಮುಂದಿನ ಬಜೆಟ್ ವೇಳೆಗೆ ಈ ದಾಖಲೆಯೂ ನಿರ್ಮಲಾ ಅವರಿಂದ ನಿರ್ಮಾಣವಾಗುತ್ತದೆ ಎಂದುಕೊಳ್ಳೋಣ.

ದೇಶದಲ್ಲೇ ಕರ್ನಾಟಕ ಕರಾವಳಿ ಎಂಬುದು ಅಪರೂಪದ ಬಹುವಿಶೇಷ, ಸೂಕ್ಷ್ಮಪ್ರದೇಶವಾಗಿದ್ದು, ರಾಜ್ಯದ ಇತರೆ ಭಾಗಗಳನ್ನು ಪರಿಗಣಿಸುವಂತೆ ಈ ಭಾಗವನ್ನೂ ಹಾಗೇ ಪರಿಭಾವಿಸಿ, ಸಾಮಾನ್ಯ ಆಡಳಿತ-ಅಧಿಕಾರಗಳನ್ನು ಜಾರಿಗೆ ತರಲು ಯತ್ನಿಸಿದರೆ, ಇನ್ನೂ 50-100 ವರ್ಷ ಕಳೆದರೂ, ನಮ್ಮ ಕರಾವಳಿ ಮುಂದುವರಿದ, ಜನಾಕರ್ಷಣೆಯ ಹಾಗೂ ಸಂಪೂರ್ಣ ಅಭಿವೃದ್ಧಿ ಹೊಂದಿದ ಪ್ರವಾಸೋದ್ಯಮ ಭಾಗವಾಗಿ ಬೆಳೆಯಲಾರದು ಎಂಬುದನ್ನು ಅರಿಯಬೇಕಿದೆ.

ಇಲ್ಲಿನ ಕೃಷಿಪದ್ಧತಿ, ಮೀನುಗಾರಿಕೆ, ದೈನಂದಿನ ಜೀವನ ವಿಧಾನಗಳು ರಾಜ್ಯದ ಇತರೆ ಭಾಗಕ್ಕಿಂತ ಕೊಂಚ ಭಿನ್ನವಾಗಿರುತ್ತದೆ ಎಂಬುದು ಸಹಜ ವಿಚಾರವೇ ಆಗಿದೆ. ಇದಕ್ಕೆ ತಕ್ಕಂತೆ, ಪಾಲಿಸಿಗಳನ್ನು ರೂಪಿಸಿ, ಜನರಿಗೆ ಪೂರಕವಾಗುವಂತೆ ಜಾರಿಗೆ ತರಬೇಕಿರುವುದು ಅತ್ಯಗತ್ಯ. ಈ ವಿಚಾರದಲ್ಲಿ ರಾಜ್ಯ ಸರ್ಕಾರ ಅಷ್ಟೇನೂ ಆಸಕ್ತಿ - ಕಾಳಜಿ ತೋರಿಸದಿರುವುದು ಬಹಿರಂಗವಾಗಿಯೇ ಕಂಡು ಬರುತ್ತಿದೆ.

ಒಡಿಶಾದ ಪುಟ್ಟ ಕಿನಾರೆಯೊಂದು 'ಬ್ಲೂ ಟ್ಯಾಗ್', 'ಗೋಲ್ಡನ್ ಟ್ಯಾಗ್' ಪಡೆಯಲು ಅರ್ಹವಾದರೆ, ನಮ್ಮ ರಾಜ್ಯದಲ್ಲಿರುವ ಅನೇಕ ಕಡಲ ಕಿನಾರೆಗಳನ್ನು ಸಹ ರಾಷ್ಟ್ರೀಯ-ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರೊಜೆಕ್ಷನ್ ಮಾಡಬೇಕಿರುವುದು ರಾಜ್ಯ ಸರ್ಕಾರದ ಜವಾಬ್ದಾರಿಯಲ್ಲವೇ?! ಕರಾವಳಿ ವಿಭಾಗಕ್ಕೆ ಇಂತಹ ಶಾಶ್ವತ ಪರಿಯೋಜನೆಗಳು ರೂಪುಗೊಳ್ಳುತ್ತಿಲ್ಲ. ಇಂತಹ ಸಮಯದಲ್ಲೇ ಈ ಸಲದ ಕೇಂದ್ರ ಬಜೆಟ್ ಬಹು ಆಶಾದಾಯಕವಾಗಿ ನಮ್ಮ ಕರಾವಳಿ ಭಾಗಕ್ಕೆ ಕಂಡು ಬರುತ್ತಿದೆ ಎನ್ನಬಹುದು.

ವಿಶ್ವದ ಅತಿದೊಡ್ಡ ತೆಂಗಿನಕಾಯಿ ಉತ್ಪಾದಕ ರಾಷ್ಟ್ರವಾದ ಭಾರತದಲ್ಲಿ ಸುಮಾರು 10 ಕೋಟಿ ರೈತರು ಒಳಗೊಂಡಂತೆ 3 ಕೋಟಿ ಜನರು ತಮ್ಮ ಜೀವನೋಪಾಯಕ್ಕಾಗಿ ತೆಂಗು ಕೃಷಿಯನ್ನು ಅವಲಂಬಿಸಿದ್ದಾರೆ. ಇಂತಹ ಕೃಷಿಯನ್ನು ಬಹುವಿಧದಲ್ಲಿ ಉತ್ತೇಜಿಸುವುದಾಗಿ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಘೋಷಿಸಿದ್ದಾರೆ. ಇದರ ಜೊತೆಗೆ, ಗೋಡಂಬಿ, ಕೋಕೋ ಉತ್ಪಾದನೆ ಮತ್ತು ಸಂಸ್ಕರಣೆಯಲ್ಲಿ ಭಾರತವನ್ನು ಹೆಚ್ಚು ಸ್ವಾವಲಂಬನೆಗೊಳಿಸುವಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಬಜೆಟ್‌ನಲ್ಲಿ ಪ್ರಕಟಿಸಿದ್ದಾರೆ. ಇದೂ ಸಹ ನಮ್ಮ ರೈತರಿಗೆ, ಕರಾವಳಿ ಭಾಗಕ್ಕೆ ಸಂತಸ ತರುವ ವಿಚಾರವೇ ಆಗಿದೆ.

ಬಹುಮುಖ್ಯ ಘೋಷಣೆಯೆಂದರೆ, ಕೃಷಿ ಕ್ಷೇತ್ರದಲ್ಲಿ 'ಎಐ' ಬಳಕೆ ಯೋಜನೆಗಳನ್ನು ಜಾರಿಗೆ ತರುವ ಕುರಿತು ಘೋಷಿಸಿದ್ದಾರೆ. ರೈತರಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಎಐ ಬಳಸಿಕೊಳ್ಳುವ ವಿಚಾರವಾಗಿದೆ. ಇದಕ್ಕೆಂದೇ ಭಾರತ್ ವಿಸ್ತಾರ್ ಎಂಬ ಎಐ ಟೂಲ್ ಜಾರಿಗೆ ತರಲು ಕೇಂದ್ರ ಸರ್ಕಾರ ನಿರ್ಧರಿಸಿದೆ ಎಂದು ಸದನದಲ್ಲಿ ಹೇಳಿದರು.

ಭಾರತ್ ವಿಸ್ತಾರ್ ಎನ್ನುವುದು ಕೃಷಿ ಸಂಪನ್ಮೂಲಗಳ ಬಗ್ಗೆ ರೈತರಿಗೆ ನೆರವಾಗುವ ಅವರ ಸ್ಥಳೀಯ ಭಾಷೆಯಲ್ಲೇ ಎಲ್ಲ ಸಮಸ್ಯೆಗಳ ಮಾಹಿತಿ ಹಾಗೂ ಉತ್ತರ ಲಭ್ಯವಾಗಲಿದೆ. ಸಣ್ಣ ಮತ್ತು ಅತಿಸಣ್ಣ ರೈತರ ಉತ್ಪಾದಕತೆ ಮತ್ತು ಆದಾಯವನ್ನು ಹೆಚ್ಚಿಸುವುದು, ಉತ್ಪಾದಕತೆ ಮತ್ತು ಉದ್ಯಮಶೀಲತೆಯನ್ನು ವೃದ್ಧಿ ಮಾಡುವುದು ಮೋದಿ ಸರ್ಕಾರದ ಗುರಿ ಎಂದರು. ಕೃಷಿ ಆದಾಯದ ಸುಮಾರು ಶೇ.16ರಷ್ಟು ಹಣ ಜಾನುವಾರು ಉದ್ಯಮದಿಂದ ಬರುತ್ತದೆ. ಇದೇರೀತಿ ಗುಣಮಟ್ಟದ ಆಯುರ್ವೇದ ಉತ್ಪನ್ನಗಳನ್ನ ರಫ್ತು ಮಾಡುವುದರಿಂದ, ಗಿಡಮೂಲಿಕೆಗಳನ್ನು ಬೆಳೆಸುವುದರಿಂದ ರೈತರಿಗೆ ಸಹಾಯವಾಗುತ್ತದೆ ಎಂದರು.

ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆಯನ್ನು ವಿಸ್ತರಿಸುವುದಾಗಿ ಸಚಿವೆ ಹೇಳಿದರು. ಸಾಲ ಸೌಲಭ್ಯವನ್ನು ಸರಳಗೊಳಿಸಲು ಐದು ರಾಜ್ಯಗಳಲ್ಲಿ ಜನಸಮರ್ಥ್ ಆಧಾರಿತ ಕೆಸಿಸಿ ನೀಡಲಾಗುವುದು ಜೊತೆಗೆ ಮಿತಿಯನ್ನೂ ಹೆಚ್ಚಿಸಲಾಗುವುದು ಎಂದರು. ಇದೆಲ್ಲ ಕೃಷಿಗೆ ಸಂಬಂಧಿಸಿದ್ದಾದರೂ ನಮ್ಮ ರಾಜ್ಯದಲ್ಲಿ ಸೂಕ್ತವಾಗಿ ಚರ್ಚೆಯಾಗಬೇಕಿತ್ತು, ಆಗಲಿಲ್ಲ.

ಕ್ರೆಡಿಟ್ ಲಿಂಕ್ಡ್ ಎಂಬ ಕಾರ್ಯಕ್ರಮವನ್ನು ಪಶು ಸಂಗೋಪನೆ ವೃದ್ಧಿಗೆ ಕಾರ್ಯಕ್ರಮವನ್ನಾಗಿ ಘೋಷಿಸಿದ್ದಾರೆ. ಉದ್ಯಮಶೀಲತೆ ಅಭಿವೃದ್ಧಿಯಲ್ಲಿ ಪಶು ಸಂಗೋಪನಾ ವಲಯವನ್ನು ಪ್ರಮುಖ ಕ್ಷೇತ್ರವನ್ನಾಗಿ ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದ್ದು, ಜಾನುವಾರು ಉತ್ಪಾದಕ ಸಂಸ್ಥೆಗಳಲ್ಲಿ ಉದ್ಯೋಗವಕಾಶಗಳನ್ನು ಉತ್ತೇಜಿಸಿ ಪ್ರೋತ್ಸಾಹಿಸಲು ಕ್ರೆಡಿಟ್ ಲಿಂಕ್ ಎಂಬ ಸಬ್ಸಿಡಿಯನ್ನೂ ಪ್ರಸ್ತಾಪಿಸಲಾಗಿದೆ.

ಜಲಚರ ಸಾಕಣೆ ಸಂಸ್ಥೆಗಳು ಪಶು ಸಂಗೋಪನಾ ಸಂಸ್ಥೆಗಳೊಂದಿಗೆ ಒಟ್ಟಾಗಿ ಕೆಲಸ ಮಾಡುವ ಮೂಲಕ ಮಾರುಕಟ್ಟೆ ಸಂಪರ್ಕವನ್ನು ಸುಧಾರಿಸುತ್ತವೆಯಲ್ಲದೆ ನವೋದ್ಯಮಗಳು, ಮಹಿಳಾ ನೇತೃತ್ವದ ಗುಂಪುಗಳು ಮೀನು ಉತ್ಪಾದಕ ಸಂಸ್ಥೆಗಳನ್ನು ಬೆಂಬಲಿಸುತ್ತವೆಯಾದ್ದರಿಂದ ಈ ಮೂಲಕ ಕರಾವಳಿ ಮೀನುಗಾರರಿಗೆ ಇನ್ನಷ್ಟು ಸಬ್ಸಿಡಿಯನ್ನು ಕೂಡ ಒದಗಿಸಲು ಯೋಜನೆ ರೂಪಿಸಲಾಗಿದೆ ಎಂದರು.

ದೇಶದ ಕರಾವಳಿ ಪ್ರದೇಶಗಳಲ್ಲಿ ಮೀನುಗಾರಿಕೆ ಮೌಲ್ಯ ಸರಪಳಿಯನ್ನು ಬಲಪಡಿಸಲು ಮೀನುಗಾರಿಕಾ ಸಂಸ್ಥೆಗಳನ್ನು, ನವೋದ್ಯಮ ಹಾಗೂ ಮಹಿಳಾ ನೇತೃತ್ವದ ಗುಂಪುಗಳನ್ನು ಒಳಗೊಂಡ ಮಾರುಕಟ್ಟೆಯನ್ನು ಸಕ್ರಿಯಗೊಳಿಸಲು 500 ಜಲಾಶಯಗಳು ಮತ್ತು ಅಮೃತ ಸರೋವರಗಳ ಸಮಗ್ರ ಅಭಿವೃದ್ಧಿಗೆ ಉಪಕ್ರಮಗಳನ್ನು ಕೈಗೊಳ್ಳಲು ಕೇಂದ್ರ ಸರ್ಕಾರ ಮುಂದಾಗಿದೆ.

ಭಾರತವು 80 ಲಕ್ಷ ಎಕರೆಗಳಷ್ಟು ಒಳನಾಡಿನ ಜಲಾಶಯಗಳನ್ನು ಹೊಂದಿರುವ ಮೂಲಕ ವಿಶ್ವದಲ್ಲೇ ಅತಿದೊಡ್ಡ ಒಳನಾಡಿನ ಜಲಾಶಯಗಳಲ್ಲೊಂದಾಗಿದೆ. ಮಿಷನ್ ಅಮೃತ್ ಸರೋವರದ ಅಡಿಯಲ್ಲಿ ಈಗಾಗಲೇ 68,830 ಸರೋವರಗಳನ್ನು ಅಭಿವೃದ್ಧಿಪಡಿಸಿದ್ದು, ಇವುಗಳಲ್ಲಿ 1250ಕ್ಕೂ ಹೆಚ್ಚು ಸರೋವರಗಳು ಮೀನುಗಾರಿಕೆಗೆ ಸಂಬಂಧಿಸಿದ್ದಾಗಿವೆ. ಮೀನುಗಾರಿಕೆ ವಲಯದಲ್ಲಿ 200 ಸ್ಟಾರ್ಟಪ್‌ಗಳನ್ನು ಬೆಂಬಲಿಸಲಾಗುತ್ತಿದೆ. ಒಟ್ಟಾರೆ, ಈ ಸಲದ ಬಜೆಟ್‌ನಲ್ಲಿ ರೈತರಿಗೆ ಹೆಚ್ಚಿನ ಒತ್ತು ನೀಡಿ ಹಲವು ಯೋಜನೆಗಳನ್ನು ಘೋಷಿಸಿದ್ದು, ಕೃಷಿ, ಡೇರಿ, ಮೀನುಗಾರಿಕೆ ವಲಯಕ್ಕೆ ಪ್ರಮುಖ ಆದ್ಯತೆ ನೀಡಿರುವುದು ಕಂಡುಬರುತ್ತದೆ.

ರೈತರಿಗೂ ಹೆಚ್ಚಿನ ಅನುಕೂಲ ಮಾಡುವ ಉದ್ದೇಶದಿಂದ ತೆಂಗು, ಕೋಕೋ, ಗೋಡಂಬಿ, ಶ್ರೀಗಂಧ ಉತ್ಪಾದನೆ ಹೆಚ್ಚಿಸುವ ಉದ್ದೇಶದಿಂದ ಹೊಸ ಯೋಜನೆಗಳನ್ನು ಸಹ ಘೋಷಿಸಲಾಗಿದೆ. 2013ರಲ್ಲಿ 22 ಸಾವಿರ ಕೋಟಿ ಮಾತ್ರವೇ ಇದ್ದದ್ದು, ಮೋದಿ ಸರ್ಕಾರದಲ್ಲಿ ಇಂದು ಕೃಷಿ ಬಜೆಟ್ ಒಂದೂವರೆ ಲಕ್ಷ ಕೋಟಿ ಏರಿಕೆಯಾಗಿರುವುದು ಕೃಷಿಗೆ, ರೈತರಿಗೆ ಕೇಂದ್ರ ಸರ್ಕಾರ ತೋರುತ್ತಿರುವ ಕಾಳಜಿಯ ದ್ಯೋತಕವಾಗಿದೆ.

ಮನರೇಗಾ ಯೋಜನೆಯನ್ನು ಆಧುನಿಕಗೊಳಿಸಿದ ಬೆನ್ನಲ್ಲೇ ಮಹಾತ್ಮ ಗಾಂಧಿ ಗ್ರಾಮ ಸ್ವರಾಜ್ ಯೋಜನೆಯನ್ನು ಘೋಷಿಸಲಾಗಿದ್ದು, ಖಾದಿ ಉದ್ಯಮವನ್ನು ಉತ್ತೇಜಿಸಲು ಈ ಕ್ರಮಕೈಗೊಂಡಿದೆ. ದೇಶದ ಖಾದಿ, ಕೈಮಗ್ಗ, ಕರಕುಶಲ ಕಲೆ, ಉದ್ಯಮಗಳಿಗೆ ಜಾಗತಿಕ ಮಟ್ಟದ ಮಾರುಕಟ್ಟೆ ಪ್ರವೇಶ ಮತ್ತು ಬ್ರಾಂಡಿಂಗ್‌ಗೆ ನೆರವಾಗಲು ಈ ಯೋಜನೆ ಸಹಕಾರಿಯಾಗಲಿದೆ.ಕಾಂಗ್ರೆಸ್ ಮತ್ತು ಇತರೆ ಪಕ್ಷಗಳ ವಿರೋಧದ ನಡುವೆಯೇ, ರಾಮ್-ಜಿ ಯೋಜನೆಗೆ 95 ಸಾವಿರ ಕೋಟಿ ರು. ಅನುದಾನವನ್ನು ಮೀಸಲಿಡಲಾಗಿದ್ದು, ಯೋಜನೆಯನ್ನು ಇನ್ನಷ್ಟು ಬಲಗೊಳಿಸಲಿದೆ. ಇದರ ನಡುವೆ, ಗ್ರಾಮೀಣಾಭಿವೃದ್ಧಿ ಇಲಾಖೆಗೆ ಶೇ.21ರಷ್ಟು ಬಜೆಟ್ ಹೆಚ್ಚಳವಾಗಿದ್ದು, ಇದು ಗ್ರಾಮೀಣ ಭಾರತವನ್ನು ಬಲಿಷ್ಠಗೊಳಿಸಲು ಸಹಕಾರಿಯಾಗಲಿದೆ ಎಂದು ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ.

ಇನ್ನುಂದೆ ವಾಣಿಜ್ಯ ಬೆಳೆಗಳನ್ನು ರೈತಸ್ನೇಹಿಯಾಗಿ ರೂಪುಗೊಳಿಸಲು ಚಿಂತನೆ ನಡೆಸಿದ್ದು, ಯೋಜನೆ ಜಾರಿಗೆ ಕ್ರಮ ಕೈಗೊಳ್ಳಲಾಗುವುದು ಎಂದಿದ್ದಾರೆ. ಒಟ್ಟಾರೆ, 2026-27ರ ಹಣಕಾಸು ವರ್ಷದಲ್ಲಿ 53.47 ಲಕ್ಷಕೋಟಿ ಬಜೆಟ್ ಮಂಡಿಸಿರುವ ವಿತ್ತ ಸಚಿವರು, ಎಲ್ಲ ಇಲಾಖೆಗಳಿಗೆ ಹಿಂದಿನದಕ್ಕಿಂತ ಹೆಚ್ಚಿಗೇ ಅನುದಾನ ಘೋಷಿಸಿದ್ದಾರೆ.

ಮಹಿಳಾವರ್ಗಕ್ಕೆ, ರೈತರಿಗೆ, ಗ್ರಾಮೀಣ ರೈತರಿಗೆ ಮತ್ತು ಮೀನುಗಾರಿಕೆಗೆ ವಿಶೇಷ ಒತ್ತುಕೊಟ್ಟು ಯೋಜನೆಗಳನ್ನು - ಅನುದಾನಗಳನ್ನು ಗೋಷಿಸಿದ್ದು, ಇವುಗಳೆಲ್ಲವೂ ನಮ್ಮ ಕರ್ನಾಟಕಕ್ಕೆ, ಕರಾವಳಿ ಭಾಗಕ್ಕೂ ಸಂಬಂಧಿಸಿದ್ದಾಗಿವೆ ಎಂಬುದು ನಾವು ಸಂತಸ ಪಡಬೇಕಾದ ಸಂಗತಿಯಾಗಿದೆ. ರಾಜ್ಯ ಸರ್ಕಾರದಿಂದ ಆಗಬೇಕಾದ ಅಭಿವೃದ್ಧಿ ಕಾರ್ಯಗಳು, ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರವಾಸೋದ್ಯಮ ಬೆಳಸಬೇಕಾದ ಕರ್ತವ್ಯ-ಜವಾಬ್ದಾರಿಗಳು ಸಾಕಷ್ಟಿವೆ. ಅಗತ್ಯವಿರುವ ಯೋಜನೆಗಳನ್ನಾದರೂ ಸಮರ್ಪಕವಾಗಿ ಜಾರಿಗೆ ತರುವ ಪ್ರಯತ್ನ ಸಾಗಬೇಕಿದೆ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue: 29

ಸಮಾಚಾರ ಸಣ್ಣದಲ್ಲ

ಬಾಂಗ್ಲಾ ಹಿಂದೂ ಅಕ್ಕಿ ವ್ಯಾಪಾರಿ ಹತ್ಯೆ

ಢಾಕಾ: ಬಾಂಗ್ಲಾದೇಶದಲ್ಲಿ ಹಿಂದೂ ಸರಣಿ ಕೊಲೆ ಮುಂದುವರೆದಿದ್ದು, ಸೋಮವಾರ ರಾತ್ರಿ ಹಿಂದೂ ವರ್ತಕ, 62 ವರ್ಷದ ಸುಶೇನ್ ಚಂದ್ರ ಸರ್ಕಾರ್ ಎಂಬವರನ್ನು ಭೀಕರವಾಗಿ ಹತ್ಯೆ ಮಾಡಲಾಗಿದೆ. ಮೈಮೆನ್ಸಿಂಗ್ ಜಿಲ್ಲೆಯಲ್ಲಿ ಸುಶೇನ್ ಚಂದ್ರ ಸಗಟು ಅಕ್ಕಿ ವ್ಯಾಪಾರಿಯಾಗಿದ್ದರು. ಬೋಗರ್ ಬಜಾರ್‌ನಲ್ಲಿ ಭಾಯ್ ಭಾಯ್ ಎಂಟರ್ ಪ್ರೈಸಸ್ ಮಳಿಗೆ ಹೊಂದಿದ್ದರು. ರಾತ್ರಿ 11 ಗಂಟೆ ವೇಳೆ ಮಾರುಕಟ್ಟೆ ಪ್ರದೇಶದಲ್ಲಿ ಅಪರಿಚಿತ ದಾಳಿಕೋರರು ಹರಿತ ಆಯುಧಗಳಿಂದ ಸುಶೇನ್ ಅವರ ಮೇಲೆ ದಾಳಿ ನಡೆಸಿ ಹೊಡೆದು ಕೊಂದಿದ್ದಾರೆ. ಬಳಿಕ ಶವವನ್ನು ಅಂಗಡಿಯೊಳಗೆ ಬಿಟ್ಟು ಬಾಗಿಲು ಹಾಕಿಕೊಂಡು ಹೋಗಿದ್ದಾರೆ. ಅಲ್ಲದೆ ಅಂಗಡಿಯಲ್ಲಿದ್ದ ಲಕ್ಷಾಂತರ ರು. ಮೌಲ್ಯದ ಸರಕುಗಳನ್ನು ಹೊತ್ತೊಯ್ದಿದ್ದಾರೆ. ಸರ್ಕಾರ್ ಮನೆಗೆ ಬಾರದ ಹಿನ್ನೆಲೆ ಅವರನ್ನು ಹುಡುಕುತ್ತ ಕುಟುಂಬದವರು ಅಂಗಡಿಗೆ ಬಂದ ಬಂದಾಗ ರಕ್ತದ ಮಡುವಿನಲ್ಲಿ ಸರ್ಕಾರ ಬಿದ್ದಿರುವುದನ್ನು ನೋಡಿದ್ದಾರೆ. ತಕ್ಷಣ ಮೈಮೆನ್‌ಸಿಂಗ್ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಕರದೊಯ್ದುರೂ ಪ್ರಯೋಜನವಾಗಿಲ್ಲ. ಅಲ್ಲಿ ವೈದ್ಯರು ಅದಾಗಲೇ ಸುಶೇನ್ ಮೃತಪಟ್ಟಿದ್ದಾರೆ ಎಂದು ಘೋಷಿಸಿದ್ದಾರೆ. ಬಳಿಕ ಕುಟುಂಬದವರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ರನ್‌ವೇಯಲ್ಲಿ ಜಾರಿದ ಸೊಮಾಲಿಯ ವಿಮಾನ

ಮೊಗಾದಿಶು: ಸೊಮಾಲಿಯ ದೇಶದಲ್ಲಿ ಸ್ಟಾರ್ ಸ್ಕೈ ಕಂಪನಿಯ ವಿಮಾನವೊಂದು ಸಮುದ್ರ ದಂಡೆ ಸಮೀಪದಲ್ಲಿದ್ದ ಪ್ರಮುಖ ವಿಮಾನ ನಿಲ್ದಾಣದಲ್ಲಿ ತುರ್ತಾಗಿ ಲ್ಯಾಂಡ್ ಆಗುವ ವೇಳೆ ರನ್‌ವೇಯಿಂದ ಜಾರಿ ಕಡಲಿಗೆ ಹೋಗಿ ಬಿದ್ದಿದೆ. 55 ಪ್ರಯಾಣಿಕರಿದ್ದ ವಿಮಾನ ಉತ್ತರ ನಗರವಾದ ಗಾಲ್ಕಸಿಯೊಗೆ ಮಂಗಳವಾರ ತೆರಳುತ್ತಿದ್ದಾಗ ಆಕಾಶದಲ್ಲಿದ್ದಾಗಲೇ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡಿದೆ. ತಕ್ಷಣವೇ ಪೈಲಟ್ ತುರ್ತು ಭೂಸ್ಪರ್ಶಕ್ಕೆ ಯತ್ನಿಸಿದ್ದಾರೆ. ಮೊಗಾದಿಶುವಿನ ಅಡೆನ್ ಅಬ್ದುಲ್ಲೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತುರ್ತು ಲ್ಯಾಂಡಿಂಗ್ ಸಮಯದಲ್ಲಿ ರನ್‌ವೇಯಲ್ಲಿ ಚಕ್ರಗಳು ಜಾರಿವೆ. ಪರಿಣಾಮ ವಿಮಾನ ಕಡಲ ತೀರಕ್ಕೆ ಜಾರಿಕೊಂಡು ಹೋಗಿದೆ. ತಾಂತ್ರಿಕ ಸಮಸ್ಯೆ ಮತ್ತು ರನ್‌ವೇಯಲ್ಲಿ ಜಾರಿದ್ದಕ್ಕೆ ಕಾರಣ ಏನೆಂದು ತಿಳಿಯಲು ತನಿಖೆ ನಡೆಸಲಾಗುವುದು ಎಂದು ವಿಮಾನ ಸಂಸ್ಥೆಯ ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಘರ್ಷಣೆಗೀಡಾಗಿದ್ದರಿಂದ ವಿಮಾನ ಬಾಲದ ಭಾಗದಲ್ಲಿ ತುಂಡಾಗಿ, ಭಾರೀ ಪ್ರಮಾಣದಲ್ಲಿ ಹಾನಿಗೀಡಾಗಿದೆ. ಆದರೆ, ವಿಮಾನದಲ್ಲಿದ್ದ ಎಲ್ಲರೂ ಸುರಕ್ಷಿತವಾಗಿದ್ದಾರೆ. ಯಾರಿಗೂ ಗಾಯಗಳಾಗಿಲ್ಲ.

ಬಿಹಾರ: ಪ್ರಜ್ಞೆತಪ್ಪಿಸಿ ಯುವಕನ ಮದುವೆ

ಪಟನಾ: ಬಿಹಾರದ ಲಖಿಸರಾಯ್ ಜಿಲ್ಲೆ ನಿವಾಸಿ, ಹೋಮ್‌ಗಾರ್ಡ್ ಕೆಲಸಕ್ಕಾಗಿ ತಯಾರಿ ನಡೆಸಿದ್ದ ಯುವಕನೊಬ್ಬನಿಗೆ ಅಮಲು ಬರಿಸುವ ಪಾನೀಯ ಕುಡಿಸಿ ಪ್ರಜ್ಞೆ ತಪ್ಪಿಸಿ, ಹೊತ್ತೊಯ್ದು ಮೋಸದಿಂದ ಯುವತಿ ಜತೆ ಮದುವೆ ಮಾಡಿಸಲಾಗಿದೆ. ಈ ಸಂದರ್ಭದ ವಿಡಿಯೊ ದೃಶ್ಯ ಜಾಲತಾಣದಲ್ಲಿ ವೈರಲ್ ಆಗಿವೆ. ಯುವಕನಿಗೆ ಮಾದಕ ದ್ರವ್ಯ ಬೆರೆಸಿದ ಪಾನೀಯ ಕುಡಿಸಿ ಪ್ರಜ್ಞೆ ತಪ್ಪಿಸಿದ ಕೆಲ ವ್ಯಕ್ತಿಗಳು, ಬಳಿಕ ಆತನನ್ನು ಹೊತ್ತೊಯ್ದು ಮದುವೆ ಮಂಟಪದಲ್ಲಿ ಕೂರಿಸಿದ್ದಾರೆ. ಮದುವೆ ಶಾಸ್ತ್ರಗಳ ನಡೆದಿದ್ದಾಗಲೇ ಕೆಲ ಸಮಯದ ಬಳಿಕ ಯುವಕನಿಗೆ ಸ್ವಲ್ಪ ಪ್ರಜ್ಞೆ ಬಂದಿದೆ. ಕಣ್ಣು ಬಿಟ್ಟು ನೋಡಿದರೆ ಮದುವೆ ಮಂಟಪದಲ್ಲಿರುವುದು ಅರಿವಿಗೆ ಬಂದಿದೆ. ಆದರೆ ಮಾದಕ ದ್ರವ್ಯದ ಪ್ರಭಾವದಿಂದ ಅರೆ ಪ್ರಜ್ಞಾವಸ್ಥೆಯಲ್ಲಿದ್ದ ಯುವಕ ಅಸಹಾಯಕನಾಗಿದ್ದ. ಆಗಲೇ ಯುವಕನ ಕೈಗೆ ತಾಳಿ ಕೊಟ್ಟು ಯುವತಿಯ ಕೊರಳಿಗೆ ಕಟ್ಟಿಸಿ ಮದುವೆ ವಿಧಿವಿಧಾನ ಪೂರ್ಣಗೊಳಿಸಿದ್ದಾರೆ. 'ನನಗೆ ಎಲ್ಲವೂ ಮಸುಕಾಗಿ ಕಾಣುತ್ತಿತ್ತು. ಪೂರ್ಣ ಕಣ್ಣು ಬಿಟ್ಟು ಎಚ್ಚರಗೊಳ್ಳುವ ವೇಳೆಗೆಲ್ಲಾ ನನ್ನ ಮದುವೆ ಮುಗಿದಿತ್ತು' ಎಂದು ಯುವಕ ಅಲವತ್ತುಕೊಂಡಿದ್ದಾನೆ. ಬಿಹಾರದಲ್ಲಿ ಮದುವೆ ವರ ಸಿಗುವುದೇ ಕಷ್ಟವಾಗಿರುವುದರಿಂದ ವಧುವಿನ ಕಡೆಯವರು ಹೀಗೆ ಯುವಕರನ್ನು ಅಪಹರಿಸಿ ಮೋಸದಿಂದ ಮದುವೆ ಮಾಡಿಸುವ ಕ್ರಮ ಹೆಚ್ಚಿದೆ.

{ ಸುಧಾಂಶು ತ್ರಿವೇದಿ } ಬಿಜೆಪಿ ವಕ್ತಾರ

ರಾಹುಲ್ ಗಾಂಧಿ ಕಾಂಗ್ರೆಸ್ ಪಕ್ಷದ 'ಅತಿ ಬುದ್ಧಿವಂತ ಮೂರ್ಖ'. ಲೋಕಸಭೆ ಪ್ರತಿಪಕ್ಷ ನಾಯಕರಾಗಿ ತುಂಬಾ ಕೀಳು ಮಟ್ಟದ ಸಂಸದೀಯ ನಡವಳಿಕೆ ಹೊಂದಿದ್ದಾರೆ. ಭಾರತವನ್ನು ಮಾರಿಕೊಂಡಿದ್ದಾರೆ. ಅಮೆರಿಕಕ್ಕೆ ಶರಣಾಗಿದ್ದಾರೆ ಎಂದೆಲ್ಲಾ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಸುಳ್ಳು ಆರೋಪ ಮಾಡುತ್ತಾ, ತಮ್ಮ ಜ್ಞಾನದ ಮಟ್ಟವನ್ನು ತೋರುತ್ತಿದ್ದಾರೆ.

ಆಂಥ್ರೋಪಿಕ್ ಸೇಫ್‌ಗಾರ್ಡ್ ರೀಸರ್ಚ್ ಟೀಂ ಮುಖ್ಯಸ್ಥ ಹುದ್ದೆಗೆ ರಾಜೀನಾಮೆ | ಬ್ರಿಟನ್‌ಗೆ ತೆರಳಿ ಕೆಲ ದಿನ ಕಣ್ಮರೆ ಆಗುವೆ: ಸಹೋದ್ಯೋಗಿಗಳಿಗೆ 2 ಪುಟಗಳ ಪತ್ರ

ಜಗತ್ತು ವಿನಾಶದ ಅಂಚಿನಲ್ಲಿದೆ: ಮೃಣಾಂಕ್ ಶರ್ಮಾ

ಸ್ಯಾನ್‌ಫ್ರಾನ್ಸಿಸ್ಕೋ: 'ಜಗತ್ತು ವಿನಾಶದ ಅಂಚಿನಲ್ಲಿದೆ' ಎಂದು 'ಎಕ್ಸ್' ಸಂದೇಶದಲ್ಲಿ ಬರೆದಿರುವ ಆಂಥ್ರೋಪಿಕ್ ಕಂಪನಿಯ 'ಎಐ ಸೇಫ್ಟಿ ಟೀಮ್' ಮುಖ್ಯಸ್ಥ, ಹಿರಿಯ ಸಂಶೋಧಕ ಮೃಣಾಂಕ್ ಶರ್ಮಾ ತಮ್ಮ ಕೆಲಸಕ್ಕೆ ದಿಢೀರ್ ರಾಜೀನಾಮೆ ಘೋಷಿಸಿದ್ದಾರೆ, ಆ ಮೂಲಕ ವಿಶ್ವದ 'ಎಐ' ಉದ್ಯಮ ಜಗತ್ತು ಅಚ್ಚರಿಯಲ್ಲಿ ಮುಳುಗುವಂತೆ-ಆಘಾತಗೊಳ್ಳುವಂತೆ ಮಾಡಿದ್ದಾರೆ.

ರಾಜೀನಾಮೆ ಸುದ್ದಿಯ ಜತೆಗೇ ಸಹೋದ್ಯೋಗಿಗಳನ್ನು ಉದ್ದೇಶಿಸಿ 2 ಪುಟಗಳ ಪತ್ರವನ್ನೂ 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ. 'ಪರಸ್ಪರ ಸಂಬಂಧಿತವಾಗಿರುವ ವಿವಿಧ ಬಿಕ್ಕಟ್ಟುಗಳು ಈ ಜಗತ್ತನ್ನು ವಿನಾಶದ ಅಂಚಿನಲ್ಲಿ ಇರಿಸಿವೆ' ಎಂದೂ ನಿಗೂಢವಾಗಿ ಬರೆದಿದ್ದಾರೆ.

ಭಾರತ ಮೂಲದ ಮೃಣಾಂಕ್ ಶರ್ಮಾ, 'ಕೃತಕ ಬುದ್ಧಿಮತ್ತೆ ತಂತ್ರಾಂಶ ಅಭಿವೃದ್ಧಿ ಕ್ಷೇತ್ರದ ಅಮೆರಿಕದಲ್ಲಿನ ಪ್ರಮುಖ ಕಂಪನಿ 'ಆಂಥ್ರೋಪಿಕ್'ನಲ್ಲಿ ಸೇಫ್‌ಗಾರ್ಡ್ಸ್ ರಿಸರ್ಚ್(ಸಂಶೋಧನಾ) ತಂಡದ ಮುಖ್ಯಸ್ಥರಾಗಿದ್ದರು. 'ಕೃತಕ ಬುದ್ಧಿಮತ್ತೆ ಕ್ಷೇತ್ರದ ಸುರಕ್ಷತೆ ಕುರಿತು ಮಹತ್ವದ ಸಂಶೋಧನೆಯಲ್ಲಿ ತೊಡಗಿಸಿಕೊಂಡಿದ್ದರು. ರಾಜೀನಾಮೆಗೆ ನಿರ್ದಿಷ್ಟ ಕಾರಣ ನೀಡದೇ ನಿಗೂಢವಾಗಿ 'ಎಕ್ಸ್' ಸಂದೇಶ ಬರೆದಿರುವುದು ಬಹಳ ಕುತೂಹಲ ಕೆರಳಿಸಿದೆ.

'ಜಗತ್ತು ಈಗ ವಿನಾಶದ ಅಂಚಿನಲ್ಲಿದೆ. ಕೃತಕ ಬುದ್ಧಿಮತ್ತೆ(ಎಐ) ಅಥವಾ ಬಯೋವೆಪನ್‌ಗಳಿಂದಷ್ಟೇ ಅಲ್ಲ, ಪರಸ್ಪರ ಜೋಡಿಸಲಾಗಿರುವ ವಿವಿಧ



ಬಿಕ್ಕಟ್ಟುಗಳಿಂದ ಈ ಜಗತ್ತು ಬಹಳ ಅಪಾಯದಲ್ಲಿದೆ. ಜಗತ್ತಿನ ಮೇಲೆ ಪರಿಣಾಮ ಬೀರಬಲ್ಲ, ನಮ್ಮ ಸಾಮರ್ಥ್ಯಕ್ಕೆ ತಕ್ಕದಾದ ಪ್ರಮಾಣದ ವಿವೇಕ ನಮ್ಮಲ್ಲಿ ಬೆಳೆಯುವ ಅವಶ್ಯಕತೆ ಇದೆ' ಎಂದೂ ಪತ್ರದಲ್ಲಿ ಬರೆದಿದ್ದಾರೆ.

'ಎ.ಐ' ಸುರಕ್ಷತೆ ಕುರಿತು ಸಂಶೋಧನೆ ಮಾಡುತ್ತಿದ್ದ ಹಿರಿಯ ಸಂಶೋಧಕ, ಆಂಥ್ರೋಪಿಕ್‌ನ ಉನ್ನತ ಅಧಿಕಾರಿಯೇ ಹೀಗೆ ಹೇಳಿರುವುದು, ದಿಢೀರ್ ರಾಜೀನಾಮೆ ನೀಡಿರುವುದು 'ಎಐ' ಕ್ಷೇತ್ರದಲ್ಲಿನ ಸುರಕ್ಷತೆ ಕುರಿತಂತೆ ಆತಂಕ ಉಂಟಾಗಲು ಕಾರಣವಾಗಿದೆ.

ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೊದಲ್ಲಿ ಪ್ರಧಾನ ಕಚೇರಿ ಹೊಂದಿರುವ ಆಂಥ್ರೋಪಿಕ್ ಕಂಪನಿ, ಕೃತಕ ಬುದ್ಧಿಮತ್ತೆ(ಎ.ಐ) ಉದ್ಯಮ ವಲಯದಲ್ಲಿ ಪ್ರಸಿದ್ಧಿ ಪಡೆದಿದೆ. 'ಕ್ಲೌಡ್ ಎ.ಐ ಮಾಡೆಲ್' ವಿಭಾಗದಲ್ಲಿ ಜನಪ್ರಿಯವಾಗಿದೆ. ಡೇರಿಯೊ ಅಮೊಡೈ ಅವರು ಕಂಪನಿಗೆ ಸಿಇಒ ಆಗಿದ್ದಾರೆ.

ಮೃಣಾಂಕ್ ಬೇಸರಕ್ಕೆ ಕಾರಣ?

ಆಂಥ್ರೋಪಿಕ್ ಕೃತಕ ಬುದ್ಧಿಮತ್ತೆ(ಎ.ಐ) ತಂತ್ರಾಂಶಗಳ ಅಭಿವೃದ್ಧಿ ಕ್ಷೇತ್ರದಲ್ಲಿ ವಿಶ್ವದಲ್ಲೇ ಪ್ರಮುಖ ಕಂಪನಿ. ಆದರೆ, 'ಎ.ಐ' ಸುರಕ್ಷತೆಯ ಬಗೆಗೆ ಕಂಪನಿ ಹೆಚ್ಚು ಗಮನ ಹರಿಸುತ್ತಿಲ್ಲ ಎಂಬುದೇ ಮೃಣಾಂಕ್ ಅವರ ಬೇಸರಕ್ಕೆ ಕಾರಣವಾಗಿದೆ. ಅಲ್ಲದೇ ಅವರು ಕಾರ್ಪೊರೇಟ್ ಪ್ರಪಂಚದ ಮೌಲ್ಯಗಳಲ್ಲಿನ ಮಿತಿಗಳ ಬಗೆಗೂ ಹತಾಶರಾಗಿದ್ದರು ಎಂದು ತಿಳಿದುಬಂದಿದೆ. ಯಾವುದೇ ಮೌಲ್ಯಗಳನ್ನು ಆಧರಿಸಿ ಕ್ರಿಯೆಗಳು ನಡೆಯುತ್ತಿಲ್ಲ. ಅಂಥ ನಿರೀಕ್ಷೆಯೇ ಈಗ ಬಹಳ ಕಷ್ಟ ಎನಿಸುತ್ತಿದೆ. ಪದೇ ಪದೇ ಹಾಗೆ ಅನಿಸುತ್ತಿದೆ. ಯಾವುದು ಬಹಳ ಮುಖ್ಯವಾಗಿದೆಯೋ ಅದನ್ನೇ ನಿರ್ಲಕ್ಷಿಸಲಾಗುತ್ತಿದೆ. ಈ ವಿಚಾರದಲ್ಲಿ ಕಂಪನಿಯಲ್ಲಿ ಮತ್ತು ನನ್ನಲ್ಲಿ ಬಹಳ ಒತ್ತಡವಿದೆ' ಎಂದು ಮೃಣಾಂಕ್ ಹೇಳಿಕೊಂಡಿದ್ದಾರೆ.

ಕವಿಯಾಗುವ ಆಸೆ; ಕಣ್ಮರೆಯ ಚಿಂತನೆ

ಮೃಣಾಂಕ್ ಶರ್ಮಾ ಮೊದಲು ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ 'ಮೆಷಿನ್ ಲರ್ನಿಂಗ್' ವಿಷಯದಲ್ಲಿ ಇಂಜಿನಿಯರಿಂಗ್ ಸ್ನಾತಕೋತ್ತರ ಪದವಿ ಗಳಿಸಿದ್ದು, ಬಳಿಕ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಅದೇ ವಿಷಯದಲ್ಲಿ 'ಡಿ.ಫಿಲ್' ಪೂರ್ಣಗೊಳಿಸಿದ್ದಾರೆ. ಆ ಬಳಿಕ ಆಂಥ್ರೊಪಿಕ್ ಕಂಪನಿ ಸೇರಿದ್ದಾರೆ.ಎರಡೂವರೆ ವರ್ಷದ(2023 ಆಗಸ್ಟ್)



ಹಿಂದೆ ಸ್ಯಾನ್‌ಫ್ರಾನ್ಸಿಸ್ಕೊಗೆ ಬಂದೆ. 'ಎ.ಐ' ಸುರಕ್ಷತೆ ವಿಭಾಗದಲ್ಲಿ ಸಂಶೋಧನೆ ಶುರು ಮಾಡಿದೆ. ಎಐ ಸೈಕೊಫೆನ್ಸಿ ಮತ್ತು ಅದಕ್ಕೆ ಕಾರಣಗಳು, ಎಐ ನೆರವಿನಿಂದ 'ಬಯೋ ಟೆರರ್ರಿಸಂ ಅಪಾಯ ಪ್ರಮಾಣ ತಗ್ಗಿಸುವ ಸುರಕ್ಷತಾ ತಂತ್ರಾಂಶ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿಸಿಕೊಂಡೆ. ಈ ಕ್ಷೇತ್ರಕ್ಕೆ ಉತ್ತಮ ಕೊಡುಗೆ ನೀಡಿದ ಸಮಾಧಾನವಿದೆ. ನಾನು ಏನು ಬಯಸಿದ್ದೆನೋ ಅದನ್ನು ಸಾಧಿಸಿದ್ದೇನೆ ಅನಿಸಿದೆ. ಹಾಗಾಗಿ ಆಂಥ್ರೊಪಿಕ್‌ನಿಂದ ನಿರ್ಗಮಿಸುವ ನಿರ್ಧಾರ ಮಾಡಿದೆ' ಎಂದು ಬರೆದಿರುವ ಮೃಣಾಂಕ್ ಅವರ ಆಂಥ್ರೋಪಿಕ್ ಸೇನಾವಧಿ ಫೆ.9ಕ್ಕೇ ಮುಗಿದಿದೆ. 'ನಾನು ಬ್ರಿಟನ್‌ಗೆ ಹೋಗಲಿದ್ದೇನೆ. ಅಲ್ಲಿ ಕವಿತೆಗಳನ್ನು ಬರೆಯುತ್ತಾ ಅದರಲ್ಲೇ ಪದವಿಗಳಿಸಬೇಕಿದೆ. ಸಮಾಜಕ್ಕೆ ಪ್ರಯೋಜನವಾಗುವಂತಹ(ಕಮ್ಯುನಿಟಿ ಬಿಲ್ಡಿಂಗ್) ಕೆಲಸ ಮಾಡಬೇಕಿದೆ. ಆದರೆ, ಅದಕ್ಕೂ ಮುನ್ನ ಕೆಲ ಸಮಯ ಯಾರಿಗೂ ಕಾಣದಂತೆ, ಸಮಾಜದ ಕಣ್ಣಿಂದ ಮರೆಯಾಗಿ ಇರಲು ಬಯಸಿದ್ದೇನೆ' ಎಂದು ಮೃಣಾಂಕ್ ಶರ್ಮಾ ಪತ್ರದಲ್ಲಿ ಬರೆದಿದ್ದಾರೆ. ಜತೆಗೆ, ಬರೀ ಕಲ್ಲುಗಳೇ ಕಾಣಿಸುವ ಪರ್ವತ ಪ್ರದೇಶದಲ್ಲಿ ಕಂಬವೊಂದಕ್ಕೆ ಒರಗಿ ಕುಳಿತು ಕಣ್ಣು ಮುಚ್ಚಿ ಕೊಳಲು ನುಡಿಸುತ್ತಿರುವ ತಮ್ಮದೇ ಫೋಟೊವನ್ನೂ ಲಗತ್ತಿಸಿದ್ದಾರೆ.

ಇದೇ ಮೊದಲ ಬಾರಿಗೆ ಭಾರತದಲ್ಲಿ ಜಾಗತಿಕ ಮಟ್ಟದ ಶೃಂಗಸಭೆ | ಫೆ.16ರಿಂದ 20ರವರೆಗೂ ಭಾರತ್ ಮಂಟಪಂನಲ್ಲಿ ಮಹತ್ವದ ಶೃಂಗ | ಕೃತಕ ಬುದ್ಧಿಮತ್ತೆ ಪರಿಣಾಮಗಳ ಕುರಿತು 5 ದಿನ ಚರ್ಚೆ-ಸಂವಾದ

ಎ.ಐ ಇಂಪ್ಯಾಕ್ಟ್ ಶೃಂಗಕ್ಕೆ ದೆಹಲಿ ಸಜ್ಜು

ದೆಹಲಿ: ಇದೇ ಮೊದಲ ಬಾರಿಗೆ 'ಕೃತಕ ಬುದ್ಧಿಮತ್ತೆ'(ಎ.ಐ) ಕ್ಷೇತ್ರದ 'ಇಂಪ್ಯಾಕ್ಟ್ ಸಮ್ಮಿಟ್'(ಶೃಂಗಸಭೆ) ಭಾರತದಲ್ಲಿ ಆಯೋಜನೆಯಾಗಿದೆ. ಜಾಗತಿಕ ಮಟ್ಟದ 'ಎ.ಐ' ಉದ್ಯಮ ಕ್ಷೇತ್ರದ ದಿಗ್ಗಜರು ಪಾಲ್ಗೊಳ್ಳಲಿರುವ ಈ ಮಹತ್ವದ ಶೃಂಗಸಭೆ ಫೆ.16ರಿಂದ ಆರಂಭಗೊಳ್ಳಲಿದ್ದು, ಗಣ್ಯಾತಿಗಣ್ಯರನ್ನು ಎದುರುಗೊಳ್ಳಲು ದೆಹಲಿಯಲ್ಲಿನ ಬೃಹತ್ ಸಭಾಮಂಟಪವಾದ 'ಭಾರತ್ ಮಂಟಪಂ' ಸಕಲ ರೀತಿಯಲ್ಲೂ ಸಜ್ಜಾಗಿದೆ.

ಪ್ರಧಾನಿ ನರೇಂದ್ರ ಮೋದಿ, ಫ್ರಾನ್ಸ್ ಅಧ್ಯಕ್ಷ ಎಮ್ಯಾನ್ಯುಯಲ್ ಮ್ಯಾಕ್ರಾನ್, ಬ್ರೆಜಿಲ್ ಅಧ್ಯಕ್ಷ ಲೂಯೀಸ್ ಇನ್ಯಾಸಿಯೊ ಲುಲಾ ಡ ಸಿಲ್ವಾ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಅಲ್ಲದೇ, ನೆದರ್‌ಲೆಂಡ್, ಫಿನ್‌ಲೆಂಡ್, ಈಸ್ಟೋನಿಯಾ ದೇಶಗಳ ಪ್ರಧಾನಿಗಳೂ ಅಪರೂಪದ ಶೃಂಗಕ್ಕೆ ಆಗಮಿಸುತ್ತಿದ್ದಾರೆ. ಯುನೈಟೆಡ್ ಕಿಂಗ್ಡಂನ ಉಪ ಪ್ರಧಾನಿ ಡೇವಿಡ್ ಲ್ಯಾಮಿ, ಸ್ವೀಡನ್ ಮತ್ತು ದಕ್ಷಿಣ ಕೊರಿಯ ಉಪ ಪ್ರಧಾನಿಗಳೂ ಶೃಂಗದಲ್ಲಿ ಭಾಗಿಯಾಗಲಿದ್ದಾರೆ.

ದೆಹಲಿಯ ಭಾರತ ಮಂಟಪಂನಲ್ಲಿನ ವಿಶಾಲ ಸಭಾಂಗಣದಲ್ಲಿ ಫೆ.16ರಿಂದ 20ರವರೆಗೂ ನಡೆಯಲಿರುವ 'ಎಐ ಇಂಪ್ಯಾಕ್ಟ್ ಸಮ್ಮಿಟ್-2026 ಭಾರತ್' ಶೃಂಗಸಭೆಯಲ್ಲಿ ತಂತ್ರಜ್ಞಾನ ಲೋಕದ ದಿಗ್ಗಜರಾದ ಗೂಗಲ್ ಕಂಪನಿ 'ಸಿಇಒ' ಸುಂದರ ಪಿಚ್ಚೈ, ಎನ್‌ವಿಡಿಯಾ ಕಂಪನಿ ಸಿಇಒ ಜೆನ್‌ಸೆನ್ ಹ್ಯುಯಾಂಗ್, ಓಪನ್ ಎಐ ಸಿಇಒ ಸ್ಯಾಮ್ ಆಲ್ಟಮನ್, ಆಂಥ್ರೊಪಿಕ್ ಸಿಇಒ ಡೇರಿಯೊ ಅಮೊಡೇಯ್ ಮೊದಲಾದವರು ಭಾಗಿಯಾಗಲಿದ್ದಾರೆ.

ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಕ್ಷೇತ್ರದ ಸಂಶೋಧಕರು, ಐ.ಐ ಅಭಿವೃದ್ಧಿಕಾರರು, ಉದ್ಯಮಿಗಳು, ಹೂಡಿಕೆದಾರರು, ನೀತಿ ನಿರೂಪಕರು ಕೂಡಾ ಶೃಂಗದಲ್ಲಿ ಪಾಲ್ಗೊಳ್ಳಲಿದ್ದಾರೆ.

ಕೃತಕ ಬುದ್ಧಿಮತ್ತೆಯ ಅಭಿವೃದ್ಧಿ, ನಿಯಂತ್ರಣ, ಸಾಮಾಜಿಕ ಹೊಣೆಗಾರಿಕೆ, ಸಮಾಜಕ್ಕೆ ಪ್ರಯೋಜನಕಾರಿ ಅಂಶಗಳು ಮೊದಲಾದ ಅಂಶಗಳ ಕುರಿತು ಚರ್ಚೆ-ಸಂವಾದ ನಡೆಯಲಿದೆ.

ಭಾರತದ 22 ಅಧಿಕೃತ ಭಾಷೆಗಳಲ್ಲಿ ಎ.ಐ ಮಾದರಿಗಳನ್ನು ಸೃಷ್ಟಿಸುವ ಸಲುವಾಗಿ 'ಎಐ4ಭಾರತ್ ಓಪನ್ ಎಐ ಇನಿಷಿಯೇಟಿವ್'ಗೆ ಈವರೆಗೆ 70 ಕೋಟಿ ರು. ಹಣ ಹರಿದುಬಂದಿದೆ. ಭಾರತವೀಗ 'ಎ.ಐ' ಕ್ಷೇತ್ರದಲ್ಲಿ 'ಯೂಸ್-ಕೇಸ್ ಕ್ಯಾಪಿಟಲ್' ಎನಿಸಿಕೊಂಡಿದೆ. ಎ.ಐ ಅಳವಡಿಕೆ ಅಗತ್ಯವಿದೆ, ವಿರೋಧಿಸಬೇಕಾಗಿಲ್ಲ ಎಂದು ಇನ್‌ಫೋಸಿಸ್ ಕಂಪನಿ ಸಹ ಸಂಸ್ಥಾಪಕ-ಅಧ್ಯಕ್ಷ ನಂದನ್ ನಿಲೇಕಣಿ ಅವರು 'ಎ.ಐ ಇಂಪ್ಯಾಕ್ಟ್ ಶೃಂಗಸಭೆ-2026' ಹಿನ್ನೆಲೆಯಲ್ಲಿ ಪ್ರತಿಕ್ರಿಯಿಸಿದ್ದಾರೆ.

ಸ್ಯೂಟ್' ಬಾಡಿಗೆ ದಿನಕ್ಕೆ ರು.30 ಲಕ್ಷ!

ಎ.ಐ ಇಂಪ್ಯಾಕ್ಟ್ ಸಮ್ಮಿಟ್‌ಗೆ ದೇಶ-ವಿದೇಶಗಳ ತಂತ್ರಜ್ಞಾನ ಲೋಕದ ಪ್ರಮುಖರೆಲ್ಲರೂ ಆಗಮಿಸುತ್ತಿರುವ ಹಿನ್ನೆಲೆ ದೇಶದ ರಾಜಧಾನಿ ನಗರ ದೆಹಲಿಯಲ್ಲಿನ ತಾರಾ ಹೋಟೆಲ್‌ಗಳಲ್ಲಿನ 'ಐಶಾರಾಮಿ ಸ್ಯೂಟ್'ಗಳಿಗೆ ಭಾರೀ ಬೇಡಿಕೆ ಬಂದಿದೆ. ಪರಿಣಾಮ, ಪಂಚತಾರಾ ಮತ್ತು ಸಪ್ತತಾರಾ ಹೋಟೆಲ್‌ಗಳೆಲ್ಲವೂ ಒಂದು ರಾತ್ರಿಗೆ ಬಾಡಿಗೆ ಮತ್ತು ತೆರಿಗೆ ಸೇರಿ ಸ್ಯೂಟ್‌ಗಳ ದರವನ್ನು ಏಕಾಏಕಿ 30 ಲಕ್ಷ ರು.ಗಳಿಗೆ ಏರಿಸಿವೆ. ಸ್ಟಾರ್ ಹೋಟೆಲ್‌ಗಳಲ್ಲಿನ ಇತರೆ ಕೊಠಡಿಗಳ ಬಾಡಿಗೆಯೂ 5.50 ಲಕ್ಷ ರು.ಗಳಿಗೆ ಹೆಚ್ಚಳವಾಗಿದೆ.ದೆಹಲಿಯಲ್ಲಿನ ತಾರಾ ಹೋಟೆಲ್‌ಗಳಲ್ಲಿ ಮೌರ್ಯ, ತಾಜ್ ಮಹಲ್, ತಾಜ್ ಪ್ಯಾಲೇಸ್, ಲೀಲಾ ಪ್ಯಾಲೇಸ್, ಒಬೆರಾಯ್, ಇಂಪೀರಿಯಲ್, ಜೆಡಬ್ಲ್ಯು ಮ್ಯಾರಿಯಟ್‌ಗಳಲ್ಲಿನ ಸ್ಯೂಟ್‌ಗಳು ಮತ್ತು ಕೊಠಡಿಗಳೆಲ್ಲವೂ ಫೆ.15ರಿಂದ 25ರವರೆಗೂ ಮುಂಗಡ ಬುಕ್ ಆಗಿಬಿಟ್ಟಿವೆ ಎಂದು ಮೂಲಗಳು ತಿಳಿಸಿವೆ.

ಲೂಯೀಸ್

ಮ್ಯಾಕ್ರಾನ್

ಸುಂದರ್ ಪಿಚ್ಚೈ

ಡೇರಿಯೊ



ಆಲ್ಟ್‌ಮನ್

ಜೆನ್‌ಸೆನ್

- ಕೇಂದ್ರದ ಮಾಹಿತಿ ತಂತ್ರಜ್ಞಾನ ಸಚಿವಾಲಯದಿಂದ ಆಯೋಜನೆ
- ಫ್ರಾನ್ಸ್-ಬ್ರೆಜಿಲ್ ಅಧ್ಯಕ್ಷರಾದ ಮ್ಯಾಕ್ರಾನ್, ಲೂಯೀಸ್ ಅತಿಥಿ
- ಪ್ರಧಾನಿ ಮೋದಿ, ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಭಾಗಿ

ಹೋಟೆಲ್ ಬುಕಿಂಗ್

ಎ.ಐ ಇಂಪ್ಯಾಕ್ಟ್ ಸಮ್ಮಿಟ್‌ನ ಸಂಘಟನಾಕಾರರು ಕೂಡಾ ಬೃಹತ್ ಶೃಂಗಸಭೆಗೆ ಗಣ್ಯಾತಿಗಣ್ಯರನ್ನು ಅತಿಥಿಗಳು, ಉದ್ಘಾಟಕರು, ಚರ್ಚಾಪಟುಗಳು, ಸಂವಾದಕಾರರಾಗಿ ಆಹ್ವಾನಿಸಿರುವುದರಿಂದ ಪಂಚತಾರಾ ಹೋಟೆಲ್‌ಗಳಲ್ಲಿ ಹಲವು ಸ್ಯೂಟ್‌ಗಳು ಮತ್ತು 300 ಕೊಠಡಿಗಳನ್ನು ಬಹಳ ಮುಂಚಿತವಾಗಿಯೇ ಕಾಯ್ದಿರಿಸಿವೆ. ಕೊಠಡಿಗಳಷ್ಟೇ ಅಲ್ಲದೇ, ವಾಹನ ಮತ್ತು ವಿಶೇಷ ಔತಣದ ವ್ಯವಸ್ಥೆಯನ್ನೂ ಅತಿಥಿಗಳ ಸತ್ಕಾರದಲ್ಲಿ ಯಾವುದೇ ಕೊರತೆ ಬಾರದಂತೆ ವ್ಯವಸ್ಥಿತವಾಗಿ ಮಾಡಲಾಗಿದೆ. ಅಲ್ಲದೇ, ಭದ್ರತಾ ವ್ಯವಸ್ಥೆಯನ್ನೂ ಬಹಳ ಬಿಗಿಗೊಳಿಸಲಾಗಿದೆ ಎಂದು ತಿಳಿದುಬಂದಿದೆ.ಭಾರತ ಸರಕಾರದ ಪರವಾಗಿ ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವಾಲಯವೇ ಈ ಶೃಂಗಸಭೆಯ ಮುಖ್ಯ ಆಯೋಜಕರಾಗಿದೆ ಎಂಬುದು ಉಲ್ಲೇಖಾರ್ಹ.

ಥಾಯ್ಲೆಂಡ್ ಶಾಲೆ ಗುಂಡಿನ ದಾಳಿ: ಮೂವರಿಗೆ ಗಾಯ

ಬ್ಯಾಂಕಾಕ್: ಥಾಯ್ಲೆಂಡ್‌ನ ದಕ್ಷಿಣ ಭಾಗದ ಹ್ಯಾಟ್ ಯೈ ಜಿಲ್ಲೆಯ ಪಥೋಂಗ್‌ಪ್ರಥಾನ್ ಕಿರಿವ್ಯಾತ್ ಪ್ರದೇಶದಲ್ಲಿನ ಶಾಲೆಯೊಂದಕ್ಕೆ ಬುಧವಾರ ಮಧ್ಯಾಹ್ನ ನುಗ್ಗಿದ 18 ವರ್ಷದ ಬಂದೂಕುಧಾರಿ ಯುವಕ, ಶಾಲೆಯಲ್ಲಿದ್ದ ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ಕೆಲ ಗಂಟೆಗಳ ಕಾಲ ಒತ್ತೆಯಾಳುಗಳಾಗಿ ಇಟ್ಟುಕೊಂಡಿದ್ದ. ಸುದ್ದಿ ತಿಳಿದು ಸ್ಥಳಕ್ಕೆ ಧಾವಿಸಿದ ಪೊಲೀಸರು, 2 ಗಂಟೆಗಳ ಸತತ ಪ್ರಯತ್ನದ ಬಳಿಕ ಬಂದೂಕುಧಾರಿ ಯುವಕನನ್ನು ಬಂಧಿಸುವಲ್ಲಿ ಯಶಸ್ವಿಯಾದರು. ಶಿಕ್ಷಕರು, ವಿದ್ಯಾರ್ಥಿಗಳನ್ನು ಬಂದೂಕುಧಾರಿ, ಒತ್ತೆಯಾಳಾಗಿ ಇರಿಸಿಕೊಂಡಿದ್ದ ಸಂದರ್ಭ ಉಂಟಾದ ಸಂಘರ್ಷದಲ್ಲಿ ಶಾಲಾ ಸಿಬ್ಬಂದಿ ಮತ್ತು ಒಬ್ಬ ವಿದ್ಯಾರ್ಥಿ ಸೇರಿದಂತೆ ಮೂವರು ಗಾಯಗೊಂಡಿದ್ದಾರೆ. ಗಾಯಾಳುಗಳಲ್ಲಿ ಶಾಲೆಯ ಭದ್ರತಾ ಸಿಬ್ಬಂದಿಗೆ ಗಂಭೀರ ಸ್ವರೂಪದಲ್ಲಿ ಗಾಯವಾಗಿದೆ ಎಂದು ತಿಳಿದುಬಂದಿದೆ. ಶಾಲೆಯ ಈ ಒತ್ತೆ ಪ್ರಕರಣದಲ್ಲಿ ಒಂದು ಸಾವಾಗಿದೆ ಎಂದೂ ಕೆಲ ಮಾಧ್ಯಮಗಳು ವರದಿ ಮಾಡಿವೆ. ಆದರೆ, ಶಾಲಾ ಆಡಳಿತವಾಗಲೀ, ಪೊಲೀಸರಾಗಲೀ ಸಾವಿನ ವರದಿಯನ್ನು ದೃಢೀಕರಿಸಿಲ್ಲ.

ಸಂಸತ್ತಿನಲ್ಲೇ ಹತಾಶೆ ಹೊರಹಾಕಿದ ರಕ್ಷಣಾ ಸಚಿವ ಖ್ವಾಜಾ ಆಸೀಫ್

ಟಾಯ್ಲೆಟ್ ಪೇಪರ್‌ನಂತೆ ಬಳಸಿ ಎಸೆದ ಅಮೆರಿಕ

ಇಸ್ಲಾಮಾಬಾದ್: ಏಳು ದಶಕಗಳಿಂದಲೂ ಅಮೆರಿಕದ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸುತ್ತಾ ಬಂದಿರುವ ಪಾಕಿಸ್ತಾನ, ಈಗ ಅದೂ ಭಾರತದ ಜತೆ ಅಮೆರಿಕ ವ್ಯಾಪಾರ ಒಪ್ಪಂದ ಮಾಡಿಕೊಂಡ ಬಳಿಕ ಮಾತಿನ ವರಸೆ ಬದಲಿಸಿದೆ. ಅಮೆರಿಕದವರು ನಮ್ಮನ್ನು ಟಾಯ್ಲೆಟ್ ಪೇಪರ್‌ನಂತೆ ಬಳಸಿ ಎಸೆದಿದ್ದಾರೆ ಎಂದು ಪಾಕಿಸ್ತಾನದ ಸಚಿವರೊಬ್ಬರು ಅಳಲು ತೋಡಿಕೊಂಡಿದ್ದಾರೆ.

ಒಂದೆಡೆ ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಮತ್ತು ಸೇನಾ ಮುಖ್ಯಸ್ಥ ಅಸೀಮ್ ಮುನೀರ್, ಅಮೆರಿಕ ಸರಕಾರವನ್ನು, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಮೆಚ್ಚಿಸಲು ಇನ್ನಿಲ್ಲದ ಪ್ರಯತ್ನ ನಡೆಸುತ್ತಿದ್ದಾರೆ. ಟ್ರಂಪ್ ಅವರಂತಹ ನಾಯಕರಿಲ್ಲ ಎಂದು ಹಾಡಿ ಹೊಗಳುತ್ತಿದ್ದಾರೆ, ಟ್ರಂಪ್ ಅವರಿಗೇ ನೊಬೆಲ್ ಪ್ರಶಸ್ತಿ ಸಿಗಬೇಕು ಎಂದು ಒತ್ತಾಯಿಸುತ್ತಿದ್ದಾರೆ. ಟ್ರಂಪ್ ಹೇಳಿದ ತಕ್ಷಣವೇ 'ಗಾಜಾ ಶಾಂತಿ ಸಮಿತಿ'ಗೂ ಸೇರಿಕೊಂಡಿದ್ದಾರೆ. ಪಾಕ್‌ನಿಂದ ಸೇನೆಯನ್ನೂ ಗಾಜಾಕ್ಕೆ ಕಳುಹಿಸಿಕೊಟ್ಟಿದ್ದಾರೆ.

ಆದರೆ, ಇನ್ನೊಂದೆಡೆ ಪಾಕ್ ರಕ್ಷಣಾ ಸಚಿವ ಖ್ವಾಜಾ ಆಸಿಫ್, ಅಮೆರಿಕ ಸರಕಾರ ಮತ್ತು ಟ್ರಂಪ್ ನಡೆಗೆ ಪಾಕ್ ಸಂಸತ್ತಿನಲ್ಲಿಯೇ ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. 'ತಾಲಿಬಾನ್ ಸಮಸ್ಯೆ ಎದುರಾದಾಗ ಪಾಕಿಸ್ತಾನವನ್ನು ಅಮೆರಿಕ ಸರಕಾರ ಮನಸೋ ಇಚ್ಛೆ ಬಳಸಿಕೊಂಡಿದೆ. ಅಫ್ಘಾನಿಸ್ತಾನದಲ್ಲಿ ನಡೆದ 2 ಯುದ್ಧಗಳಲ್ಲಿಯೂ ಪಾಕ್ ಭಾಗವಹಿಸಬೇಕಾಯಿತು. ಆ ಯುದ್ಧಗಳಲ್ಲಿ ಆಫ್ಘನ್ ಜನರನ್ನು ಕೊಲ್ಲಲಾಯಿತು. 1999ರ ನಂತರ ಅಫ್ಘಾನಿಸ್ತಾನಕ್ಕೆ ಸಂಬಂಧಿಸಿ ಅಮೆರಿಕ ಜತೆ ಮಾಡಿಕೊಂಡ ಒಪ್ಪಂದ ಪಾಕ್‌ಗೆ ಶಾಶ್ವತ ಹಾನಿ ಉಂಟು ಮಾಡಿದೆ. ಆದರೆ, ಇದಾವುದರಿಂದಲೂ ಪಾಕ್ ಯಾವುದೇ ಪಾಠ ಕಲಿತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಸೆ.11ರ ದಾಳಿ ನಂತರ ಜಾಗತಿಕ ಮಟ್ಟದ ಭಯೋತ್ಪಾದನೆ ನಿವಾರಣೆಗೆ ಮುಂದಾದ ಅಮೆರಿಕ, ಆಗಲೂ ಪಾಕಿಸ್ತಾನವನ್ನು ಬಳಸಿಕೊಂಡಿತು. ಈ ಸಂದರ್ಭ ಒಪ್ಪಂದಕ್ಕೆ ಸಹಿ ಹಾಕಿದ ಸೇನಾ ಆಡಳಿತಗಾರ ಜಿಯಾ ಉಲ್‌ಹಕ್ ಮತ್ತು ಪರ್ವೇಜ್ ಮುಷರಫ್ ಪಾಕ್ ತನ್ನದಲ್ಲದ ಯುದ್ಧಗಳಲ್ಲಿ ಸಿಲುಕುವಂತೆ ಮಾಡಿದರು. ನಮಗೆ ಯಾವುದೇ ಸಹಾಯ ಅವರಿಂದ ಬಂದಿಲ್ಲ ಎಂದು ಬೇಸರ ಹೊರಹಾಕಿದ್ದಾರೆ.

ಏಳಿಗೆ ಕಾಣದ ಪಾಕ್

ಜಾಗತಿಕ ರಾಜಕಾರಣದಲ್ಲಿ ಅಮೆರಿಕದ ಬೆಂಬಲ ಸಿಗುತ್ತದೆ ಎಂದು ನಾವು, ಅವರು ಹೇಳಿದ್ದನ್ನೆಲ್ಲಾ ಕೇಳಿದೆವು. ಈ ನಡೆಯಿಂದಾಗಿಯೇ ಈಗ ಪಾಕ್ ದುಸ್ಥಿತಿಯಲ್ಲಿದೆ. ಆಫ್ಘನ್ ಯುದ್ಧದ ಕಾರಣ ನಮ್ಮ ಶಿಕ್ಷಣ ವ್ಯವಸ್ಥೆಯನ್ನೇ ಬದಲಿಸಿದೆವು. ಚಿಕ್ಕ ಮಕ್ಕಳಲ್ಲಿ ಧಾರ್ಮಿಕ ದ್ವೇಷ (ಜಿಹಾದ್) ತುಂಬಿದೆವು. ಪರಿಣಾಮ ದೇಶ ಏಳಿಗೆ ಕಾಣಲೇ ಇಲ್ಲ ಎಂದು ಸಚಿವ ಖ್ವಾಜಾ ಆಸಿಫ್ ಅಳಲು ತೋಡಿಕೊಂಡಿದ್ದಾರೆ.

ರಾಹುಲ್-ನಾನೂ ಸೋದರರಂತೆ: ಸಿಎಂ ಸ್ಟಾಲಿನ್ | ಸೀಟು ಹಂಚಿಕೆ ಚರ್ಚೆ 22ಕ್ಕೆ

ಅಧಿಕಾರ ಹಂಚಿಕೆ ಇಲ್ಲ: ಕೈಗೆ ಡಿಎಂಕೆ ಸಂದೇಶ

ಚೆನ್ನೈ: ಡಿಎಂಕೆ-ಕಾಂಗ್ರೆಸ್ ನಡುವಿನ ಮೈತ್ರಿ ಗಟ್ಟಿಯಾಗಿದೆ ಎಂದು ಹೇಳಿರುವ ತಮಿಳುನಾಡು ಮುಖ್ಯಮಂತ್ರಿ, ಡಿಎಂಕೆ ಪಕ್ಷದ ನಾಯಕ ಎಂ.ಕೆ. ಸ್ಟಾಲಿನ್, ಆದರೆ, ಚುನಾವಣೆ ಬಳಿಕ ಸಮ್ಮಿಶ್ರ ಸರಕಾರದ ಸಾಧ್ಯತೆಯನ್ನು ತಳ್ಳಿಹಾಕಿದ್ದಾರೆ.

ಸರಕಾರ ರಚನೆ ಮತ್ತು ಅಧಿಕಾರ ಹಂಚಿಕೆ ಎಂಬ ಕ್ರಮ ತಮಿಳುನಾಡಿಗೆ ಸರಿಹೊಂದುವುದಿಲ್ಲ. 2021ಕ್ಕಿಂತಲೂ ಈ ಬಾರಿ ಡಿಎಂಕೆ ಹೆಚ್ಚಿನ ಸ್ಥಾನಗಳನ್ನು ಗಳಿಸಲಿದೆ. ಡಿಎಂಕೆ ಸ್ವಂತತ್ರ ಸರಕಾರ ರಚಿಸಲಿದೆ. ಯಾವುದೇ ಪಕ್ಷದ ಜತೆ ಅಧಿಕಾರ ಹಂಚಿಕೊಳ್ಳಲು ಬಯಸುವುದಿಲ್ಲ. ಕಾಂಗ್ರೆಸ್ ಪಕ್ಷಕ್ಕೂ ಇದು ಚೆನ್ನಾಗಿ ತಿಳಿದಿದೆ ಎಂದು ಸ್ಟಾಲಿನ್ ಬುಧವಾರ ಹೇಳಿದ್ದಾರೆ.

ಆದರೆ, ಎರಡೂ ಮಿತ್ರ ಪಕ್ಷಗಳ ನಡುವೆ ಬಿರುಕು ಇದೆ ಎಂಬ ವರದಿಗಳನ್ನು ತಳ್ಳಿಹಾಕಿದ್ದಾರೆ. ತಮಿಳುನಾಡಿನಲ್ಲಿ ಡಿಎಂಕೆ-ಕಾಂಗ್ರೆಸ್ ಮೈತ್ರಿಕೂಟ ಪ್ರಬಲವಾಗಿದೆ. ಸದ್ಯದಲ್ಲೇ ನಡೆಯಲಿರುವ ವಿಧಾನಸಭೆ ಚುನಾವಣೆಯಲ್ಲಿ ಎರಡೂ ಪಕ್ಷಗಳೂ ಒಟ್ಟಾಗಿ ಹೋರಾಡಲಿವೆ. ಕಾಂಗ್ರೆಸ್ ಜತೆ ಸೀಟು ಹಂಚಿಕೊಳ್ಳಲಾಗುವುದು ಎಂದು ಸ್ಟಾಲಿನ್ ಹೇಳಿದ್ದಾರೆ.

2021ರ ಚುನಾವಣೆಯಲ್ಲಿ ಡಿಎಂಕೆ 133 ಸ್ಥಾನ ಗೆದ್ದು ಸ್ವಂತವಾಗಿ ಸರಕಾರ ರಚಿಸಿತು. ಮಿತ್ರಪಕ್ಷವಾಗಿದ್ದ ಕಾಂಗ್ರೆಸ್ 18 ಸ್ಥಾನ ಗೆದ್ದಿತು. ಆದರೆ, ಕಾಂಗ್ರೆಸ್ ಪಕ್ಷವನ್ನು ಡಿಎಂಕೆ ಸರಕಾರದ ಭಾಗವಾಗಿಸಿಕೊಳ್ಳಲಿಲ್ಲ.

ಈ ಬಾರಿ ಕಾಂಗ್ರೆಸ್ ಹೆಚ್ಚು ಕ್ಷೇತ್ರ ಮತ್ತು ಅಧಿಕಾರ ಹಂಚಿಕೆಗಾಗಿ ಬಿಗಿಯಾಗಿ ಚೌಕಾಶಿ ನಡೆಸುತ್ತಿದೆ. ಕಾಂಗ್ರೆಸ್ ಪಕ್ಷವನ್ನು ಡಿಎಂಕೆ ನಿಗ್ರಹಿಸಲು ಯತ್ನಿಸುತ್ತಿದೆ ಎಂದು ಆರೋಪಿಸುತ್ತಿರುವ ಸ್ಥಳೀಯ ಕಾಂಗ್ರೆಸ್ ನಾಯಕರು, ಚುನಾವಣೆಯಲ್ಲಿ ಹೆಚ್ಚಿನ ಸ್ಥಾನಗಳನ್ನು ಬಯಸಿದ್ದಾರೆ. ಕೆಲವರು ಅಧಿಕಾರ ಹಂಚಿಕೆ ವಿಷಯ ಪ್ರಸ್ತಾಪಿಸುತ್ತಿದ್ದಾರೆ.

ಮೈತ್ರಿಕೂಟದಲ್ಲಿ ಗೊಂದಲವಿದೆ ಎಂಬ ವದಂತಿಗಳನ್ನು ಕೆಲವರು ಹರಡುತ್ತಿದ್ದಾರೆ. ರಾಜಕೀಯವನ್ನು ಮೀರಿ, ನಾನು-ರಾಹುಲ್ ಸೋದರರಂತೆ ಇದ್ದೇವೆ ಎಂದು ಸ್ಟಾಲಿನ್ ಹೇಳಿದ್ದಾರೆ. ಸೀಟು ಹಂಚಿಕೆ ಮಾತುಕತೆ ಫೆ.22ಕ್ಕೆ ಪ್ರಾರಂಭವಾಗಲಿವೆ ಎಂದು ಡಿಎಂಕೆ ತಿಳಿಸಿದೆ.

ನರವಣೆ ಪುಸ್ತಕ ವಿವಾದ: 'ಪೆಂಗ್ವಿನ್'ಗೆ ನೋಟಿಸ್

ದೆಹಲಿ: ಮಾಜಿ ಸೇನಾ ಮುಖ್ಯಸ್ಥ ಜನರಲ್ ಎಂ.ಎಂ ನರವಣೆ ಅವರ ಅಪ್ರಕಟಿತ '4 ಸ್ಟಾರ್ಸ್ ಆಫ್ ಡೆಸ್ಟಿನಿ' ಪುಸ್ತಕ ರಕ್ಷಣಾ ಸಚಿವಾಲಯದ ಅನುಮೋದನೆ ಇಲ್ಲದೇ ಇದ್ದರೂ ಮುದ್ರಣವಾಗಿರುವುದು, ಅದರ ಪ್ರತಿಗಳು ಆನ್‌ಲೈನ್‌ನಲ್ಲಿ ಮಾರಾಟಕ್ಕಿರುವುದು, ಪಿಡಿಎಫ್ ಕಾಪಿ ಸೋರಿಕೆ ಆಗಿರುವುದರ ಹಿನ್ನೆಲೆ ಅಪರಾಧ ಪ್ರಕರಣ ದಾಖಲಿಸಿಕೊಂಡು ದೆಹಲಿ ಪೊಲೀಸರು ತನಿಖೆ ಆರಂಭಿಸಿದ್ದಾರೆ.



ತನಿಖೆಯ ಹೊಣೆ ಹೊತ್ತುಕೊಂಡಿರುವ ದೆಹಲಿ ಪೊಲೀಸರ 'ವಿಶೇಷ ವಿಭಾಗ' ಬುಧವಾರ ಪ್ರಕಾಶಕ 'ಪೆಂಗ್ವಿನ್ ಇಂಡಿಯ' ಸಂಸ್ಥೆಗೆ ನೋಟಿಸ್ ಜಾರಿ ಮಾಡಿದೆ. ವಿವಾದಿತ ಪುಸ್ತಕ ಮತ್ತು ಅದರ ಪಿಡಿಎಫ್ ಪ್ರತಿ ಸೋರಿಕೆ ಸಂಬಂಧ ಅಪರಾಧಿಕ ಸಂಚು ನಡೆಸಿದ ಆರೋಪದಡಿ ಎಫ್‌ಐಆರ್ ದಾಖಲಿಸಲಾಗಿದೆ. ಪ್ರಕರಣದಲ್ಲಿ ಪೆಂಗ್ವಿನ್ ಇಂಡಿಯ ಸಂಸ್ಥೆಯೇ 'ನಂಬರ್ 1' ಶಂಕಿತನಾಗಿದೆ. ಹಾಗಾಗಿಯೇ ಸಂಸ್ಥೆಗೆ ನೋಟಿಸ್ ನೀಡಿ ವಿಚಾರಣೆಗೆ ಕರೆಯಲಾಗಿದೆ ಎಂದು ತಿಳಿಸಿದೆ. ವಿಶೇಷ ತನಿಖಾ ತಂಡದ ಪ್ರಕಾರ, ಪ್ರಸ್ತುತ ತನಿಖೆಯಲ್ಲಿ ಪ್ರಕಾಶನ ಸಂಸ್ಥೆಯೇ ಅತಿದೊಡ್ಡ ಶಂಕಿತನಾಗಿದೆ. ಸಂಸ್ಥೆಯ ಜವಾಬ್ದಾರಿಯುತ ಅಧಿಕಾರಿ ಪೊಲೀಸ್ ಠಾಣೆಗೆ ಬಂದು ವಿಚಾರಣೆಗೆ ಹಾಜರಾಗಬೇಕು. ತನಿಖೆಗೆ ಸಹಕರಿಸಬೇಕು ಎಂದು ಪೊಲೀಸರು ನೋಟಿಸ್‌ನಲ್ಲಿ ಹೇಳಿದ್ದಾರೆ. ಸದ್ಯ ಆನ್‌ಲೈನ್‌ನಲ್ಲಿ ಹರಿದಾಡುತ್ತಿರುವ '4 ಸ್ಟಾರ್ ಅಫ್ ಡೆಸ್ಟಿನಿ' ಪುಸಕ್ತದ ಮುಖಪುಟದಲ್ಲಿ 'ಪೆಂಗ್ವಿನ್' ಲಾಂಛನವಿದೆ.

ಸಲ್ಮಾನ್, ಅಜಯ್ ಭರವಸೆ | ಇಂದು ಜಾಮೀನು ವಿಚಾರಣೆ

ನಟ ರಾಜ್‌ಪಾಲ್‌ಗೆ ಬಾಲಿವುಡ್ ನೆರವು

ಮುಂಬೈ: ಬಾಲಿವುಡ್‌ನ ಖ್ಯಾತ ಹಾಸ್ಯನಟ ರಾಜಪಾಲ್ ಯಾದವ್ 7 ಕೋಟಿ ರು. ಚೆಕ್ ಬೌನ್ಸ್ ಪ್ರಕರಣದಲ್ಲಿ ಸದ್ಯ 9 ಕೋಟಿ ರು. ಪಾವತಿಸಬೇಕಾಗಿ ಬಂದಿದ್ದು, ಹಣ ಪಾವತಿಸಲಾಗದ ಕಾರಣ ಜೈಲು ಸೇರಿದ್ದಾರೆ. ದೆಹಲಿ ಹೈಕೋರ್ಟ್ ಸೂಚನೆ ಮೇರೆಗೆ ಜ.5ರಂದು ತಿಹಾರ್ ಜೈಲಿಗೆ ಶರಣಾಗಿದ್ದಾರೆ.

ಸದ್ಯ ಆರ್ಥಿಕವಾಗಿ ಭಾರೀ ಸಂಕಷ್ಟಕ್ಕೆ ಸಿಲುಕಿಕೊಂಡಿರುವ ಯಾದವ್‌ಗೆ ಈಗ ಬಾಲಿವುಡ್ ನಟರು, ತಂತ್ರಜ್ಞರು ಒಬ್ಬೊಬ್ಬರಾಗಿ ನೆರವಿನ ಹಸ್ತ ಚಾಚುತ್ತಿದ್ದಾರೆ. ಮೊದಲಿಗೆ ಖ್ಯಾತ ಖಳನಟ ಸೋನು ಸೂದ್ ನೆರವು ಘೋಷಿಸಿದರು. ನಂತರ ನಾಯಕ ನಟರೂ, ನಿರ್ಮಾಪಕರೂ ಆಗಿರುವ ಸಲ್ಮಾನ್ ಖಾನ್ ಮತ್ತು ಅಜಯ್ ದೇವಗನ್ ಕೂಡಾ ರಾಜಪಾಲ್‌ಗೆ ನೆರವಾಗಲು ಮುಂದೆ ಬಂದಿದ್ದಾರೆ. ಸಂಗೀತ ನಿರ್ದೇಶಕರೊಬ್ಬರು 1.10 ಕೋಟಿ ರು. ನೀಡುವುದಾಗಿ ಬುಧವಾರ ಘೋಷಿಸಿದ್ದಾರೆ.

7 ದಿನಗಳಿಂದ ತಿಹಾರ್ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿರುವ ರಾಜ್‌ಪಾಲ್ ಯಾದವ್ ಅವರ ಜಾಮೀನು ಅರ್ಜಿ ಗುರುವಾರ ವಿಚಾರಣೆ ಬರಲಿದೆ. ಇದೇ ವೇಳೆ, 9 ಕೋಟಿ ರು.ಗಳನ್ನು ಪಾವತಿ ಮಾಡುವುದು ಸಾಧ್ಯವಾದರೆ ರಾಜ್‌ಪಾಲ್‌ಗೆ ಜಾಮೀನು ಸಿಗುವ ಸಾಧ್ಯತೆಯೂ ಇದೆ ಎಂಬ ನಿರೀಕ್ಷೆಗಳಿವೆ.

ಹಿನ್ನೆಲೆ: ಚಿತ್ರ ನಿರ್ಮಾಣ ಕ್ಷೇತ್ರದ 'ಮುರಳಿ ಪ್ರಾಜೆಕ್ಟ್ಸ್ ಪ್ರೈ.ಲಿ.'ಗೆ ನಟ ರಾಜ್‌ಪಾಲ್ ಯಾದವ್ ಮತ್ತು ಅವರ ಪತ್ನಿ ನೀಡಿದ್ದ ಚೆಕ್‌ಗಳು ಖಾತೆಯಲ್ಲಿ ಹಣವಿಲ್ಲದ ಕಾರಣ ಬೌನ್ಸ್ ಆಗಿದ್ದವು. ಬಳಿಕ ಮುರಳಿ ಪ್ರಾಜೆಕ್ಟ್ಸ್ ಸಂಸ್ಥೆ ಕೋರ್ಟ್‌ನಲ್ಲಿ ದಾವೆ ಹೂಡಿತು. 2018ರಲ್ಲಿ ಮ್ಯಾಜಿಸ್ಟ್ರೇಟ್ ಕೋರ್ಟ್ ರಾಜ್‌ಪಾಲ್ ಯಾದವ್ ಮತ್ತು ಪತ್ನಿಗೆ ಶಿಕ್ಷೆ ವಿಧಿಸಿತು. ಸೆಷನ್ ಕೋರ್ಟ್ ಕೂಡಾ ಈ ಆದೇಶವನ್ನು 2019ರಲ್ಲಿ ಎತ್ತಿ ಹಿಡಿಯಿತು. ಬಳಿಕ ದೆಹಲಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ ರಾಜ್‌ಪಾಲ್, ಹಣ ಮರಳಿಸಲು ಸಮಯ ಕೋರಿದಾಗ 2024ರಲ್ಲಿ ಹೈಕೋರ್ಟ್ ಸಮ್ಮತಿಸಿತು. ಆದರೆ, ನಟ 2 ವರ್ಷ ಕಳೆದರೂ ಹಣ ಹಿಂದಿರುಗಿಸದ ಕಾರಣ ಜೈಲು ಸೇರುವಂತಾಯಿತು.

ಓಂ ಬಿರ್ಲಾ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆ ಮಾ.9ಕ್ಕೆ

ದೆಹಲಿ: ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರ ವಿರುದ್ಧ ಪ್ರತಿಪಕ್ಷಗಳು ಮಂಡಿಸಿರುವ ಅವಿಶ್ವಾಸ ಗೊತ್ತುವಳಿ ಮಾ.9ರಂದು ಮಂಡನೆಯಾಗುವ ಸಾಧ್ಯತೆ ಇದೆ. ಕಾಂಗ್ರೆಸ್ ನೇತೃತ್ವದಲ್ಲಿ ಡಿಎಂಕೆ ಮತ್ತು ಸಮಾಜವಾದಿ ಪಕ್ಷ ಮೊದಲಾದ ಪ್ರತಿಪಕ್ಷಗಳ 120 ಸಂಸದರ ಸಹಿ ಇರುವ ನೋಟಿಸನ್ನು ಮಂಗಳವಾರ ಲೋಕಸಭಾ ಪ್ರಧಾನ ಕಾರ್ಯದರ್ಶಿ ಉತ್ಪಲ್ ಕುಮಾರ್ ಅವರಿಗೆ ಸಲ್ಲಿಸಲಾಗಿದೆ.

ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರಿಗೆ ಸದನದಲ್ಲಿ ಮಾತನಾಡಲು ಅವಕಾಶ ನೀಡದೇ, ಆಡಳಿತ ಪಕ್ಷದ ಸಂಸದ ನಿಶಿಕಾಂತ್ ದುಬೆ ಅವರಿಗೆ ಅದೇ ವಿಚಾರವಾಗಿ ಮಾತನಾಡಲು ಅವಕಾಶ ಕೊಟ್ಟಿರುವ ಸ್ಪೀಕರ್ ತಾರತಮ್ಯ ಧೋರಣೆ ಅನುಸರಿಸಿದ್ದಾರೆ.

ಹಾಗಾಗಿ ಅವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲಾಗುತ್ತಿದೆ. ಅಲ್ಲದೇ, ಕಾಂಗ್ರೆಸ್ 8 ಸಂಸದರನ್ನು ಅಧಿವೇಶನ ಪೂರ್ಣ ಅಮಾನತು ಮಾಡಿದ್ದಾರೆ ಎಂದೂ ಸಂವಿಧಾನದ ವಿಧಿ 94(ಸಿ) ಅನ್ವಯ ನೋಟಿಸ್ ನೀಡಲಾಗಿದೆ ಎಂದು ಪ್ರಮುಖ ಪ್ರತಿಪಕ್ಷ ಕಾಂಗ್ರೆಸ್ ಹೇಳಿಕೊಂಡಿದೆ.

ಆ ಬಳಿಕ ಸ್ಪೀಕರ್ ಓಂ ಬಿರ್ಲಾ ಅವರು ನಿರ್ಣಯದ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೂ ಸದನದಿಂದ ದೂರ ಉಳಿಯುವುದಾಗಿ ಹೇಳಿದ್ದಾರೆ.

ಲೋಕಸಭಾ ಸ್ಪೀಕರ್ ಓಂ ಬಿರ್ಲಾ ವಿರುದ್ಧದ ಅವಿಶ್ವಾಸ ನಿರ್ಣಯವನ್ನು ಮಾ.9ರಂದು ಲೋಕಸಭೆಯಲ್ಲಿ ಮಂಡಿಸುವ ಸಾಧ್ಯತೆಯಿದೆ ಎಂದು ಮೂಲಗಳನ್ನು ಉಲ್ಲೇಖಿಸಿ ಸುದ್ದಿಸಂಸ್ಥೆ ವರದಿ ಮಾಡಿದೆ.

ಶಾಲಾ ಬಸ್ ಹರಿದು ಕಂದಮ್ಮಗಳು ದುರ್ಮರಣ

ಬೆಂಗಳೂರು: ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಶಾಲಾ ಬಸ್ ಬಳಿಕ ಅದರ ಮೇಲೆ ಹರಿದ ಪರಿಣಾಮ ಇಬ್ಬರು ಮಕ್ಕಳು ದಾರುಣವಾಗಿ ಮೃತಪಟ್ಟಿರುವ ಘಟನೆ ಹೆಣ್ಣೂರು ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಥಣಿಸಂದ್ರದ ಪೊಲೀಸ್ ಕ್ವಾಟರ್ಸ್ ಬಳಿ ಬುಧವಾರ ಬೆಳಗ್ಗೆ 8.16 ಸುಮಾರಿಗೆ ಸಂಭವಿಸಿದ ದುರ್ಘಟನೆಯಲ್ಲಿ ಎರಡು ಹಾಗೂ ನಾಲ್ಕು ವರ್ಷದ ಇಬ್ಬರು ಹೆಣ್ಣಮಕ್ಕಳು ಮೃತಪಟ್ಟಿದ್ದಾರೆ. ಅಪಘಾತ ಎಸಗಿದ ಖಾಸಗಿ ಶಾಲಾ ಬಸ್ ಚಾಲಕ ಮಾರೆಪ್ಪನನ್ನ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಶಸ್ತ್ರ ಮೀಸಲು ಪಡೆ (ಸಿಎಆರ್) ಕಾನ್‌ಸ್ಟೆಬಲ್ ಆಗಿರುವ ನಾಗನಗೌಡ ಎಂಬುವರು ಬುಧವಾರ ಬೆಳಗ್ಗೆ ಮನೆಗೆ ಹಾಲು ತರಲು ದ್ವಿಚಕ್ರ ವಾಹನದಲ್ಲಿ ತೆರಳಿದ್ದರು. ತನ್ನ ಎರಡು ವರ್ಷದ ಮಗಳು ಹಾಗೂ ನಾಲ್ಕು ವರ್ಷದ ಅಣ್ಣನ ಮಗಳನ್ನು ವಾಹನದ ಮುಂಬದಿಯಲ್ಲಿ ಕೂರಿಸಿಕೊಂಡು ಹೋಗುವಾಗ ಮುಂಬದಿಯಿಂದ ಶಾಲಾ ಬಸ್ ಟರ್ನ್ ಹೊಡೆಯಲು ಮುಂದಾಗಿತ್ತು. ಈ ವೇಳೆ ನಿಲ್ಲಿಸಲಾಗಿದ್ದ ವಾಹನಕ್ಕೆ ಚಾಲಕ ಡಿಕ್ಕಿ ಹೊಡೆದಿದ್ದಾನೆ. ದ್ವಿಚಕ್ರವಾಹನದಲ್ಲಿದ್ದ ಇಬ್ಬರು ಮಕ್ಕಳು ಬಿದ್ದಿದ್ದು ಇವರ ಮೇಲೆ ಬಸ್ ಚಕ್ರ ಹರಿದಿದೆ. ತಲೆಗೆ ತೀವ್ರ ಪೆಟ್ಟಾಗಿ ಆಸ್ಪತ್ರೆಗೆ ಸೇರಿಸಿದರೂ ಚಿಕಿತ್ಸೆ ಫಲಕಾರಿಯಾಗದೇ ಇಬ್ಬರು ಮಕ್ಕಳು ಮೃತಪಟ್ಟಿದ್ದಾರೆ. ಮರಣೋತ್ತರ ಪರೀಕ್ಷೆಗಾಗಿ ಯಲಹಂಕ ಸರಕಾರಿ ಆಸ್ಪತ್ರೆಗೆ ಇಬ್ಬರ ಮೃತದೇಹಗಳನ್ನು ರವಾನಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಶ್ಲೀಲ ಪತ್ರ ಬರೆದು ವಿಕೃತಿ | ಪ್ರಿನ್ಸಿಪಾಲ್ ಮಾವನ ಕಾಟಕ್ಕೆ ಬೇಸತ್ತು ಠಾಣೆ ಮೆಟ್ಟಿಲೇರಿದ ಸೊಸೆ

ಸೊಸೆ ಮೇಲೆ ಮಾವನ ಕಾಮದ ಕಣ್ಣು

ಬೆಂಗಳೂರು: ನನ್ನ ಆಸೆ ಈಡೇರಿಸು ಎಂದು ಸೊಸೆಗೆ ಮಾವನೇ ಲೈಂಗಿಕ ಕಿರುಕುಳ ನೀಡಿರುವ ಆರೋಪ ಸಂಬಂಧ ಆರ್.ಟಿ.ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ಥಣಿಸಂದ್ರದ ಪ್ರತಿಷ್ಠಿತ ಸ್ಕೂಲ್ ಪ್ರಿನ್ಸಿಪಾಲ್ ಆಗಿರುವ ಮಹಿಳೆಗೆ ಆಕೆಯ ಗಂಡನ ತಂದೆ, ಕಾವಲ್ ಬೈರಸಂದ್ರದ ಶಾಲೆಯೊಂದರ ಸಂಸ್ಥಾಪಕ ಆಗಿರುವ ವ್ಯಕ್ತಿ ಕಿರುಕುಳ ನೀಡಿರುವ ಬಗ್ಗೆ ಆರ್.ಟಿ. ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ವಿಷಯ ಮಗನಿಗೆ ತಿಳಿಸಿದರೆ ಕೊಲ್ಲುವುದಾಗಿ ಆರೋಪಿ ಸಂತ್ರಸ್ತೆಗೆ ಬೆದರಿಕೆ ಹಾಕಿದ್ದ ಎಂಬ ಬಗ್ಗೆಯೂ ದೂರಲ್ಲಿ ಉಲ್ಲೇಖಿಸಲಾಗಿದೆ.

ಎಲ್ಲೆಂದರಲ್ಲಿ ಲೈಂಗಿಕ ಕಿರುಕುಳ ಆರೋಪ: 2007ರಲ್ಲಿ ಮದುವೆಯಾಗಿದ್ದ ಸಂತ್ರಸ್ತೆಗೆ ಆರಂಭದಲ್ಲಿ ಜೀವನ ಚೆನ್ನಾಗಿಯೇ ಇತ್ತು. ಆದರೆ ಬರಬರುತ್ತಾ ಮಾವನ ಕಾಟ ಶುರುವಾಗಿದೆ. 2005ರಲ್ಲಿ ಪತ್ನಿಯ ಸಾವಿನ ಬಳಿಕ ಆರೋಪಿ 2006ರಲ್ಲಿ ಎರಡನೇ ಮದುವೆಯಾಗಿದ್ದ. ಹೀಗಿದ್ದರೂ ಸೊಸೆಯ ಮೇಲೆ ಕಣ್ಣು ಹಾಕಿದ್ದ ಈತ, ಆಕೆಯ ಜತೆ ಅನುಚಿತ ವರ್ತನೆ ತೋರಲು ಶುರು ಮಾಡಿದ್ದಾನೆ. ಪಕ್ಕದ ಅಪಾರ್ಟ್‌ಮೆಂಟ್‌ನಲ್ಲಿಯೇ ವಾಸವಿದ್ದ ಈತ, ಸಂತ್ರಸ್ತೆ ಮನೆಯಲ್ಲಿ ಒಬ್ಬಳೇ ಇರುವ ಸಮಯ ನೋಡಿಕೊಂಡು ಬಂದು ಆಕೆಗೆ ಲೈಂಗಿಕ ದೌರ್ಜನ್ಯ ನೀಡಲಾರಂಭಿಸಿದ್ದ. ಅಸಭ್ಯ ಪದಗಳನ್ನು ಮಾತನಾಡುವ ಜತೆಗೆ ಬಲವಂತವಾಗಿ ಬಟ್ಟೆ ಬಿಚ್ಚಲು ಯತ್ನಿಸುತ್ತಿದ್ದ. 2020ರಿಂದಲೇ ಮಾವನ ಈ ರೀತಿಯ ವರ್ತನೆಗಳು ಆರಂಭವಾಗಿತ್ತು. ಆದರೆ ಭಯಭೀತಳಾಗಿದ್ದ ಸಂತ್ರಸ್ತೆ ಎಲ್ಲವೂ ಸರಿಹೋಗಬಹುದೆಂದು ಸುಮ್ಮನಿದ್ದಳು. ಆದರೆ ಆಕೆ ಮತ್ತು ಮಕ್ಕಳಿಗೆ ಕೊಲೆ ಬೆದರಿಕೆ ಹಾಕಿದ್ದ ಆರೋಪಿ ಮಹಿಳೆ ಮೇಲೆ ಹಲ್ಲೆಯನ್ನೂ ನಡೆಸಿದ್ದ. ಬಳಿಕ ಅಪಾರ್ಟ್‌ಮೆಂಟ್‌ನ ಲಿಫ್ಟ್, ಶಾಲೆಯ ಕ್ಯಾಬಿನ್‌ನಲ್ಲಿಯೂ ಸಂತ್ರಸ್ತೆ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿರುವುದಾಗಿ ಆರೋಪಿಸಲಾಗಿದೆ.

ಬುದ್ಧಿ ಹೇಳಿದರೂ ಬಿಡಲಿಲ್ಲ ಚಾಳಿ

ಮಾವನ ಕಾಟಕ್ಕೆ ಬೇಸತ್ತ ಮಹಿಳೆ ಅಂತಿಮವಾಗಿ ವಿಷಯ ಪತಿಗೆ ತಿಳಿಸಿದ್ದು, ಯಾಕೆ ಹೀಗೆ ಮಾಡುತ್ತಿದ್ದೀಯಾ ಎಂದು ಅವರೂ ಪ್ರಶ್ನಿಸಿದ್ದರು. ಬಳಿಕ ಹಿರಿಯರಿಂದ ಈ ಬಗ್ಗೆ ಬುದ್ಧಿಯನ್ನೂ ಹೇಳಿಸಲಾಗಿತ್ತು. ಕೆಲ ದಿನ ಸುಮ್ಮನಾಗಿದ್ದ ಆರೋಪಿ ಮತ್ತೆ ಹಳೇ ಚಾಳಿ ಮುಂದುವರಿಸಿದ್ದಾನೆ. ಸೊಸೆಯ ಸೌಂದರ್ಯದ ಬಗ್ಗೆ ಪತ್ರ ಬರೆದು ತಂದು ಆಕೆಯ ಮುಂದೆಯೇ ಓದುತ್ತಿದ್ದ ಈತ, ಲೈಂಗಿಕ ಕಿರುಕುಳ ನೀಡಿ ನಂತರ ಆ ಪತ್ರವನ್ನ ತಾನೇ ಇಟ್ಟುಕೊಳ್ಳುತ್ತಿದ್ದ. ಇತ್ತೀಚೆಗ ಸಂತ್ರಸ್ತೆಯ ಮೈಕೈ ಮುಟ್ಟಿ ಆರೋಪಿ ಕಿರುಕುಳ ನೀಡಿದ್ದು, ಈ ವೇಳೆ ಆಕೆ ವಿರೋಧ ವ್ಯಕ್ತಪಡಿಸಿದ ಕಾರಣ ಹಲ್ಲೆ ನಡೆಸಿದ್ದಾನೆ. ಹೀಗಾಗಿ ಮಾವನ ವಿರುದ್ಧ ಕೊನೆಗೂ ಸೊಸೆ ಪೊಲೀಸರಿಗೆ ದೂರು ನೀಡಿದ್ದಾಳೆ.

ಸೊಸೆ ಸೌಂದರ್ಯ ವರ್ಣಿಸಿ ಪತ್ರ

ಸೊಸೆ ಸೌಂದರ್ಯದ ಬಗ್ಗೆ ಪತ್ರ ಬರೆಯುತ್ತಿದ್ದ ಮಾವ ಪತ್ರ ಬರೆದು ತಂದು, ಆಕೆಯ ಮುಂದೆಯೇ ಅದನ್ನು ಓದುತ್ತಿದ್ದ. ನಂತರ ಆ ಪತ್ರವನ್ನು ತನ್ನ ಬಳಿಯೇ ಇಟ್ಟುಕೊಳ್ಳುತ್ತಿದ್ದನಂತೆ. ಮನೆಯಲ್ಲೂ ಸೊಸೆ ಒಬ್ಬಳೇ ಇದ್ದಾಗ ಆಕೆಗೆ ಕಿರುಕುಳ, ಸುಂದರವಾಗಿದ್ದೀಯಾ.. ನನ್ನ ಆಸೆ ಈಡೇರಿಸು ಅಂತ ಪೀಡಿಸುತ್ತಿದ್ದ ಬಲವಂತವಾಗಿ ಬಟ್ಟೆ ತೆಗೆಯಲು ಯತ್ನಿಸಿ, ಹಲ್ಲೆಯ ಆರೋಪ ಕೇಳಿ ಬಂದಿದೆ. ಕಿರುಕುಳ ಹಿನ್ನೆಲೆ ಈಗ ದೂರು 6 ಬಿಎನ್‌ಎಸ್ ಸೆಕ್ಷನ್‌ಗಳ ಅಡಿಯಲ್ಲಿ ಆರ್.ಟಿ.ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಕಟ್ಟಡದ ಒತ್ತುವರಿ ಭಾಗ ತೆರವು

ಬೆಂಗಳೂರು: ಕೇಂದ್ರ ನಗರ ಪಾಲಿಕೆಯ ಶಾಂತಲನಗರದ ವ್ಯಾಪ್ತಿಯಲ್ಲಿ ಕಟ್ಟಡದ ನಕ್ಷೆಯ ವ್ಯತಿರಿಕ್ತ ಭಾಗ ತೆರವು ಕಾರ್ಯಾಚರಣೆ ಯನ್ನು ಕೈಗೊಳ್ಳಲಾಯಿತು.

ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಆಯುಕ್ತ ರಾಜೇಂದ್ರ ಚೋಳನ್ ಸಭೆಗಳನ್ನು ನಡೆಸಿ ನೀಡಿದ ಸೂಚನೆಯನ್ವಯ ಬುಧವಾರ ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಹಳೆ ವಾರ್ಡ್ ನಲ್ಲಿ ವಿಕ್ಟೋರಿಯಾ ಲೇಔಟ್, ಶಾಂತಲನಗರ, ಬೆಂಗಳೂರು - ಪಿ.ಐ.ಡಿ. ಸಂಖ್ಯೆ: 76-122-4 ಆಸ್ತಿಗೆ ಸಂಬಂಧಿಸಿದಂತೆ, ಅನುಮೋದಿತ ಕಟ್ಟಡ ನಕ್ಷೆ ಹಾಗೂ ಕಟ್ಟಡ ಬೈಲಾ ನಿಯಮಗಳಿಗೆ ವಿರುದ್ಧವಾಗಿ ನಿರ್ಮಾಣಗೊಂಡ ಅಕ್ರಮ/ವ್ಯತ್ಯಾಸ ಕಟ್ಟಡ ಭಾಗವನ್ನು ತೆರವುಗೊಳಿಸುವ ಕಾರ್ಯಾಚರಣೆ ನಡೆಸಲಾಗಿದೆ. ಬಿಬಿಎಂಪಿ ಕಾಯಿದೆಯಡಿ ಮಾಲೀಕರಿಗೆ ಪೂರ್ವ ನೋಟಿಸ್ ನೀಡಲಾಗಿತ್ತು. ಹಾಗೂ ನಿಯಮಬಾಹಿರವಾಗಿ ನಿರ್ಮಿಸಲಾದ ಭಾಗಗಳನ್ನು ಸ್ವಯಂಪ್ರೇರಿತವಾಗಿ ತೆರವುಗೊಳಿಸಲು ಸೂಚಿಸಲಾಗಿತ್ತಾದರೂ ಮಾಲೀಕರು ಸೂಚನೆಗಳನ್ನು ಪಾಲಿಸದ ಹಿನ್ನೆಲೆ ತೆರವು ಮಾಡಲಾಗಿದೆ.

ಕೆ.ಆರ್.ಮಾರ್ಕೆಟ್ ಪಾರ್ಕಿಂಗ್ ಲಾಟ್ ಉದ್ಘಾಟನೆಗೆ ರೆಡಿ

ಬೆಂಗಳೂರು: ಕೆ.ಆರ್ ಮಾರ್ಕೆಟ್‌ನಲ್ಲಿರುವ ಪಾರ್ಕಿಂಗ್ ಲಾಟ್‌ಗೆ ಜಿಬಿಎ ಹೈಟೆಕ್ ಸ್ಪರ್ಶ ನೀಡಿದ್ದು, ಬ್ರ್ಯಾಂಡ್ ಬೆಂಗಳೂರಿನ ಮೊದಲ ಯೋಜನೆ ಇನ್ನು ಕೆಲವೇ ದಿನಗಳಲ್ಲಿ ಉದ್ಘಾಟನೆಗೆ ಸಿದ್ಧವಾಗಿದೆ.

ಕೆ.ಆರ್ ಮಾರ್ಕೆಟ್‌ನ ಹೈಟೆಕ್ ಪಾರ್ಕಿಂಗ್‌ನ ಕೊನೆ ಹಂತದ ಕೆಲಸಗಳು ನಡೆಯುತ್ತಿದೆ. ಈ ಹೈಟೆಕ್ ಪಾರ್ಕಿಂಗ್ ಲಾಟ್ ನ್ನು ಮಾಲ್‌ನಂತೆ ನಿರ್ಮಾಣ ಮಾಡಲಾಗಿದ್ದು, ರೈಟ್ ಪಾರ್ಕಿಂಗ್ ಎನ್ನುವ ಖಾಸಗಿ ಕಂಪನಿಗೆ ಈ ಕಾಮಗಾರಿಯ ಗುತ್ತಿಗೆ ನೀಡಲಾಗಿತ್ತು. ಪಾರ್ಕಿಂಗ್ ಲಾಟ್‌ಗೆ 6 ಕೋಟಿ ರು. ವೆಚ್ಚದಲ್ಲಿ ಹೊಸ ವಿನ್ಯಾಸ ನೀಡಲಾಗಿದ್ದು, ಪಾರ್ಕಿಂಗ್ ಜಾಗದ ತುಂಬೆಲ್ಲಾ ಬಣ್ಣ ಬಣ್ಣದ ಚಿತ್ತಾರಗಳನ್ನ ಬಿಡಿಸಿ ಅತ್ಯಾಕರ್ಷಕವಾಗಿ ಮಾಡಲಾಗಿದೆ. ಸುಮಾರು 400 ಬೈಕ್ ಹಾಗೂ 200 ಕಾರುಗಳನ್ನು ನಿಲ್ಲಿಸುವಷ್ಟು ವಿಸ್ತಾರವಾಗಿದ್ದು, 24 ಗಂಟೆಯೂ ತೆರೆದಿರುತ್ತದೆ. ಸುಮಾರು 62ಕ್ಕೂ ಹೆಚ್ಚು ಸಿಸಿ ಕ್ಯಾಮೆರಾಗಳನ್ನ ಸಾರ್ವಜನಿಕರ ಸುರಕ್ಷತೆ ದೃಷ್ಟಿಯಿಂದ ಅಳವಡಿಸಲಾಗಿದ್ದು, ಸಂಪೂರ್ಣವಾಗಿ ಎಚ್‌ಡಿ ಮತ್ತು ಎಐ ತಂತ್ರಜ್ಞಾನದ ಕ್ವಾಲಿಟಿಯನ್ನು ಹೊಂದಿವೆ. ಇಷ್ಟೇ ಅಲ್ಲದೇ ಶೌಚಾಲಯ, ಕುಡಿಯುವ ನೀರು ಸೇರಿದಂತೆ ಮೂಲ ಸೌಕರ್ಯ ಕೂಡ ಈ ಪಾರ್ಕಿಂಗ್ ಲಾಟ್ ಹೊಂದಿದೆ.

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್)** ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಅಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **29.09.2025** ರಂದು ಕರೆದು ಸಾಲಗಾರ **ಸುಬ್ರಹ್ಮಣ್ಯ ವಿ ಅಲಿಯಾಸ್ ಪಯಸ್ವಿನಿ ಸುಬ್ರಹ್ಮಣ್ಯ ವಿ ಮತ್ತು ಪಯಸ್ವಿನಿ ಎನ್ ಎಸ್** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 57,99,753.73 (ಐವತ್ತೇಳು ಲಕ್ಷ ತೊಂಬತ್ತೊಂಬತ್ತು ಸಾವಿರದ ಏಳುನೂರ ಐವತ್ತಮೂರು ರೂಪಾಯಿಗಳು ಮತ್ತು ಎಪ್ಪತ್ತಮೂರು ಪೈಸೆ ಮಾತ್ರ)** ಸಾಲ ಖಾತೆ ನಂ. **HHLMAL00434885** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **29.09.2025** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ- ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸಾಂಕೇತಿಕ ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **07.02.2026** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (**ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್)** ನ ಬಾಕಿ ಇರುವ ಮೊತ್ತ **ರೂ. 57,99,753.73 (ಐವತ್ತೇಳು ಲಕ್ಷ ತೊಂಬತ್ತೊಂಬತ್ತು ಸಾವಿರದ ಏಳುನೂರ ಐವತ್ತಮೂರು ರೂಪಾಯಿಗಳು ಮತ್ತು ಎಪ್ಪತ್ತಮೂರು ಪೈಸೆ ಮಾತ್ರ) 29.09.2025** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ದವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಐಟಂ ಸಂಖ್ಯೆ. 1

ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿಯ ದುಬಾಸಿಪಾಳ್ಯ ಗ್ರಾಮದಲ್ಲಿ ನೆಲೆಗೊಂಡಿರುವ, ಪುರಸಭೆ ಖಾತಾ ಸಂಖ್ಯೆ 25/8, ಹೊಸ ಬಿಬಿಎಂಪಿ ಖಾತಾ ಸಂಖ್ಯೆ 32/54/154/25/8/35, ಸಂಖ್ಯೆ 35 ಹೊಂದಿರುವ ಆಸ್ತಿಯ ಎಲ್ಲಾ ತುಣುಕು ಮತ್ತು ಪಾರ್ಸೆಲ್, ಪೂರ್ವದಿಂದ ಪಶ್ಚಿಮಕ್ಕೆ ಅಳತೆ: 30-0 ಅಡಿ, ಉತ್ತರದಿಂದ ದಕ್ಷಿಣಕ್ಕೆ: 20-0 ಅಡಿ, ಒಟ್ಟು 600 ಚದರ ಅಡಿ ಅಳತೆ, ಆಸ್ತಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಿತಿಯ ಅಡಿಯಲ್ಲಿ ಬರುತ್ತದೆ ಮತ್ತು ಬದ್ಧವಾಗಿದೆ:

ಪೂರ್ವ : ರಸ್ತೆ
ಪಶ್ಚಿಮದಲ್ಲಿ : ಆಸ್ತಿ ಸಂಖ್ಯೆ 34 (ಹೊಸ ಸಂಖ್ಯೆ 957ಅ)
ಉತ್ತರದಲ್ಲಿ : ಆಸ್ತಿ ಸಂಖ್ಯೆ 36
ದಕ್ಷಿಣದಲ್ಲಿ : ರಸ್ತೆ

2 ಚದರ ಆರ್.ಸಿ.ಸಿ ಛಾವಣಿಯ ಜೊತೆಗೆ, ಎಲ್ಲಾ ನಾಗರಿಕ ಸೌಕರ್ಯಗಳೊಂದಿಗೆ ರೆಡಾಕ್ಸೈಡ್ ನೆಲಹಾಸು.

ಐಟಂ ಸಂಖ್ಯೆ. 2

ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿಯ ದುಬಾಸಿಪಾಳ್ಯ ಗ್ರಾಮದಲ್ಲಿ ನೆಲೆಗೊಂಡಿರುವ, ಪುರಸಭೆ ಖಾತಾ ಸಂಖ್ಯೆ 25/8, ಹೊಸ ಬಿಬಿಎಂಪಿ ಖಾತಾ ಸಂಖ್ಯೆ 33/54/155/25/8/36, ಸಂಖ್ಯೆ 36 ಹೊಂದಿರುವ ಆಸ್ತಿಯ ಎಲ್ಲಾ ತುಣುಕು ಮತ್ತು ಪಾರ್ಸೆಲ್, ಪೂರ್ವದಿಂದ ಪಶ್ಚಿಮಕ್ಕೆ ಅಳತೆ: 30-0 ಅಡಿ, ಉತ್ತರದಿಂದ ದಕ್ಷಿಣಕ್ಕೆ: 20-0 ಅಡಿ, ಒಟ್ಟು 600 ಚದರ ಅಡಿ ಅಳತೆ, ಆಸ್ತಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಿತಿಯ ಅಡಿಯಲ್ಲಿ ಬರುತ್ತದೆ ಮತ್ತು ಬದ್ಧವಾಗಿದೆ:

ಪೂರ್ವ : ರಸ್ತೆ
ಪಶ್ಚಿಮದಲ್ಲಿ : ಆಸ್ತಿ ಸಂಖ್ಯೆ 34 (ಹೊಸ ಸಂಖ್ಯೆ 957ಅ)
ಉತ್ತರದಲ್ಲಿ : ಆಸ್ತಿ ಸಂಖ್ಯೆ 7
ದಕ್ಷಿಣದಲ್ಲಿ : ಆಸ್ತಿ ಸಂಖ್ಯೆ 35

2 ಚದರ ಆರ್.ಸಿ.ಸಿ ಛಾವಣಿಯ ಜೊತೆಗೆ, ಎಲ್ಲಾ ನಾಗರಿಕ ಸೌಕರ್ಯಗಳೊಂದಿಗೆ ರೆಡಾಕ್ಸೈಡ್ ನೆಲಹಾಸು.

ಅಧಿಕಾರವಿರುವ ಅಧಿಕಾರಿ
ದಿನಾಂಕ: 07.02.2026 **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್**
ಸ್ಥಳ : ಬೆಂಗಳೂರು (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್)**

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್)** ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಅಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **29.09.2025** ರಂದು ಕರೆದು ಸಾಲಗಾರ **ಸುಬ್ರಮಣ್ಯ ವಿ ಅಲಿಯಾಸ್ ಪಯಸ್ವಿನಿ ಸುಬ್ರಮಣ್ಯ ವಿ, ಪಯಸ್ವಿನಿ ಎನ್ ಎಸ್ ಮತ್ತು ಮೈಸೂರು ಸುಬ್ಬರಾವ್ ಸೋಮಸುಂದರ ಅಲಿಯಾಸ್ ಎಂ.ಎಸ್. ಸೋಮಸುಂದರ (ಖಾತರಿದಾರರು)** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 34,55,506.42 (ಮೂವತ್ತನಾಲ್ಕು ಲಕ್ಷ ಐವತ್ತೈದು ಸಾವಿರದ ಐದುನೂರಾ ಆರು ರೂಪಾಯಿಗಳು ಮತ್ತು ನಲವತ್ತೆರಡು ಪೈಸೆ ಮಾತ್ರ)** ಸಾಲ ಖಾತೆ ನಂ. **HHLMAL00353344** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **29.09.2025** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ- ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸಾಂಕೇತಿಕ ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **07.02.2026** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (**ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್)** ನ ಬಾಕಿ ಇರುವ ಮೊತ್ತ **ರೂ. 34,55,506.42 (ಮೂವತ್ತನಾಲ್ಕು ಲಕ್ಷ ಐವತ್ತೈದು ಸಾವಿರದ ಐದುನೂರಾ ಆರು ರೂಪಾಯಿಗಳು ಮತ್ತು ನಲವತ್ತೆರಡು ಪೈಸೆ ಮಾತ್ರ) 29.09.2025** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ದವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಐಟಂ ಸಂಖ್ಯೆ. 1

ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿಯ ದುಬಾಸಿಪಾಳ್ಯ ಗ್ರಾಮದಲ್ಲಿ ನೆಲೆಗೊಂಡಿರುವ, ಪುರಸಭೆ ಖಾತಾ ಸಂಖ್ಯೆ 25/8, ಹೊಸ ಬಿಬಿಎಂಪಿ ಖಾತಾ ಸಂಖ್ಯೆ 32/54/154/25/8/35, ಸಂಖ್ಯೆ 35 ಹೊಂದಿರುವ ಆಸ್ತಿಯ ಎಲ್ಲಾ ತುಣುಕು ಮತ್ತು ಪಾರ್ಸೆಲ್, ಪೂರ್ವದಿಂದ ಪಶ್ಚಿಮಕ್ಕೆ ಅಳತೆ: 30-0 ಅಡಿ, ಉತ್ತರದಿಂದ ದಕ್ಷಿಣಕ್ಕೆ: 20-0 ಅಡಿ, ಒಟ್ಟು 600 ಚದರ ಅಡಿ ಅಳತೆ, ಆಸ್ತಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಿತಿಯ ಅಡಿಯಲ್ಲಿ ಬರುತ್ತದೆ ಮತ್ತು ಬದ್ಧವಾಗಿದೆ:

ಪೂರ್ವ : ರಸ್ತೆ
ಪಶ್ಚಿಮದಲ್ಲಿ : ಆಸ್ತಿ ಸಂಖ್ಯೆ 34 (ಹೊಸ ಸಂಖ್ಯೆ 957ಅ)
ಉತ್ತರದಲ್ಲಿ : ಆಸ್ತಿ ಸಂಖ್ಯೆ 36
ದಕ್ಷಿಣದಲ್ಲಿ : ರಸ್ತೆ

2 ಚದರ ಆರ್.ಸಿ.ಸಿ ಛಾವಣಿಯ ಜೊತೆಗೆ, ಎಲ್ಲಾ ನಾಗರಿಕ ಸೌಕರ್ಯಗಳೊಂದಿಗೆ ರೆಡಾಕ್ಸೈಡ್ ನೆಲಹಾಸು.

ಐಟಂ ಸಂಖ್ಯೆ. 2

ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿಯ ದುಬಾಸಿಪಾಳ್ಯ ಗ್ರಾಮದಲ್ಲಿ ನೆಲೆಗೊಂಡಿರುವ, ಪುರಸಭೆ ಖಾತಾ ಸಂಖ್ಯೆ 25/8, ಹೊಸ ಬಿಬಿಎಂಪಿ ಖಾತಾ ಸಂಖ್ಯೆ 33/54/155/25/8/36, ಸಂಖ್ಯೆ 36 ಹೊಂದಿರುವ ಆಸ್ತಿಯ ಎಲ್ಲಾ ತುಣುಕು ಮತ್ತು ಪಾರ್ಸೆಲ್, ಪೂರ್ವದಿಂದ ಪಶ್ಚಿಮಕ್ಕೆ ಅಳತೆ: 30-0 ಅಡಿ, ಉತ್ತರದಿಂದ ದಕ್ಷಿಣಕ್ಕೆ: 20-0 ಅಡಿ, ಒಟ್ಟು 600 ಚದರ ಅಡಿ ಅಳತೆ, ಆಸ್ತಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಿತಿಯ ಅಡಿಯಲ್ಲಿ ಬರುತ್ತದೆ ಮತ್ತು ಬದ್ಧವಾಗಿದೆ:

ಪೂರ್ವ : ರಸ್ತೆ
ಪಶ್ಚಿಮದಲ್ಲಿ : ಆಸ್ತಿ ಸಂಖ್ಯೆ 34 (ಹೊಸ ಸಂಖ್ಯೆ 957ಅ)
ಉತ್ತರದಲ್ಲಿ : ಆಸ್ತಿ ಸಂಖ್ಯೆ 7
ದಕ್ಷಿಣದಲ್ಲಿ : ಆಸ್ತಿ ಸಂಖ್ಯೆ 35

2 ಚದರ ಆರ್.ಸಿ.ಸಿ ಛಾವಣಿಯ ಜೊತೆಗೆ, ಎಲ್ಲಾ ನಾಗರಿಕ ಸೌಕರ್ಯಗಳೊಂದಿಗೆ ರೆಡಾಕ್ಸೈಡ್ ನೆಲಹಾಸು.

ಅಧಿಕಾರವಿರುವ ಅಧಿಕಾರಿ
ದಿನಾಂಕ: 07.02.2026 **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್**
ಸ್ಥಳ : ಬೆಂಗಳೂರು (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್)**

ಕೆನರಾ ಬ್ಯಾಂಕ್ Canara Bank
SyndicateBank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ-1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು-560001
ದೂ: 080-25310066, ಇ-ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ-ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರು ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 03.03.2026 (ಬೆಳಿಗ್ಗೆ 10.30 ರಿಂದ 11.00 ರವರೆಗೆ)** ರಂದು ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ","ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 1,19,24,180.62 (ರೂಪಾಯಿ ಒಂದು ಕೋಟಿ ಹತ್ತೊಂಭತ್ತು ಲಕ್ಷದ ಇಪ್ಪತ್ತನಾಲ್ಕು ಸಾವಿರದ ಒಂದುನೂರ ಎಂಭತ್ತು ಮತ್ತು ಅರವತ್ತೆರಡು ಪೈಸೆ ಮಾತ್ರ) ಜೊತೆಗೆ ದಿನಾಂಕ: 09.02.2026** ರಂದು ಇದ್ದಂತೆ ಮತ್ತು ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರಿಂದ ಸಾಲಗಾರರಾದ: **(1) ಎಸ್‌ಡಿಡಿಪಿ ಎಂಟರ್‌ಪ್ರೈಸಸ್,** ನಂ.4, ಖಾತಾ ನಂ.149 1, ಆರ್ ಎಸ್ ಪಾಳ್ಯ, ಬೆಂಗಳೂರು-560033. **(2) ಲಕ್ಷ್ಮೀಪತಿ ವಿ, 253, 8ನೇ ಕ್ರಾಸ್,** ಸೇಂಟ್ ಆನ್ಸ್ ಸ್ಕೂಲ್ ರಸ್ತೆ, ಭೋವಿ ಕಾಲೋನಿ, ದೊಡ್ಡಮ್ಮ ದೇವಸ್ಥಾನದ ಹತ್ತಿರ, ರಾಮ ಮೂರ್ತಿ ನಗರ, ಬೆಂಗಳೂರು- 560016. ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 02.03.2026 ರ ಸಂಜೆ 5.00 ಗಂಟೆಯೊಳಗೆ** ಠೇವಣಿ ಮಾಡಬೇಕು. **(₹. ಲಕ್ಷಗಳಲ್ಲಿ)**

ಕ್ರ. ಸಂ	ಸ್ಥಿರಾಸ್ತಿ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ
1	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಆಸ್ತಿಯ ನಿವೇಶನ ನಂ.70, ಖಾತಾ ನಂ.166, ಮನೆಯ ಲಿಸ್ಟ್ ನಂ.193, ಈ ಆಸ್ತಿಯು ಐಟಿಐ ಸೂಚಿಸಲಾದ ಪ್ರದೇಶ, ಕೌಡನಹಳ್ಳಿ ಗ್ರಾಮ, ಕೆ ಆರ್ ಪುರ, ಬೆಂಗಳೂರು ಪೂರ್ವ ತಾಲ್ಲೂಕು ಹೋಬಳಿಯಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 33 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 45 ಅಡಿ, ಒಟ್ಟು ವಿಸ್ತೀರ್ಣ 1485 ಚದರ ಅಡಿ ಮತ್ತು ಪ್ರಸ್ತುತ ಆಸ್ತಿಯು ಬಿಬಿಎಂಪಿ ವ್ಯಾಪ್ತಿಯಲ್ಲಿದ್ದು, ಮುನಿಸಿಪಲ್ ನಂ.70, ಹೆಚ್‌ಎಲ್ ನಂ.166, ಬಿಬಿಎಂಪಿ ವಾರ್ಡ್ ನಂ.26, ಬೆಂಗಳೂರಿನಲ್ಲಿದೆ ಮತ್ತು ಈ ಆಸ್ತಿಯು ಶ್ರೀ ವಿ. ಲಕ್ಷ್ಮೀಪತಿ ಬಿನ್ ಲೇಟ್ ಶ್ರೀ ವೆಂಕಟಪ್ಪ ಅವರ ಹೆಸರಿನಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ಶ್ರೀಮತಿ ಕಮಲಮ್ಮರವರ ನಿವೇಶನ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಸರ್ಕಾರಿ ಆಸ್ತಿ, ದಕ್ಷಿಣಕ್ಕೆ: ನಿವೇಶನ ನಂ.69. **Google co-ordinate: 13.0133N, 77.6786E**	₹. 93.90 ಲಕ್ಷಗಳು	₹. 9.39 ಲಕ್ಷಗಳು	₹. 1.00 ಲಕ್ಷಗಳು

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ-ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ **ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ-I ಶಾಖೆ, ಬೆಂಗಳೂರು** ಮೊಬೈಲ್ ಸಂಖ್ಯೆ: **9483544116 ಮತ್ತು 8598009010** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 10.02.2026
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

PUBLIC NOTICE

It is hereby informed to Concerned persons/public, that my client, Smt.Pushpa Raya.T, W/o.D.H.Raya, aged about 71 years, R/at No: 402, Sree Dakshayani Apartment, Yemalur Main Road, Bangaluru – 37, intend purchase the below mentioned schedule property described in the hereunder from its owner Sri.Ramakrishna.K, S/o.Kalappa, aged about 59 years, R/at: No: 91, 1st Main Road, Vijayananda Nagar, Nandini Layout, Bengaluru -96. Whereas, the owner claims that he is the sole and absolute owner of the said scheduled property and entered into the sale agreement with the said Sri RamaKrishna K. There of, it is here informed to the concerned, that any person/s, agent/s, bank/s, financial instructions,Government authorities, BBMP authorities etc., having any manner of claims, charge, mortgage, right and interest, sale, lease, exchange, mortgage, lien, gift, trust, maintenance, inheritance, passion, lease, license, easement or otherwise of whatsoever nature howsoever, etc., in respect of the schedule property are hereby informed to make the same known to the undersigned in writing supported by documents as proof and evidence within a period of 8 days from the date of publication of this notice , Failing which the claim/s or objections so received after such late shall be considered will be deemedto have been waived and discharged forever my client will be advised to go Ahed and complete the sale formalities.

Schedule Property

All that piece and parcel of the residential vacant site bearing No: 95,New EPID No. 2318790301, property no 997/222/29/1.20/2. OTHERS 95. Formed in Sy No: 21/2, 21/3 A, 21/4 A, 27/1, 21/1, 30/2 & 27/2 A, in converted land for the use of residential purpose, vide conversion order No: ALN (NAY) S.R 163/2008-09, dated:13-10-2008 & ALN (NAY) S.R 178/2008-09, dated: 02-03-2009 of The Deputy Commissioner, Bengaluru District, formed and developed by M/s.Jayasurya Developers, in the layout known as Jayasurya Nagar – Fourth "A" Block. The said vacant residential site No 95 allotted by Karnatak Vidhanamandala Karyalayada Gruha Nirman Sahakara Sangha (Reg), as confirming party, and the said sale document registered vide number YAN-1-04726/2011-12 stored in the CD number YAND378 dated 23/11/2011 at the Sub-Registerar office Yelahanka Bengaluru. This site situate at Agrahara Village, Yelahanka Hobli, Bengaluru North Taluk, Now BBMP limits Bengaluru, which is measuring East to West: 40 feet and North to South: 30 feet, in total measuring 1200 sq. ft and bounded on:-

East by : Road, **West by :** Pravate Property,
North by : Site No: 94, **South by :** Site No: 96,

P.M.Venkataramana, advocate,
office at No:45/28, 2nd Floor, Thulasi Theater Road, Marathahalli,
Bengaluru -37, Mobile No: 99728 57907.

izmoltd.

Driving Profits



Net Profit Up 193%*

Operating Revenue Up 7%**

Un-audited Financial Results for the Quarter Ended 31-12-2025

Statement of Consolidated Un-audited Financial Results for the Quarter Ended 31-12-2025

(Rs. in Lakhs)

Sl. No.	Particulars	Quarter Ended			Nine months Ended		Year Ended	
		Un-Audited 31.12.2025	Un-Audited 30.09.2025	Un-Audited 31.12.2024	Un-Audited 31.12.2025	Un-Audited 31.12.2024	Audited 31.03.2025	Audited 31.03.2024
1	Revenue from Operation	5,910.72	6,010.69	5,866.52	17,572.35	16,479.78	22,461.01	18,674.83
2	Other Income	280.85	445.23	221.52	822.01	3,440.59	3,525.91	334.27
3	**Total Income**	**6,191.57**	**6,455.92**	**6,088.04**	**18,394.36**	**19,920.38**	**25,986.92**	**19,009.10**
4	**Profit/(Loss) for the period**	**1,170.12**	**1,255.94**	**605.90**	**3,026.44**	**4,199.10**	**4,888.03**	**2,605.06**
5	Total Other Comprehensive Income	-	-	-	-	-	5.68	10.18
6	**Total Comprehensive Income for the Period**	**1,170.12**	**1,255.94**	**605.90**	**3,026.44**	**4,199.10**	**4,893.71**	**2,615.24**
7	Paid-up Equity Share Captial (Face value Rs.10/- per share)	1,495.36	1,489.29	1,487.21	1,495.36	1,487.21	1,487.21	1,411.36
8	Reserves	37,807.45	36,457.63	34,213.27	37,807.45	34,213.27	34,427.51	29,233.89
9	Earnings Per Share (Face value of share at Rs.10/-each)(not Annualised)							
	(a) Basic	7.83	8.43	4.07	20.31	29.43	33.90	19.30
	(b) Diluted	7.83	8.43	4.07	20.31	29.43	33.90	19.30
	See accompanying notes to the Financial Results.							

Statement of Stand alone Un-audited Financial Results for the Quarter Ended 31-12-2025

(Rs. in Lakhs)

Sl. No.	Particulars	Quarter Ended			Nine months Ended		Year Ended	
		Un-Audited 31.12.2025	Un-Audited 30.09.2025	Un-Audited 31.12.2024	Un-Audited 31.12.2025	Un-Audited 31.12.2024	Audited 31.03.2025	Audited 31.03.2024
1	Revenue from Operation	1,076.73	1,124.32	1,164.91	3,301.34	3,464.65	4,685.64	4,261.94
2	Other Income	86.12	151.37	84.53	291.08	3,189.12	3,219.80	113.50
3	**Total Income**	**1,162.85**	**1,275.69**	**1,249.44**	**3,592.42**	**6,653.77**	**7,905.44**	**4,375.44**
4	**Profit/(Loss) for the period**	**1.51**	**24.84**	**9.74**	**53.24**	**2,424.10**	**2,443.40**	**19.07**
5	Total Other Comprehensive Income	-	-	-	-	-	5.68	10.18
6	**Total Comprehensive Income for the Period**	**1.51**	**24.84**	**9.74**	**53.24**	**2,424.10**	**2,449.07**	**29.25**
7	Paid-up Equity Share Captial (Face value Rs.10/- per share)	1,495.36	1,489.29	1,487.21	1,495.36	1,487.21	1,487.21	1,411.36
8	Reserves	20,043.04	19,861.81	19,700.14	20,043.04	19,700.14	19,636.29	16,495.75
9	Earnings Per Share (Face value of share at Rs.10/-each)(not Annualised)							
	(a) Basic	**0.01**	**0.17**	**0.07**	**0.36**	**16.99**	**16.95**	**0.14**
	(b) Diluted	**0.01**	**0.17**	**0.07**	**0.36**	**16.99**	**16.95**	**0.14**
	See accompanying notes to the Financial Results.							

Notes to Financial Results:

1. The above un-audited Financial results for Q3 & 9 months ended 31st December, 2025 have been reviewed by the Audit Committee and approved by the Board of Directors at its meeting held on 11-02-2026.
2. Limited Review of the above results has been carried out by the Auditors.
3. Investors Grievances during the quarter: Received - Nil, Attended - Nil, Pending - Nil.
4. We added 96 clients in the US market
5. Client addition in Europe including UK was 37.
6. Order book of izmomicro has crossed Rs. 50 crores. izmomicro's offering of 3D and silicon photonics packaging is attracting customers from several verticals such as defence, automotive and deep tech.
7. **The Company has collected around US$ 98K (Rs.86 Lakhs) for 9 months ended 31.12.2025, from several companies towards image copyright infringement charges during FY. This is part of the other income. This is a result of legal action taken by the company against several large international media companies using Izmo's automotive images illegally.**
8. **Employee benefit expenses for the Nine months ended 31.12.2025 includes Rs.353.51 lakhs (PY same period: Rs.231.91 lakhs) expenses recognised on account of Stock option offered to employees under ESOP Schemes, recognised over the vesting period. As a result of this, profit is reduced to this extent.**
9. Previous period figures have been re-grouped/reclassifed wherever necessary to conform to the current period presentation.
10. The Company operates in one reportable segment only.

Place: Bengaluru
Date: 11th February, 2026

For and on behalf of the Board
Sanjay Soni
Managing Director

* In Q3 ended 31.12.2025 as compared to same quarter of PY, at consolidated level.
**For 9 months ended 31.12.2025, as compared to same period of PY, at consolidated level.

#177/2C, Bilekahalli Industrial Area, Off Bannerghatta Road, Bengaluru – 560 076

Ph: +91 80 67125400, Fax: +91 80 67125408
www.izmoltd.com CIN : L72200KA1995PLC018734

ಸಮಾಚಾರ ಸಣ್ಣದಲ್ಲ

ಶಾಸಕರ ವಿದೇಶ ಪ್ರವಾಸ

← ಮೊದಲಪುಟದಿಂದ

ಭೇಟಿಗೆ ಸಿಗದ ಹೈಕಮಾಂಡ್: ಇನ್ನು ದೆಹಲಿಯಲ್ಲಿಯೇ ಬೀಡುಬಿಟ್ಟಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಅಸ್ಸಾಂ ಚುನಾವಣೆಗೆ ಸಂಬಂಧಿಸಿದಂತೆ ಚರ್ಚಿಸಲು ಪ್ರಿಯಾಂಕಾ ಗಾಂಧಿ ಅವರನ್ನು ಭೇಟಿಯಾಗಿದ್ದರ ಹೊರತಾಗಿ, ಇನ್ಯಾವುದೇ ವರಿಷ್ಠರನ್ನು ಭೇಟಿಯಾಗಿಲ್ಲ. ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಂಸತ್ ಕಲಾಪದಲ್ಲಿ ಬ್ಯುಸಿ ಇರುವುದರಿಂದ ಡಿಕೆಗೆ ಅವಕಾಶ ಸಿಕ್ಕಿಲ್ಲ ಎನ್ನಲಾಗುತ್ತಿದೆ. ಆದರೆ ದೆಹಲಿಯಿಂದ ವಾಪಾಸಾಗುವಾಗ 'ಸ್ಪಷ್ಟನೆ' ಪಡೆದುಕೊಂಡೇ ಬರಬೇಕು ಎನ್ನುವ ಹಠಕ್ಕೆ ಬಿದ್ದಿರುವ ಡಿಕೆಶಿ ತಮ್ಮ ದೆಹಲಿ ವಾಸ್ತವ್ಯವನ್ನು ಮುಂದುವರಿಸಲು ತೀರ್ಮಾನಿಸಿದ್ದಾರೆ ಎನ್ನಲಾಗಿದೆ.

ಲೋಕಸಭೆಯಲ್ಲಿ ರಾಗಾ ಕಿಡಿ

← ಮೊದಲಪುಟದಿಂದ

ನಾವು ಏಕೈಕ ಸೂಪರ್ ಪವರ್ ಜಗತ್ತಿನಿಂದ, ಊಹಿಸಲು ಸಾಧ್ಯವಾಗದಂತಹ ಹೊಸ ಜಗತ್ತಿಗೆ ಸಾಗುತ್ತಿದ್ದೇವೆ ಎಂದು ರಾಹುಲ್ ಗಾಂಧಿ ಅಭಿಪ್ರಾಯಟ್ಟರು.

ಪ್ರಧಾನಿ ಮೇಲೆ ನೇರ ಒತ್ತಡ: ಬಜೆಟ್ ಮೇಲಿನ ಭಾಷಣದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ರಾಹುಲ್ ಗಾಂಧಿ, ಪ್ರಧಾನ ಮಂತ್ರಿ ಅವರ ಮೇಲೆ ಅಮೆರಿಕದ ನೇರ ಒತ್ತಡ ಇದೆ ಎಂದು ಆರೋಪಿಸಿದರು. ಎಪ್‌ಸ್ಟೀನ್ ಫೈಲ್‌ಗೆ ಸಂಬಂಧಿಸಿದಂತೆ ಅಮೆರಿಕದ ನ್ಯಾಯಾಂಗ ಇಲಾಖೆಯ ಫೈಲ್‌ಗಳಲ್ಲಿ ಹರ್ದೀಪ್ ಪುರಿ ಮತ್ತು ಅನಿಲ್ ಅಂಬಾನಿ ಹೆಸರುಗಳಿವೆ. ಅದಾನಿ ವಿರುದ್ಧ ನಡೆಯುತ್ತಿರುವ ಪ್ರಕರಣದಲ್ಲಿ ಸಮನ್ಸ್ ಜಾರಿಯಾಗಿದೆ. ಆದರೆ ಕಳೆದ 18 ತಿಂಗಳಿಂದ ಭಾರತ ಸರಕಾರ ಇದಕ್ಕೆ ಪ್ರತಿಕ್ರಿಯಿಸಿಲ್ಲ. ಡೇಟಾ, ರೈತರು, ಇಂಧನ ಭದ್ರತೆ ಮತ್ತು ರಕ್ಷಣೆಗೆ ಸಂಬಂಧಿಸಿದಂತೆ ಈಗ ಏನಾಗಿದೆಯೋ ಅದನ್ನು ಸಾಮಾನ್ಯ ಪರಿಸ್ಥಿತಿಯಲ್ಲಿ ಯಾವ ಪ್ರಧಾನಿಯೂ ಮಾಡಲ್ಲ. ಯಾರದ್ದೋ ಹಿಡಿತದಲ್ಲಿ ಸಿಲುಕಿದಾಗ ಮಾತ್ರ ಒಬ್ಬರು ಹೀಗೆ ಮಾಡುತ್ತಾರೆ ಎಂದು ರಾಹುಲ್ ದೂರಿದರು.

ರೆಸಾರ್ಟ್‌ಗಳೆಲ್ಲ ಖಾಲಿ ಖಾಲಿ

← ಮೊದಲಪುಟದಿಂದ

ವಿದೇಶಿ ಪ್ರವಾಸಿಗರು ಆರೇಳು ತಿಂಗಳ ಮೊದಲೇ ತಮ್ಮ ಬುಕ್ಕಿಂಗ್ ಮಾಡಿಕೊಂಡಿರುತ್ತಾರೆ. ಆದರೆ ಕಳೆದ ನಾಲ್ಕು ತಿಂಗಳಿನಿಂದ ಸಫಾರಿ ನಿರ್ಬಂಧ ಹೇರಿರುವುದರಿಂದಾಗಿ ಮುಂದಿನ ಆರು ತಿಂಗಳು ಅಂದರೆ, ಜುಲೈ, ಆಗಸ್ಟ್ ಸಮಯಕ್ಕೆ ಮಾಡಿಕೊಂಡಿರುವ ಬುಕ್ಕಿಂಗ್ ಕ್ಯಾನ್ಸಲ್ ಮಾಡಿಕೊಳ್ಳುತ್ತಿದ್ದಾರೆ.

ರೆಸಾರ್ಟ್‌ಗಳಿಗೆ ಬೀಗಮುದ್ರೆ?: ಕಬಿನಿ ಸುತ್ತಮುತ್ತಲ ಐಷಾರಾಮಿ ರೆಸಾರ್ಟ್‌ಗಳ ಮಾಲೀಕರು ಸಫಾರಿ ಪುನಾರಂಭವಾಗುವ ಬಗ್ಗೆ ಯಾವುದೇ ಸ್ಪಷ್ಟತೆ ಇಲ್ಲದಿರುವುದರಿಂದ ನೂರಾರು ಕಾರ್ಮಿಕರಿಗೆ ಸಂಬಳ ಕೊಡುವುದು ಹೇಗೆ ಎನ್ನುವ ಆತಂಕದಲ್ಲಿದ್ದಾರೆ. ಕೆಲ ರೆಸಾರ್ಟ್ ಮಾಲೀಕರು, ಇನ್ನೊಂದು ತಿಂಗಳಲ್ಲಿ ಸಫಾರಿ ಪುನಾರಂಭವಾಗದಿದ್ದರೆ ರೆಸಾರ್ಟ್‌ಗಳನ್ನು ಮುಚ್ಚಿಕೊಂಡು ಹೋಗುತ್ತೇವೆ. ಖಾಲಿ ಕೋಣೆಗಳ ನಿರ್ವಹಣೆ, ವೇತನ ನೀಡುವುದಕ್ಕಿಂತ ರೆಸಾರ್ಟ್‌ಗಳನ್ನೇ ಮುಚ್ಚುವುದು ಸೂಕ್ತ ಎನ್ನುವ ಮಾತುಗಳನ್ನು ಆಡುತ್ತಿದ್ದಾರೆ.

ಹೆಚ್ಚಿದ ಚಿರತೆ ಕಾಟ | ಪಾದಯಾತ್ರಿಗಳಿಗೆ ಕಾವಲಾಗಿ ನಿಂತ ಭದ್ರತಾ ಪಡೆ, ಪೊಲೀಸ್

ಜೀವ ಭಯದಲ್ಲಿ ಮಾದಪ್ಪನ ಭಕ್ತರ ಪಾದಯಾತ್ರೆ

ಚಾಮರಾಜನಗರ: ಎಂಎಂ ಹಿಲ್ಸ್‌ನಲ್ಲಿ ಚಿರತೆ ಕಾಟ ಹೆಚ್ಚಳ ಆಗಿದ್ದು, ಜೀವ ಭಯದಲ್ಲೇ ಭಕ್ತರು ಮಾದಪ್ಪನ ಸನ್ನಿಧಾನಕ್ಕೆ ಪಾದಯಾತ್ರೆ ಹೊರಟ್ಟಿದ್ದಾರೆ. ಬಾಲಕನ ಮೇಲೆ ಚಿರತೆ ದಾಳಿ ನಡೆಸಿದ ಬೆನ್ನಲ್ಲೇ ಎಚ್ಚುತ್ತುಕೊಂಡಿರುವ ಅರಣ್ಯ ಇಲಾಖೆ ಹಾಗೂ ಪೊಲೀಸರು ಬಸವನ ಕಾಡು ಸೇರಿ ಹಲವು ಕಡೆ ಗಸ್ತು ಹಾಕುತ್ತಿದ್ದಾರೆ.

ಬಸವನ ಕಡ ಅರಣ್ಯ ಪ್ರದೇಶದಲ್ಲಿ ಹರಿಯುತ್ತಿರುವ ಕಾವೇರಿ ನದಿ ನೀರನ್ನು ದಾಟಿ ಸಾವಿರಾರು ಭಕ್ತರು ಮಹಾ ಶಿವರಾತ್ರಿ ಪ್ರಯುಕ್ತ ಮಾದಪ್ಪನ ಬೆಟ್ಟಕ್ಕೆ ಪಾದಯಾತ್ರೆ ಮೂಲಕ ತೆರಳಿದರು. ಸ್ಥಳದಲ್ಲೇ ಅರಣ್ಯ, ಪೊಲೀಸ್, ಎಸ್‌ಡಿಆರ್‌ಎಫ್, ಅಗ್ನಿಶಾಮಕ ತಂಡ ಮೊಕ್ಕಂ ಹೂಡಿದ್ದಾರೆ. ರೂಪ್ ಮೂಲಕ ಭಕ್ತಾದಿಗಳನ್ನು ಸುರಕ್ಷಿತವಾಗಿ ದಾಟಿಸುತ್ತಿದ್ದಾರೆ. ಬಸವನಕಡು ಕಾವೇರಿ ನದಿ ತೀರದ ಪ್ರಪಾತಕ್ಕೆ ಹೋಗಿ ಬರಲು ಅರಣ್ಯ ಇಲಾಖೆ ಜೀಪ್ ಹಾಗೂ ಬೈಕ್ ದಾರಿ ಮಾಡಿಕೊಂಡಿದೆ. ಈ ದಾರಿಯ ಮುಖಾಂತರ ಕ್ರಮಿಸಿದರೆ ಬಹಳ ಅಂತರ ಹಾಗೂ ಸಮಯ ಹಿಡಿಯುತ್ತದೆ ಎಂದು ಪಾದಯಾತ್ರಿಗಳು ಅನ್ಯ ದುರ್ಗಮದ ಹಾದಿಯನ್ನು ಕಂಡುಕೊಂಡು ಒಂದೇ ರೇಖೆಯಲ್ಲಿ ಏರುಮುಖವಾಗಿ ಬಹಳ ಎತ್ತರದ ಬೆಟ್ಟವನ್ನು ಹತ್ತುತ್ತಾರೆ. ಈ ವೇಳೆ ಬಿಸಿಲಿನ ತಾಪಮಾನ ಹೆಚ್ಚಿರುವುದರಿಂದ ಬಹಳ ಸುಸ್ತಾಗಿ ಬಳಲುವ ಭಕ್ತರು ಅರಣ್ಯದೊಳಗಡೆಯ ಗಿಡ ಮರಗಳು ಪೊದೆಗಳನ್ನೇ ಆಶ್ರಯಿಸಿ ಕುಳಿತು ಮಲಗಿ ವಿಶ್ರಾಂತಿ ಪಡೆದು ತೆರಳುತ್ತಾರೆ. ಈ ವೇಳೆ ಕಾಡು ಪ್ರಾಣಿಗಳು ದಾಳಿ ಮಾಡಲು ಮುಂದಾದರೆ ಬಚಾವ್ ಆಗುವುದು ಕಷ್ಟವೇ ಸರಿ. ಭಕ್ತಿಯಿಂದಲೂ ದೇವರ ಘೋಷಣೆಗಳನ್ನು ಕೂಗುವ ಪಾದಯಾತ್ರಿಗಳು ತೀರಾ ಸುಸ್ತಾದವರನ್ನು ಉದ್ದಿಪನಗೊಳಿಸಲು ಹಾಗೂ ಕಾಡು ಪ್ರಾಣಿಗಳ ಭಯ ಆತಂಕವನ್ನು ದೂರ ಮಾಡಲು ಉಘೇ ಮಾದಪ್ಪ, ಉಘೇ ಘೋಷಣೆಗಳನ್ನು ಕೂಗುತ್ತಾ ಸಾಗುತ್ತಾರೆ.

ಬಸವನ ಕಡ ಪ್ರಪಾತದಿಂದ ಬರುವ ಪಾದಯಾತ್ರಿಗಳ ದಾರಿಯಲ್ಲಿ ಆನೆಗಳು ಗಿಡ ಮರಗಳನ್ನು ಮುರಿದಿರುವುದು ರಾತ್ರಿ ಹಾಗೂ ನಸುಕಿನಲ್ಲಿ ಲದ್ದಿ ಇಟ್ಟಿರುವುದು ಅಲ್ಲಲ್ಲಿ ಗೋಚರಿಸುತ್ತದೆ. ಈ ವೇಳೆ ಕಾಡು ಪ್ರಾಣಿ ಈ ಮಧ್ಯೆಯೇ ಮಾದಪ್ಪನ ಭಕ್ತರು ದೇವರ ಮೇಲೆ ಭಾರ ಹಾಕಿ, ಸ್ಮರಿಸುತ್ತಾ ತೆರಳುವುದು ಕಂಡು ಬರುತ್ತದೆ.

ಕೊಪ್ಪರಿಕೆಯಲ್ಲಿಯೇ ಗ್ರಾಮೀಣ ಅಡುಗೆ : ಕಾವೇರಿ ನದಿ ದಾಟಿ ಬರುವ ಸಾವಿರಾರು ಪಾದಯಾತ್ರಿಗಳ ಊಟ ಮತ್ತು ತಿಂಡಿಗೆ ಕೊಪ್ಪರಿಕೆಯಲ್ಲಿಯೇ ಅಡುಗೆ ಮಾಡುವ ವ್ಯವಸ್ಥೆಯನ್ನು ಕೆಲವು ದಾನಿಗಳು, ಗ್ರಾಮಸ್ಥರು ಕೈಗೊಂಡಿದ್ದಾರೆ. ವಿಶಾಲವಾದ ಜಮೀನನ್ನು ಸಮತಟ್ಟು ಮಾಡಿ ತಂಗುವ ಮತ್ತು ಭೋಜನ ಸೇವಿಸಲು ಪೆಂಡಾಲ್ ಹಾಕಲಾಗಿತ್ತು. ಲೋಡ್ ಗಟ್ಟಲೆ ಸೌದೆ, ಆಹಾರ ಪದಾರ್ಥಗಳ ಸಾಮಾಗ್ರಿಗಳು ಕಂಡು ಬಂದಿತು. ಪಾದಯಾತ್ರಿಗಳಿಗೆ ಮುದ್ದೆ ಉಪ್ಪಸಾರು, ಹುರುಳಿ ಇನ್ನಿತರೇ ದೇಶಿ ಹಾಗೂ ಗ್ರಾಮೀಣ ಆಹಾರವನ್ನು ತಯಾರಿಸಲಾಗಿತ್ತು.

ತಾತ್ಕಾಲಿಕ ಅಂಗಡಿ ಮುಂಗಟ್ಟುಗಳು: ಸಾವಿರಾರು ಮಂದಿ ಪಾದಯಾತ್ರಿಗಳು ವಾಸ್ತವ್ಯ ಹೂಡಿ ತೆರಳುವ ಮಾರ್ಗದ ಬಹುತೇಕ ಗ್ರಾಮಗಳು ಹಾಗೂ ಹೊರ ವಲಯದಲ್ಲಿ ಪಾದಯಾತ್ರಿಗಳಿಗೆ ಅಗತ್ಯವಾದ ತಾತ್ಕಾಲಿಕ ಅಂಗಡಿಗಳು ತಲೆ ಎತ್ತಿವೆ. ವ್ಯಾಪಾರ ವಹಿವಾಟು ಜೋರಾಗಿರುವುದು ಕಂಡು ಬಂದಿತು.

ಮಜ್ಜಿಗೆ ವ್ಯವಸ್ಥೆ: ಬಹು ದೂರದಿಂದ ಕಾಡು ಮೇಡು ಹತ್ತಿ ಬರುವ ಪಾದಯಾತ್ರಿಗಳಿಗೆ ಆಯಾ ಭಾಗದ ಗ್ರಾಮಸ್ಥರು ಹಾಗೂ ದಾನಿಗಳು ಮಾದಪ್ಪನ ಹೆಸರಿನಲ್ಲಿ ಸ್ವಯಂ ಪ್ರೇರಿತರಾಗಿ ಮಜ್ಜಿಗೆ ಪಾನಕ ಕುಡಿಯುವ ನೀರು ಅನ್ನ ಸಂತರ್ಪಣೆಯನ್ನು ಕೈಗೊಂಡಿದ್ದರು.

ಗುರುವಾರ ಸಂಜೆ ಬಳಿಕ ನದಿ ದಾಟುವ ಆಗಿಲ್ಲ

ಭಕ್ತಿಯ ಪ್ರತೀಕವಾಗಿರುವ ಮಲೆ ಮಹದೇಶ್ವರ ಬೆಟ್ಟಕ್ಕೆ ರಾಮನಗರ, ಬೆಂಗಳೂರು, ಮುಂತಾದಡೆಯಿಂದ ಮಾದಪ್ಪನ ಭಕ್ತರು ಸಂಪ್ರದಾಯದಂತೆ ಕಾವೇರಿ ನದಿ ದಾಟಿ ಬರುವ ಹಿನ್ನಲೆಯಲ್ಲಿ ಅರಣ್ಯ ಇಲಾಖೆ 3 ದಿನಗಳ ಕಾಲ ಮಾತ್ರ ಅವಕಾಶ ನೀಡಲಾಗಿದ್ದು ಗುರುವಾರ ಸಾಯಂಕಾಲದ ಬಳಿಕ ಅವಕಾಶವಿಲ್ಲವೆಂದು ಈಗಾಗಲೇ ಸೂಚನೆ ನೀಡಿದ್ದಾರೆ.

ರಕ್ಷಣಾ ತಂಡದ ಬಗ್ಗೆ ಮೆಚ್ಚುಗೆ

ಕಾವೇರಿ ನದಿ ದಾಟಿ ಬರುವ ಭಕ್ತರು, ತಮ್ಮ ರಕ್ಷಣೆಗೆ ನಿಂತಿರುವ ಕಾವೇರಿ ವನ್ಯಧಾಮದ ಸಿಬ್ಬಂದಿ ಗಳು, ಹನೂರು ಪೊಲೀಸರು, ಅಗ್ನಿಶಾಮಕ ದಳದವರ ಕಾರ್ಯವೈಖರಿ ಬಗ್ಗೆ ಮೆಚ್ಚುಗೆ ಸೂಚಿಸಿದ್ದಾರೆ. ಕಳೆದ ಬಾರಿ ರೂಪ್ ಸೌಲಭ್ಯ ಇರಲಿಲ್ಲ, ಈ ಬಾರಿ ಸುರಕ್ಷಿತವಾಗಿ ನದಿ ದಾಟಲು ಸಮರ್ಪಕ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಮಂಡ್ಯ ಮೂಲದ ಭಕ್ತ ಸಂತಸ ಮತ್ತು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ತಮನ್ನಾ ಆಯ್ಕೆ ಮಾಡಿದ್ದೇಕೆ?

← ಮೊದಲಪುಟದಿಂದ

ಕನ್ನಡೇತರರ ಆಯ್ಕೆ ಇದೇ ಮೊದಲಲ್ಲ: ಪ್ರತಿಪಕ್ಷಗಳು ಸೇರಿದಂತೆ ಅನೇಕರು ಅನ್ಯಭಾಷಿಕರನ್ನು ಮೈಸೂರು ಸ್ಯಾಂಡಲ್ ರಾಯಭಾರಿಯನ್ನಾಗಿ ನೇಮಿಸಿಕೊಳ್ಳುವ ಮೂಲಕ ಕನ್ನಡ ಅಸ್ಮಿತೆಗೆ ಧಕ್ಕೆ ತಂದಿದ್ದಾರೆ ಎನ್ನುವ ಆರೋಪವನ್ನು ಮಾಡಿದ್ದಾರೆ. ಆದರೆ ಕನ್ನಡೇತರರನ್ನು ರಾಯಭಾರಿಯನ್ನಾಗಿ ಮೈಸೂರು ಸ್ಯಾಂಡಲ್ ನೇಮಿಸಿರುವುದು ಇದೇ ಮೊದಲಲ್ಲ. ಭಾರತ ಕ್ರಿಕೆಟ್ ತಂಡ ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ, ಗುಜರಾತ್ ಮೂಲಕ ದೀಪಿಕಾ ಚಿಖ್ಲಿಯಾ, ಮಹಾರಾಷ್ಟ್ರದ ಮುಗ್ಧಾ ವೀರಾ ಗೋದ್ಸೆ ಅವರನ್ನು ಈ ಹಿಂದೆ ರಾಯಭಾರಿಯನ್ನಾಗಿ ನೇಮಿಸಿಕೊಳ್ಳಲಾಗಿತ್ತು.

ಇನ್ನು ಕರ್ನಾಟಕದ ಮೂಲದ ದೊಡ್ಡ ಗಣೇಶ್ ಅವರನ್ನು 2003ರ ಅವಧಿಯಲ್ಲಿ ನೇಮಿಸಿಕೊಳ್ಳಲಾಗಿತ್ತು. ಸದ್ಯ ಕರ್ನಾಟಕದ ಐಶಾನಿ ಶೆಟ್ಟಿ ಸೇರಿದಂತೆ ನಿಮಿಕಾ ರತ್ನಾಕರ್, ಸಾನ್ಯ ಅಯ್ಯರ್, ಆರಾಧನಾ, ಶ್ರೀನಿವಾಸ್ ಮೂರ್ತಿ ಸೇರಿದಂತೆ ಹಲವು ಕನ್ನಡಿಗರನ್ನು ಸ್ಥಳೀಯ ಮಟ್ಟದಲ್ಲಿ ರಾಯಭಾರಿಗಳನ್ನಾಗಿ ನೇಮಿಸಿಕೊಂಡು, ಪ್ರಚಾರ ಮಾಡಲಾಗುತ್ತಿದೆ. ಮೈಸೂರ್ ಸ್ಯಾಂಡಲ್ ಸೋಪ್‌ಗೆ ರಾಜ್ಯದಲ್ಲಿ ಜನಪ್ರಿಯತೆ ಮತ್ತು ಖ್ಯಾತಿ ಈಗಾಗಲೇ ಹೆಚ್ಚಿನ ಮಟ್ಟದಲ್ಲಿದ್ದು, ಹೊಸ ಮಾರುಕಟ್ಟೆಯನ್ನು ಸೃಷ್ಟಿಸುವ ಉದ್ದೇಶದಿಂದ ರಾಯಭಾರಿಯನ್ನು ನೇಮಿಸಲಾಗುತ್ತಿದೆ. ಆದ್ದರಿಂದ ಪ್ಯಾನ್-ಇಂಡಿಯಾ ರಾಯಭಾರಿಯನ್ನಾಗಿ, ವಿದೇಶಕ್ಕೆ ಉತ್ಪನ್ನಗಳ ಮಾರಾಟ ವ್ಯಾಪ್ತಿಯನ್ನು ವಿಸ್ತರಿಸಲು ತಮನ್ನಾ ಭಾಟಿಯಾ ಅವರನ್ನು ಆಯ್ಕೆ ಮಾಡಲಾಗಿದೆ ಎನ್ನುವುದು ಅಧಿಕಾರಿಗಳ ಮಾತಾಗಿದೆ.

ಮುಂಬೈ ವಿವಿಯಲ್ಲಿ ಕನ್ನಡ ಅಧ್ಯಯನ ಆರಂಭವಾಗಿ 125 ವರ್ಷ: ಆರ್.ಗಣೇಶ್ ವಿಶೇಷ ಉಪನ್ಯಾಸ
ಡಾ.ಉಮಾ ರಾವ್ ಅವರ ಬಹುನೆಲೆಗಳ ಬೆರಗು ಕೃತಿ ಬಿಡುಗಡೆ, ಕನ್ನಡ ಸಾಹಿತ್ಯದ ಕುರಿತು ವಿಶೇಷ ಸಂವಾದ

ಮುಂಬೈ ವಿವಿಯಿಂದ ಶತಾವಧಾನಿ ಗಣೇಶ್‌ಗೆ ಸನ್ಮಾನ

ಮುಂಬೈ: ಒಂದು ದೇಶದ ಸಂಸ್ಕೃತಿಯ ದಾರ್ಢ್ಯವನ್ನು ಅರಿಯಬೇಕಾದರೆ ಅಲ್ಲಿಯ ಅಭಿಜಾತ ಸಾಹಿತ್ಯ ಎಷ್ಟರ ಮಟ್ಟಿಗೆ ನೆಲೆಯೂರಿದೆ ಎಂದು ನೋಡಬೇಕಾಗುತ್ತದೆ. ಅಭಿಜಾತ ಸಾಹಿತ್ಯವನ್ನು ಆಧುನಿಕ ದೇಶಗಳು ಕೂಡ ಕಾಪಾಡಿಕೊಂಡು ಬಂದಿವೆ ಎಂದು ಶತಾವಧಾನಿ ಆರ್.ಗಣೇಶ್ ಹೇಳಿದ್ದಾರೆ. ಮುಂಬೈ ವಿವಿಯಲ್ಲಿ ಕನ್ನಡ ಅಧ್ಯಯನ ಪೀಠ ಸ್ಥಾಪನೆಯಾಗಿ 125 ವರ್ಷಗಳು ಸಂದಿರುವ ಸಂಭ್ರಮದಲ್ಲಿ ಕನ್ನಡ ವಿಭಾಗವು ಫೆ.6ರಂದು ಕವಿ ಕುಸುಮಾಗ್ರಜ ಮರಾಠಿ ಭಾಷಾ ಭವನದಲ್ಲಿ ಆಯೋಜಿಸಿದ್ದ ವಿಶೇಷ ಉಪನ್ಯಾಸದಲ್ಲಿ ಅವರು 'ಅಭಿಜಾತ ಸಾಹಿತ್ಯದ ಆವಶ್ಯಕತೆ' ಎಂಬ ವಿಷಯದ ಕುರಿತು ಮಾತನಾಡಿದರು.

ಅಭಿಜಾತ ಸಾಹಿತ್ಯ ಜನಜೀವನದಲ್ಲಿ ಒಂದು ಮಟ್ಟದಲ್ಲಿ ಹಾಸುಹೊಕ್ಕಾಗಿದೆ. ಅಭಿಜಾತ ಕೃತಿಯ ಲಕ್ಷಣ ಏನೆಂದರೆ ಅದು ಹೇಳಬೇಕಾದುದನ್ನು ಎಂದೂ ಹೇಳಿ ಮುಗಿಸಿರುವುದಿಲ್ಲ. ಅನುಭವದಲ್ಲಿ ಹೊಸತನ್ನು ತಂದುಕೊಡುವುದು ಅಭಿಜಾತ ಸಾಹಿತ್ಯದ ಮುಖ್ಯ ಲಕ್ಷಣ. **ಒಂದು ಕೃತಿಗೆ ಕಾಲಪ್ರತಿಷ್ಠೆ ಬೇಕು;** ಅದು ಬಂದರೆ ಆ ಕೃತಿಗೆ ಆದರ ಬರುವುದು ಎಂದು ಅವಧಾನಿಗಳು ಹೇಳಿದ್ದಾರೆ.

ಅಭಿಜಾತ ಸಾಹಿತ್ಯ ಅನಾಥ ಪ್ರಜ್ಞೆಯನ್ನು ದೂರಗೊಳಿಸುತ್ತದೆ. ಅದು ನಿತ್ಯ ಸಾಹಚರ್ಯದಲ್ಲಿ ಇರುವಂಥದ್ದು. ಮಾನವ ಸ್ವಭಾವ ಕಾಲಾತೀತವಾಗಿ ಹೇಗೆ ಇರುತ್ತದೆ ಎನ್ನುವುದನ್ನು ಅಭಿಜಾತ ಸಾಹಿತ್ಯ ತಿಳಿಸುತ್ತದೆ. ಮಾನವರಲ್ಲಿ ಅನಿರೀಕ್ಷಿತವಾದದ್ದು ಇಲ್ಲ; ಎಲ್ಲವೂ ನಿರೀಕ್ಷಿತವೇ ಎನ್ನುವುದನ್ನು ಅಭಿಜಾತ ಸಾಹಿತ್ಯ ಹೇಳಿಕೊಡುತ್ತದೆ. ಅಭಿಜಾತ ಕೃತಿಗಳ ಮಗ್ನತೆ ಎಂದಿಗೂ ನಮ್ಮನ್ನು ಉಳಿಸುತ್ತದೆ. ಆ ಸಾಹಿತ್ಯವು ಸ್ವಲ್ಪವೂ ಕೊರತೆ ಇಲ್ಲದಂತೆ, ಖರ್ಚಿಲ್ಲದ ಆನಂದವನ್ನು ಕೊಡುವಂಥದ್ದು. ಅದೊಂದು ಕಣ್ಣಿಗೆ ಕಾಣದ ದೀಪ. ಅಭಿಜಾತ ಕೃತಿಗಳ ಮಹತ್ವವನ್ನು, ಅವುಗಳ ವಸ್ತು ವಿಷಯ ಪಾತ್ರ ಕತೆಗಳ ಮೂಲಕ ವಿಶ್ಲೇಷಿಸುವುದು ಮುಖ್ಯವಾಗುತ್ತದೆ ಎಂದು ಖ್ಯಾತ ಬಹುಶ್ರುತ ವಿದ್ವಾಂಸರೂ, 2026ರ ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರೂ ಆದ ಗಣೇಶ್ ನುಡಿದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ವಿಭಾಗದ ಮುಖ್ಯಸ್ಥರೂ, ಪ್ರಾಧ್ಯಾಪಕರೂ ಆದ ಪ್ರೊ.ಜಿ.ಎನ್.ಉಪಾಧ್ಯ ಅವರು ಮುಂಬೈ ವಿಶ್ವವಿದ್ಯಾಲಯದಲ್ಲಿ 1901ರಲ್ಲಿ ಕನ್ನಡ ಅಧ್ಯಯನಕ್ಕೆ ನಾಂದಿ ಹಾಡಲಾಯಿತು. ಇಲ್ಲಿಯ ಐವತ್ತಾರಕ್ಕಿಂತಲೂ ಹೆಚ್ಚು ಶೈಕ್ಷಣಿಕ ವಿಭಾಗಗಳಿಗೆ ಸರಿದೊರೆಯಾಗಿ ಕನ್ನಡ ವಿಭಾಗವು ಕೆಲಸ ಮಾಡುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ಡಾ.ಉಮಾ ರಾಮರಾವ್ ಅವರ ಪಿಎಚ್.ಡಿ ಮಹಾಪ್ರಬಂಧ 'ಬಹು ನೆಲೆಗಳ ಬೆರಗು' ಕೃತಿಯನ್ನು ಶತಾವಧಾನಿ ಡಾ.ಆರ್.ಗಣೇಶ್ ಅವರು ಬಿಡುಗಡೆಗೊಳಿಸಿದರು.

ಸಂಶೋಧನಾ ವಿದ್ಯಾರ್ಥಿ ಕಲಾ ಭಾಗವತ್ ಅವರು ಸ್ವಾಗತ ಗೀತೆಯನ್ನು ಹಾಡಿದರು. ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಪೂರ್ಣಿಮಾ ಶೆಟ್ಟಿ ಅವರು ಕಾರ್ಯಕ್ರಮವನ್ನು ಸಂಯೋಜಿಸಿ ನಿರೂಪಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಉಪನ್ಯಾಸಕರೊಂದಿಗೆ ಸಂವಾದ ಕಾರ್ಯಕ್ರಮವು ನಡೆಯಿತು.

ವಿಟಾಕೀಸ್

ಈ ವಾರ ತೆರೆಗೆ ಸೀತಾ ಪಯಣ

ನಟ ಅರ್ಜುನ್ ಸರ್ಜಾ ನಿರ್ಮಿಸಿ, ನಿರ್ದೇಶಿಸಿರುವ ಸೀತಾ ಪಯಣ ಚಿತ್ರ ಇದೇ ವಾರ ತೆರೆಗೆ ಬರಲಿದೆ. ನವಿರಾದ ಪ್ರೇಮಕಥೆಯ ಜತೆಗೆ ಕೌಟುಂಬಿಕ ಕಥೆಯೂ ಬೆರೆತಿರುವ ಈ ಚಿತ್ರದಲ್ಲಿ ಅರ್ಜುನ್ ಸರ್ಜಾ ಪುತ್ರಿ ಐಶ್ವರ್ಯಾ ನಾಯಕಿಯಾಗಿ ನಟಿಸಿದ್ದಾರೆ. ನಿರಂಜನ್ ನಾಯಕನಾಗಿ ಅಭಿನಯಿಸಿದ್ದಾರೆ. ಅರ್ಜುನ್ ಸರ್ಜಾ ಕೂಡ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ನಟ ಧ್ರುವ ಸರ್ಜಾ ಅತಿಥಿ ಪಾತ್ರದಲ್ಲಿ ನಟಿಸಿದ್ದಾರೆ. ಉಳಿದಂತೆ ಸತ್ಯರಾಜ್, ಪ್ರಕಾಶ್ ರೈ ಮತ್ತು ಕೋವೈ ಸರಳಾ ಅವರಂತಹ ದೊಡ್ಡ ಕಲಾವಿದರು ಸಿನಿಮಾದಲ್ಲಿ ಅಭಿನಯಿಸಿದ್ದಾರೆ. ಸೀತಾ ಪಯಣ ಈಗಾಗಲೇ ಟೀಸರ್, ಹಾಡುಗಳ ಮೂಲಕ ಸಿನಿಪ್ರಿಯರ ಮನಗೆದ್ದಿದೆ. ಅರ್ಜುನ್ ಸರ್ಜಾ ಅವರೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುವ ಜತೆಗೆ ಸಾಹಸ ನಿರ್ದೇಶನದ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ. ಅನೂಪ್ ರೂಬೆನ್ಸ್ ಸಂಗೀತ ನಿರ್ದೇಶನ, ಜಿ.ಬಾಲಮುರುಗನ್ ಛಾಯಾಗ್ರಹಣ, ಅಯೂಬ್ ಖಾನ್ ಸಂಕಲನ ಈ ಚಿತ್ರಕ್ಕಿದೆ. ಬಹು ನಿರೀಕ್ಷಿತ ಸೀತಾ ಪಯಣ ಪ್ಯಾನ್ ಇಂಡಿಯಾ ಸಿನಿಮಾವಾಗಿ ನಿರ್ಮಾಣವಾಗಿದ್ದು, ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ಬಿಡುಗಡೆಯಾಗಲಿದೆ.

ವೀರ ಕಂಬಳದಲ್ಲಿ ವೀರೇಂದ್ರ ಹೆಗ್ಗಡೆ

ಹಿರಿಯ ನಿರ್ದೇಶಕ ಎಸ್.ವಿ.ರಾಜೇಂದ್ರ ಸಿಂಗ್ ಬಾಬು ನಿರ್ದೇಶನದ ವೀರ ಕಂಬಳ ಚಿತ್ರ ತೆರೆಗೆ ಸಿದ್ಧವಾಗಿದೆ. ಈ ಹೊತ್ತಿನಲ್ಲಿ ಚಿತ್ರತಂಡ ವೀರ ಕಂಬಳದ ಒಡಲಿನಲ್ಲಿರುವ ಒಂದಷ್ಟು ವಿಶೇಷತೆಗಳ ಬಗ್ಗೆ ಹಂಚಿಕೊಂಡಿದೆ. ವೀರ ಕಂಬಳ ರೂಪುಗೊಂಡಿದ್ದರ ಹಿಂದೆ ದಶಕಗಳಷ್ಟು ಸುದೀರ್ಘವಾದ ಕಥನವಿದೆ. ಸರಿಸುಮಾರು ಏಳುನೂರು ವರ್ಷಗಳಷ್ಟು ಐತಿಹ್ಯವಿರುವ ಕಂಬಳದ ಬಗ್ಗೆ ಇಂಚಿಂಚು ಮಾಹಿತಿಯನ್ನು ಕಲೆಹಾಕಿರುವ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ಅವರು ಈ ಸಿನಿಮಾವನ್ನು ಅದ್ಭುತವಾಗಿ ನಿರ್ದೇಶಿಸಿದ್ದಾರೆ. ಇನ್ನೂ ವಿಶೇಷ ಎಂದರೆ ಚಿತ್ರದ ಪ್ರಮುಖ ಪಾತ್ರದಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರು ಬಣ್ಣ ಹಚ್ಚಿದ್ದಾರೆ. ಕಂಬಳದ ಇತಿಹಾಸ ಅರಿಯುತ್ತಾ ಹೋದಂತೆಲ್ಲ ಅದಕ್ಕೂ, ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರಿಗೂ ಇರುವ ಅವಿನಾಭಾವ ನಂಟಿನ ವಿಚಾರ ರಾಜೇಂದ್ರ ಸಿಂಗ್ ಬಾಬು ಅವರನ್ನು ಬೆರಗುಗೊಳಿಸಿತ್ತಂತೆ. ಹಾಗಾಗಿ ವೀರೇಂದ್ರ ಹೆಗ್ಗಡೆ ಅವರನ್ನು ಚಿತ್ರದಲ್ಲಿ ನಟಿಸುವಂತೆ ಕೇಳಿಕೊಂಡಿದ್ದಾರೆ. ನಿರ್ದೇಶಕರ ಮನವಿಗೆ ಒಪ್ಪಿದ ವೀರೇಂದ್ರ ಹೆಗ್ಗಡೆ ಅವರು ಚಿತ್ರದಲ್ಲಿ ಅಭಿನಯಿಸಲು ಸಂತಸದಿಂದಲೇ ಸಮ್ಮತಿಸಿದ್ದಾರೆ. ನಟ ಆದಿತ್ಯ, ಪ್ರಕಾಶ್ ರೈ, ರವಿಶಂಕರ್ ಪ್ರಧಾನ ಪಾತ್ರ ಗಳಲ್ಲಿ ನಟಿಸಿದ್ದು, ರಾಧಿಕಾ ಚೇತನ್ ವಿಶೇಷ ಪಾತ್ರಕ್ಕೆ ಜೀವ ತುಂಬಿದ್ದಾರೆ. ನವೀನ್ ಪಡೀಲ್, ಗೋಪಿನಾಥ್ ಭಟ್, ಭೋಜರಾಜ್ ವಾಮಂಜೂರು ಸೇರಿದಂತೆ ಪ್ರಸಿದ್ಧ ತುಳು ರಂಗಭೂಮಿ ಹಿನ್ನೆಲೆಯ ನಟರು ಸಿನಿಮಾದಲ್ಲಿ ಅಭಿನಯಿಸಿದ್ದಾರೆ. ವೀರ ಕಂಬಳ ಕನ್ನಡದ ಜತೆಗೆ ತುಳು ಭಾಷೆಯಲ್ಲಿಯೂ ಬಿಡುಗಡೆಯಾಗಲಿದೆ. ಬಾಬಾಸ್ ಬ್ಲೆಸಿಂಗ್ ಫಿಲಂಸ್ ಬ್ಯಾನರಿನಲ್ಲಿ ವೀರ ಕಂಬಳ ನಿರ್ಮಾಣವಾಗಿದ್ದು, ಡಾ.ವಿನಿತಾ ವಿಜಯ್ ಕುಮಾರ್ ರೆಡ್ಡಿ ಹಾಗೂ ಅರುಣ್ ರೈ ತೊಡಾರ್ ಒಟ್ಟಾಗಿ ಚಿತ್ರ ನಿರ್ಮಾಣ ಮಾಡಿದ್ದಾರೆ. ವಿಜಯ್ ಕೊಡಿಯಾಲ್ ಬೈಲ್ ಚಿತ್ರಕಥೆ ಸಂಭಾಷಣೆ ಬರೆದಿದ್ದು, ಮಣಿ ಕಾಂತ್ ಕದ್ರಿ ಸಂಗೀತ ಸಂಯೋಜಿಸಿದ್ದಾರೆ. ಆರ್.ಗಿರಿ ಛಾಯಾಗ್ರಹಣ, ಶ್ರೀನಿವಾಸ್.ಎಸ್.ಬಾಬು ಸಂಕಲನ, ಚಂದ್ರಶೇಖರ್ ಸುವರ್ಣ ಕಲಾ ನಿರ್ದೇ ಶನ ಈ ಚಿತ್ರಕ್ಕಿದೆ. ಇದೇ 27ರಂದು ವೀರ ಕಂಬಳ ಬಿಡುಗಡೆಯಾಗಲಿದೆ.

ತುಳುನಾಡಿನ ಮನರಂಜನೆಯ ಕ್ರೀಡೆಯಾಗಿದ್ದ ಕಂಬಳವನ್ನು ವೀರೇಂದ್ರ ಹೆಗ್ಗಡೆ ಅವರು ಎಪ್ಪತ್ತರ ದಶಕದಲ್ಲಿ ದೊಡ್ಡ ಮಟ್ಟದಲ್ಲಿ ಆಯೋಜಿಸಿದ್ದರು. ಆ ನಂತರ ಅದು ಬೇರೆ ಬೇರೆ ರೂಪಗಳಲ್ಲಿ ರೂಪಾಂತರ ಹೊಂದಿ ಇಡೀ ಕರುನಾಡನ್ನೇ ಸೆಳೆದುಕೊಂಡಿತು. ಈ ಕಾರಣದಿಂದಲೇ ವೀರೇಂದ್ರ ಹೆಗ್ಗಡೆ ಅವರು ಈ ಸಿನಿಮಾದಲ್ಲಿ ಮಹತ್ವದ ಪಾತ್ರ ಮಾಡಬೇಕೆಂಬ ಆಸೆಯೊಂದು ನನ್ನ ಮನದಲ್ಲಿ ಚಿಗುರಿತು. ಕಂಬಳದ ಬಗ್ಗೆ ವಿಶೇಷ ಪ್ರೀತಿ ಹೊಂದಿರುವ ಹೆಗ್ಗಡೆಯವರು ಚಿತ್ರದಲ್ಲಿ ನಟಸಲು ಒಪ್ಪಿಗೆ ಸೂಚಿಸಿದರು. ಚಿತ್ರದಲ್ಲಿನ ತಮ್ಮ ಪಾತ್ರಕ್ಕೆ ವೀರೇಂದ್ರ ಹೆಗ್ಗಡೆ ಅವರು ಜೀವ ತುಂಬಿದ್ದಾರೆ. ಅವರ ಪಾತ್ರ ವೀರ ಕಂಬಳದ ಆಕರ್ಷಣೆಗಳಲ್ಲಿ ಒಂದಾಗಿದೆ.

-ಎಸ್.ವಿ. ರಾಜೇಂದ್ರಸಿಂಗ್ ಬಾಬು

ಮೊದಲ ಹಂತ ಮುಗಿಸಿದ ಹುಬ್ಬಳ್ಳಿ ಹಂಟರ್ಸ್

ಕನ್ನಡದಲ್ಲಿ ಸೂಪರ್ ಹಿಟ್ ಆದ ಬೆಲ್ ಬಾಟಂ ಸಿನಿಮಾವನ್ನು ನಿರ್ಮಿಸಿದ ನಿರ್ಮಾಪಕ ಸಂತೋಷ್ ಕುಮಾರ್, ಈಗ ಮತ್ತೊಂದು ಹೊಸ ಚಿತ್ರದ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಉತ್ತರ ಕರ್ನಾಟಕದ ಸೊಗಡಿನ ಈ ಚಿತ್ರ ಹುಬ್ಬಳ್ಳಿ ಹಂಟರ್ಸ್ ಶೀರ್ಷಿಕೆಯಲ್ಲಿ ಮೂಡಿಬರುತ್ತಿದೆ. ಈ ಹಿಂದೆ ಎಡಗೈ ಅಪಘಾತಕ್ಕೆ ಕಾರಣ ಚಿತ್ರವನ್ನು ನಿರ್ದೇಶಿಸಿದ್ದ ಸಮರ್ಥ್.ಬಿ.ಕಡ್ಕೋಳ್, ಹುಬ್ಬಳ್ಳಿ ಹಂಟರ್ಸ್ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಹುಬ್ಬಳ್ಳಿಯಲ್ಲಿ ಮುಹೂರ್ತ ನೆರವೇರಿಸಿದ್ದ ಚಿತ್ರತಂಡ ಇದೀಗ ಮೊದಲ ಹಂತದ ಶೂಟಿಂಗ್ ಮುಗಿಸಿದೆ. ಹುಬ್ಬಳ್ಳಿ ಸುತ್ತಮುತ್ತ ಹದಿನಾಲ್ಕು ದಿನಗಳ ಕಾಲ ಚಿತ್ರೀಕರಣ ನಡೆಸಿದ್ದ ಚಿತ್ರತಂಡ ಮಾರ್ಚ್ ತಿಂಗಳಲ್ಲಿ ಎರಡನೇ ಹಂತದ ಶೂಟಿಂಗ್ ಆರಂಭಿಸಲು ಯೋಜನೆ ಹಾಕಿಕೊಂಡಿದೆ. ನಟ ಪ್ರಮೋದ್ ಶೆಟ್ಟಿ ಚಿತ್ರದ ನಾಯಕನಾಗಿ ನಟಿಸುತ್ತಿದ್ದು, ಮಹಾನಟಿ ಖ್ಯಾತಿಯ ಧನ್ಯ ಶ್ರೀ ಸುಜಿತ್ ನಾಯಕಿಯಾಗಿ ಅಭಿನಯಿಸುತ್ತಿದ್ದಾರೆ. ರಾಹುಲ್.ವಿ.ಪಾರ್ವತಿಕರ್, ಅಮಿತ್ ಮತ್ತು ಚೇತನ್ ಮರಂಬೀದ್ ಸಂಭಾಷಣೆ ಬರೆದಿದ್ದು, ಅಭಿಮನ್ಯು ಸದಾನಂದನ್ ಛಾಯಾಗ್ರಹಣದ ಜವಾಬ್ದಾರಿ ಹೊತ್ತಿದ್ದಾರೆ. ಚಿತ್ರದ ಹಾಡುಗಳಿಗೆ ಪ್ರಸನ್ನ ಕೇಶವ ಸಂಗೀತ ಸಂಯೋಜಿಸುತ್ತಿದ್ದಾರೆ. ಗೋಲ್ಡನ್ ಹಾರ್ಸ್ ಸಿನಿಮಾ ಬ್ಯಾನರ್‌ನಲ್ಲಿ, ಹುಬ್ಬಳ್ಳಿ ಹಂಟರ್ಸ್ ಅದ್ದೂರಿಯಾಗಿ ನಿರ್ಮಾಣವಾಗುತ್ತಿದೆ. ಇದೊಂದು ಥ್ರಿಲ್ಲರ್ ಸ್ಟೋರಿಯಾಗಿದ್ದು ನಟ ಪ್ರಮೋದ್ ಶೆಟ್ಟಿ ಹಿಂದೆಂದೂ ಕಾಣದ ಲುಕ್‌ನಲ್ಲಿ ಕಂಗೊಳಿಸಿದ್ದಾರೆ.

ಸೆಕೆಂಡ್ ಕೇಸ್ ಹಿಡಿದು ಬಂದ ಸೀತಾರಾಮ್

ಸಸ್ಪೆನ್ಸ್ ಕಥೆಗಳನ್ನು ರೋಮಾಂಚಕವಾಗಿ ತೆರೆಯಲ್ಲಿ ಕಟ್ಟಿಕೊಡುವಲ್ಲಿ ನಿರ್ದೇಶಕ ದೇವಿ ಪ್ರಸಾದ್ ಶೆಟ್ಟಿ ಯಶಸ್ವಿಯಾಗಿದ್ದಾರೆ. ಈಗ ಸೆಕೆಂಡ್ ಕೇಸ್ ಆಫ್ ಸೀತಾರಾಮ್ ಮೂಲಕ ಮತ್ತೊಂದು ಸಸ್ಪೆನ್ಸ್ ಸ್ಟೋರಿಯನ್ನು ಹೇಳಹೊರಟ್ಟಿದ್ದಾರೆ. ಸೆಕೆಂಡ್ ಕೇಸ್ ಆಫ್ ಸೀತಾರಾಮ್ ಚಿತ್ರದ ಟ್ರೇಲರ್ ರಿಲೀಸ್ ಆಗಿದ್ದು ಕುತೂಹಲವನ್ನು ದುಪ್ಪಟ್ಟುಗೊಳಿಸಿದೆ. ಈ ಹಿಂದೆ ತೆರೆಗೆ ಬಂದಿದ್ದ ಸೀತಾರಾಮ್ ಬಿನೋಯ್ ಕೇಸ್ ನಂಬರ್ 18 ಚಿತ್ರದ ಸೀಕ್ವೆಲ್ ಇದಾಗಿದೆ. ವಿಜಯ್ ರಾಘವೇಂದ್ರ ಚಿತ್ರದ ನಾಯಕನಾಗಿ ನಟಿಸಿದ್ದು, ಮತ್ತೊಮ್ಮೆ ಪೊಲೀಸ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇಲ್ಲಿಯೂ ಹೊಸ ಪ್ರಕರಣವನ್ನು ಭೇದಿಸಲು ಹೊರಟಿದ್ದಾರೆ.

ಸೀತಾರಾಮ್ ಬಿನೋಯ್ ನನ್ನ ವೃತ್ತಿ ಜೀವನಕ್ಕೆ ಶಕ್ತಿ ತುಂಬಿದ ಸಿನಿಮಾ. ಆನಂತರ ಕೇಸ್ ಆಫ್ ಕೊಂಡಾಣ ಮಾಡಿದೆವು. ಈಗ ಇನ್ನೊಂದು ಸೀತಾರಾಮ್ ಕಥೆ ಯನ್ನು ಹೇಳುತ್ತಿದ್ದೇವೆ. ನಿರ್ದೇಶಕರು ಒಳ್ಳೆಯ ಕಥೆ ಮಾಡಿಕೊಂಡಿದ್ದು, ಅದನ್ನು ತೆರೆಯಲ್ಲಿ ಅದ್ಭುತವಾಗಿ ನಿರೂಪಿಸಿದ್ದಾರೆ. ಈ ಸಿನಿಮಾ ಪ್ರೇಕ್ಷಕರನ್ನು ಸೆಳೆಯಲಿದೆ. ಚಿತ್ರಕ್ಕೆ ಸಂಗೀತವೇ ಜೀವಾಳವಾಗಿದೆ ಎಂದು ವಿಜಯ್ ರಾಘವೇಂದ್ರ ಹೇಳಿದರು. ಸೀತಾರಾಮ್ ಬಿನೋಯ್ ಟ್ರೆಂಡ್ ಸೆಟ್ ಮಾಡಿದ ಚಿತ್ರ. ಸಿನಿಮಾದ ಕಥೆ, ನಿರೂಪಣೆ ಎಲ್ಲವೂ ಅದ್ಭುತವಾಗಿತ್ತು. ಅದರ ಮುಂದುವರಿದ ಭಾಗವಾಗಿ ಸೆಕೆಂಡ್ ಕೇಸ್ ಆಫ್ ಸೀತಾರಾಮ್ ಸಿದ್ಧವಾಗಿದೆ. ಸಿನಿಮಾವನ್ನು ತುಂಬಾ ಇಷ್ಟಪಟ್ಟು ಮಾಡಿದ್ದಾರೆ. ಟ್ರೇಲರ್‌ನಲ್ಲಿ ಅದ್ದೂರಿತನ ಕಾಣುತ್ತಿದೆ. ಈ ಚಿತ್ರವನ್ನು ಪ್ರೆಸೆಂಟ್ ಮಾಡಲು ತುಂಬಾ ಖುಷಿ ಇದೆ. ಬೇರೆ ಭಾಷೆಗಳ ಸಸ್ಪೆನ್ಸ್ ಸಿನಿಮಾಗಳಿಗೆ ಹೋಲಿಕೆ ಮಾಡಿದರೆ ಈ ಚಿತ್ರ ಒಂದು ಹೆಜ್ಜೆ ಮುಂದೆ ಇದೆ ಎಂದು ಸಿನಿಮಾವನ್ನು ಅರ್ಪಿಸುತ್ತಿರುವ ನಿರ್ದೇಶಕ ಪವನ್ ಒಡೆಯರ್ ಸಂತಸದಿಂದ ನುಡಿದರು. ದೇವಿ ಪ್ರಸಾದ್ ಶೆಟ್ಟಿ ಚಿತ್ರವನ್ನು ನಿರ್ದೇಶನ ಮಾಡುವ ಜತೆಗೆ ನಿರ್ಮಾಣಕ್ಕೂ ಕೈ ಜೋಡಿಸಿದ್ದಾರೆ. ಹೇಮಂತ್ ಆಚಾರ್ಯ ಛಾಯಾಗ್ರಹಣ ಹಾಗೂ ನವನೀತ ಸಂಗೀತ ನಿರ್ದೇಶನ, ಶಶಾಂಕ್ ಸಂಕಲನ ಈ ಚಿತ್ರಕ್ಕಿದೆ. ಸೆಕೆಂಡ್ ಕೇಸ್ ಆಫ್ ಸೀತಾರಾಮ್ ಇದೇ 20ರಂದು ತೆರೆಗೆ ಬರಲಿದೆ.

ವಿಶ್ವವಾಣಿ 12-02-2026 ಗುರುವಾರ @vishwavaninews
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ತವಿಹಾರ

ಸೋಲೇ ಗೆಲುವಾಗುವ ಹಾದಿ

• ವಿದ್ಯಾಶಂಕರ ಶರ್ಮ

ಸೋಲನ್ನು ಒಪ್ಪಿಕೊಳ್ಳುವುದು ಯಾರಿಗೂ ಕೂಡಾ ಎಂದಿಗೂ ಇಷ್ಟವಾಗದ ವಿಷಯ. ನಮ್ಮ ಎಲ್ಲ ನಡೆಗಳ ಗಮ್ಯವೂ ಗೆಲುವೇ ಆಗಿದೆ. ದೊರೆತ ಜಯದಿಂದ ಸಂತಸದ ಅನುಭವ, ಮತ್ತೆ ಇನ್ನೊಂದು ವಿಜಯದ ನಿರೀಕ್ಷೆ ಹೀಗೆ ಬದುಕು ಮುಂದುವರೆಯುತ್ತದೆ. ಸೋಲಿನ ಅನುಭವವು ನಮ್ಮನ್ನು ನಿರಾಶರನ್ನಾಗಿ ಮಾಡುತ್ತದೆ. ಅದಕ್ಕೆ ಕಾರಣಗಳನ್ನು ಹುಡುಕುತ್ತ ವ್ಯರ್ಥ ಪ್ರಲಾಪದಲ್ಲಿ ನಮ್ಮ ಸಮಯವನ್ನು ಹಾಳುಮಾಡಿಕೊಳ್ಳುವ ಸನ್ನಿವೇಶಗಳು ನಮ್ಮ ಬದುಕಿನಲ್ಲಿ ಬಹು ಸಾಮಾನ್ಯವಾದ ಸಂಗತಿಯಾಗಿದೆ. ಆದರೆ ನಮ್ಮ ಕೆಲವು ಸೋಲುಗಳು ನಿಜವಾಗಿ ನಮ್ಮ ಗೆಲುವಾಗಿರುತ್ತವೆ.

ಹಿರಿಯರ ನುಡಿಯೊಂದಿದೆ-'ದುಷ್ಟರಿಂದ ದೂರವಿರು'. ನಮ್ಮ ಸೋಲು-ಗೆಲುವಿನ ಪಂದ್ಯದಲ್ಲಿ ನಮ್ಮ ಎದುರಾಳಿಗಳು ಎಂಥವರು ಎನ್ನುವುದು ಬಹು ಮುಖ್ಯವಾಗುತ್ತದೆ. ಒಮ್ಮೊಮ್ಮೆ ನಮಗೆ ಇಷ್ಟವಿಲ್ಲದ ಪ್ರತಿಸ್ಪರ್ಧಿಗಳು ನಮಗೆ ಎದುರಾಗಿಬರಬಹುದು. ಅವರು ದುಷ್ಟರಾಗಿರಬಹುದು, ಸಮಾಜಘಾತುಕ ಶಕ್ತಿಗಳಾಗಿರಬಹುದು, ಅಧಿಕಾರ, ಸಂಪತ್ತುಗಳ ಪ್ರಭಾವವನ್ನು ಹೊಂದಿರುವವರಾಗಿರಬಹುದು. ಆಗ ನಮಗೆ ಸೋಲು ಕಟ್ಟಿಟ್ಟ ಬುತ್ತಿಯಾಗುವ ಸಾಧ್ಯತೆಗಳು ಬಲು ಹೆಚ್ಚು. ಆದರೆ ಅದು ನಮ್ಮ ನಿಜವಾದ ಸೋಲಲ್ಲ, ಅದು ನಮ್ಮ ಗೆಲುವೇ ಎಂಬುದು ವಿವೇಕವನ್ನು ಉಪಯೋಗಿಸಿ ನೋಡಿದಾಗ ನಮಗೆ ಸ್ಪಷ್ಟವಾಗುತ್ತದೆ. ಈ ಮೊದಲು ಉದಾಹರಿಸಿದ ನಾಣ್ಣುಡಿಯು ಇಲ್ಲಿ ಬಹು ಪ್ರಸ್ತುತವಾಗುತ್ತದೆ. ದುಷ್ಟತನದ ಎದುರು ನಮ್ಮ ಸೋಲುಗಳು ಗೆಲುವುಗಳೇ, ಏಕೆಂದರೆ ನಮ್ಮ ಎದುರಾಳಿಯಿಂದ ಆಗಬಹುದಾದ ಅಪಾಯಗಳನ್ನು ನಾವು ನಿವಾರಿಸಿಕೊಂಡು ಹೊಸ ಅವಕಾಶಗಳನ್ನು ಪಡೆಯುವ ಗೆಲುವು ಅದಾಗಿರುತ್ತದೆ. 'ಬೀಸುವ ದೊಣ್ಣೆಯನ್ನು ತಪ್ಪಿಸಿಕೊಂಡರೆ, ಸಾವಿರ ವರ್ಷ ಆಯಸ್ಸು' ಎಂಬಂತೆ ನಮ್ಮ ಒಂದು ದಿನದ ಸೋಲು, ಮುಂದೆ ನಮಗೆ ಗೆಲುವಾಗಿ ಪರಿಣಮಿಸುತ್ತದೆ.

ಮಾನವ ಸಂಬಂಧಗಳಲ್ಲಿ ಎಲ್ಲವೂ ಸುಲಲಿತವೆಂದೇನೂ ಇಲ್ಲ, ಅವು ಅನೇಕ ಸಿಕ್ಕುಗಳನ್ನು ಹೊಂದಿವೆ. ಕೆಲವು ಬಾರಿ ನಮಗೆ ಇನ್ನೊಬ್ಬರ ಮಾತಿನಿಂದ ಸದಾ ನೋವು, ತಾತ್ಸಾರ, ಕೊಂಕುತನದ ಅನುಭವಗಳೇ ಆಗಿರಬಹುದು. ಅವರ ಜತೆಗಿನ ಸಂವಾದದಲ್ಲಿ ನಮಗೆ ಸದಾ ಸೋಲಿನ ಭಾವವೇ ಕಾಡುತ್ತದೆ. ಅಂತಹ ಸಂಭಾಷಣೆಗಳನ್ನು ಸಾಧ್ಯವಾದಷ್ಟು ಕಡಿಮೆ ಮಾಡಿಕೊಂಡರೆ ಅಥವಾ ಅವರನ್ನು ದೂರವಿಟ್ಟರೆ ಅದು ನಮ್ಮ ಗೆಲುವಾಗಿ ಬದಲಾಗುತ್ತದೆ. ಜಯ ಎಂಬುದು ನಮಗೆ ಶಾಂತಿ ಮತ್ತು ಸಮಾಧಾನಗಳನ್ನು ನೀಡಬೇಕೆ ವಿನ: ಅದರ ಗಳಿಕೆಯಲ್ಲಿ ನಮ್ಮ ಮನಸ್ಥಿತಿ ಕಲಕಿದ ಕೊಳವಾಗಬಾರದು. ಅಂತಹ ಗೆಲುವಿನಿಂದ ಪ್ರಯೋಜನವಾದರೂ ಏನು? ಮನ ಕಲಕುವ ಮಾತುಗಳಿಂದ ದೂರವಾಗುವ ಸೋಲಿನ ಮೂಲಕ ನಮ್ಮ ಗೆಲುವಿನ ಕೋಟೆಯನ್ನು ಕಟ್ಟುವ ಪರಿ ಇದಾಗಿದೆ.

ಬದುಕಿನ ಓಟದಲ್ಲಿ ಸೋಲು ನಿಶ್ಚಿತವೆಂದು ಮೊದಲೇ ಗೊತ್ತಾಗುವ ಸನ್ನಿವೇಶಗಳೂ ಕೂಡ ನಮ್ಮೆದುರು ಬರುತ್ತವೆ. ಆಗ ಸ್ಪರ್ಧೆಯಿಂದ ಹಿಂದಕ್ಕೆ ಸರಿಯುವುದೇ ನಮ್ಮ ಗೆಲುವಾಗಿರುತ್ತದೆ. ಜರಾಸಂಧನ ಸೈನ್ಯವು ಭಾರೀ ಬಲದಿಂದ ಮಥುರಾ ಪಟ್ಟಣಕ್ಕೆ ಬರುವುದು ತಿಳಿದ ಶ್ರೀಕೃಷ್ಣನು ಜರಾಸಂಧನ ಅಪಾರ ಬಲವನ್ನು ಸೋಲಿಸಲು ಈಗ ಸಕಾಲವಲ್ಲ ಎಂದು ಅರಿತು, ಯಾದವರನ್ನು ದ್ವಾರಕೆಗೆ ಕರೆದೊಯ್ಯುತ್ತಾನೆ. ಇದು ಮೇಲ್ನೋಟಕ್ಕೆ ಪಲಾಯನ ಎನಿಸಿದರೂ, ಇದರ ಹಿಂದಿರುವ ರಾಜತಾಂತ್ರಿಕ ಗೆಲುವನ್ನು ಅರಿತಾಗ ಸೋಲೇ ಗೆಲುವಿಗೆ ಸೋಪಾನವಾಗಿ ಮಾರ್ಪಟ್ಟಿರುವುದು ಕಂಡುಬರುತ್ತದೆ. ಕೆಲವು ಹೆಜ್ಜೆಗಳ ಹಿಂತೆಗೆತ ನಮ್ಮ ಹೊಸ ಓಟದ ಪ್ರಾರಂಭವಾಗಿದೆ.

ಗೆಲುವು ಸದಾ ನಮ್ಮದಾಗಬೇಕು ಎಂಬ ಹಠ ನಮಗೆ ಒಳಿತನ್ನು ತರುವದಕ್ಕಿಂತ ಕೆಡುಕಾಗಿ ಸಂಭವಿಸಬಹುದು. ಜಯವನ್ನು ಪಡೆಯಬೇಕೆಂಬ ಒತ್ತಡವೇ ನಮಗೆ ಸೋಲನ್ನು ತರಬಹುದು, ಹಾಗಾಗಿ ಸೋಲನ್ನು ಒಂದು ಅಪರಾಧವೆಂಬಂತೆ ನೋಡುವ ನಮ್ಮ ದೃಷ್ಟಿಕೋನವನ್ನು ಬದಲಿಸಿಕೊಳ್ಳಬೇಕಾಗಿದೆ. ಸೋಲು ಮತ್ತು ಗೆಲುವುಗಳು ಒಂದೇ ನಾಣ್ಯದ ಎರಡು ಮುಖಗಳು ಎಂಬ ಸತ್ಯವನ್ನು ನಾವು ಸದಾ ಮನದಲ್ಲಿ ಸ್ಮರಿಸುತ್ತಿರಬೇಕು. ಇಂದಿನ ದಿನಗಳಲ್ಲಿ ಜನರು ಚಿಕ್ಕ ಸೋಲುಗಳಿಗೆ ಜರ್ಜರಿತರಾಗುವ ಉದಾಹರಣೆಗಳನ್ನು ನಾವು ಕಾಣುತ್ತಿದ್ದೇವೆ. ನಮ್ಮ ಚಿಂತನೆಗಳಲ್ಲಿ ಉತ್ತಮ ಮೌಲ್ಯಗಳ ಕೊರತೆ ಕೂಡ ಸೋಲನ್ನು ಸಮಭಾವದಿಂದ ಸ್ವೀಕರಿಸುವ ಮನಸ್ಥಿತಿಯಿಂದ ನಮ್ಮನ್ನು ವಂಚಿಸುತ್ತಿದೆ. ಸೋಲು ಮತ್ತು ಗೆಲುವುಗಳನ್ನು ಬದುಕಿನ ಸಹಜ ಭಾಗಗಳಾಗಿ ನೋಡಿದಾಗ ನಮ್ಮಲ್ಲಿನ ದ್ವಂದ್ವತೆ ದೂರವಾಗಿ ಮನಸ್ಸು ಸ್ಥಿರತೆಯನ್ನು ಪಡೆಯುತ್ತದೆ.



ಪುಸ್ತಕ ಓದುವ ಹವ್ಯಾಸ ಬದುಕಿಗೊಂದು ದಾರಿದೀಪ

• ಅಂಜಿನಪ್ಪ ಡಿ. ಕೊಟ್ಟೂರು

ಇಂದಿನ ಆಧುನಿಕತೆ ಎಂಬುದು ಹಲವು ತಲ್ಲಣಗಳ ಕಾಲ, ಕೃತಕ ಬುದ್ಧಿಮತ್ತೆಯ ಯುಗ. ಈ ಸಂದರ್ಭದಲ್ಲಿ ಮನುಷ್ಯನು ಸಂವೇದನಾಶೀಲತೆಯ ಪೊರೆಯನ್ನು ಕಳಚಿಕೊಂಡು, ಯಾಂತ್ರಿಕತೆಯ ಮೋಹದ ಬಲೆಯಲ್ಲಿ ಸಿಕ್ಕಿಕೊಂಡು, ದಿನೇ ದಿನೇ ಕುಬ್ಜನಾಗುತ್ತಿದ್ದಾನೆ, ಅಲ್ಲದೆ ಯಾವುದೇ ಸೃಜನಶೀಲತೆ ಇಲ್ಲದೆ ನಿಂತ ನೀರಾಗುತ್ತಿದ್ದು, ಮನುಷ್ಯ ಸಹಜವಾಗಿರುವ ಕುತೂಹಲ ಮತ್ತು ಕಾಳಜಿ ಎರಡರಿಂದ ದೂರವಾಗುತ್ತಿದ್ದಾನೆ. ಇಂದಿನ ಮಕ್ಕಳು ಮತ್ತು ಯುವ ಪೀಳಿಗೆ, ಪುಸ್ತಕ ಓದುವ ಸಂಸ್ಕೃತಿಯಿಂದ ವಿಮುಖರಾಗುತ್ತಿದ್ದು ಬದುಕಿನ ಪ್ರತಿಕ್ಷಣವೂ ಗ್ಯಾಜೆಟ್ ಲೋಕದಲ್ಲಿ ಮಿಂದೇಳುತ್ತಿದ್ದಾರೆ.

ಪುಸ್ತಕವೆಂದರೆ ಕೇವಲ ಕಾಗದದ ಹಾಳೆಗಳಲ್ಲ, ಅವುಗಳು ಅನುಭವಗಳ ಜ್ಞಾನ ಮತ್ತು ಜೀವನದ ಪಾಠಗಳ ಆಗರ. ಪುಸ್ತಕಗಳು ಬರೀ ಜ್ಞಾನ ಭಂಡಾರವಲ್ಲ, ಅವು ಯುವಕರಿಗೆ ಮತ್ತು ಮಕ್ಕಳಿಗೆ ಸ್ಫೂರ್ತಿ ತುಂಬಿ ತಮ್ಮನ್ನು ತಾವು ಅರಿತುಕೊಳ್ಳುವಂತೆ ಮಾಡಿ, ಉತ್ತಮ ಬದುಕಿಗೆ ಮಾರ್ಗದರ್ಶನ ನೀಡುವ ದಾರಿದೀಪಗಳಾಗಿವೆ.

'ಓದಿದ ಓದು ತಾ ಮೇದ ಕಬ್ಬಿನ ಸಿಪ್ಪೆ, ಓದಿನ ಒಡಲ ನರಿದಿಹರೆ ಸಿಪ್ಪೆ, ಕಬ್ಬಾದಂತೆ ಕಾಣ ಸರ್ವಜ್ಞ'-ಈ ವಚನದ ನುಡಿಯಂತೆ, ಓದಿನ ಒಡಲನ್ನು ಅರಿತರೆ, ಸಿಪ್ಪೆಯು ಕೂಡ ಕಬ್ಬಿನಂತೆ ಸಿಹಿಯಾಗುತ್ತದೆ. ನಮ್ಮ ನಾಡಿನಲ್ಲಿ ಬರಹಗಾರರಿಗೆ ಏನು ಕೊರತೆ ಇಲ್ಲ, ಆದರೆ ಓದುಗ ಸಹೃದಯನು ದಿನೇ, ದಿನೇ ಓದಿನ ಸಂಸ್ಕೃತಿಯಿಂದ ದೂರ ಸರಿಯುತ್ತಿದ್ದು, ಪುಸ್ತಕ ಪ್ರೀತಿ ಸೊರಗುತ್ತಿದೆ. ಪ್ರಾಚೀನ ಕವಿ ಜನ್ನನ್ನು ಹೇಳುವಂತೆ 'ಕಟ್ಟಿಯುಮೇಣ್ ಮಾಲೆಗಾರನ ಪೊಸ ಬಾಸಿಂಗಂ ಮುಡಿಯುವ ಭೋಗಿಗಳಿಲಿದೆ ಬಾಡಿ ಪೋಗುದೆ?' ಎನ್ನುವಂತೆ ಸಾಹಿತ್ಯವು ಸಹ ಹೃದಯ ಓದುಗರಿಲ್ಲದೆ ಬಾಡಿ ಹೋಗುತ್ತಿದೆ.

ಪುಸ್ತಕವೆಂದರೆ ಕೇವಲ ಕಾಗದದ ಹಾಳೆಗಳಲ್ಲ, ಅವುಗಳು ಅನುಭವಗಳ ಜ್ಞಾನ ಮತ್ತು ಜೀವನದ ಪಾಠಗಳ ಆಗರ. ಹೊಸ ಪ್ರಪಂಚದ ಬಾಗಿಲುಗಳು ಅವುಗಳಾಗಿದೆ. ಪುಸ್ತಕಗಳು ನಮಗೆ ಉತ್ತಮ ಸಂಗಾತಿಗಳು ಹೌದು, ಹೊಸ ಜಗತ್ತಿನ ಕಿಟಕಿಗಳಂತಿದ್ದು, ಮನುಷ್ಯನ ಜೀವನವನ್ನು ಬದಲಾಯಿಸುವ ಶಕ್ತಿಯನ್ನು ಹೊಂದಿವೆ. ರೋಮನ್ ಶ್ರೇಷ್ಠ ತತ್ವಜ್ಞಾನಿ ಸಿಸಿರೋ ಹೀಗೆ ಅಂದಿದ್ದಾನೆ, 'ಗ್ರಂಥವಿಲ್ಲದ ಕೋಣೆ ಆತ್ಮವಿಲ್ಲದ ದೇಹವಿದ್ದಂತೆ'.

ಪುಸ್ತಕಗಳು ಜ್ಞಾನದ ಖಜಾನೆ, ನಮ್ಮ ಕಲ್ಪನಾ ಶಕ್ತಿ ಮತ್ತು ವಿಮಾರ್ಶತ್ಮಕ ಚಿಂತನೆಯನ್ನು ಹೆಚ್ಚಿಸುತ್ತವೆ. ವ್ಯಕ್ತಿತ್ವ ವಿಕಸನಕ್ಕೆ ಸಹಾಯ ಮಾಡುವುದಲ್ಲದೆ ಸಂವಹನ ಕೌಶಲಗಳನ್ನು ಸುಧಾರಿಸುತ್ತದೆ. ಡಾ. ಬಿ.ಆರ್.ಅಂಬೇಡ್ಕರ್‌ರವರ ನುಡಿಯಂತೆ ಆಹಾರವು ನಿಮ್ಮನ್ನು ಜೀವಂತವಾಗಿರಿಸಿದರೆ, ಪುಸ್ತಕವು ಹೇಗೆ ಜೀವಿಸಬೇಕೆಂದು ಕಲಿಸುತ್ತದೆ ಎಂದು ಹೇಳಿದ್ದಲ್ಲದೆ ಜ್ಞಾನದ ಮೂಲಗಳೆಂದು ಪರಿಗಣಿಸಿದ್ದಾರೆ. ಮುಂಬೈನ ರಾಜಗೃಹ ಮನೆಯಲ್ಲಿದ್ದಾಗ ಸುಮಾರು ಐವತ್ತು ಸಾವಿರ ಪುಸ್ತಕಗಳನ್ನ ಸಂಗ್ರಹಿಸಿದ್ದರಂತೆ. ಇದು ಅಂಬೇಡ್ಕರ್ ಅವರ ಪುಸ್ತಕ ಪ್ರೇಮವನ್ನು ಸೂಚಿಸುತ್ತದೆ.

'ಇಂದಿನ ಓದುಗ ನಾಳೆಯ ನಾಯಕ' ಎಂಬಂತೆ ಪುಸ್ತಕಗಳು ಮೆದುಳಿಗೆ ಉತ್ತಮ ಆಹಾರಗಳು. ಓದು, ಆಲೋಚನೆಗಳ ದಿಕ್ಕನ್ನು ಬದಲಿಸಿ, ಭಾವನೆಗಳನ್ನು ಅಭಿವ್ಯಕ್ತಿಗೊಳಿಸಲು ಸಹಾಯ ಮಾಡುತ್ತವೆ. ಇದರಿಂದಾಗಿ ಮನುಷ್ಯನಲ್ಲಿ ಪರ್ಯಾಯ ದೃಷ್ಟಿಕೋನ, ಒಳನೋಟಗಳು ಲಭಿಸುವಂತೆ ಮಾಡಿ ವ್ಯಕ್ತಿಯ ಭವಿಷ್ಯದ ದಿಕ್ಸೂಚಿಗಳಾಗಿ ಮಾರ್ಗದರ್ಶನ ನೀಡುತ್ತವೆ.

'ದೇಶ ಸುತ್ತು, ಕೋಶ ಓದು' ಎಂಬ ಗಾದೆಮಾತಿನಂತೆ, ಇಡೀ ಪ್ರಪಂಚ ಸುತ್ತುವುದು ಅಸಾಧ್ಯ, ಆದರೆ ಪುಸ್ತಕದ ಮೂಲಕ ಇಡೀ ಜಗತ್ತಿನ ಪರಿಚಯ ಮಾಡಿಕೊಳ್ಳಬಹುದಾಗಿದೆ. ಪುಸ್ತಕ ಓದುವುದರಿಂದ ಭಾಷೆ, ಸಾಹಿತ್ಯ, ಸಂಸ್ಕೃತಿ, ಆಚಾರ, ವಿಚಾರಗಳ ಪರಿಚಯವಾಗುತ್ತದೆ. ಇತಿಹಾಸ ತಿಳಿಯದವನು ಇತಿಹಾಸ ಸೃಷ್ಟಿಸಲಾರ ಎಂಬಂತೆ ಭೂತ ಮತ್ತು ಭವಿಷ್ಯತ್ತಿನ ವಿಚಾರಗಳನ್ನು ತಿಳಿದುಕೊಳ್ಳಲು ಪುಸ್ತಕಗಳು ಸಹಾಯಕವಾಗುತ್ತವೆ. ಇತಿಹಾಸ, ಭೂಗೋಳ, ರಾಜಕೀಯ, ತತ್ವಶಾಸ್ತ್ರ, ಮೀಮಾಂಸೆ, ವೇದ, ಉಪನಿಷತ್ತು, ಭಗವದ್ಗೀತೆ, ಆತ್ಮಕಥೆ ಜೀವನ ಚರಿತ್ರೆ, ಹೀಗೆ ಒಂದೊಂದು ಪುಸ್ತಕಗಳು ಒಂದೊಂದು ವಿಚಾರವನ್ನು ತಿಳಿಸುತ್ತಾ, ಜ್ಞಾನ ವಿಸ್ತಾರ ಮಾಡುತ್ತವೆ. ಇಂತಹ ಪುಸ್ತಕಗಳನ್ನು ಓದುವುದರಿಂದ ಮನಸ್ಸು ಪ್ರಫುಲ್ಲಗೊಂಡು ಹೊಸ ಶಬ್ದಭಂಡಾರ ನಮ್ಮನ್ನು ಆವರಿಸಿಕೊಳ್ಳುತ್ತದೆ ಮತ್ತು ವಾಸ್ತವಿಕತೆಯ ಪರಿಚಯ ಉಂಟಾಗುತ್ತದೆ.

ಆದರೆ ಇಂದು ಓದುಗರ ಸಂಖ್ಯೆ ದಿನೇ ದಿನೇ ಗಣನೀಯವಾಗಿ ಕುಸಿತ ಕಾಣುತ್ತಿದೆ. ಗ್ರಂಥಾಲಯಗಳು ಓದುಗರಿಲ್ಲದೆ ಸೊರಗುತ್ತಿದ್ದು, ಪುಸ್ತಕಗಳು ಪ್ರದರ್ಶನಕ್ಕೆ ಇಟ್ಟು ವಸ್ತುಗಳಂತೆ ಕಾಣುತ್ತಿದ್ದು ಓದುಗ ಸಹೃದಯನಿಲ್ಲದೆ ಕಪಾಟಿನಲ್ಲಿ ನೋವಿನಿಂದ ನಲುಗುತ್ತಿವೆ. ಒಂದು ಪುಸ್ತಕಕ್ಕೆ ಮೌಲ್ಯ ಬರಬೇಕಾದರೆ ಅದಕ್ಕೆ ಓದುಗ ಸಹೃದಯನಿರಲೇಬೇಕು. ಆದಿಕವಿ ಪಂಪನು ಹೇಳುವಂತೆ 'ಸಹೃದಯನ ಇಲ್ಲದಿದ್ದರೆ ಕೋಗಿಲೆ ಸ್ವರ ಅರಣ್ಯದೊಳು ಏಗೈದಂತೆ ಅರಣ್ಯದೋಳು ಕೋಗಿಲೆ ಇಂಪಾಗಿ ಹಾಡಿದರೆ ಅದನ್ನು ಕೇಳಿಸಿಕೊಳ್ಳುವವರಾರು?' ಕವಿ ಹೃದಯ ಕಾವ್ಯವಾಗಿ ಹರಿದು, ಸಹೃದಯನ ಹೃದಯದಲ್ಲಿ ನೆಲೆಸಿದಾಗಲೇ ಕಾವ್ಯಕ್ಕೆ ಸಾರ್ಥಕತೆ ದೊರೆಯುತ್ತದೆ.

ಇಂದಿನ ಮಕ್ಕಳು ಮತ್ತು ಯುವ ಜನತೆಯಲ್ಲಿ ಓದುವ ಸಂಸ್ಕೃತಿ ಬೆಳೆಸಬೇಕಿದೆ. ಮನೆಯಲ್ಲಿ ಹಿರಿಯರು ಟಿ.ವಿ ಮತ್ತು ಮಾಧ್ಯಮಗಳಿಂದ ದೂರವಿದ್ದು, ತಾವು ಪುಸ್ತಕ ಓದುವುದರ ಮೂಲಕ ಮಕ್ಕಳಿಗೆ ಮಾರ್ಗದರ್ಶನ ನೀಡಬೇಕು. ಮನೆಯಲ್ಲಿ ಚಿಕ್ಕದಾದ ಗ್ರಂಥಾಲಯವನ್ನು ನಿರ್ಮಿಸುವುದರ ಮೂಲಕ ಪುಸ್ತಕಪ್ರೇಮವನ್ನು ಬೆಳೆಸಬೇಕಿದೆ. ಶಾಲಾ, ಕಾಲೇಜುಗಳಲ್ಲಿ ಆಕರ್ಷಕ ಗ್ರಂಥಾಲಯಗಳನ್ನು ಸ್ಥಾಪಿಸುವುದರ ಮೂಲಕ ಓದಿನತ್ತ ಸೆಳೆಯುವಂತೆ ಮಾಡಬೇಕಿದೆ. ಸ್ವಾಮಿ ವಿವೇಕಾನಂದರ ನುಡಿಗಳಂತೆ, ಪುಸ್ತಕಗಳು ಬರೀ ಜ್ಞಾನ ಭಂಡಾರವಲ್ಲ. ಅವು ಯುವಕರಿಗೆ ಮತ್ತು ಮಕ್ಕಳಿಗೆ ಸ್ಫೂರ್ತಿ ತುಂಬಿ ತಮ್ಮನ್ನು ತಾವು ಅರಿತುಕೊಳ್ಳುವಂತೆ ಮಾಡಿ, ಉತ್ತಮ ಬದುಕಿಗೆ ಮಾರ್ಗದರ್ಶನ ನೀಡುವ ದಾರಿದೀಪಗಳಾಗಿವೆ. ಆದ್ದರಿಂದ ಎಲ್ಲರಲ್ಲೂ ನಿರಂತರ ಅಧ್ಯಯನಶೀಲತೆ, ಗುಣಗಳು ಹಾಸುಹೊಕ್ಕಾಗಿ ಬರಲಿ. ಈ ಮೂಲಕ ಪುಸ್ತಕ ಪ್ರೀತಿ ಮತ್ತು ಓದುವ ಸಂಸ್ಕೃತಿ ವೃದ್ಧಿಸಲಿ ಎಂಬುದೇ ಸದಾಶಯವಾಗಿದೆ.

ಅಂತರ್ಮುಖಿ ಸ್ವಭಾವ ನಿಶ್ಯಬ್ದದೊಳಗಿನ ಜೀವಂತಿಕೆ

• ಡಾ. ಮೈತ್ರಿ ಭಟ್, ವಿಟ್ಲ

ಇಂದಿನ ಒತ್ತಡದ ಓಡುವ ಜಗತ್ತಿನಲ್ಲಿ ಸಲೀಸಾಗಿ ಮಾತನಾಡುವವರು, ತಮ್ಮ ಅಭಿಪ್ರಾಯವನ್ನು ತಕ್ಷಣವೇ ವ್ಯಕ್ತಪಡಿಸುವವರು ಮತ್ತು ಸದಾ ಜನರ ಮಧ್ಯೆ ಗುಂಪಿನಲ್ಲಿ ಇರುವವರು ಹೆಚ್ಚು ಗಮನವನ್ನು ಸೆಳೆಯುತ್ತಾರೆ. ಆದರೆ ಈ ಗದ್ದಲದ ನಡುವೆ ಶಾಂತವಾಗಿ ಆಲೋಚಿಸುವ, ಮೌನದ ಒಡಲಲಿ ತಮ್ಮದೇ ಕನಸು, ಗುಂಗಿನ ನಡುವೆ ಇರುವ ಅಂತರ್ಮುಖಿ ವ್ಯಕ್ತಿತ್ವ ಹೊಂದಿದ ಅದೆಷ್ಟೋ ಜನರಿದ್ದಾರೆ. ಅವರು ಮಾತ್ರ ಕೆಲವೊಮ್ಮೆ ಅದೆಲ್ಲೋ ಕಳೆದೇ ಹೋಗಿಬಿಡುತ್ತಾರೆ.

ಅಂತರ್ಮುಖಿ ಗುಣ ಎಂದರೆ ನಾಚಿಕೆಯ ಸ್ವಭಾವ, ಆತ್ಮವಿಶ್ವಾಸದ ಕೊರತೆ ಅಥವಾ ಸಮಾಜದಿಂದ ದೂರವಿರುವ ಸ್ವಭಾವ ಎಂದು ಭಾವಿಸುವುದು ಸಾಮಾನ್ಯ. ಆದರೆ ಇದು ಒಂದು ತಪ್ಪು ಕಲ್ಪನೆ. ಒಬ್ಬ ವ್ಯಕ್ತಿಯ ಆಲೋಚನೆಗಳು ಮತ್ತು ಆಸಕ್ತಿಗಳು ಹೊರಗಿನ ಪ್ರಪಂಚದ ಬದಲಿಗೆ ತನ್ನ ಆಂತರಿಕ ಪ್ರಪಂಚದ ಕಡೆಗೆ ಕೇಂದ್ರೀಕೃತವಾಗಿರುವ ಗುಣ ಅಥವಾ ಸ್ಥಿತಿಯಾಗಿದೆ, ಅಂದರೆ ಅವರು ಏಕಾಂತವನ್ನು ಬಯಸುತ್ತಾರೆ. ಚಿಂತನೆಗೆ ಒಲವನ್ನು ತೋರುತ್ತಾರೆ ಮತ್ತು ಚಿಕ್ಕ ಗುಂಪಿನಲ್ಲಿ ಅಥವಾ ಒಂಟಿಯಾಗಿರಲು ಇಷ್ಟಪಡುತ್ತಾರೆ. ಅವರು ಮಾತನಾಡುವುದಕ್ಕಿಂತ ಹೆಚ್ಚು ಕೇಳುತ್ತಾರೆ. ತಕ್ಷಣ ಪ್ರತಿಕ್ರಿಯಿಸುವುದಕ್ಕಿಂತ ಆಲೋಚಿಸಿ ಪ್ರತಿಕ್ರಿಯಿಸುತ್ತಾರೆ.

ಶಾಲೆಗಳಿಂದ ತೊಡಗಿ ಕೆಲಸದ ಸ್ಥಳದವರೆಗೆ ನಮ್ಮ ಸಮಾಜವು ಬಹಿರ್ಮುಖಿ ವ್ಯಕ್ತಿತ್ವಗಳಿಗೆ ಹೆಚ್ಚು ಅವಕಾಶಗಳನ್ನು ಒದಗಿಸುತ್ತದೆ. ಉದಾಹರಣೆಗೆ, ತರಗತಿಯಲ್ಲಿ ಹೆಚ್ಚು ಮಾತನಾಡುವ ವಿದ್ಯಾರ್ಥಿಗಳು ಚುರುಕಿನವರಾಗಿ ಗುರುತಿಸಲ್ಪಡುತ್ತಾರೆ. ಸಭೆಗಳಲ್ಲಿ ಶಾಂತವಾಗಿರುವವರು ಅನೇಕ ಬಾರಿ ಆಸಕ್ತಿಯಿಲ್ಲದವರಂತೆ ತಪ್ಪಾಗಿ ಅರ್ಥಮಾಡಿಕೊಳ್ಳಲ್ಪಡುತ್ತಾರೆ. ಈ ದೃಷ್ಟಿಕೋನದಿಂದಾಗಿ ಅನೇಕ ಸಂದರ್ಭಗಳಲ್ಲಿ ಅಂತರ್ಮುಖಿಗಳ ಸಾಮರ್ಥ್ಯ ಮರೆಮಾಚಲ್ಪಡುತ್ತದೆ.

ಇತಿಹಾಸವನ್ನು ಗಮನಿಸಿದರೆ, ಅನೇಕ ಮಹಾನ್ ಚಿಂತಕರು ಮತ್ತು ನಾಯಕರು ಅಂತರ್ಮುಖಿ ಸ್ವಭಾವದವರಾಗಿದ್ದರು. ಮಹಾತ್ಮ ಗಾಂಧಿ ಅವರಿಗೆ ಅವರ ಮೌನವೇ ಶಕ್ತಿಯಾಗಿದ್ದರೆ, ಅಲ್ಬರ್ಟ್ ಐನ್‌ಸ್ಟೀನ್ ಅವರ ಆಳವಾದ ಚಿಂತನೆಯು ವಿಜ್ಞಾನ ಕ್ಷೇತ್ರದಲ್ಲಿ ಒಂದು ಕ್ರಾಂತಿಯನ್ನೇ ಉಂಟುಮಾಡಿತು. ಇವರೆಲ್ಲ ಕಡಿಮೆ ಮಾತು, ಹೆಚ್ಚು ಅರ್ಥಪೂರ್ಣ ಕೆಲಸದ ಮೂಲಕ ದೀರ್ಘಕಾಲಿಕ ಪ್ರಭಾವವನ್ನು ಬೀರಿದವರಾಗಿರುತ್ತಾರೆ. ಅಂತರ್ಮುಖಿಗಳು ಸಾಮಾನ್ಯವಾಗಿ ಕೆಲವು ವಿಶಿಷ್ಟ ಗುಣಗಳನ್ನು ಹೊಂದಿರುತ್ತಾರೆ:

- ಆಳವಾದ ಚಿಂತನೆ ಮತ್ತು ವಿಶ್ಲೇಷಣಾ ಸಾಮರ್ಥ್ಯ
- ಉತ್ತಮ ಶ್ರವಣ ಕೌಶಲ್ಯ
- ಸೃಜನಶೀಲತೆ ಮತ್ತು ಹೊಸ ಕಲ್ಪನೆಗಳನ್ನು ರೂಪಿಸುವ ಶಕ್ತಿ
- ಸ್ವತಂತ್ರವಾಗಿ ಹಾಗೂ ಏಕಾಗ್ರತೆಯಿಂದ ಕೆಲಸ ಮಾಡುವ ಗುಣ
- ಕಡಿಮೆ ಆದರೆ ಗಾಢ, ಆಳ ಮತ್ತು ಅರ್ಥಪೂರ್ಣ ಸಂಬಂಧಗಳಿಗೆ ಆದ್ಯತೆ

ಇಂತವರ ಗಮನ ಹೊರಗಿನ ಕ್ರಿಯೆಗಳಿಗಿಂತ ಆಂತರಿಕ ಆಲೋಚನೆಗಳು, ಭಾವನೆಗಳು ಮತ್ತು ಕಲ್ಪನೆಗಳತ್ತ ಇರುತ್ತದೆ. ಸಾಮಾಜಿಕ ಚಟುವಟಿಕೆಗಳ ನಂತರ ಶಕ್ತಿಯನ್ನು ಮರಳಿ ಪಡೆಯಲು ಏಕಾಂತದಲ್ಲಿ ಸಮಯವನ್ನು ಕಳೆಯಲು ಬಯಸುತ್ತಾರೆ. ಹಲವರಿಗಿಂತ ಆಪ್ತರಾದ ಕೆಲವೇ ಕೆಲವು ಜನರೊಂದಿಗೆ ಆಳವಾದ ಸಂಬಂಧಗಳನ್ನು ಬೆಳೆಸಲು ಇಷ್ಟಪಡುತ್ತಾರೆ. ಮಾತನಾಡುವುದಕ್ಕಿಂತ ಕೇಳುವುದಕ್ಕೆ ಹೆಚ್ಚು ಒಲವನ್ನು ತೋರುತ್ತಾರೆ. ವಿಷಯಗಳನ್ನು ಆಳವಾಗಿ ವಿಶ್ಲೇಷಿಸಲು ಮತ್ತು ಯೋಚಿಸಲು ಇಷ್ಟಪಡುತ್ತಾರೆ. ಈ ಗುಣಗಳೇ ಅಂತರ್ಮುಖಿಗಳನ್ನು ಉತ್ತಮ ಲೇಖಕರು, ಸಂಶೋಧಕರು, ಕಲಾವಿದರು, ವಿಜ್ಞಾನಿಗಳು ಮತ್ತು ತತ್ವಜ್ಞಾನಿ ಗಳಾಗಿಸುತ್ತವೆ. ಅಂತರ್ಮುಖಿಗಳಿಗೆ ಏಕಾಂತವು ಅಗತ್ಯವಾಗಿರುತ್ತದೆ. ಇದು ಒಂಟಿತನ ಅಲ್ಲ, ಬದಲಾಗಿ ಆತ್ಮನಿರೀಕ್ಷಣೆಯ ಒಂದು ಮಾರ್ಗ. ಆದರೆ ಸಮಾಜದ ಒತ್ತಡದಿಂದ ಅವರು ತಮ್ಮ ಸ್ವಭಾವವನ್ನು ಬದಲಾಯಿಸಬೇಕೆಂಬ ಭಾವನೆಗೆ ಒಳಗಾಗುವ ಸಾಧ್ಯತೆ ಇದೆ. ಇದರಿಂದ ಒತ್ತಡ ಮತ್ತು ಅಸಮಾಧಾನ ಉಂಟಾಗಬಹುದು. ಅಂತರ್ಮುಖಿತ್ವವನ್ನು ಸಹಜ ಗುಣವಾಗಿ ಸ್ವೀಕರಿಸುವುದು ಮಾನಸಿಕ ಆರೋಗ್ಯದ ದೃಷ್ಟಿಯಿಂದಲೂ ಬಹಳ ಮುಖ್ಯ. ಸಮಾಜಕ್ಕೆ ಬಹಿರ್ಮುಖಿ ಮತ್ತು ಅಂತರ್ಮುಖಿ ಎರಡೂ ವ್ಯಕ್ತಿತ್ವ ಅಗತ್ಯ. ಒಂದೇ ರೀತಿಯ ವ್ಯಕ್ತಿತ್ವದಿಂದ ಸಮಾಜ ನಿರ್ಮಾಣವಾಗುವುದಿಲ್ಲ. ವೈವಿಧ್ಯತೆಯಲ್ಲಿಯೇ ಸಮೃದ್ಧಿಯು ಅಡಗಿದೆ. ಮಾತ್ರವಲ್ಲ, ಅಂತರ್ಮುಖಿತ್ವವನ್ನು ಗೌರವಿಸುವುದು ಎಂದರೆ ಮಾನವ ವ್ಯಕ್ತಿತ್ವದ ವೈವಿಧ್ಯತೆಯನ್ನು ಗೌರವಿಸುವುದೇ ಆಗಿದೆ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

2. ಬಣ್ಣದ ಹಬ್ಬದ ಜೊತೆಗಿರುವ ಒಂದು ಸಿಹಿತಿಂಡಿ (3)
5. ಹೋಲಿಕೆಗೆ ಮೀರಿದ್ದು, ಅಷ್ಟು ಶ್ರೇಷ್ಠವಾದದ್ದು (4)
7. ಮಾಡುವ ಕೆಲಸದಲ್ಲಿರಲಿ ನಾವೀನ್ಯ (4)
9. ಬಿಸಿಲಿನಲ್ಲಿ ಬಂದವರಿಗೆ ಉಂಟಾದ ದಾಹ (4)
11. ಒತ್ತು ಕಳೆದುಕೊಂಡ ಮತ್ತೊಬ್ಬ ತಾತನೊಂದಿಗೆ ಬಂದಿರುವ ಹೆಬ್ಬಾವು (4)
13. ಶ್ರೀರಾಮನ ಜೊತೆಗೆ ವನವಾಸಕ್ಕೆ ಹೋದ ಸಹೋದರ (3)
14. ಮರ ಕತ್ತರಿಸುವ ಸಾಧನ (4)
16. ಲಲಿತಕಲೆಗಳನ್ನು ತಿಳಿದವನು (4)
18. ನವರತ್ನಗಳಲ್ಲಿ ಒಂದಾದ ಪಚ್ಚೆ (4)
21. ಸಂಚಾರ ಮಾಡುವಾಗ ಉಂಟಾದ ಕೇಡು (4)
23. ಒಂದು ಬಗೆಯ ಸಿಡಿಮದ್ದು (3)

ಮೇಲಿಂದ ಕೆಳಕ್ಕೆ

1. ಈತನನ್ನು ಮನುಷ್ಯ ಕುಲದ ಮೂಲಪುರುಷನೆಂದು ನಂಬಲಾಗಿದೆ (2)
2. ದೇವತೆಗಳನ್ನು ಒಲಿಸಿಕೊಳ್ಳಲು ಮಾಡುವ ಯಜ್ಞ (2)
3. ತಲೆಕೆಳಗಾದ ಧೂಮ (2)
4. ದೇಹದ ಭಾಗ ಬಾತುಕೊಳ್ಳುವಿಕೆ (2)
6. ಪರಿಪರಿಯಾಗಿ ಓಡಿಹೋಗುವಿಕೆ (3)
8. ನೈಜವಾದ ಅಥವಾ ಸ್ವಾಭಾವಿಕ ಎಂದರ್ಥ (3)
9. ಮದುಮಕ್ಕಳ ಹಣೆಗೆ ತೊಡಿಸುವ ಒಂದು ಆಭರಣ (3)
10. ಮಾಡುವ ಕಾರ್ಯ (3)
11. ಅಣ್ಣ ಮಾಡಿದ್ದು ಅಪಹಾಸ್ಯ (3)
12. ಅಸ್ತವ್ಯಸ್ತವಾಗಿ ಬಂದಿರುವ ಆನೆಯಿದು (3)
15. ಕಾವ್ಯವನ್ನು ರಾಗಬದ್ಧವಾಗಿ ಹಾಡುವುದು (3)
17. ಸುವಾಸನೆಯಿರುವ ಒಂದು ಬಗೆಯ ಬೇರು (3)
19. ಮದುವೆಯ ಗಂಡು ತಿರುಗಿದಾಗ ಸಿಕ್ಕಿದ ಸದ್ದು (2)
20. ಕತ್ತಲೆ, ಅಜ್ಞಾನ (2)
21. ಬೇಡಿಕೆ ಈಡೇರಿಸಲು ಒತ್ತಾಯ ಮಾಡುವವರ ಮುಷ್ಕರ (2)
22. ಮೈ ಅಥವಾ ಶರೀರ (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ: 2. ಹೋಳಿಗೆ 5. ಅನುಪಮ 7. ಹೊಸತನ 9. ಬಾಯಾರಿಕೆ 11. ಅಜಗರ 13. ಲಕ್ಷ್ಮಣ 14. ಗರಗಸ 16. ಕಲಾವಿದ 18. ಮರಕತ 21. ಸಂಚಕಾರ 23. ಮತಾಪು

ಮೇಲಿಂದ ಕೆಳಕ್ಕೆ: 1. ಮನು 2. ಹೋಮ 3. ಗೆಹೊ 4. ಊತ 6. ಪರಾರಿ 8. ಸಹಜ 9. ಬಾಸಿಂಗ 10. ಕೆಲಸ 11. ಅಣಕ 12. ರನಿದ 15. ಗಮಕ 17. ಲಾವಂಚ 19. ರವ 20. ತಮ 21. ಸಂಪು 22. ಕಾಯ

• ಅಶ್ವಿನಿ ಸುನಿಲ್

ನಮ್ಮ ಅಮ್ಮ, ಅಜ್ಜಿಯ ಕಾಲವನ್ನು ಒಮ್ಮೆ ನೆನಪಿಸಿಕೊಳ್ಳಿ. ಬದುಕು ಬೇರೆಯದೇ ಒಂದು ಲಯದಲ್ಲಿ ಆಗ ಸಾಗುತ್ತಿತ್ತು. ಅದರಲ್ಲೂ ಹೆಚ್ಚಾಗಿ ಹಳ್ಳಿಗಳಲ್ಲಿ ಮಳೆಗಾಲ ಪ್ರಾರಂಭವಾಗುವ ಮೊದಲೇ ಮುಂದಿನ ಎರಡು ಮೂರು ತಿಂಗಳಿಗೆ ಬೇಕಾಗುವ ದಿನಸಿ ಸಾಮಗ್ರಿಗಳನ್ನು ಕೊಂಡು ಅದನ್ನು ಸ್ವಚ್ಛಗೊಳಿಸಿ ಬಿಸಿಲಿನಲ್ಲಿ ಒಣಗಿಸಿ ಡಬ್ಬದಲ್ಲಿ ಹಾಕಿಟ್ಟರೆ ಮಳೆಗಾಲ ಮುಗಿಯುವವರೆಗೆ ಅಂಗಡಿಗೆ ಹೋಗುವ ಪ್ರಮೇಯವೇ ಇರುತ್ತಿರಲಿಲ್ಲ. ಮನೆಗೆ ಅಕಸ್ಮಾತ್ ಆಗಿ ನೆಂಟರು ಬಂದರೂ ಇದ್ದ ಸಾಮಗ್ರಿಗಳಲ್ಲಿಯೇ ಅಡುಗೆ ಮಾಡುವ ಚಾತುರ್ಯ ಅಮ್ಮಂದಿರಿಗಿತ್ತು. ಯಾವುದಾದರು ಸಾಮಗ್ರಿ ಇರದಿದ್ದರೂ ಅದರ ಬದಲು ಮತ್ತೊಂದು ಬಳಸಿ ಅಡುಗೆ ಮಾಡುವ ಕಲೆಯಂತೂ ಎಲ್ಲಾ ಅಮ್ಮಂದಿರಿಗೂ ಸಿದ್ಧಿಸಿತ್ತು. ಒಂದು ವಸ್ತುವನ್ನು ಕೊಂಡುಕೊಳ್ಳುವ ಮೊದಲು ಹತ್ತು ಬಾರಿ ಯೋಚಿಸುತ್ತಿದ್ದರು. ಅತೀ ಅಗತ್ಯವೆಂದೆನಿಸಿದರೆ ಮಾತ್ರ ಕೊಂಡುಕೊಳ್ಳುತ್ತಿದ್ದ ಕಾಲ ಅದಾಗಿತ್ತು.

ಆ ನಂತರದ ದಿನಗಳಲ್ಲಿ ಕಿರಾಣಿ ಅಂಗಡಿ, ಚಿಕ್ಕಪುಟ್ಟ ತರಕಾರಿ ಅಂಗಡಿಗಳಿಂದ ಜನರು ಮೆಲ್ಲನೆ ಸೂಪರ್ ಮಾರ್ಕೆಟ್‌ನತ್ತ ಒಲವು ತೋರಿಸಲು ಪ್ರಾರಂಭಿಸಿದ್ದರು. ಮಾಲ್‌ಗಳಲ್ಲಿ, ಸೂಪರ್ ಮಾರ್ಕೆಟ್‌ಗಳಲ್ಲಿ ತಮಗಿಷ್ಟ ಬಂದ ವಸ್ತುಗಳನ್ನು ನೋಡಿ, ಆರಿಸುವುದರಲ್ಲಿ ಹೆಚ್ಚು ಖುಷಿಪಡುತ್ತಿದ್ದರು. ದಿನಸಿ ಸಾಮಗ್ರಿಗಳು, ಹಣ್ಣು ತರಕಾರಿಗಳು ಅಷ್ಟೇ ಅಲ್ಲ ಸ್ಟೇಷನರಿ ಸಾಮಾಗ್ರಿಗಳು, ಸೌಂದರ್ಯವರ್ಧಕಗಳು, ಪ್ಲಾಸ್ಟಿಕ್ ವಸ್ತುಗಳು ಗೃಹ ಬಳಕೆಯ ವಸ್ತುಗಳು ಎಲ್ಲವೂ ಒಂದೇ ಕಡೆ ದೊರೆಯುತ್ತಿದ್ದ ಕಾರಣದ ಜನರು ಸೂಪರ್ ಮಾರ್ಕೆಟ್‌ಗಳತ್ತ ಆಕರ್ಷಿತರಾದರು.

ಈಗಂತೂ ಆನ್‌ಲೈನ್ ಶಾಪಿಂಗ್‌ನ ಕಾಲ. ಬೇಕೆನಿಸಿದಾಗ ಬೇಕಾದದ್ದನ್ನು ಮರುಕ್ಷಣವೇ ಕೊಂಡುಕೊಳ್ಳಬಹುದು. ಪಾಲಕ್ ಪನೀರ್ ಮಾಡಲೆಂದು ತಯಾರು ಮಾಡಿ ಕೊನೆಗೆ ಪನೀರ್ ಇಲ್ಲವೆಂದು ಗೊತ್ತಾದರೂ ಚಿಂತೆ ಇಲ್ಲ, ತಕ್ಷಣ ಆರ್ಡರ್ ಮಾಡಿದರಾಯಿತು. ನೆಂಟರು ಬರುತ್ತೇನೆ ಎಂದಾಗ ಮನೆಯ ಲೋಕೇಶನ್ ಶೇರ್ ಮಾಡಿ ತಕ್ಷಣವೇ ಅವರಿಗೆ ಕೊಡಲು ಏನೂ ಇಲ್ಲ ಎಂದು ಜ್ಯೂಸ್ ಆರ್ಡರ್ ಮಾಡಿದರೆ ಅವರು ಮನೆ ತಲುಪುವ ಮೊದಲೇ ಜ್ಯೂಸ್ ನಮ್ಮ ಮನೆ ತಲುಪಿರುತ್ತದೆ. ಯಾರದ್ದೋ ಬರ್ತಡೇ ಪಾರ್ಟಿಗೆ ಹೊರಟಾಗ ಗಿಫ್ಟ್ ತೆಗೆದುಕೊಳ್ಳುವುದು ಮರೆತು ಹೋಯಿತೆಂದು ಚಿಂತಿಸಬೇಕಾಗಿಲ್ಲ ಆರ್ಡರ್ ಮಾಡಿದರೆ ಆಯ್ತು, ಹತ್ತೇ ನಿಮಿಷದಲ್ಲಿ ನಮ್ಮ ಕೈ ಸೇರುತ್ತದೆ, ಬ್ಯಾಗು ಹಿಡಿದುಕೊಂಡು ಅಂಗಡಿ ತಲುಪುವ ಮೊದಲೇ ಆರ್ಡರ್ ಮಾಡಿದ್ದು ಮನೆ ತಲುಪಿರುತ್ತದೆ. ದುಡ್ಡಿಗಿಂತಲೂ ಸಮಯವೇ ಅಮೂಲ್ಯವಾಗಿರುವ ಇಂದಿನ ದಿನಗಳಲ್ಲಿ ಆನ್‌ಲೈನ್‌ನಲ್ಲಿ ತರಿಸುವವರೇ ಹೆಚ್ಚು.

ನಮಗೆ ಸಮಯ ಉಳಿಸುವುದರಲ್ಲಿ ಇದು ಸಹಾಯ ಮಾಡಿದರೂ, ಜತೆ ಜತೆಗೆ ನಮ್ಮನ್ನು ಸೋಮಾರಿಗಳನ್ನಾಗಿ ಮಾಡುತ್ತದೆ. ಅಂಗಡಿಗೆ ಹೋಗುವ ಶ್ರಮ ಇಲ್ಲದ ಕಾರಣ, ಯೋಜನೆ ಮಾಡುವ ಅಭ್ಯಾಸ ಕಡಿಮೆಯಾಗುತ್ತಿದೆ. 'ಇಲ್ಲದಿದ್ದರೆ ಏನು ಮಾಡುವುದು ಎಂದು ಯೋಚಿಸುವ ಬದಲು, ಆರ್ಡರ್ ಮಾಡಿದರೆ ಆಯ್ತು' ಎನ್ನುವ ಮನಸ್ಥಿತಿ ಬೆಳೆದಿದೆ. ಆನ್‌ಲೈನ್ ಶಾಪಿಂಗ್ ಸಮಯ ಉಳಿಸುವ ಸಾಧನವಾಗಿರಬಹುದು, ಆದರೆ ಅತಿಯಾದ ಬಳಕೆಯಿಂದ ನಮ್ಮ ಚಿಂತನೆ , ಶಿಸ್ತನ್ನು ಕಳೆದುಕೊಳ್ಳಲು ಕಾರಣವಾಗುತ್ತದೆ. ಅಗತ್ಯ ಮತ್ತು ಆಸೆ ನಡುವಿನ ಗಡಿಯನ್ನು ನಮಗೆ ನಾವೇ ನಿರ್ಧರಿಸಿಕೊಳ್ಳಬೇಕು, ಇಲ್ಲದಿದ್ದರೆ ಅನುಕೂಲದ ನೆಪದಲ್ಲಿ ನಮ್ಮ ಯೋಚನೆ, ಯೋಜನೆ ಮಾಡುವ ಸಾಮರ್ಥ್ಯವನ್ನು ಕಳೆದುಕೊಳ್ಳಬೇಕಾಗುತ್ತದೆ.

ಟಾಟಾ ಸಾಮ್ರಾಜ್ಯದ ನೈತಿಕ ಅಡಿಪಾಯ ಸೂನಿ ಟಾಟಾ

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಮುಂಬೈನ ಸಾಗರದ ಅಲೆಗಳು ಪ್ರತೀಬಾರಿಯೂ ದಡಕ್ಕೆ ಬಂದು ಮುತ್ತಿಕ್ಕುವಾಗ ಒಂದು ಬಗೆಯ ನಿಶ್ಯಬ್ದವಿರುತ್ತದೆ, ಅದರಲ್ಲಿ ಒಂದು ಶಕ್ತಿಯಿದೆ. ರತನ್ ಟಾಟಾ ಅವರ ಬದುಕಿನಲ್ಲೂ ಅಂತಹದ್ದೇ ಒಂದು ಮೌನ ಶಕ್ತಿ ಇತ್ತು, ಅದುವೇ ಅವರ ತಾಯಿ ಸೂನಿ ಟಾಟಾ. ಬೃಹತ್ ಉದ್ಯಮ ಸಾಮ್ರಾಜ್ಯದ ಅಡಿಪಾಯ ಕೇವಲ ಇಟ್ಟಿಗೆ ಮತ್ತು ಸಿಮೆಂಟ್‌ನಿಂದ ಆಗಿರಲಿಲ್ಲ, ಅದು ತಾಯಿ ನೀಡಿದ ಮೌಲ್ಯಗಳ ಸಂಸ್ಕಾರದಿಂದ ನಿರ್ಮಾಣವಾಗಿತ್ತು. ಸೂನಿ ಅವರು ಟಾಟಾ ಕುಟುಂಬದ ಸೊಸೆಯಾಗಿ ಬಂದಾಗ, ಅವರ ಮುಂದೆ ವೈಭವೋಪೇತ ಜೀವನದ ಎಲ್ಲ ಬಾಗಿಲುಗಳೂ ತೆರೆದಿದ್ದವು, ಆದರೆ ಅವರು ಆರಿಸಿಕೊಂಡಿದ್ದು ಮಾತ್ರ ಸರಳತೆ ಮತ್ತು ಗಾಂಭೀರ್ಯದ ಹಾದಿ.

ರತನ್ ಟಾಟಾ ಅವರು ತಮ್ಮ ಬಾಲ್ಯದ ದಿನಗಳ ಬಗ್ಗೆ ಮಾತನಾಡುವಾಗ ಒಂದು ಘಟನೆಯನ್ನು ನೆನಪಿಸಿಕೊಳ್ಳುತ್ತಾರೆ. ಅದು ರಜಾ ದಿನಗಳ ಸಮಯ. ರತನ್ ಮತ್ತು ಅವರ ಸಹೋದರ ವಿದೇಶಕ್ಕೆ ಪ್ರವಾಸ ಹೋಗಲು ಸಿದ್ಧರಾಗುತ್ತಿದ್ದರು. ಆ ಸಮಯದಲ್ಲಿ ಅವರ ತಾಯಿ ಸೂನಿ ಟಾಟಾ ಅವರು ಮಕ್ಕಳನ್ನು ಹತ್ತಿರ ಕರೆದು, 'ನೋಡಿ ಮಕ್ಕಳೇ, ನೀವು ಎಲ್ಲಿಗೆ ಹೋದರೂ, ಎಷ್ಟು ದೊಡ್ಡವರಾದರೂ ಸರಿ, ಎಂದಿಗೂ ನಿಮ್ಮ ಘನತೆಯನ್ನು ಬಿಟ್ಟುಕೊಡಬೇಡಿ. ಸಂಕಷ್ಟದ ಸಮಯದಲ್ಲಿಯೂ ಕೂಡ ನಿಮ್ಮ ಮೌಲ್ಯಗಳ ಜೊತೆ ರಾಜಿ ಮಾಡಿಕೊಳ್ಳಬೇಡಿ' ಎಂದು ತಿಳಿಹೇಳಿದ್ದರು.

ಕೌಟುಂಬಿಕ ಏರಿಳಿತಗಳು, ವೈಯಕ್ತಿಕ ನೋವುಗಳು ಎದುರಾದಾಗಲೂ ಸೂನಿ ಅವರು ಕುಗ್ಗಲಿಲ್ಲ. ಅವರ ವ್ಯಕ್ತಿತ್ವದಲ್ಲಿ ಒಂದು 'ಘನತೆ' ಇತ್ತು. ಸಾರ್ವಜನಿಕವಾಗಿ ಅವರು ಎಂದೂ ಪ್ರಚಾರ ಬಯಸಲಿಲ್ಲ. ಕ್ಯಾಮೆರಾಗಳ ಫ್ಲ್ಯಾಶ್ ಲೈಟ್‌ಗಳಿಗಿಂತ ಮನೆಯ ಒಳಗಿನ ದೀಪದ ಬೆಳಕಿನಲ್ಲಿ ಮಕ್ಕಳ ಭವಿಷ್ಯ ರೂಪಿಸುವುದೇ ಅವರಿಗೆ ಮುಖ್ಯವಾಗಿತ್ತು. ರತನ್ ಟಾಟಾ ಅವರು ತಮ್ಮ ಜೀವನದ ಸಂಧ್ಯಾಕಾಲದಲ್ಲೂ 'ನನ್ನ ತಾಯಿ ಕಲಿಸಿದ ಪಾಠಗಳು ನನ್ನನ್ನು ನಡೆಸುತ್ತಿವೆ, ನನ್ನ ತಾಯಿ ಮತ್ತು ಅಜ್ಜಿ ನಮಗೆ ಕಲಿಸಿದ್ದು ಕೇವಲ ಬದುಕುವುದನ್ನಲ್ಲ, ಬದಲಾಗಿ ಘನತೆಯಿಂದ ಬದುಕುವುದನ್ನು. ನಾವು ಶಾಲೆಗೆ ಹೋಗುವಾಗ ಅಥವಾ ಗೆಳೆಯರೊಂದಿಗೆ ಇರುವಾಗ ನಮಗೆ ಸೌಲಭ್ಯಗಳ ಕೊರತೆ ಇರಲಿಲ್ಲ, ಆದರೆ ನಮಗೆ ಲಭ್ಯವಿದ್ದದ್ದು ಕೇವಲ ಶಿಸ್ತು ಮತ್ತು ಸಂಸ್ಕಾರ ಮಾತ್ರ' ಎಂದು ನೆನೆಯುತ್ತಿದ್ದರು. ಸೋಲನ್ನು ಹೇಗೆ ವಿನಮ್ರವಾಗಿ ಸ್ವೀಕರಿಸಬೇಕು ಮತ್ತು ಗೆಲುವನ್ನು ಹೇಗೆ ಸಮಾಜಕ್ಕೆ ಅರ್ಪಿಸಬೇಕು ಎಂಬ ಪಾಠ ಅವರಿಗೆ ಸಿಕ್ಕಿದ್ದು ಸೂನಿ ಅವರ ಮಡಿಲಲ್ಲೇ.

ಸೂನಿ ಟಾಟಾ, ರತನ್ ಟಾಟಾ ಅವರು ಇಂದು ಭೌತಿಕವಾಗಿ ನಮ್ಮ ನಡುವೆ ಇಲ್ಲದಿರಬಹುದು, ಆದರೆ ಭಾರತದಾದ್ಯಂತ ಹರಡಿರುವ ಟಾಟಾ ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆಗಳು ಮತ್ತು ಲಕ್ಷಾಂತರ ಜನರ ಬದುಕಿನಲ್ಲಿ ಮಿಂಚುವ ಭರವಸೆಯ ಕಂಗಳಲ್ಲಿ ಅವರ ಪ್ರತಿಬಿಂಬವಿದೆ.

ಒಬ್ಬ ಉದ್ಯಮಿ ಕೇವಲ ಲಾಭದ ಬಗ್ಗೆ ಯೋಚಿಸದೆ, ದೇಶದ ಬಗ್ಗೆ ಯೋಚಿಸುವಂತೆ ಪ್ರೇರೇಪಿಸಿದ ಆ ಮೌನ ಸಂಸ್ಕೃತಿಯೇ ಸೂನಿ ಟಾಟಾ. ಅವರು ಕೇವಲ ಒಬ್ಬ ತಾಯಿಯಾಗಿರಲಿಲ, ಅವರು ಭಾರತದ ಅತ್ಯಂತ ನೈತಿಕ ಉದ್ಯಮಿಯ ನೈತಿಕ ದಿಕ್ಸೂಚಿಯಾಗಿದ್ದರು. ಪ್ರಚಾರವಿಲ್ಲದೆಯೇ ಒಬ್ಬ ವ್ಯಕ್ತಿ ಹೇಗೆ ಜಗತ್ತನ್ನು ಬದಲಿಸಬಲ್ಲ ಎಂಬುದಕ್ಕೆ ಸೂನಿ ಟಾಟಾ ಅವರ ಜೀವನವೇ ಒಂದು ಸುಂದರ ಉದಾಹರಣೆ.

ಪ್ರಪಂಚಕ್ಕೆ ಕಾಣುವುದು ಕೇವಲ ಕಟ್ಟಡದ ಎತ್ತರ ಮಾತ್ರ, ಆದರೆ ಆ ಎತ್ತರಕ್ಕೆ ಕಾರಣವಾಗಿ ನೆಲದಡಿಯಲ್ಲಿ ಮೌನವಾಗಿ ಮಲಗಿರುವ ಅಡಿಪಾಯಕ್ಕೆ ತಾಯಿಯೆಂಬ ಹೆಸರಿರುತ್ತದೆ. ಅನೇಕ ಸಂದರ್ಭಗಳಲ್ಲಿ ನಮಗೆ ಬಾಲ್ಯದಲ್ಲಿ ತಾಯಿ ಹೇಳಿಕೊಟ್ಟ ಶಿಸ್ತಿನ ಪಾಠಗಳು ಅವಳಿಂದ ಸಾವಿರಾರು ಮೈಲಿಗಳು ದೂರವಿದ್ದರೂ ನೆನಪಿರುತ್ತವೆ. ಪ್ರತೀ ಸಂದರ್ಭದಲ್ಲೂ ನಮಗೆ ಗೊತ್ತಿಲ್ಲದೆ ನಾವಾಡುವ ಮಾತುಗಳು, ತೋರಿಸುವ ಸಂಯಮ, ಅಗತ್ಯಬಿದ್ದಾಗ ಉಪಯೋಗಿಸುವ ಕೌಶಲ್ಯ ಎಲ್ಲವೂ ಅಮ್ಮನಿಂದ ಬಂದ ಬಳುವಳಿಗಳೇ. ಆದ್ದರಿಂದಲೇ ಜೀವನದಲ್ಲಿ ಅದೇನೇ ಸಾಧನೆ ಮಾಡಿದರೂ ಅದು ನಮ್ಮದು ಎಂದು ಬೀಗುವ ಮುಂಚೆ, ನಮ್ಮನ್ನು ಅಷ್ಟರಮಟ್ಟಿಗೆ ಬೆಳೆಸಿದ ತಂದೆ-ತಾಯಿಯ ಕೊಡುಗೆಯನ್ನು ಸದಾ ಸ್ಮರಿಸಬೇಕು, ಈ ಕೃತಜ್ಞತೆ ಸದಾ ನಮ್ಮನ್ನು ಕಾಯಲಿ.

ಟಿ-20 ಮಹೋತ್ಸವ
ವಿಶ್ವಕಪ್ 2026

ಭಾರತ ಶ್ರೀಲಂಕಾ
ಫೆಬ್ರವರಿ 7ರಿಂದ ಮಾರ್ಚ್ 8

ICC MEN'S T20 WORLD CUP INDIA & SRI LANKA 2026

ಇಂದಿನ ಪಂದ್ಯಗಳು	ಶ್ರೀಲಂಕಾ-ಒಮಾನ್	ನೇಪಾಳ-ಇಟಲಿ	ಭಾರತ-ನಮೀಬಿಯಾ
	ಬೆ.11 -ಪಲ್ಲೆಕೆಲೆ ಸ್ಟೇಡಿಯಂ, ಶ್ರೀಲಂಕಾ	ಮ.3-ವಾಂಖೆಡೆ ಸ್ಟೇಡಿಯಂ, ಮುಂಬೈ	ರಾ.7-ಜೇಟ್ಲಿ ಸ್ಟೇಡಿಯಂ, ಡೆಲ್ಲಿ

ಹರಿಣ ಪರ ಮಿಂಚಿದ ಡೇವಿಡ್ ಮಿಲ್ಲರ್ | ಅಫಘಾನಿಸ್ತಾನಕ್ಕೆ ಅನಿರೀಕ್ಷಿತ ಸೋಲು

ದ.ಆಫ್ರಿಕಾಗೆ 2ನೇ ಸೂಪರ್ ಗೆಲುವು

ಅಹಮದಾಬಾದ್: ಇಲ್ಲಿನ ಮೋದಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಟಿ20 ವಿಶ್ವಕಪ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವು ಡೇವಿಡ್ ಮಿಲ್ಲರ್ ಅವರ ಅಬ್ಬರದ ಬ್ಯಾಟಿಂಗ್ ನೆರವಿನಿಂದ ಎರಡನೇ ಸೂಪರ್ ಓವರ್‌ನಲ್ಲಿ ಅಫಘಾನಿಸ್ತಾನ ತಂಡವನ್ನು ಮಣಿಸಿತು. ರೆಹ ಮಾನುಲ್ಲಾ ಗುರ್ಬಾಝ್ ಅವರ ಹ್ಯಾಟ್ರಿಕ್ ಸಿಕ್ಸರ್ ಹೊರತಾಗಿಯೂ, ಅಫಘಾನಿಸ್ತಾನ ತಂಡವು ಆರಂ ಭಿಕ ಎರಡು ಎಸೆತಗಳಲ್ಲಿ ರನ್ ಗಳಿಸದ ಪರಿಣಾಮ ವಾಗಿ ಅಂತಿಮ ಎಸೆತದಲ್ಲಿ ಸೋಲು ಒಪ್ಪಿಕೊಂಡಿತು.

ನಿಗದಿತ 20 ಓವರ್‌ಗಳ ಪಂದ್ಯದಲ್ಲಿ ಅಫಘಾನಿಸ್ತಾನ ಹಾಗೂ ದಕ್ಷಿಣ ಆಫ್ರಿಕಾ ತಂಡಗಳ ಮೊತ್ತ 187 ರನ್‌ಗಳ ಮೂಲಕ ಟೈ ಆಗಿತ್ತು. ಆ ಮೂಲಕ ಅಂಪೈರ್‌ಗಳು ಫಲಿತಾಂಶಕ್ಕಾಗಿ ಸೂಪರ್ ಓವರ್ ಮೊರೆ ಹೋದರು. ಮೊದಲನೇ ಸೂಪರ್ ಓವರ್‌ನಲ್ಲಿ ಮೊದಲು ಬ್ಯಾಟ್ ಮಾಡಿದ ಅಫಘಾನಿಸ್ತಾನ ತಂಡವು ಆರು ಎಸೆತಗಳಲ್ಲಿ ವಿಕೆಟ್ ನಷ್ಟವಿಲ್ಲದೆ 17 ರನ್‌ಗಳನ್ನು ಕಲೆ ಹಾಕಿತು. ಬಳಿಕ 18 ರನ್‌ಗಳ ಗುರಿಯನ್ನು ಹಿಂಬಾಲಿಸಿದ ದಕ್ಷಿಣ ಆಫ್ರಿಕಾ, ಒಂದು ವಿಕೆಟ್ ಕಳೆದುಕೊಂಡರೂ 17 ರನ್‌ಗಳನ್ನು ಗಳಿಸಿತು. ಕೊನೆಯ ಎಸೆತದಲ್ಲಿ ಹರಿಣ ಪಡೆಗೆ 7 ರನ್ ಗೆಲ್ಲಲು ಬೇಕಿದ್ದಾಗ, ಟ್ರಿಸ್ಟನ್ ಸ್ಟಬ್ಸ್ ಕೊನೆಯ ಎಸೆತದಲ್ಲಿ ಸಿಕ್ಸರ್ ಬಾರಿಸಿ 2ನೇ ಸೂಪರ್ ಓವರ್‌ಗೆ ಕರೆದೊಯ್ದರು.

2ನೇ ಸೂಪರ್ ಓವರ್‌ನಲ್ಲಿ ಮೊದಲು ಬ್ಯಾಟ್ ಮಾಡಿದ ದಕ್ಷಿಣ ಆಫ್ರಿಕಾ ತಂಡದ ಪರ ಟ್ರಿಸ್ಟನ್ ಸ್ಟಬ್ಸ್ ಒಂದು ಸಿಕ್ಸರ್ ಬಾರಿಸಿದರೆ, ಡೇವಿಡ್ ಮಿಲ್ಲರ್ ಎರಡು ಸಿಕ್ಸರ್ ಬಾರಿಸಿದ ಕಾರಣಕ್ಕೆ ದಕ್ಷಿಣ ಆಫ್ರಿಕಾ ತಂಡ ಆರು ಎಸೆತಗಳಲ್ಲಿ 23 ರನ್ ಗಳಿಸಿತು. ಬಳಿಕ ಗುರಿಯನ್ನು ಹಿಂಬಾಲಿಸಿದ ಅಫ ಘಾನಿಸ್ತಾನ, ಆರಂಭಿಕ ಎರಡು ಎಸೆತಗಳಲ್ಲಿ ಒಂದು ವಿಕೆಟ್ ಕಳೆದುಕೊಂಡಿತು, ಬಳಿಕ ಕೊನೆಯ ನಾಲ್ಕು ಎಸೆತಗಳಲ್ಲಿ 24 ರನ್ ಅಗತ್ಯವಿದ್ದಾಗ ರೆಹಮಾ ನುಲ್ಲಾ ಗುರ್ಬಾಝ್ ಹ್ಯಾಟ್ರಿಕ್ ಸಿಕ್ಸರ್ ಬಾರಿಸಿದರು. ಕೊನೆಯ ಎಸೆತದಲ್ಲಿ ಆರು ರನ್ ಬೇಕಿದ್ದಾಗ, ಕೇಶವ್ ಮಹಾರಾಜ ವೈಡ್ ಹಾಕಿದರು. ನಂತರ 5 ರನ್ ಬೇಕಿದ್ದಾಗ ಸಿಕ್ಸರ್ ಹೊಡೆಯಲು ಪ್ರಯತ್ನಿ ಗುರ್ಬಾಝ್ ಕ್ಯಾಚ್ ಕೊಟ್ಟರು.

187 ರನ್ ಕಲೆ ಹಾಕಿದ್ದ ದ.ಆಫ್ರಿಕಾ: ಟಿ20 ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ್ದ ದಕ್ಷಿಣ ಆಫ್ರಿಕಾ ತಂಡ, ಕ್ವಿಂಟನ್ ಡಿ ಕಾಕ್ ಹಾಗೂ ರಯಾನ್ ರಿಕೆಲ್ಟನ್ ಅವರ ಸ್ಫೋಟಕ ಅರ್ಧಶತ ಕಗಳ ಬಲದಿಂದ 20 ಓವರ್‌ಗಳಿಗೆ 6 ವಿಕೆಟ್ ನಷ್ಟಕ್ಕೆ 187 ರನ್‌ಗಳನ್ನು ಕಲೆ ಹಾಕಿತ್ತು. ಅದ್ಭುತವಾಗಿ ಬ್ಯಾಟ್ ಮಾಡಿದ್ದ ಕ್ವಿಂಟನ್ ಡಿ ಕಾಕ್ 41 ಎಸೆತಗ ಳಲ್ಲಿ ಮೂರು ಸಿಕ್ಸರ್ ಹಾಗೂ 5 ಬೌಂಡರಿಗಳೊಂದಿಗೆ 59 ರನ್‌ಗಳನ್ನು ಗಳಿಸಿದ್ದರು. ಇವರ ಜೊತೆಗೆ 114 ರನ್‌ಗಳ ಜತೆಯಾಟವನ್ನು ಆಡಿದ್ದ ರಯಾನ್ ರಿಕೆಲ್ಟನ್ ಕೂಡ ಅರ್ಧಶತಕವನ್ನು ಬಾರಿಸಿದರು. ಅವರು ಕೇವಲ 28 ಎಸೆತಗಳಲ್ಲಿ 4 ಸಿಕ್ಸರ್ ಹಾಗೂ 5 ಬೌಂಡರಿಗಳೊಂದಿಗೆ 61 ರನ್ ಸಿಡಿಸಿದರು. ಅಫಘಾನಿಸ್ತಾನ ಪರ ಅಝುಮತ್‌ವುಲ್ಲಾ ಒಮರ್ಜಾಯ್ ಅವರು ಮೂರು ವಿಕೆಟ್ ಪಡೆದರೆ, ರಶೀದ್ ಖಾನ್ ಎರಡು ವಿಕೆಟ್ ಕಿತ್ತರು.

ರೆಹಮಾನುಲ್ಲಾ ಸ್ಫೋಟಕ ಬ್ಯಾಟಿಂಗ್: 188 ರನ್‌ಗಳ ಗುರಿಯನ್ನು ಹಿಂಬಾಲಿಸಿದ ಅಫ್ಘಾನಿಸ್ತಾನ ತಂಡದ ಪರ ಎಲ್ಲರ ಗಮನ ಸೆಳೆದಿದ್ದು ಆರಂಭಿಕ ಬ್ಯಾಟ್ಸ್‌ಮನ್ ರೆಹಮಾನುಲ್ಲಾ ಗುರ್ಬಾಝ್. ಒಂದು ತುದಿಯಲ್ಲಿ ವಿಕೆಟ್‌ಗಳು ನಿರಂತರವಾಗಿ ಉರುಳಿದರೂ ಮತ್ತೊಂದು ತುದಿಯಲ್ಲಿ ಗಟ್ಟಿಯಾಗಿ ನಿಂತು ದೀರ್ಘಾವಧಿ ಬ್ಯಾಟ್ ಮಾಡಿದ ರೆಹಮಾನುಲ್ಲಾ ಗುರ್ಬಾಝ್ 42 ಎಸೆತಗಳಲ್ಲಿ 7 ಸಿಕ್ಸರ್ ಹಾಗೂ 4 ಬೌಂಡರಿಗಳೊಂದಿಗೆ 84 ರನ್ ಸಿಡಿಸಿದರು. ಆದರೆ ಮತ್ತೊಂದು ತುದಿಯಲ್ಲಿ ಯಾರೂ ಸಾಥ್ ನೀಡದ ಕಾರಣ, ಅಫಘಾನಿಸ್ತಾನ ತಂಡ 19.4 ಓವರ್‌ಗಳಿಗೆ 187 ರನ್‌ಗಳಿಗೆ ಆಲೌಟ್ ಆಯಿತು. ಕಗಿಸೊ ರಬಾಡ ಕೊನೆಯ ಓವರ್‌ನಲ್ಲಿ ಒಂದು ಸಿಕ್ಸರ್ ನೀಡಿದ್ದರೂ, ಒಂದು ವಿಕೆಟ್ ಪಡೆದು ಸೂಪರ್ ಓವರ್‌ಗೆ ಕರೆದುಕೊಂಡು ಹೋದರು. ದಕ್ಷಿಣ ಆಫ್ರಿಕಾ ಪರ ಲುಂಗಿ ಎನ್ಗಿಡಿ 3 ವಿಕೆಟ್ ಪಡೆದರು.

ಇಂಗ್ಲೆಂಡ್ ವಿರುದ್ಧ ವೆಸ್ಟ್ ಇಂಡೀಸ್‌ಗೆ ಜಯ

ಮುಂಬೈ: ಇಲ್ಲಿ ಬುಧವಾರ ನಡೆದ ವಿಶ್ವಕಪ್ ಪಂದ್ಯಾವಳಿಯಲ್ಲಿ ವೆಸ್ಟ್ ಇಂಡೀಸ್ ತಂಡವು ಇಂಗ್ಲೆಂಡ್ ತಂಡವನ್ನು 30 ರನ್‌ಗಳಿಂದ ಮಣಿಸಿದೆ.

ಮೊದಲು ಟಾಸ್ ಗೆದ್ದ ಇಂಗ್ಲೆಂಡ್ ಫೀಲ್ಡಿಂಗ್ ಆಯ್ದುಕೊಂಡಿತು. ಬ್ಯಾಟಿಂಗ್‌ಗೆ ಇಳಿದ ವೆಸ್ಟ್ ಇಂಡೀಸ್ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 196 ರನ್ ಗಳಿಸಿದರೆ, ಆ ಗುರಿ ಬೆಂಬತ್ತಿದ ಇಂಗ್ಲೆಂಡ್ 19 ಓವರ್‌ಗಳಲ್ಲಿ 166 ರನ್‌ಗಳಿಗೆ ಆಲೌಟ್ ಆಯಿತು.

ಬ್ಯಾಟಿಂಗ್ ವೇಳೆ ವೆಸ್ಟ್ ಇಂಡೀಸ್ ತಂಡದ ಸ್ಕೋರ್ ಕೇವಲ 8 ರನ್ ಆದಾಗ ಅದು ಪ್ರಮುಖ 2 ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ಬಳಿಕ ಶಿಮ್ರಾನ್ ಹೆಟ್ಮೆಯರ್ ಮತ್ತು ರೋಸ್ಟರ್ ಚೇಸ್ ಜೋಡಿ ವೆಸ್ಟ್ ಇಂಡೀಸ್ ತಂಡದ ಸ್ಕೋರ್ ಗತಿಯನ್ನು ಹೆಚ್ಚಿಸಿದರು. ಹೆಟ್ಮೆಯರ್ 23 ರನ್ ಗಳಿಸಿದರೆ, ರೋಸ್ಟರ್ ಚೇಸ್ 34 ರನ್ ಗಳಿಸಿದರು. ಆ ಬಳಿಕ ಕ್ರೀಸ್‌ಗೆ ಬಂದ ಶೆರ್ಫೇನ್ ರುದರ್‌ಫೋರ್ಡ್ ಅವರು ತಮ್ಮ ಸ್ಫೋಟಕ ಬ್ಯಾಟಿಂಗ್‌ನಲ್ಲಿ 42 ಬಾಲ್‌ಗಳಿಂದ 76 ರನ್‌ಗಳನ್ನು ಗಳಿಸುವಲ್ಲಿ ಯಶಸ್ವಿಯಾದರು.

ನಂತರ ಬಂದ ಜೇಸನ್ ಹೋಲ್ಡರ್ 17 ಬಾಲ್‌ಗಳಲ್ಲಿ 33 ರನ್ ಗಳಿಸಿ ವಿಂಡೀಸ್‌ನ ಉತ್ತಮ ಮೊತ್ತಕ್ಕೆ ಕಾರಣರಾದರು. ವೆಸ್ಟ್ ಇಂಡೀಸ್ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 196 ರನ್ ಗಳಿಸಿತ್ತು.

ಗುರಿಯನ್ನು ಬೆಂಬತ್ತಿ ಇನ್ನಿಂಗ್ಸ್ ಆರಂಭಿಸಿದ ಇಂಗ್ಲೆಂಡ್‌ಗೆ ಉತ್ತಮ ಆರಂಭ ದೊರೆಯಿತು. ಫಿಲ್ ಸಾಲ್ಟ್-ಜೋಸ್ ಬಟ್ಲರ್ ಮೊದಲ ವಿಕೆಟ್‌ಗೆ 38 ರನ್ ಜತೆಯಾಟ ಪ್ರದರ್ಶಿಸಿದರು. ಸಾಲ್ಟ್ 30 ರನ್ ಗಳಿಸಿದರೆ, ಬಟ್ಲರ್ 21 ರನ್ ಗಳಿಸಿದರು. ಆ ಬಳಿಕ ಕ್ರೀಸ್‌ಗೆ ಬಂದ ಜೇಕಬ್ ಬೆಥೇಲ್ 33 ರನ್ ಗಳಿಸಿದರು.

ಟಾಮ್ ಬಂಟನ್ ಮತ್ತು ವಿಲ್ ಜ್ಯಾಕ್ಸ್ ತಲಾ 2 ರನ್ ಗಳಿಸಿದರು. ಸ್ಯಾಮ್ ಕರನ್ 30 ಬಾಲ್‌ಗಳಲ್ಲಿ 43 ರನ್ ಗಳಿಸಿ ಅಜೇಯರಾಗುಳಿದರು. ಜೋಫ್ರಾ ಆರ್ಚರ್ 6 ರನ್ ಗಳಿಸಿದರೆ, ಆದಿಲ್ ರಶೀದ್ ಶೂನ್ಯಕ್ಕೆ ಪೆವಿಲಿಯನ್‌ಗೆ ವಾಪಸಾದರು.

ಝಂಪಾ-ಎಲ್ಲಿಸ್ ಬೌಲಿಂಗ್ ದಾಳಿಗೆ ಐರ್ಲೆಂಡ್ ಧೂಳಿಪಟ | ಆಸ್ಟ್ರೇಲಿಯಾ ಶುಭಾರಂಭ

ಐರ್ಲೆಂಡ್ ವಿರುದ್ಧ ಆಸೀಸ್‌ಗೆ ಗೆಲುವು

ಕೊಲಂಬೊ: ಇಲ್ಲಿ ಬುಧವಾರ ನಡೆದ ವಿಶ್ವಕಪ್ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು ಐರ್ಲೆಂಡ್ ತಂಡವನ್ನು 67 ರನ್‌ಗಳಿಂದ ಪರಾಭವಗೊಳಿಸಿದೆ. ಆಸ್ಟ್ರೇಲಿಯಾದ ಗೆಲುವಿನಲ್ಲಿ ನಾಥನ್ ಎಲ್ಲಿಸ್ ಮತ್ತು ಆ್ಯಡಮ್ ಝಂಪಾ ಪ್ರಮುಖ ಪಾತ್ರವಹಿಸಿದರು. ಐರ್ಲೆಂಡ್ ತಂಡದ ಗೆಲುವಿಗಾಗಿ ಹೋರಾಡಿದ ಜಾರ್ಜ್ ಡಾಕ್ರೆಲ್ 41 ರನ್‌ಗಳೊಂದಿಗೆ ಗರಿಷ್ಠ ಸ್ಕೋರರ್ ಎನಿಸಿಕೊಂಡರು.

ಮೊದಲು ಬ್ಯಾಟ್ ಮಾಡಿದ ಆಸೀಸ್ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 182 ರನ್ ಗಳಿಸಿತು. ಇದಕ್ಕೆ ಉತ್ತರವಾಗಿ ಐರ್ಲೆಂಡ್ 16.5 ಓವರ್‌ಗಳಲ್ಲಿ ಕೇವಲ 115 ರನ್‌ಗಳನ್ನು ಗಳಿಸಿ ಆಲ್‌ಔಟ್ ಆಯಿತು. ಆಸ್ಟ್ರೇಲಿಯಾ ಪರ ನಾಥನ್ ಎಲ್ಲಿಸ್ ಮತ್ತು ಆಡಮ್ ಜಂಪಾ ತಲಾ 4 ವಿಕೆಟ್‌ಗಳನ್ನು ಪಡೆದರೆ, ಮ್ಯಾಥ್ಯೂ ಕುನೆಮನ್ ಒಂದು ವಿಕೆಟ್ ಪಡೆದರು.

ಕಾಂಗೂರು ಪಡೆಗೆ ಆಘಾತ: ಟಾಸ್ ಗೆದ್ದ ಆಸ್ಟ್ರೇಲಿಯಾ ನಾಯಕ ಟ್ರಾವಿಸ್ ಹೆಡ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು, ಆದರೆ ತಂಡದ ನಾಯಕ ಟ್ರಾವಿಸ್ ಹೆಡ್ ಕೇವಲ 6 ರನ್‌ಗಳಿಗೆ ರನೌಟ್ ಆದರು. ಅದಾದ ನಂತರ, ಜೋಶ್ ಇಂಗ್ಲಿಸ್ ಮತ್ತು ಕ್ಯಾಮರೂನ್

ಗ್ರೀನ್ ಜೋಡಿ ಪವರ್‌ಪ್ಲೇಯಲ್ಲಿ ರನ್ ವೇಗ ಹೆಚ್ಚಿಸಿತು. ಗ್ರೀನ್ 21 ರನ್ ಗಳಿಸಿದರೆ, ಇಂಗ್ಲಿಸ್ 37 ರನ್ ಗಳಿಸಿದರು.

ಕೊನೆಯಲ್ಲಿ ಮ್ಯಾಟ್ ರೆನ್ಶಾ (37) ಮತ್ತು ಮಾರ್ಕಸ್ ಸ್ಟೊಯಿನಿಸ್ (45) ಕೂಡ ಆಸೀಸ್‌ಗೆ ಉಪಯುಕ್ತ ಇನ್ನಿಂಗ್ಸ್ ಆಡಿದರು. ಈ ಇಬ್ಬರು ಆಸ್ಟ್ರೇಲಿಯಾ ತಂಡವು 182 ರನ್ ತಲುಪಲು ಸಹಾಯ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಐರ್ಲೆಂಡ್ ಪರ ಮಾರ್ಕ್ ಅಡ್ಡೈರ್ ಅದ್ಭುತ ಬೌಲಿಂಗ್ ಮಾಡಿ ಎರಡು ವಿಕೆಟ್ ಪಡೆದರು.

ಸಂಕಷ್ಟಕ್ಕೆ ಸಿಲುಕಿದ್ದ ಐರ್ಲೆಂಡ್: ಗುರಿಯನ್ನು ಬೆನ್ನಟ್ಟಿದ ಐರ್ಲೆಂಡ್, ಇನ್ನಿಂಗ್ಸ್‌ನ ಮೊದಲ ಎಸೆತದಲ್ಲೇ ನಾಯಕ ಪಾಲ್ ಸ್ಟಿರ್ಲಿಂಗ್ ಸ್ನಾಯು ಸೆಳೆತದಿಂದ ಮೈದಾನವನ್ನು ತೊರೆದಾಗ ದೊಡ್ಡ ಹಿನ್ನಡೆ ಅನುಭವಿಸಿತು. ಈ ಕಳಪೆ ಆರಂಭದಿಂದ ಐರ್ಲೆಂಡ್ ಮತ್ತೆ ಚೇತರಿಸಿಕೊಳ್ಳಲಿಲ್ಲ. ಲೋರ್ಕನ್ ಟಕರ್ (24) ಮತ್ತು ಜಾರ್ಜ್ ಡಾಕ್ರೆಲ್ (41) ಸೇರಿ ತಂಡವು ಗೌರವಾನ್ವಿತ ಮೊತ್ತವನ್ನು ತಲುಪಲು ಮತ್ತು ಸೋಲಿನ ಅಂತರವನ್ನು ಕಡಿಮೆ ಮಾಡಲು ಸಹಾಯ ಮಾಡಿದರು.

ಅಂತಿಮವಾಗಿ ಐರ್ಲೆಂಡ್ 16.5 ಓವರ್‌ಗಳಲ್ಲಿ 115 ರನ್‌ಗಳಿಗೆ ಆಲ್‌ಔಟ್ ಆಯಿತು. ಕಾಂಗರೂ ಪಡೆ ಪರ ಆ್ಯಡಮ್ ಝಂಪಾ ಅದ್ಭುತ ಬೌಲಿಂಗ್ ಮಾಡಿ 4 ಓವರ್‌ಗಳಲ್ಲಿ 23 ರನ್‌ಗಳಿಗೆ 4 ವಿಕೆಟ್‌ಗಳನ್ನು ಪಡೆದರೆ, ನಾಥನ್ ಎಲ್ಲಿಸ್ ಕೂಡ 4 ವಿಕೆಟ್‌ಗಳನ್ನು ಗಳಿಸಿದರು.

ಅಭಿಷೇಕ್ ಶರ್ಮಾ ಅನಾರೋಗ್ಯ | ಸಂಜು ಸ್ಯಾಮ್ಸನ್‌ಗೆ ಅವಕಾಶ

ಭಾರತಕ್ಕಿಂದು ನಮೀಬಿಯಾ ಎದುರಾಳಿ

ದೆಹಲಿ: ಈ ಸಲದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಶುಭಾರಂಭ ಮಾಡಿರುವ ಭಾರತ ತಂಡವು ಇದೀಗ ಎರಡನೇ ಪಂದ್ಯಕ್ಕೆ ಸಿದ್ಧವಾಗಿದೆ. ದೆಹಲಿಯಲ್ಲಿ ಗುರುವಾರ ನಡೆಯಲಿರುವ ಪಂದ್ಯದಲ್ಲಿ ನಮೀಬಿಯಾ ತಂಡವನ್ನು ಎದುರಿಸಲಿದೆ. ಅಮೆರಿಕಾ ವಿರುದ್ಧದ ಮೊದಲ ಪಂದ್ಯವನ್ನು ಬಹಳ ಕಷ್ಟದಿಂದ ಗೆದ್ದ ಟೀಮ್ ಇಂಡಿಯಾ, ಈ ಪಂದ್ಯದಲ್ಲಿ ತನ್ನ ನೈಜ ಆಟವನ್ನು ಪ್ರದರ್ಶಿಸಿ ಹಿಂದಿನ ಫಾರ್ಮ್‌ಗೆ ಮರಳುವ ಆಶಯವನ್ನು ಹೊಂದಿದೆ.

ಸ್ಫೋಟಕ ಬ್ಯಾಟರ್ ಅಭಿಷೇಕ್ ಶರ್ಮಾ ನಮೀಬಿಯಾ ವಿರುದ್ಧದ ಪಂದ್ಯದಿಂದ ಹೊರಗುಳಿಯಲಿದ್ದಾರೆ. ಅವರು ಹೊಟ್ಟೆನೋವಿನ ಸಮಸ್ಯೆಯಿಂದ ಬಳಲುತ್ತಿದ್ದು, ಆಸ್ಪತ್ರೆಗೆ ದಾಖಲಾಗಿದ್ದಾರೆ. ಅಮೆರಿಕ ವಿರುದ್ಧದ ಪಂದ್ಯದಲ್ಲಿ ಅದೇ ಸಮಸ್ಯೆಯೊಂದಿಗೆ ಬ್ಯಾಟಿಂಗ್ ಮಾಡಿದ್ದ ಅಭಿಷೇಕ್ ಶರ್ಮಾ ಫೀಲ್ಡಿಂಗ್‌ಗೆ ಇಳಿದಿರಲಿಲ್ಲ. ಅಭಿಷೇಕ್ ಶರ್ಮಾ ಅನುಪಸ್ಥಿತಿಯಲ್ಲಿ ಇನ್ನೋರ್ವ ಆಟಗಾರ ಸಂಜು ಸ್ಯಾಮ್ಸನ್ ಬುಧವಾರವೂ ನೆಟ್ಸ್‌ನಲ್ಲಿ ತೀವ್ರ ಅಭ್ಯಾಸ ಮಾಡಿದ್ದಾರೆ. ಅವರು ಇಶಾನ್ ಕಿಶನ್ ಅವರೊಂದಿಗೆ ಆರಂಭಿಕ ಆಟಗಾರರಾಗಿ ಮೈದಾನಕ್ಕಿಳಿಯಲಿದ್ದಾರೆ. ನ್ಯೂಜಿಲೆಂಡ್ ವಿರುದ್ಧದ ಸರಣಿಯಲ್ಲಿ ಕಳಪೆ ಪ್ರದರ್ಶನದಿಂದಾಗಿ ವಿಶ್ವಕಪ್‌ನಲ್ಲಿ ಆಡುವ ಹನ್ನೊಂದರ ಬಳಗದಿಂದ ಸಂಜು ಸ್ಥಾನ ಕಳೆದುಕೊಂಡಿದ್ದರು.

ಭಾರತ ಸಂಭಾವ್ಯ ತಂಡ

ಸೂರ್ಯಕುಮಾರ್ ಯಾದವ್ (ನಾಯಕ), ಇಶಾನ್ ಕಿಶನ್, ಸಂಜು ಸ್ಯಾಮ್ಸನ್, ತಿಲಕ್ ವರ್ಮಾ, ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ರಿಂಕು ಸಿಂಗ್, ಅಕ್ಷರ್ ಪಟೇಲ್, ಅರ್ಷ್‌ದೀಪ್ ಸಿಂಗ್, ಜಸ್ಪ್ರೀತ್ ಬುಮ್ರಾ, ವರುಣ್ ವಕ್ರವರ್ತಿ

ನಮೀಬಿಯಾ ಸಂಭಾವ್ಯ ತಂಡ

ಗೆಹಾರ್ಡ್ ಎರಾಸ್ಮಸ್ (ನಾಯಕ), ನಿಕಲ್ ಲೋಫ್ಟಿ, ಜಾನ್ ಫ್ರೈಲಿಂಕ್, ಜೆಜೆ ಸ್ಮಿತ್, ಮಲನ್ ಕ್ರುಗರ್, ಜೇನ್ ಗ್ರೀನ್. ಬೆನ್ ಶಿಕೊಂಗೊ, ಜಾನ್ ಬಾಲ್ಟ್, ವಿಲ್ಲೆಮ್ ಪೀಟರ್, ರುಬೆನ್ ಟ್ರಂಪೆಲ್ಮನ್, ಡೈಲನ್ ಲೀಚರ್

ಬುಮ್ರಾ ಪುನರಾಗಮನ: ತೀವ್ರ ಜ್ವರದಿಂದಾಗಿ ಅಮೆರಿಕ ವಿರುದ್ಧದ ಪಂದ್ಯವನ್ನು ತಪ್ಪಿಸಿಕೊಂಡಿದ್ದ ಯಾರ್ಕರ್ ಸ್ಪೆಷಲಿಸ್ಟ್ ಜಸ್ಪ್ರೀತ್ ಬುಮ್ರಾ ಆಡುವ ಹನ್ನೊಂದರ ಬಳಗಕ್ಕೆ ಮತ್ತೆ ವಾಪಸಾಗಲಿದ್ದಾರೆ. ಅರ್ಶದೀಪ್ ಸಿಂಗ್ ಇಲ್ಲವೇ ಮೊಹಮ್ಮದ್ ಸಿರಾಜ್ ಅವರು ಬುಮ್ರಾಗೆ ತಮ್ಮ ಸ್ಥಾನ ಬಿಟ್ಟುಕೊಡಲಿದ್ದಾರೆ. ಅಮೆರಿಕ ವಿರುದ್ಧದ ಪಂದ್ಯದಲ್ಲಿ ಸಿರಾಜ್ ಮೂರು ವಿಕೆಟ್‌ಗಳೊಂದಿಗೆ ತಮ್ಮ ಸಾಮರ್ಥ್ಯ ಸಾಬೀತುಪಡಿಸಿದ್ದರು. ಕುಲ್ದೀಪ್ ಯಾದವ್‌ಗೆ ಗುರುವಾರದ ಪಂದ್ಯದಲ್ಲಿ ಸ್ಥಾನ ಸಿಗುವ ಸಾಧ್ಯತೆಯನ್ನೂ ಅಲ್ಲಗಳೆಯುವಂತಿಲ್ಲ.

ಉಳಿದ ಆಟಗಾರರ ಸಂಯೋಜನೆಯಲ್ಲಿ ಯಾವುದೇ ಬದಲಾವಣೆಗಳ ಸಾಧ್ಯತೆಗಳಿಲ್ಲ. ಇಶಾನ್ ಕಿಶನ್, ತಿಲಕ್ ವರ್ಮಾ, ಶಿವಂ ದುಬೆ, ರಿಂಕು ಸಿಂಗ್, ಹಾರ್ದಿಕ್ ಪಾಂಡ್ಯ ಮತ್ತು ಅಕ್ಷರ್ ಪಟೇಲ್ ತಂಡದಲ್ಲಿ ಮುಂದುವರಿಯಲಿದ್ದಾರೆ.

ಕೈಲಾಸ ಮಾನಸ ಸರೋವರ ಯಾತ್ರಾ
ಹೆಲಿಕಾಪ್ಟರ್ ಹಾಗು ವಿಮಾನದಲ್ಲಿ

✓ ನೇಪಾಳ ಗಂಜ್ - ಸಿಮಿಕೋಟ್ - ನೇಪಾಳ ಗಂಜ್ - ವಿಮಾನ ಪ್ರಯಾಣ
✓ ಸಿಮಿಕೋಟ್ - ಹಿಲ್ಸಾ - ಸಿಮಿಕೋಟ್ - ಹೆಲಿಕಾಪ್ಟರ್ ಪ್ರಯಾಣ
✓ ಚೀನಾ - ಟಿಬೆಟ್ ಪ್ರದೇಶ - ಬಸ್ಸಿನಲ್ಲಿ ಪ್ರಯಾಣ
✓ ಟಿಬೆಟ್ ಪರ್ಮಿಟ್ & ವೀಸಾ ✓ ಸಸ್ಯಾಹಾರಿ ಊಟೋಪಹಾರ
10 ದಿನಗಳು
ದಿನಾಂಕ: MAY 27. JUN 5, 14, 26. JUL 4, 12, 25.
AUG 2, 10, 24. SEP 1, 9, 18, 22.
70222 59008

01
ನೇಪಾಳ - ಮುಕ್ತಿನಾಥ - ಜನಕಪುರ
ಲುಂಬಿನಿ, ಪೋಕ್ರಾ, ಜೋಮ್ ಸಮ್, ಮುಕ್ತಿನಾಥ, ಫೀವಾ ಲೇಕ್, ಮನೋಕಾಮನ, ಕಟ್ಮಂಡು, ಭಕ್ತಪುರ, ಡೋಲೇ ಶ್ವರ ಮಹಾದೇವ, ಜನಕಪುರ
ದಿನಾಂಕ: FEB 26. MAR 12, 26. APR 9, 23. MAY 7, 21. JUN 4, 18. JUL 9, 23. AUG 13, 27. SEP 10, 24. OCT 1, 22, 29. NOV 12, 26.
9 ದಿನಗಳು
70222 59007

02
ಭೂತಾನ್ - ದ ಲ್ಯಾಂಡ್ ಆಫ್ ಹ್ಯಾಪಿನೆಸ್
ಫುನ್ ಶೋಲಿಂಗ್, ಪುನಾಖ, ಪಾರೋ, ಥಿಂಪು.
ದಿನಾಂಕ: FEB 26. MAR 12, 26. APR 9, 23. MAY 7, 21. JUN 4, 18. JUL 9, 23. AUG 13, 27. SEP 10, 24. OCT 1, 15, 22, 29. NOV 12, 26. DEC 3, 17.
8 ದಿನಗಳು
70222 59003

03
ನ್ಯಾಚುರಲಿ ನೇಪಾಳ
ಲುಂಬಿನಿ, ಪೋಕ್ರಾ, ಫೀವಾ ಲೇಕ್, ಮನೋಕಾಮನ, ಕಟ್ಮಂಡು, ಭಕ್ತಪುರ, ಡೋಲೇ ಶ್ವರ ಮಹಾದೇವ, ರಾಯಲ್ ಚಿತ್ವಾನ್ ನ್ಯಾಷನಲ್ ಪಾರ್ಕ್, ಜನಕಪುರ.
ದಿನಾಂಕ: FEB 26. MAR 12, 26. APR 9, 23. MAY 1,7, 14. SEP 17, 24. OCT 1, 15, 22, 29. NOV 12, 19, 26. DEC 3, 10, 17.
9 ದಿನಗಳು
93641 04366

04
ಕೈಲಾಸ ದರ್ಶನ
ನೇಪಾಳ ಗಂಜ್ ಮತ್ತು ಕೈಲಾಸ ದರ್ಶನ ವೈಮಾನಿಕ ವೀಕ್ಷಣೆ
ದಿನಾಂಕ: MAR 26. APR 23. MAY 28. JUN 25. JUL 23. AUG 20. SEP 24. OCT 29. NOV 26. DEC 17.
3 ದಿನಗಳು
93641 04365

05 
ಎಕ್ಸ್ ಪೀರಿಯೆನ್ಸ್ ನೇಪಾಳ
ಕಟ್ಮಂಡು, ಭಕ್ತಪುರ, ಪೋಕ್ರಾ, ಫೀವಾ ಲೇಕ್, ಮನೋಕಾಮನ.
ದಿನಾಂಕ: FEB 26. MAR 12, 26. APR 9, 23. MAY 7, 21. JUN 4, 18. JUL 9, 23. AUG 13, 27. SEP 10, 24. OCT 1, 15, 22, 29. NOV 12, 26. DEC 3, 17.
5 ದಿನಗಳು
93641 04366

ಗ್ರೂಪ್ ಟೂರ್ಸ್
ಸಸ್ಯಾಹಾರಿ ಉಟೋಪಹಾರ | ನುರಿತ ಮಾರ್ಗದರ್ಶನ | ಡಿಲಕ್ಸ್ ಬಸ್ | ಸ್ಟ್ಯಾಂಡರ್ಡ್ ರೂಮ್ | ಟ್ರಾವೆಲ್ ಇನ್ ಶೂರೆನ್ಸ್

ನೇಪಾಳ - ಪಶುಪತಿನಾಥ - ಮುಕ್ತಿನಾಥ
ಗೋರಖಪುರ, ಪೋಖರಾ, ಮುಕ್ತಿನಾಥ, ಜೋಮ್ ಸಮ್, ಮನೋಕಾಮನ, ಕಠ್ಮಂಡು, ಸುನೌಲಿ ಬಾರ್ಡರ್, ಲುಂಬಿನಿ.
ದಿನಾಂಕ: FEB 28. MAR 28. APR 25. MAY 23. JUN 20. JUL 25. AUG 22. SEP 26. OCT 31. NOV 14.
10 ದಿನಗಳು
93640 88424

ಕಸ್ಟಮೈಸ್ಡ್ ಟೂರ್ಸ್
ಪ್ರವಾಸಿಗರ ಅನುಕೂಲಕ್ಕೆ ತಕ್ಕಂತೆ ಅವರಿಚ್ಛಿಸಿದ ದಿನಗಳಲ್ಲಿ ಕ್ಲಾಸಿಕ್ - ಡಿಲಕ್ಸ್ - ಲಕ್ಷುರಿ - ಪ್ರೀಮಿಯಂ ಕೆಟಗರಿಯ 3 ರಿಂದ 21 ದಿನಗಳವರೆಗಿನ 500 ಕ್ಕೂ ಹೆಚ್ಚು ಪ್ರವಾಸಗಳು

ನೇಪಾಳ
4 ರಿಂದ 9 ದಿನಗಳ 11 ವಿವಿಧ ಪ್ರವಾಸಗಳು


ಭೂತಾನ್
6 ರಿಂದ 11 ದಿನಗಳ 5 ವಿವಿಧ ಪ್ರವಾಸಗಳು

ಅಡಿಗಾಸ್ ಯಾತ್ರಾ
+91 94494 78944
www.adigasyatra.com
care@adigasyatra.com
Follows Us :
Facebook Instagram News Website Youtube